ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೋಲ್ಕತ್ತಾಗೆ ಭರ್ಜರಿ ಜಯ

ಗುವಾಹಟಿಯಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಕೆಕೆಆರ್ ತಂಡವು 8 ವಿಕೆಟ್‌ಗಳ ಭರ್ಜರಿ ಜಯ ಗಳಿಸಿತು. ಕೋಲ್ಕತ್ತಾ ಪರವಾಗಿ ಕ್ವಿಂಟನ್ ಡಿ ಕಾಕ್ 61 ಎಸೆತಗಳಲ್ಲಿ 97 ರನ್ (ನಾಟೌಟ್) ಗಳಿಸಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ವಿಶ್ವವಾಣಿ TV SPECIAL
Interesting Home Tour
ನಯನಾ ಮೋಟಮ್ಮ ಪ್ರೀತಿಸಿ ಮದುವೆಯಾಗಿದ್ದು ಯಾರನ್ನು?
ಇವರ ಹಿಂದಿರುವ ಅಧ್ಯಾತ್ಮಿಕ ಗುರು ಯಾರು?
ಎಂಎಲ್‌ಎ ಆಗುವ ಮೊದಲು ಯಾವ ಜಾಬ್ ಮಾಡ್ತಾ ಇದ್ರು?
ಕ್ಷೇತ್ರ ಅಭಿವೃದ್ಧಿಪಡಿಸಿ ಮಾದರಿ ಶಾಸಕಿಯಾಗುವುದು ಇವರ ಗುರಿ!
ಹೇಗಿದೆ ಇವರ ಮನೆ? ನಯನಾ ಅವರ ದಿನಚರಿ ಹೇಗಿರುತ್ತದೆ?
VISHWAVANI TV SPECIAL SUBSCRIBE ಮಾಡಿ
ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಕುತೂಹಲಕರ ಜೀವನ ಕಥನ!

ಸೊಂಪಾದ ಪುಟಗಳು


ವಿಮಾನದಿಂದಲೇ ದೇವರನ್ನು ತೋರಿಸಿದ ಆ ಪೈಲೆಟ್
ನೂರೆಂಟು ವಿಶ್ವ ವಿಶ್ವೇಶ್ವರ ಭಟ್ 6


ಹುಡುಗ, ಹುಡುಗಿ ಮತ್ತು ಬೇಸಿಗೆ ರಜೆ
ಕಾಡುದಾರಿ ಹರೀಶ್ ಕೇರ 7

ದಾರಿದೀಪೋಕ್ತಿ

ಯಾರಾದರೂ ಕೆಟ್ಟದಾಗಿ ನಿಂದಿಸಿದರೆ ಮನಸ್ಸನ್ನು ಕೆಡಿಸಿಕೊಳ್ಳಬಾರದು. ಯಾರಾದರೂ ಒರಟಾಗಿ ವರ್ತಿಸಿದರೆ ಅದಕ್ಕೆ ಮಹತ್ವ ನೀಡಬಾರದು. ಯಾರಾದರೂ ನಿಮ್ಮನ್ನು ನಿಕೃಷ್ಟವಾಗಿ ನೋಡಿದರೆ ದೃಢಚಿತ್ತರಾಗಿರಬೇಕು. ಬೇರೆಯವರ ಕೆಟ್ಟ ವರ್ತನೆ ನಿಮ್ಮ ಆಂತರಿಕ ಶಾಂತಿಯನ್ನು ಹಾಳು ಮಾಡಬಾರದು.

ವಕ್ರತುಂಡೋಕ್ತಿ



ಮದುವೆಯೇ ಉತ್ತರವಾಗಿದ್ದರೆ, ಪ್ರಶ್ನೆಯ ಒಕ್ಕಣಿಕೆ ಮಾತ್ರ ಸರಿಯಾಗಿರಬೇಕು.

ಬಿಎಸ್‌ವೈ ವಿರುದ್ಧ ಸಮರ ಸಾರಿದ್ದ ನಾಯಕ ಆರು ವರ್ಷ ಪಕ್ಷದಿಂದ ಉಚ್ಚಾಟನೆ | ಶಿಸ್ತು ಕ್ರಮ, ಬಿವೈವಿ ಬಣಕ್ಕೆ ಮೇಲುಗೈ

ಯತ್ನಾಳ್‌ಗೆ ಗೇಟ್ ಪಾಸ್

ದೆಹಲಿ/ಬೆಂಗಳೂರು: ಬಣ ಬಡಿದಾಟಕ್ಕೆ ಕಡಿವಾಣ ಹಾಕಿರುವ ಬಿಜೆಪಿ, ಶಿಸ್ತು ಉಲ್ಲಂಘನೆ ಆರೋಪದಲ್ಲಿ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಆರು ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ. ಇದೇ ವೇಳೆ ವಿಜಯೇಂದ್ರ ಬಣದ ಕೈ ಮೇಲಾದಂತೆ ಕಂಡರೂ, ಇನ್ನೂ ಐವರ ವಿರುದ್ಧ ಶಿಸ್ತು ಉಲ್ಲಂಘನೆಯ ತೂಗುಗತ್ತಿ ಇದೆ. ಪಕ್ಷದ ಹಿತ ಕಾಪಾಡಲು ಎಲ್ಲ ರೀತಿಯ ಕ್ರಮಕ್ಕೂ ಸಿದ್ಧ ಎಂದು ಕೇಂದ್ರ ಘಟಕ ಎಚ್ಚರಿಕೆ ನೀಡಿದೆ.

ಪಕ್ಷದ ಶಿಸ್ತು ಉಲ್ಲಂಘನೆ ವಿಚಾರವಾಗಿ ಫೆ.10ರಂದು ಯತ್ನಾಳ್ ಅವರಿಗೆ ಪಕ್ಷದ ಕೇಂದ್ರೀಯ ಶಿಸ್ತು ಸಮಿತಿ ಶೋಕಾಸ್ ನೋಟಿಸ್ ನೀಡಿ 72 ಗಂಟೆಯೊಳಗೆ ಉತ್ತರಿಸುವಂತೆ ತಿಳಿಸಿತ್ತು. ಅದರಂತೆ, ಫೆ.10ರಂದು ನೀಡಿದ್ದ ಶೋಕಾಸ್ ನೋಟಿಸ್‌ಗೆ ನೀವು ನೀಡಿದ್ದ ಉತ್ತರ ಪರಿಗಣಿಸಿದ್ದೇವೆ. ಪಕ್ಷದಲ್ಲಿ ಉತ್ತಮ ನಡವಳಿಕೆಯ ಬಗ್ಗೆ ತಾವು ನೀಡಿರುವ ಆಶ್ವಾಸನೆಯ ಬಳಿಕವೂ ಪದೇ ಪದೇ ಶಿಸ್ತು ನಿಯಮ ಉಲ್ಲಂಘನೆ ಮಾಡಿರುವುದನ್ನು ಗಂಭೀರವಾಗಿ ಪರಿಗಣಿಸಿ ಪಕ್ಷದಿಂದ ಉಚ್ಚಾಟನೆ ಮಾಡುತ್ತಿರುವುದಾಗಿ ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್ ಅವರು ಪಕ್ಷ ಕೈಗೊಂಡಿರುವ ನಿರ್ಧಾರವನ್ನು ಅಧಿಕೃತವಾಗಿ ಯತ್ನಾಳ್ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ. ಅಲ್ಲದೆ, ತಕ್ಷಣದಿಂದಲೇ ಜಾರಿಗೆ ಬರುವಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾ ಗಿದ್ದು, ಪಕ್ಷದ ಇತರ ಜವಾಬ್ದಾರಿ ಗಳಿಂದಲೂ ಅವರನ್ನು ತೆಗೆಯಲಾಗಿದೆ ಎಂದು ತಿಳಿಸಿದ್ದಾರೆ. ಈ ಹಿಂದೆ ಯತ್ನಾಳ್‌ರನ್ನು ಸದಾನಂದ ಗೌಡ ರಾಜ್ಯಾಧ್ಯಕ್ಷರಾಗಿದ್ದ ಅವಧಿಯಲ್ಲೂ ಒಮ್ಮೆ ಪಕ್ಷದಿಂದ ಉಚ್ಚಾಟನೆ ಮಾಡಲಾಗಿತ್ತು. ಬಳಿಕ ಅವರು ಜೆಡಿಎಸ್ ಸೇರ್ಪಡೆಗೊಂಡು, ಮತ್ತೆ ಬಿಜೆಪಿಗೆ ಮರಳಿದ್ದರು.

ಕೊನೆಗೂ ಕ್ರಮ: ಕಳೆದ ವರ್ಷದಿಂದ ರಾಜ್ಯ ಬಿಜೆಪಿ ಇಬ್ಭಾಗ ವಾಗಿತ್ತು. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸಭೆ ನಡೆಸುತ್ತಿದ್ದರೆ, ಇತ್ತ ಯತ್ನಾಳ್ ಟೀಂ ಬೇರೆಯೇ ಸಭೆ ನಡೆಸುತ್ತಿತ್ತು. ಕೇಂದ್ರ ಶಿಸ್ತು ಸಮಿತಿ ಹಲವು ಬಾರಿ ಯತ್ನಾಳ್ ಅವರಿಗೆ ಶೋಕಾಸ್ ನೋಡಿತ್ತು. ಆದರೆ ಇದನ್ನು ಕ್ಯಾರೇ ಮಾಡದೆ ಯತ್ನಾಳ್ ತನ್ನ ಹೇಳಿಕೆಗಳನ್ನು ನೀಡುತ್ತಲೇ ಇದ್ದರು. ಈ ರೀತಿ ಆರೋಪಗಳು ನಡೆಯುವಾಗಲೇ ಯತ್ನಾಳ್ ಬಣದಲ್ಲಿ ಗುರುತಿಸಿಕೊಂಡ ಹರಿಹರ ಶಾಸಕ ಬಿ.ಪಿ.ಹರೀಶ್, ವಿಜಯೇಂದ್ರ ಬಣದಲ್ಲಿ ಗುರುತಿಸಿಕೊಂಡ ಮಾಜಿ ಶಾಸಕರಾದ ರೇಣುಕಾಚಾರ್ಯ, ಕಟ್ಟಾ ಸುಬ್ರಮಣ್ಯ ನಾಯ್ಡು ಅವರಿಗೆ ಮಂಗಳವಾರ ಶೋಕಾಸ್ ನೋಟಿಸ್ ನೀಡಿ ಉತ್ತರಕ್ಕೆ 72 ಗಂಟೆಗಳ ಅವಧಿ ನೀಡಲಾಗಿದೆ. ಈಗ ಯತ್ನಾಳ್ ಅವರನ್ನು ಉಚ್ಚಾಟನೆ ಮಾಡಿರುವುದರಿಂದ ಎರಡೂ ಬಣಗಳ ಬಾಯಿ ಮುಚ್ಚಿದಂತಾಗಿದ್ದು, ಬಣ ಬಡಿದಾಟಕ್ಕೆ ಬ್ರೇಕ್ ಬಿದ್ದಂತಾಗಿದೆ. ಮತ್ತೊಂದೆಡೆ ಶಾಸಕರಾದ ಎಸ್.ಟಿ.ಸೋಮಶೇಖರ್ ಹಾಗೂ ಶಿವರಾಮ್ ಹೆಬ್ಬಾರ್ ಅವರಿಗೂ ನೋಟಿಸ್ ನೀಡಲಾಗಿದ್ದು, ಪಕ್ಷದ ಶಿಸ್ತು ಉಲ್ಲಂಘಿಸು ವರಿಗೆ ಎಚ್ಚರಿಕೆಯಿಂದ ಇರಿ ಎಂಬ ಸಂದೇಶವೂ ರವಾನೆಯಾದಂತಿದೆ.

ಕಾರಣಗಳು ಏನು?

- 2 ಬಾರಿ ನೋಟಿಸ್ ನೀಡಿದ್ದರೂ ಬದಲಾಗದ ವರ್ತನೆ
- ಪಕ್ಷದ ನಾಯಕತ್ವದ ವಿರುದ್ಧ ಬಹಿರಂಗ ಹೇಳಿಕೆ
- ಯಡಿಯೂರಪ್ಪ, ವಿಜಯೇಂದ್ರ ವಿರುದ್ಧ ವೈಯಕ್ತಿಕ ದಾಳಿ
- ಸದನದಲ್ಲಿ ಪಕ್ಷಕ್ಕೆ ಮುಜುಗರ ತರುವಂತಹ ಹೇಳಿಕೆ
- ರಾಜ್ಯ ಉಸ್ತುವಾರಿ ವಿರುದ್ಧ ವಸೂಲಿ ಆರೋಪ

ಮುಂದೇನು?

- ಆರು ವರ್ಷ ಬಿಜೆಪಿ ಪಕ್ಷದಿಂದ ದೂರ
- ಶಾಸಕರಾಗಿ ಮುಂದುವರಿಯಲು ಅವಕಾಶ
- ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗವಹಿಸುವಂತಿಲ್ಲ
- ಸದನದಲ್ಲಿ ಬಿಜೆಪಿ ಸದಸ್ಯರನ್ನು ಬಿಟ್ಟು ಪ್ರತ್ಯೇಕವಾಗಿ ಕೂರಬೇಕು

ಸಂಭ್ರಮಿಸಲಾರೆ ಎಂದ ವಿಜಯೇಂದ್ರ

ಬಿಜೆಪಿ ಲಕ್ಷಾಂತರ ಕಾರ್ಯಕರ್ತರನ್ನು ಹೊಂದುವ ಮೂಲಕ ವಿಶ್ವದಲ್ಲಿ ಅಗ್ರಮಾನ್ಯತೆ ಪಡೆದಿರುವ ರಾಜಕೀಯ ಪಕ್ಷ. ಸಂಘ ಸಂಸ್ಕಾರ ಪಡೆದಿರುವ ಸಮರ್ಪಣಾ ಮನೋಭಾವದ ಕಾರ್ಯಕರ್ತರ ಬೆವರ ಪರಿಶ್ರಮದಿಂದ ಸಮೃದ್ಧ ವೃಕ್ಷದಂತೆ ಬೆಳೆದಿರುವ ಪಕ್ಷದಲ್ಲಿ ಶಿಸ್ತು-ತ್ಯಾಗಕ್ಕೆ ಮೊದಲ ಆದ್ಯತೆ. ಪಕ್ಷದ ಹಿರಿಯರು ಹಾಗೂ ವರಿಷ್ಠರು ಈ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಂಡಿರುವ ಉದಾಹರಣೆ ನಮ್ಮ ಮುಂದಿಲ್ಲ, ಸದ್ಯ ಬಸನಗೌಡ ಪಾಟೀಲ್ ಅವರ ವಿರುದ್ಧದ ಶಿಸ್ತುಕ್ರಮ ವರಿಷ್ಠರು ಸುದೀರ್ಘ ಅವಧಿಯಿಂದ ಸ್ಥಿತಿಗತಿಗಳನ್ನು ಅವಲೋಕಿಸಿ ಅನಿವಾರ್ಯವಾಗಿ ತೆಗೆದುಕೊಂಡಿರುವ ಕ್ರಮ. ಪಕ್ಷದ ಬೆಳವಣಿಗೆಯಲ್ಲಿನ ಕಹಿ ಘಟನೆಗಳನ್ನು ಉಲ್ಲೇಖಿಸಿ ಪಕ್ಷದ ವರಿಷ್ಠರಿಗೆ ನಾನು ಎಂದೂ ದೂರುಗಳನ್ನು ಹೇಳಿಕೊಂಡಿಲ್ಲ, ದಾಖಲಿಸಿಯೂ ಇಲ್ಲ. ತಂದೆ ಯಡಿಯೂರಪ್ಪನವರು ಎಲ್ಲರನ್ನೂ ಸಮಚಿತ್ತ ಭಾವದಿಂದ ನೋಡಿ, ಪಕ್ಷವನ್ನು ಕುಟುಂಬದಂತೆ ಬೆಳೆಸಿದ ಮಾದರಿಯಲ್ಲಿಯೇ ನಡೆಯಬೇಕೆಂಬ ಸಂಕಲ್ಪ ಹೊಂದಿದ್ದಾರೆ.

→ 4

ಸತ್ಯವಂತರಿಗಿದು ಕಾಲವಲ್ಲ...

ತಮ್ಮ ವಿರುದ್ಧದ ಕ್ರಮಕ್ಕೆ ಪ್ರತಿಕ್ರಿಯಿಸಿರುವ ಬಸನಗೌಡ ಯತ್ನಾಳ್, ವಂಶ ರಾಜಕಾರಣ, ಭ್ರಷ್ಟಾಚಾರ ಹಾಗೂ ಪಕ್ಷದ ಸುಧಾರಣೆಗೆ ತಾವು ಎತ್ತಿರುವ ಧ್ವನಿಗೆ ಇದು ಪ್ರತಿಫಲ ಎಂದು ವಾಗ್ದಾಳಿ ನಡೆಸಿದ್ದಾರೆ. ಸಾಮಾಜಿಕ ಜಾಲತಾಣ ಖಾತೆ 'ಎಕ್ಸ್'ನಲ್ಲಿ, ಸತ್ಯವಂತರಿಗಿದು ಕಾಲವಲ್ಲ ದುಷ್ಟಜನರಿಗೆ ಸುಭಿಕ್ಷಕಾಲ. ಉಪಕಾರ ಮಾಡಿದರೆ ಅಪಕರಿಸುವ ಕಾಲ, ಸಕಲವು ತಿಳಿದವಗೆ ದುರ್ಭಿಕ್ಷ ಕಾಲ. ಧರ್ಮ ಮಾಡುವವನಿಗೆ ನಿರ್ಮೂಲವಾಗುವ ಕಾಲ. ಕರ್ಮಿ ಪಾತಕರಿಗೆ ಬಹು ಸೌಖ್ಯ ಕಾಲ ಸತ್ಯವಂತರಿಗಿದು ಕಾಲವಲ್ಲ ಎಂದು ಬರೆದುಕೊಂಡಿದ್ದಾರೆ. ಅಲ್ಲದೆ, ವಂಶಪಾರಂಪರ್ಯ ರಾಜಕೀಯ, ಭ್ರಷ್ಟಾಚಾರ, ಪಕ್ಷದೊಳಗಿನ ಸುಧಾರಣೆಗಳ ವಿರುದ್ಧ ಮಾತನಾಡಿದ್ದಕ್ಕಾಗಿ, ಏಕವ್ಯಕ್ತಿ ದಬ್ಬಾಳಿಕೆಯನ್ನು ತೆಗೆದುಹಾಕಿ ಮತ್ತು ಉತ್ತರ ಕರ್ನಾಟಕವನ್ನು ಅಭಿವೃದ್ಧಿಪಡಿಸಲು ವಿನಂತಿಸಿದ್ದಕ್ಕಾಗಿ ಪಕ್ಷವು ನನ್ನನ್ನು 6 ವರ್ಷಗಳ ಕಾಲ ಪಕ್ಷದಿಂದ ಹೊರಹಾಕಿದೆ. ಕೆಲವು ಸ್ಥಾಪಿತ ಹಿತಾಸಕ್ತಿಗಳು ತಮ್ಮ ಕಾರ್ಯಸೂಚಿ ಯಶಸ್ವಿಯಾಗಿ ಮುಂದುವರಿಸುವಲ್ಲಿ ತಮ್ಮ ಪಾತ್ರವನ್ನು ವಹಿಸಿವೆ. ನಾನು ಇದನ್ನು ಬರೆಯುವಾಗ ಪುರಂದರ ದಾಸರು ಹೇಳಿದ್ದನ್ನು ನಾನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ ಎಂದು 'ಸತ್ಯವಂತರಿಗಿದು ಕಾಲವಲ್ಲ...' ವಚನವನ್ನು ನೋವಿನಿಂದ ಬರೆದಿದ್ದಾರೆ.

3ನೇ ಬಾರಿ ಉಚ್ಚಾಟನೆ

ಯತ್ನಾಳ ಅವರು ಪಕ್ಷದಿಂದ ಉಚ್ಚಾಟನೆಯಾಗಿದ್ದು ಇದು ಮೂರನೇ ಬಾರಿ. 2009ರಲ್ಲಿ ಯಡಿಯೂರಪ್ಪ ಸಿಎಂ ಆಗಿದ್ದ ವೇಳೆ ಯಡಿಯೂರಪ್ಪ, ಶೋಭಾ ಕರಂದ್ಲಾಜೆ, ಸದಾನಂದಗೌಡ ವಿರುದ್ಧ ಮಾತನಾಡಿ 6 ವರ್ಷಗಳ ಕಾಲ ಪಕ್ಷದಿಂದ ಅಮಾನತ್ತು ಶಿಕ್ಷೆಗೆ ಒಳಗಾಗಿದ್ದರು. ಆದರೆ, 2014ರಲ್ಲಿ ಅಮಾನತ್ತು ಶಿಕ್ಷೆ ರದ್ದು ಮಾಡಿ ಪಕ್ಷಕ್ಕೆ ಕರೆ ತಂದರು. ಆದರೆ, ಈ ವೇಳೆ ಯಡಿಯೂರಪ್ಪ ಬಿಜೆಪಿಯಲ್ಲಿರಲಿಲ್ಲ. 2014 ರ ಲೋಕಸಭಾ ಚುನಾವಣೆ ಬಳಿಕ ಪರಿಷತ್ ಚುನಾವಣೆಗೆ ಪಕ್ಷದ ಟಿಕೆಟ್ ಸಿಗದ ಕಾರಣ 2016ರಲ್ಲಿ ಬಂಡಾಯ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದ ಕಾರಣ ಮತ್ತೇ 2016ರಲ್ಲಿ 6 ವರ್ಷಗಳ ಕಾಲ 2ನೇ ಬಾರಿ ಉಚ್ಚಾಟನೆ ಶಿಕ್ಷೆಗೆ ಗುರಿಯಾಗಿದ್ದರು. ಆದರೆ, 2018ರಲ್ಲಿ ಕೇಂದ್ರದ ವರಿಷ್ಠರು ಹಾಗೂ ಯಡಿಯೂರಪ್ಪ ಅಮಾನತ್ತು ಶಿಕ್ಷೆ ರದ್ದು ಮಾಡಿ ಯತ್ನಾಳರನ್ನು ವಾಪಸ್ ಬಿಜೆಪಿಗೆ ಕರೆ ತಂದರು. ಪ್ರಸ್ತುತ 3ನೇ ಬಾರಿಗೆ ಉಚ್ಚಾಟನೆಗೊಂಡಿದ್ದಾರೆ.

> ನನ್ನನ್ನು ಅಮಾನತುಗೊಳಿಸುವ ನಿರ್ಧಾರವು ಭ್ರಷ್ಟಾಚಾರ, ಕುಟುಂಬ ರಾಜಕೀಯ, ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ಹಿಂದುತ್ವದ ವಿರುದ್ಧದ ನನ್ನ ಹೋರಾಟ ತಡೆಯುವುದಿಲ್ಲ. ನಾನು ನನ್ನ ಜನರಿಗೆ ಅದೇ ಹುರುಪು ಮತ್ತು ದೃಢತೆಯಿಂದ ಸೇವೆ ಸಲ್ಲಿಸುವುದನ್ನು ಮುಂದುವರಿಸುತ್ತೇನೆ. ಬೆಂಬಲಿಸಿದವರಿಗೆ ಧನ್ಯವಾದ ಅರ್ಪಿಸುತ್ತೇನೆ.
>
> **- ಬಸನಗೌಡ ಪಾಟೀಲ್ ಯತ್ನಾಳ್**, ಶಾಸಕ

> ವರಿಷ್ಠರು ತೆಗೆದುಕೊಂಡಿರುವ ಶಿಸ್ತು ಕ್ರಮ ನಾನು ಸಂಭ್ರಮಿಸಲಾರೆ. ಬದಲಾಗಿ ಈ ಬೆಳವಣಿಗೆ ದುರದೃಷ್ಟಕರವೆಂದು ದುಃಖಿಸುತ್ತೇನೆ. ಭವಿಷ್ಯದಲ್ಲಿ ನಾನು ನಡೆಯುವ ಹಾದಿಯಲ್ಲಿ ಎಲ್ಲಾದರೂ ಎಡವಿದರೆ, ಅದನ್ನು ತಿದ್ದಿ ತೀಡುವ ಅಧಿಕಾರ ಪಕ್ಷದ ಹಿರಿಯರೆಲ್ಲರಿಗೂ ಇದ್ದೇ ಇದೆ.
>
> **- ಬಿ.ವೈ.ವಿಜಯೇಂದ್ರ**, ಬಿಜೆಪಿ, ರಾಜ್ಯಾಧ್ಯಕ್ಷ

ಶುಭೋದಯಕ್ಕೊಂದು ಕಗ್ಗ

ಹಿರಿಯ ಪೊಲೀಸ್ ಅಧಿಕಾರಿ, ಹಾಲಿ ಹುಬ್ಬಳ್ಳಿ- ಧಾರವಾಡ ಅಪರಾಧ ಹಾಗೂ ಸಂಚಾರಿ ವಿಭಾಗದ ಡಿಸಿಪಿ ರವೀಶ್ ಸಿ. ಆರ್. ಅವರು ಪೊಲೀಸ್ ಇಲಾಖೆಯಲ್ಲಿ ತಮ್ಮ ದಕ್ಷ ಸೇವೆಗೆ ಹೆಸರಾದವರು. ಎಸ್‌ಐ ಹುದ್ದೆಯಿಂದ ಡಿಸಿಪಿ ತನಕ ವಿವಿಧ ಹುದ್ದೆಗಳನ್ನು ದಕ್ಷತೆಯಿಂದ ನಿರ್ವಹಿಸಿ ಮುಖ್ಯಮಂತ್ರಿಗಳ ಬೆಳ್ಳಿ ಪದಕ ಮತ್ತು ಚಿನ್ನದ ಪದಕಕ್ಕೆ ಪಾತ್ರರಾದವರು. ಪೊಲೀಸ್ ಇಲಾಖೆಯಲ್ಲಿದ್ದರೂ ಕೃಷಿ, ವೈಲ್ಡ್ ಲೈಫ್ ಫೋಟೋಗ್ರಫಿ ಮತ್ತು ಸಾಹಿತ್ಯದ ಅಧ್ಯಯನ ಅವರ ವಿಶೇಷ ಆಸಕ್ತಿಯ ಕ್ಷೇತ್ರಗಳು. ಡಿವಿಜಿಯವರ ಮಂಕುತಿಮ್ಮನ ಕಗ್ಗ, ವಚನ ಸಾಹಿತ್ಯದ ಮೇಲೆ ವಿಶೇಷ ಅಧ್ಯಯನ ಮಾಡಿರುವ ಅವರು ವಿಶ್ವವಾಣಿ ಓದುಗರಿಗಾಗಿ ಕಗ್ಗದ ಗಂಟು ಬಿಡಿಸಿ ಡಿವಿಜಿ ಸಾಹಿತ್ಯದ ರಸದೌತಣ ಬಡಿಸಲಿದ್ದಾರೆ.

ಶುಭೋದಯಕ್ಕೊಂದು ಕಗ್ಗ ಇಂದಿನಿಂದ ಆರಾಮದ ಓದು

ನೋಟಿಸ್‌ಗೆ ಉತ್ತರಿಸದ 29 ಅಧಿಕಾರಿಗಳ ವಿರುದ್ಧ ಕ್ರಮ: ಡಿಕೆಶಿ

ಚಾಮರಾಜನಗರ ಆಕ್ಸಿಜನ್ ದುರಂತ ಬಿ.ಎ.ಪಾಟೀಲ್ ವರದಿ ತಿರಸ್ಕಾರ

ಬೆಂಗಳೂರು: ಕೋವಿಡ್ ಸಮಯದಲ್ಲಿ ನಡೆದಿದ್ದ ಚಾಮರಾಜನಗರ ಆಕ್ಸಿಜನ್ ದುರಂತದ ಬಗ್ಗೆ ತನಿಖೆಗೆ ನೇಮಕವಾಗಿದ್ದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಅವರ ಏಕಸದಸ್ಯ ನ್ಯಾಯಾಂಗ ಆಯೋಗ ನೀಡಿದ್ದ ವರದಿಯನ್ನು ತಿರಸ್ಕರಿಸಿ, ನ್ಯಾ.ಕುನ್ಹಾ ಅವರಿಗೆ ಮರು ತನಿಖೆಯ ಜವಾಬ್ದಾರಿ ನೀಡಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸಚಿವ ಸಂಪುಟ ಉಪಸಮಿತಿ ಸಭೆ ಬಳಿಕ ಮಾತನಾಡಿದ ಅವರು, ಚಾಮರಾಜನಗರ ದುರಂತ ನಡೆದ ವೇಳೆ ನಾನು ಹಾಗೂ ಸಿದ್ದರಾಮಯ್ಯ ಅವರು ಸ್ಥಳಕ್ಕೆ ತೆರಳಿ ಸಂಪೂರ್ಣ ಮಾಹಿತಿ ಕಲೆ ಹಾಕಿದ್ದೆವು. ಮೃತರ ಕುಟುಂಬ ವರ್ಗದವರನ್ನು ಸಹ ಭೇಟಿ ಮಾಡಲಾಗಿತ್ತು. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದಾಗ ಅವರು ಯಾರ‍್ಯಾರ ತಪ್ಪಿದೆ ಎನ್ನುವುದು ತಿಳಿಸಿದ್ದರು ಎಂದರು.

> ಸುಮಾರು 29 ಅಧಿಕಾರಿಗಳು ಸಮಿತಿ ನೀಡಿರುವ ನೋಟಿಸ್‌ಗೆ ಉತ್ತರ ನೀಡಿಲ್ಲ. ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾ ಗುವುದು. ಕುನ್ಹಾ ಅವರು ವರದಿಯಲ್ಲಿ ಅನೇಕ ರಾಜಕಾರಣಿಗಳ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ನಮಗೂ ಅರಿವಿದೆ. ಸೂಕ್ತ ಕಾಲದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.
>
> **- ಡಿ.ಕೆ.ಶಿವಕುಮಾರ್** ಡಿಸಿಎಂ

ವರದಿಯಲ್ಲಿ ಕುನ್ಹಾ ಅವರು ಹೆಸರಿಸಿರುವ ಹಿಂದಿನ ಆರೋಗ್ಯ ಸಚಿವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆಯೇ? ಎಂದು ಕೇಳಿದಾಗ, ಕೋವಿಡ್ ಅಕ್ರಮಗಳ ಬಗ್ಗೆ ಮೈಕೆಲ್ ಕುನ್ಹಾ ಅವರು ಅತ್ಯಂತ ಸಮಗ್ರವಾಗಿ ವರದಿ ನೀಡಿದ್ದಾರೆ. ಅದನ್ನು ಕೂಲಂಕಷವಾಗಿ ಅಧ್ಯಯನ ಮಾಡಬೇಕಾಗುತ್ತದೆ.

→ 4

ಶಾಸಕರ ಆಸ್ತಿ ವಿವರ ಸಲ್ಲಿಕೆಗೆ ಜೂ.30ರ ಗಡುವು

ಬೆಂಗಳೂರು: 16ನೇ ವಿಧಾನಸಭೆಗೆ ಆಯ್ಕೆಯಾಗಿರುವ ಶಾಸಕರು 2024-25ನೇ ಸಾಲಿಗೆ ಸಂಬಂಧಿಸಿದ ತಮ್ಮ ಹಾಗೂ ತಮ್ಮ ಕುಟುಂಬ ಸದಸ್ಯರ ಆಸ್ತಿ ವಿವರದ ಪಟ್ಟಿಯನ್ನು ಜೂನ್ 30ರೊಳಗೆ ಲೋಕಾಯುಕ್ತರಿಗೆ ಸಲ್ಲಿಸಿ, ಅದರ ಮಾಹಿತಿಯನ್ನು ಸಚಿವಾಲಯಕ್ಕೆ ನೀಡುವಂತೆ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಲೋಕಾಯುಕ್ತ ನಿಬಂಧಕರು ವಿಧಾನಸಭೆ ಸಚಿವಾಲಯಕ್ಕೆ ಪತ್ರ ಬರೆದಿದ್ದಾರೆ. ಕರ್ನಾಟಕ ಲೋಕಾಯುಕ್ತ ಅಧಿನಿಯಮ-1984ರ ಕಲಂ 7 ರ ಉಪಕಲಂ (1ಡಿ) ಉಲ್ಲೇಖಿಸಿರುವಂತೆ ಪ್ರತಿಯೊಬ್ಬ ವಿಧಾನಸಭೆಯ ಸದಸ್ಯರು ಆಯಾ ವರ್ಷದ ಜೂ.30ರೊಳಗಾಗಿ ತಮ್ಮ ಹಾಗೂ ತಮ್ಮ ಕುಟುಂಬ ಸದಸ್ಯರ ಆಸ್ತಿ ಪಟ್ಟಿಯನ್ನು ನಿಗದಿಪಡಿಸಲಾದ ನಮೂನೆಯಲ್ಲಿ ಲೋಕಾಯುಕ್ತರಿಗೆ ಸಲ್ಲಿಸಬೇಕಾಗಿದೆ. ಇದೇ ಕಾನೂನು ವಿಧಾನ ಪರಿಷತ್ ಸದಸ್ಯರಿಗೂ ಅನ್ವಯವಾಗಲಿದೆ.



ದೆಹಲಿಯಲ್ಲಿ ಜೆಡಿಎಸ್ ವರಿಷ್ಠರನ್ನು ಭೇಟಿ ಮಾಡಿದ ಸಚಿವ ಸತೀಶ್ ಜಾರಕಿಹೊಳಿ

ಕೈ ನಾಯಕನ ನಡೆ: ಪಕ್ಷದಲ್ಲಿ ಸಂಚಲನ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಭಾರಿ ಸದ್ದು ಮಾಡಿರುವ ಹನಿಟ್ರ್ಯಾಪ್ ಪ್ರಕರಣವನ್ನು ಯಾವ ಹಂತದಲ್ಲಿ ತನಿಖೆ ನಡೆಸಬೇಕೆಂಬ ನಿಟ್ಟಿನಲ್ಲಿ ಚರ್ಚೆಗಳು ನಡೆಯುತ್ತಿರುವ ನಡುವೆಯೇ ಪ್ರಕರಣದಲ್ಲಿ ಕೇಂದ್ರದ ತನಿಖಾ ಸಂಸ್ಥೆಯನ್ನು ಎಳೆದುತರುವ ಪ್ರಯತ್ನ ಸತೀಶ್ ಜಾರಕಿಹೊಳಿ ಕಡೆಯಿಂದ ನಡೆದಿವೆ ಎನ್ನುವ ಮಾತುಗಳು ಕೇಳಿಬಂದಿವೆ.

ಹೌದು, ತೀವ್ರ ವಿವಾದಕ್ಕೆ ಕಾರಣವಾಗಿರುವ ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಹಕಾರ ಸಚಿವ ಕೆ.ಎನ್.ರಾಜಣ್ಣ ತನಿಖೆಗೆ ಮನವಿ ಸಲ್ಲಿಸಿದ್ದಾರೆ. ಇನ್ನೊಂದೆಡೆ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕಮಾಂಡ್‌ಗೂ ದೂರು ಸಲ್ಲಿಸಿದ್ದ ಸಚಿವ ಸತೀಶ್ ಜಾರಕಿಹೊಳಿ, ಇದೀಗ ಈ ಪ್ರಕರಣವನ್ನು ಕೇಂದ್ರ ತನಿಖಾ ಸಂಸ್ಥೆಯ 'ತೆಕ್ಕೆ'ಗೆ ಈ ಪ್ರಕರಣವನ್ನು ತರುವ ಪ್ರಯತ್ನವನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಮೂಲಕ ಮಾಡಲು ಮುಂದಾಗಿದ್ದಾರೆ ಎನ್ನಲಾಗಿದೆ. ದೆಹಲಿ ಪ್ರವಾಸದಲ್ಲಿರುವ ಸತೀಶ್ ಜಾರಕಿಹೊಳಿ ಅವರು, ಮಂಗಳವಾರ ತಡರಾತ್ರಿ ಹಾಗೂ ಬುಧವಾರ ಬೆಳಗ್ಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಕೇವಲ ಇದಿಷ್ಟೇ ಅಲ್ಲದೇ ಮಾಜಿ ಪ್ರಧಾನಿ ದೇವೇಗೌಡರನ್ನು ಭೇಟಿಯಾಗಿರುವುದು ಮತ್ತಷ್ಟು ಕುತೂಹಲಕ್ಕೆ ಕಾರಣವಾಗಿದೆ. ಈ ಭೇಟಿಯ ವೇಳೆ ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ

ಸುದೀರ್ಘ ಚರ್ಚೆ ನಡೆದಿದೆ ಎನ್ನಲಾಗಿದೆ. ಮೇಲ್ನೋಟಕ್ಕೆ ಬುಧವಾರದ ಬೆಳಗ್ಗೆ ಭೇಟಿಯ ವೇಳೆ ರಾಜ್ಯದ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಕೇವಲ ಕುಮಾರಸ್ವಾಮಿ ಮಾತ್ರವಲ್ಲದೇ, ವಿ. ಸೋಮಣ್ಣ, ನಿತಿನ್ ಗಡ್ಕರಿ ಅವರನ್ನು ಭೇಟಿಯಾಗಿದ್ದಾರೆ. ಆದರೆ ಮಂಗಳವಾರ ತಡರಾತ್ರಿಯ ಭೇಟಿ ವೇಳೆ ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐ ಕಡೆಯಿಂದ ತನಿಖೆ ನಡೆಸುವ ಸಂಬಂಧ ಚರ್ಚಿಸಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿವೆ.

→ 4

ಸಾಮಾನ್ಯವಾಗಿ ಅನ್ಯಪಕ್ಷದವರನ್ನು ಭೇಟಿಯಾಗದ ಸತೀಶ್

ಸತೀಶ್ ಜಾರಕಿಹೊಳಿ ಆರಂಭದಲ್ಲಿ ಜೆಡಿಎಸ್‌ನಿಂದಲೇ ರಾಜಕೀಯ ಆರಂಭಿಸಿದ್ದರೂ ಬಳಿಕ ಕಾಂಗ್ರೆಸ್‌ನತ್ತ ವಾಲಿದರು. ಆದರೆ ಕಾಂಗ್ರೆಸ್ ಸೇರಿದ ಬಳಿಕ ದೇವೇಗೌಡರವನ್ನು, ಕುಮಾರಸ್ವಾಮಿ ಅವರನ್ನು ಭೇಟಿಯಾಗಿರುವ ಸನ್ನಿವೇಶಗಳು ಹೆಚ್ಚಿಲ್ಲ. ಸರಕಾರಿ ಕಾರ್ಯಗಳಿದ್ದರೂ ಪತ್ರದ ಮೂಲಕವೇ ವ್ಯವಹರಿಸಿರುವ ಉದಾಹರಣೆ ಇದೆಯೇ ಹೊರತು ನೇರ ಭೇಟಿ, ಅದರಲ್ಲಿಯೂ ದೇವೇಗೌಡರನ್ನು ಭೇಟಿಯಾಗಿರುವ ನಿದರ್ಶನಗಳಿಲ್ಲ. ಆದ್ದರಿಂದ ಈ ಭೇಟಿ 'ಇಲಾಖೆ'ಗೆ ಸಂಬಂಧಿಸಿದ ವಿಷಯಕ್ಕೆ ಸೀಮಿತವಾಗಿಲ್ಲ ಎನ್ನುವುದು ರಾಜಕೀಯ ನಾಯಕರ ಲೆಕ್ಕಾಚಾರವಾಗಿದೆ.

ಸಮಾಚಾರ ಸಣ್ಣದಲ್ಲ

ಎಸಿಪಿ, ಎಎಸ್ಐ ಲೋಕಾ ಬಲೆಗೆ

ಬೆಂಗಳೂರು: ಸೈಬರ್ ಕ್ರೈಂ ಪ್ರಕರಣದ ತನಿಖೆ ಕೈಗೊಳ್ಳಲು ಲಂಚ ಪಡೆಯುತ್ತಿದ್ದ ಎಸಿಪಿ ಹಾಗೂ ಎಎಸ್ಐರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. 2 ಲಕ್ಷ ರು.ಸ್ವೀಕರಿಸುತ್ತಿದ್ದ ಈಶಾನ್ಯ ವಿಭಾಗದ ಸಿಇಎನ್ ಠಾಣೆಯ ಎಸಿಪಿ ತನ್ವೀರ್ ಎಸ್.ಆರ್. ಹಾಗೂ ಎಎಸ್ಐ ಕೃಷ್ಣಮೂರ್ತಿ ಅವರನ್ನು ಬಂಧಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ. ಮಧುಸೂದನ್ ಬಿ.ಎಸ್. ಅವರ ಕಂಪನಿಯ ವೆಬ್‌ಸೈಟ್ ಹ್ಯಾಕ್ ಮಾಡಿ, ಆರ್ಥಿಕ ನಷ್ಟವುಂಟು ಮಾಡಲಾಗಿತ್ತು. ಕೆಲಸದಿಂದ ತೆಗೆದು ಹಾಕಿದ ಸಿಟ್ಟಿಗೆ ಕಂಪನಿಯ ಮಾಜಿ ಉದ್ಯೋಗಿ ಯೊಬ್ಬನಿಂದ ಕೃತ್ಯ ನಡೆದಿದೆ ಎಂದು ಅನುಮಾನ ವ್ಯಕ್ತಪಡಿಸಿ, ಈಶಾನ್ಯ ವಿಭಾಗದ ಸಿಇಎನ್ ಠಾಣೆಗೆ ಮಧುಸೂಧನ್ ದೂರು ನೀಡಿದ್ದರು. ಆದರೆ ಅನುಮಾನಿತ ಆರೋಪಿಯನ್ನು ವಿಚಾರಣೆ ನಡೆಸಿ ಪ್ರಕರಣದ ತನಿಖೆ ಕೈಗೊಳ್ಳಲು ಪ್ರತಿಯಾಗಿ 4 ಲಕ್ಷ ರು. ಲಂಚಕ್ಕೆ ಆರೋಪಿಗಳು ಬೇಡಿಕೆ ಇಟ್ಟಿದ್ದಾರೆ ಎಂದು ಲೋಕಾಯುಕ್ತ ಪೊಲೀಸರಿಗೆ ಮಧು ಸೂದನ್ ದೂರು ನೀಡಿದ್ದರು. ಅದರ ಅನ್ವಯ ಮಂಗಳವಾರ ಸಂಜೆ ಟ್ರ್ಯಾಪ್ ಕಾರ್ಯಾಚರಣೆ ಕೈಗೊಂಡ ಲೋಕಾಯುಕ್ತರು, ಲಂಚ ಸ್ವೀಕರಿಸುತ್ತಿದ್ದ ಇಬ್ಬರೂ ಪೊಲೀಸ್ ಅಧಿಕಾರಿಗಳನ್ನು ಬಂಧಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

2000 ಹೆಚ್ಚುವರಿ ಬಸ್ ಸಂಚಾರ

ಪ್ರಯಾಣಿಕರ ಅನುಕೂಲಕ್ಕಾಗಿ ಮುಂಗಡ ಟಿಕೆಟ್ ಕಾಯ್ದಿರಿಸುವ ಸೌಲಭ್ಯ

ಬೆಂಗಳೂರು: ಕೆಎಸ್ಆರ್‌ಟಿಸಿಯು ಯುಗಾದಿ ಮತ್ತು ರಂಜಾನ್ ಹಬ್ಬದ ಸಲುವಾಗಿ 2000 ಹೆಚ್ಚುವರಿ ಬಸ್‌ಗಳ ಸಂಚಾರ ನಡೆಸುವುದಾಗಿ ಹೇಳಿದೆ.

ಮಾ.30 ಮತ್ತು 31 ರಂದು ಯುಗಾದಿ ಮತ್ತು ರಂಜಾನ್ ಹಬ್ಬಗಳನ್ನು ಗಮನದಲ್ಲಿಟ್ಟುಕೊಂಡು, ಮಾ.28 ರಿಂದ 30 ರವರೆಗೆ ಪ್ರಯಾಣಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ 2000 ಹೆಚ್ಚುವರಿ ಬಸ್‌ಗಳ ಸಂಚಾರ ನಡೆಸಲು ಕೆಎಸ್ಆರ್‌ಟಿಸಿ ವ್ಯವಸ್ಥೆ ಮಾಡಿದ್ದು, ಜತೆಗೆ ಮಾ.31 ರಂದು ರಾಜ್ಯ ಮತ್ತು ಅಂತಾರಾಜ್ಯ ಸ್ಥಳಗಳಿಂದ ಬೆಂಗಳೂರಿಗೆ ವಿಶೇಷ ಬಸ್‌ಗಳ ಸಂಚಾರ ನಡೆಸಲಾಗುವುದು ಎಂದು ಎಂದು ಮಾಹಿತಿ ನೀಡಿದೆ.

ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ವಿಶೇಷ ಬಸ್ ಇರಲಿದೆ. ಬೆಂಗಳೂರಿನ ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ವಿಶೇಷ ಬಸ್‌ಗಳು ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ ಮತ್ತು ಮಡಿಕೇರಿ ಕಡೆಗೆ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲಿವೆ.

ತಮಿಳುನಾಡು ಮತ್ತು ಕೇರಳ ಕಡೆಗೆ ಅಂದರೆ ಮಧುರೈ, ಕುಂಬಕೋಣಂ, ಚೆನ್ನೈ, ಕೊಯಮತ್ತೂರು, ತಿರುಚ್ಚಿ, ಪಾಲಕ್ಕಾಡ್, ತ್ರಿಶೂರ್, ಎರ್ನಾಕುಲಂ, ಕ್ಯಾಲಿಕಟ್ ಮುಂತಾದ ಸ್ಥಳಗಳಿಗೆ ಹೋಗುವ ಸಾರಿಗೆ ಸಂಸ್ಥೆಯ ಪ್ರತಿಷ್ಠಿತ ಬಸ್‌ಗಳು ಶಾಂತಿನಗರದಲ್ಲಿನ ಬಿಎಂಟಿಸಿ ಬಸ್ ನಿಲ್ದಾಣದಿಂದ ಹೊರಡಲಿವೆ. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಬಸ್‌ಗಳ ಆಸನಗಳನ್ನು ಮುಂಗಡವಾಗಿ ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಏ.1ರಿಂದ ಆಟೋ ದರ ಏರಿಕೆ ಇಲ್ಲ!

ಬೆಂಗಳೂರು: ಬಸ್, ಮೆಟ್ರೋ ದರ ಏರಿಕೆಯಿಂದಾಗಿ ಕಂಗೆಟ್ಟಿರುವ ನಗರವಾಸಿಗಳಿಗೆ ಕೊಂಚ ನೆಮ್ಮದಿ ದೊರಕಿದ್ದು, ಏ.1ರಿಂದ ಹೆಚ್ಚಾಗಲಿದ್ದ ಆಟೋ ದರಕ್ಕೆ ತಾತ್ಕಾಲಿಕ ತಡೆಯೊಡ್ಡಲಾಗಿದೆ.

ಈ ವರ್ಷದ ಆರಂಭದಿಂದಲೂ ನಿತ್ಯ ದರ ಏರಿಕೆ ಸುದ್ದಿ ಕೇಳಿ ಬೆಂಗಳೂರಿಗರು ಬೇಸತ್ತಿದ್ದರು. ಬಸ್, ಮೆಟ್ರೋ ದರ, ನೀರಿನ ದರ ಏರಿಕೆ ಬಳಿಕ ಏ.1ರಿಂದ ಆಟೋ ದರ ಕೂಡ ಏರಿಕೆಯಾಗಲಿದೆ ಎಂದು ಹೇಳಲಾಗುತ್ತಿದ್ದು, ಸದ್ಯ ಆಟೋ ಮೀಟರ್ ದರ ಏರಿಕೆಗೆ ಜಿಲ್ಲಾಡಳಿತ ತಾತ್ಕಾಲಿಕ ತಡೆಯೊಡ್ಡಿದೆ.

ಆಟೋ ದರ ಪರಿಷ್ಕರಣೆ ಸಂಬಂಧ ವಾರದ ಹಿಂದೆಯಷ್ಟೇ ಸಾರಿಗೆ ಇಲಾಖೆಯು ಜಿಲ್ಲಾಡಳಿತ ಹಾಗೂ ಪೊಲೀಸ್ ಅಧಿಕಾರಿಗಳ ಜತೆ ಸಭೆ ನಡೆಸಿದ್ದರು. ಏ.1ರಿಂದ ದರ ಏರಿಕೆ ಆಗುತ್ತದೆ ಎಂದು ಹೇಳಲಾಗುತ್ತಿತ್ತು. ಆದರೆ ಬೆಂಗಳೂರು ಜಿಲ್ಲಾಧಿಕಾರಿ ಮಾತ್ರ ಸದ್ಯಕ್ಕೆ ಆಟೋ ದರ ಏರಿಕೆ ಇಲ್ಲ, ದರ ಏರಿಕೆ ಸಂಬಂಧ ಸಾರಿಗೆ ಇಲಾಖೆಯಿಂದ ಸಭೆ ಮಾಡಿ ರಿಪೋರ್ಟ್ ಸಿದ್ಧಪಡಿಸಬೇಕಿದೆ. ಆ ನಂತರ ಮತ್ತೊಂದು ಸಭೆ ಮಾಡಿ ದರ ಏರಿಕೆ ನಿರ್ಧಾರ ಆಗಬೇಕು. ದರ ಏರಿಕೆ ಎಷ್ಟಾಗುತ್ತೆ? ಹೇಗೆ ಎನ್ನುವ ತೀರ್ಮಾನ ಆಗಲಿದೆ. ಈ ಎಲ್ಲಾ ಪ್ರಕ್ರಿಯೆಗಳು ಮುಕ್ತಾಯವಾಗಿ, ದರ ಪರಿಷ್ಕರಣೆ ಫೈನಲ್ ಆಗಬೇಕಾದರೆ ಇನ್ನೂ ಹೆಚ್ಚಿನ ಕಾಲಾವಕಾಶ ಬೇಕಾಗಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಆಟೋ ಚಾಲಕರಿಗೆ ನಿರಾಸೆ

ಆಟೋ ಮೀಟರ್ ದರ ಹೆಚ್ಚಳಕ್ಕೆ ತಡೆಯೊಡ್ಡಿರುವುದರಿಂದ ಆಟೋ ಚಾಲಕರಿಗೆ ಕೊಂಚ ಬೇಸರವಾಗಿದ್ದು, ಯುಗಾದಿ ಹಬ್ಬಕ್ಕೆ ಆಟೋ ಏರಿಕೆಯ ಗಿಫ್ಟ್ ಸಿಗುತ್ತದೆ ಎಂದು ಆಟೋ ಚಾಲಕರು, ಸಂಘಟನೆಗಳು ಖುಷಿಯಲ್ಲಿದ್ದರು. ಆದರೆ ಸದ್ಯಕ್ಕೆ ದರ ಏರಿಕೆ ಆಗಲ್ಲ ಎಂದು ತಿಳಿಸಿದೆ. ಈ ಹಿಂದೆ 2011ರಲ್ಲಿ ಆಟೋ ದರ ಪರಿಷ್ಕರಣೆ ಆಗಿತ್ತು. ಅದಾದ ನಂತರ 2021ರಲ್ಲಿ ಅಂದರೆ 10 ವರ್ಷಗಳ ಬಳಿಕ ದರ ಪರಿಷ್ಕರಣೆ ಆಗಿತ್ತು. ಹಿಂದಿನ ಪರಿಷ್ಕರಣೆಗೆ 10 ವರ್ಷಗಳ ಗ್ಯಾಪ್ ಇದೆ. ಇದೀಗ ಮೂರೇ ವರ್ಷಕ್ಕೆ ಆಟೋ ದರ ಪರಿಷ್ಕರಣೆ ಮಾಡಿ ಎಂದು ಒತ್ತಾಯ ಕೇಳಿ ಬಂದಿದ್ದು, ಇದು ಸರಿಯಿದಿಯಾ? ಇಲ್ವಾ? ಎನ್ನುವ ಪರಿಶೀಲನೆಗೂ ಜಿಲ್ಲಾಡಳಿತ ಮುಂದಾಗಿದೆ.

ರನ್ಯಾ ಪ್ರಕರಣ: ಚಿನ್ನ ಸಾಗಿಸಿದ್ದು ದಕ್ಷಿಣಾ ಆಫ್ರಿಕಾದಿಂದ ದುಬೈಗೆ

ಬೆಂಗಳೂರು: ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಗೆದಷ್ಟೂ ರಹಸ್ಯಗಳು ಡಿಆರ್‌ಐ ತನಿಖೆಯಲ್ಲಿ ಬಯಲಾಗುತ್ತಿವೆ.

ಒಮ್ಮೆ 4 ಕೆಜಿ ಒಮ್ಮೆ ಇನ್ನೊಮ್ಮೆ 2 ಕೆಜಿ ಚಿನ್ನ, ಇದೆ ರೀತಿ ಸಾಗಿಸಿರುವುದಾಗಿ ತರುಣ್ ಒಪ್ಪಿಕೊಂಡಿದ್ದಾರೆ. ತನ್ನ ಪಾಸ್ ಪೋರ್ಟ್ ಬಳಸಿ ಜಿನೀವಾಗೆ ಹೋಗುವುದಾಗಿ ಹೇಳಿ ಭಾರತಕ್ಕೆ ಚಿನ್ನ ತರುತ್ತಿದ್ದರು ಎಂಬುದಾಗಿ ಖುದ್ದು ತರುಣ್ ಕೊಂಡೂರು ರಾಜು ಹೇಳಿಕೆ ನೀಡಿದ್ದಾರೆ ಎಂದು ಡಿಆರ್‌ಐ ತನ್ನ ದಾಖಲೆಯಲ್ಲಿ ಉಲ್ಲೇಖಿಸಿದೆ.

ಡಿಆರ್‌ಐ ತನಿಖೆಯಲ್ಲಿ ಬಗೆದಷ್ಟೂ ರಹಸ್ಯಗಳು ಬಯಲು

ತರುಣ್ ಬಂಧನವಾಗಿದ್ದು ಹೇಗೆ?: ರನ್ಯಾ ರಾವ್ ಬಂಧನವಾದ ಬಳಿಕ ರನ್ಯಾ ಅಪಾರ್ಟ್‌ಮೆಂಟ್ ಮೇಲೆ ದಾಳಿ ಮಾಡಿದ್ದ ಡಿಆರ್‌ಐ ಹಲವು ರಹಸ್ಯಗಳನ್ನು ಪತ್ತೆಹಚ್ಚಿತ್ತು. ಇದೇ ವೇಳೆ ತರುಣ್ ಸಂಪರ್ಕದಲ್ಲಿರೋದು ಪತ್ತೆಯಾಗಿತ್ತು. ಕೂಡಲೇ ಲುಕ್‌ಔಟ್ ನೋಟಿಸ್ ಜಾರಿ ಮಾಡಿ ತರುಣ್‌ನನ್ನು ಡಿಆರ್‌ಐ ಹೈದರಾಬಾದ್‌ನಲ್ಲಿ ಬಂಧಿಸಿತ್ತು. ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಪ್ರಕರಣ ಬರೀ ದುಬೈ, ಭಾರತದ ಕಥೆಯಲ್ಲ. ಮೊದಲು ದಕ್ಷಿಣಾ ಅಫ್ರಿಕಾದಿಂದ ದುಬೈಗೆ ಚಿನ್ನ ಸಾಗಾಟ ಮಾಡುತ್ತಿದ್ದರು. ನಂತರ ಅದನ್ನು ಜಿನೀವಾಗೆ ಸಾಗಿಸುವ ನೆಪದಲ್ಲಿ ಭಾರತಕ್ಕೆ ರವಾನೆ ಮಾಡುತ್ತಿದ್ದರು.

ಅಷ್ಟೇ ಅಲ್ಲ ದಕ್ಷಿಣ ಅಫ್ರಿಕಾಗೆ ಹೋಗಲು ಅಲ್ಲಿಯ ಗೃಹ ಮಂತ್ರಾಲಯದಿಂದಲೂ ಆರೋಪಿಗಳು ಅನುಮತಿ ಪಡೆದಿದ್ದರು. ದುಬೈನಲ್ಲಿ ಇವರು ಶುರು ಮಾಡಿದ್ದ ವೈರಾ ಡೈಮಂಡ್ ಕಂಪನಿಗೆ ಮೊದಲು ಚಿನ್ನ ಸಾಗಾಟ ಮಾಡಿದ್ದರು. ನಂತರ ಅಲ್ಲಿಂದ ಇದನ್ನ ಭಾರತಕ್ಕೆ ತರುಣ್ ಅಮೆರಿಕ ಪಾಸ್ ಪೋರ್ಟ್ ಹಾಗೂ ರನ್ಯಾಗಿದ್ದ ಪ್ರೊಟೋಕಾಲ್ ಬಳಸಿ ರವಾನೆ ಮಾಡಿದ್ದರು. ಖುದ್ದು ಈ ಬಗ್ಗೆ ತರುಣ್ ಕೊಂಡೂರು ರಾಜು ಹೇಳಿಕೆ ದಾಖಲಿಸಿದ್ದಾರೆ ಎಂದು ಡಿಆರ್‌ಐ ತನ್ನ ವರದಿಯಲ್ಲಿ ತಿಳಿಸಿದೆ.

PUBLIC NOTICE

It is to inform the General Public that, **N.S.Vasantharama,** S/o Subramanya Shastry has executed General Power of Attorney which is registered on 13.2.2003 which is registered in favour of my client H.S.Venkatesh Babu, S/o H.V.Srinivasamurthy, residing at No.97/2, 1st Floor, 2nd Cross, 6th Main, 6th Block, Thyagarajanagar, Bengaluru-560 028 and also the affidavit dt.14.2.2003 in respect of the property bearing Site No.17, House List No.7/8, situated at Haralukunte Village, Begur Hobli, Bangalore South, measuring East to West 45 Feet, North to South 40 Feet and bounded on: **East by:** Road, **West by:** Site No.23, **North by:** Kannappa's Property, **South by:** Site No.16, after having received the entire sale consideration amount and handedover the possession of the said site to my client H.S.Venkatesh Babu.

It is come to the knowledge of my client H.S.Venkatesh Babu that, N.S.Vasantharama is intending to sell the aforesaid site No. 17 and looking for prospective purchasers. It is hereby informed to the General Public not to transact with N.S.Vasantharama in respect of the said site as my client is in possession and enjoyment of the said site. In the event any person transact with N.S.Vasantharama pertaining to the said site, they shall be doing so at their cost, risk for which my client would not responsible for any such transactions.

If any person is having any clarification, he can do so by calling upon my client Venkatesh Babu over Mobile: 9844777397.

Place: Bengaluru **Date:** 22.03.2025

(MANJUNATH. M.) Advocate
No.84/8, Nadavathi Post & Village Kadugodi, Hosakote Taluk, Bengaluru Rural Dist-67
Mob: 7019384362

ವಿವಿಧ ಜಿಲ್ಲೆಗಳಿಂದ ಆಗಮಿಸಿದ ಮುಜರಾಯಿ ದೇವಸ್ಥಾನದ ಅರ್ಚಕರು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಬುಧವಾರ ಭೇಟಿ ಮಾಡಿ ಅಭಿನಂದಿಸಿದರು. ಬಜೆಟ್‌ನಲ್ಲಿ ಅರ್ಚಕರಿಗೆ ತಸ್ತೀಕ್ ಹಣವನ್ನು ಹೆಚ್ಚಿಸಿರುವುದು, ಒಂದುವರೆ ವರ್ಷದಿಂದ ಮುಜರಾಯಿ ಇಲಾಖೆಯಲ್ಲಿ ಅರ್ಚಕರಿಗೆ, ದೇವಸ್ಥಾನಗಳಿಗೆ ಎಲ್ಲ ರೀತಿಯ ಸಹಕಾರ ನೀಡಿ ಅಭಿವೃದ್ಧಿ ಕೆಲಸಗಳಿಗೆ ಕೈಜೋಡಿಸಿರುವ ಸಚಿವ ರಾಮಲಿಂಗಾ ರೆಡ್ಡಿ ಅವರಿಗೆ ಅಭಿನಂದನೆ ಸಲ್ಲಿಸಿದರು.

ಪತ್ನಿಯ ಕೊಂದ ಪತಿ ಪೊಲೀಸರಿಗೆ ಶರಣು

ಬೆಂಗಳೂರು: ಶೀಲ ಶಂಕಿಸಿ ಪತ್ನಿಯ ಕತ್ತು ಹಿಸುಕಿ ಕೊಲೆ ಮಾಡಿ ಪತಿ ಸಂಪಿಗೆಹಳ್ಳಿ ಪೊಲೀಸರಿಗೆ ಶರಣಾಗಿದ್ದಾನೆ. ಹೆಗ್ಗಡೆ ನಗರದ 1ನೇ ಕ್ರಾಸ್‌ನಲ್ಲಿ ಪತ್ನಿ ವೇಲಾರಮಣಿ (35)ಯನ್ನು ಕೊಲೆಗೈದ ಪತಿ ಚಂದ್ರಶೇಖರ್ ಪೊಲೀಸರಿಗೆ ಶರಣಾಗಿದ್ದು, ಆತನನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ಮಂಗಳವಾರ ಬೆಳಗ್ಗೆ 11 ಗಂಟೆಯ ವೇಳೆ ಆರೋಪಿಯು ಪತ್ನಿ ಕೊಲೆ ಮಾಡಿ ಶರಣಾಗಿದ್ದು, ಸುದ್ದಿ ತಿಳಿದ ತಕ್ಷಣವೇ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಲಾಗಿದೆ. ಕಳೆದ11 ವರ್ಷಗಳ ಹಿಂದೆ ವೇಲಾರಮಣಿ ಹಾಗೂ ಕ್ಯಾಬ್ ಚಾಲಕನಾಗಿದ್ದ ಚಂದ್ರಶೇಖರ್‌ಗೆ ಮದುವೆಯಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದರು, ಪತ್ನಿ ವೇಲಾರಮಣಿ ಖಾಸಗಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿದ್ದಳು. ಪತ್ನಿ ಫೋನ್‌ನಲ್ಲಿ ಯಾವಾಗಲೂ ಮಾತನಾಡುತ್ತಿರುವುದನ್ನು ನೋಡಿ ಚಂದ್ರಶೇಖರ್ ಹಲವು ದಿನಗಳಿಂದ ಆಕೆಯ ಬಗ್ಗೆ ಅನುಮಾನಿಸಿದ್ದ. ನಿನ್ನೆ ಇಬ್ಬರು ಮಕ್ಕಳು ಶಾಲೆಗೆ ಹೋದ ಮೇಲೆ ಗಂಡ-ಹೆಂಡತಿ ನಡುವೆ ಗಲಾಟೆಯಾಗಿದೆ. ಜಗಳ ವಿಕೋಪಕ್ಕೆ ತಿರುಗಿ ಚಂದ್ರಶೇಖರ್ ಪತ್ನಿಯ ಕತ್ತು ಹಿಸುಕಿ ಕೊಲೆ ಮಾಡಿದ್ದಾನೆ. ಬಳಿಕ ಆರೋಪಿ ಗಂಡ ಸಂಪಿಗೆಹಳ್ಳಿ ಠಾಣೆಗೆ ಹೋಗಿ ಪೊಲೀಸರ ಮುಂದೆ ಶರಣಾಗಿದ್ದಾನೆ. ನಂತರ ಸ್ಥಳಕ್ಕೆ ತೆರಳಿದ ಸಂಪಿಗೇಹಳ್ಳಿ ಪೊಲೀಸರು, ಕೊಲೆ ಮಾಡಿದ ಸ್ಥಳ ಪರಿಶೀಲನೆ ನಡೆಸಿ, ಆರೋಪಿ ಚಂದ್ರಶೇಖರ್‌ನನ್ನು ಸ್ಥಳಕ್ಕೆ ಕರೆದೊಯ್ದು ಮಹಜರು ನಡೆಸಿದ್ದಾರೆ.

ರಜತ್, ವಿನಯ್ ಮೂರು ದಿನ ಪೊಲೀಸ್ ಕಸ್ಟಡಿಗೆ

ಬೆಂಗಳೂರು: ಮಚ್ಚು ಹಿಡಿದು ರೀಲ್ಸ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ರಜತ್ ಮತ್ತು ವಿನಯ್ ಗೌಡರನ್ನು24ನೇ ಎಸಿಎಂಎಂ ಕೋರ್ಟ್ 3 ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

5 ದಿನ ಕಸ್ಟಡಿಗೆ ನೀಡುವಂತೆ ಪೊಲೀಸರು ಕೋರ್ಟ್‌ಗೆ ಮನವಿ ಮಾಡಿದ್ದರು. ಆದರೆ ನ್ಯಾಯಾಲಯ 3 ದಿನ ಪೊಲೀಸ್ ಕಸ್ಟಡಿಗೆ ನೀಡಿದೆ. ಮಾ.28 ರವರೆಗೆ ಪೊಲೀಸ್ ಕಸ್ಟಡಿಗೆ ಕೋರ್ಟ್ ಆದೇಶ ನೀಡಿದೆ.

ಇನ್ನೂ ರಜತ್ ಅವರು ದರ್ಶನ್ ನಟನೆಯ ಕರಿಯ ಸಿನಿಮಾ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಇತ್ತ ವಿನಯ್ ಪುಷ್ಪರಾಜ್ ಲುಕ್‌ನಲ್ಲಿ ಮಚ್ಚು ಹಿಡಿದು ಇಬ್ಬರು ರೀಲ್ಸ್ ಮಾಡಿದ್ದರು. ಇದರಿಂದ ಈಗ ಇಬ್ಬರೂ ಕಾನೂನು ಸಂಕಷ್ಟ ಎದುರಿಸುವಂತಾಗಿದೆ.

ಬಂಧನಕ್ಕೆ ಕಾರಣವೇನು?: ಬಿಗ್‌ಬಾಸ್ ಮಾಜಿ ಸ್ಪರ್ಧಿಗಳಾದ ರಜತ್ ಕಿಶನ್ ಮತ್ತು ವಿನಯ್‌ಗೌಡ ಸಾರ್ವಜನಿಕವಾಗಿ ಲಾಂಗ್ ಹಿಡಿದು ರೀಲ್ಸ್ ಮಾಡಿದ್ದರು. ಈ ರೀಲ್ಸ್ ಅನ್ನು ರಜತ್ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದರು. ಎಚ್ಚರಿಕೆ, ಇದನ್ನು ಮನೆಯಲ್ಲಿ ಪ್ರಯತ್ನಿಸಬೇಡಿ. ಇದು ಚಿತ್ರೀಕರಣದ ಉದ್ದೇಶಕ್ಕೆ ಮಾತ್ರ. ಇದರಲ್ಲಿ ಬಳಸಿರುವುದು ಸೆಟ್ ಪ್ರಾಪರ್ಟಿ ಎಂದು ಬರೆದಿದ್ದರು. ಆದರೂ, ಪೊಲೀಸರು ಕ್ರಮಕ್ಕೆ ನಿರ್ಧರಿಸಿ ಬಂಧಿಸಿದ್ದರು.

ಬಿಬಿಎಂಪಿ ಬಜೆಟ್ ಮಂಡನೆ 29ಕ್ಕೆ

ಬೆಂಗಳೂರು: ಬಿಬಿಎಂಪಿಯ 2025-26ನೇ ಸಾಲಿನ ಬಜೆಟ್ ಶನಿವಾರ ಪ್ರಸ್ತುತಪಡಿಸಲಿದ್ದು, 19 ಸಾವಿರ ಕೋಟಿ ರು. ಗಿಂತ ಹೆಚ್ಚು ಗಾತ್ರದ ಬಜೆಟ್ ಆಗಿರಲಿದೆ. ಶನಿವಾರ ಬೆಳಗ್ಗೆ 11 ಗಂಟೆಗೆ ನಗರದ ಪುರಭವನದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಮತ್ತು ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧ್ಯಕ್ಷತೆಯಲ್ಲಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಡಾ.ಕೆ. ಹರೀಶ್ ಕುಮಾರ್ ಬಜೆಟ್ ಮಂಡಿಸಲಿದ್ದಾರೆ. ಮೂಲ ಸೌಕರ್ಯ ಅಭಿವೃದ್ಧಿಗಾಗಿಯೇ ಮಹತ್ವದ ಯೋಜನೆಗಳನ್ನು ಕೈಗೊಳ್ಳುವ ಉದ್ದೇಶದಿಂದ ಬರೋಬ್ಬರಿ 7 ಸಾವಿರ ಕೋಟಿ ರು. ಅನುದಾನವನ್ನು 2025- 26ನೇ ಸಾಲಿನಲ್ಲಿ ಒದಗಿಸುವಂತೆ ಸಿಎಂ ಸಿದ್ದರಾಮಯ್ಯ ಘೋಷಿಸಿದ್ದರು. ಅದಕ್ಕನುಗುಣವಾಗಿ ಒಟ್ಟಾರೆ 19 ಸಾವಿರ ಕೋಟಿ ರು.ಗಿಂತ ಹೆಚ್ಚು ಗಾತ್ರದ ಬಜೆಟ್ ಮಂಡನೆಗೆ ತಯಾರಿ ಮಾಡಿಕೊಳ್ಳಲಾಗಿದೆ. ಮುಖ್ಯವಾಗಿ 40 ಸಾವಿರ ಕೋಟಿ ರು. ವೆಚ್ಚದ ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣ ಸುರಂಗ ಕಾರಿಡಾರ್ ಯೋಜನೆಗೆ ಬಿಬಿಎಂಪಿ ಬಜೆಟ್‌ನಲ್ಲಿ ಪ್ರಾಮುಖ್ಯತೆ ಸಿಗುವ ನಿರೀಕ್ಷೆಯಿದ್ದು, ಈ ಬೃಹತ್ ಯೋಜನೆಯ ಜತೆಗೆ ಮೂಲಸೌಕರ್ಯ, ಶಿಕ್ಷಣ, ಆರೋಗ್ಯ,ಪಾದಚಾರಿ ಮಾರ್ಗ, ಪರಿಸರ, ಪ್ರವಾಹ ನಿಯಂತ್ರಣ ಕಾಮಗಾರಿಗಳು ಸೇರಿದಂತೆ ಇತರ ಯೋಜನೆಗಳು ಬಜೆಟ್‌ನಲ್ಲಿ ಹೆಚ್ಚು ಸ್ಥಾನ ಪಡೆಯುವ ಸಾಧ್ಯತೆ ಇದೆ.

standard chartered ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

ಇ-ಹರಾಜು ಮಾರಾಟ ಪ್ರಕಟಣೆಯ ಸಾರ್ವಜನಿಕ ಸೂಚನೆ

ಕೆಳಸಹಿದಾರರು, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ತನ್ನ ವ್ಯವಹಾರವನ್ನು ನಂ. 26-27, 2ನೇ ಮಹಡಿ, ಈಸ್ಟ್ ವಿಂಗ್ ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು -560001 (ಇನ್ನು ಮುಂದೆ ಬ್ಯಾಂಕ್ ಎಂದು ಕರೆಯಲಾಗುವುದು) ಇಲ್ಲಿ ಹೊಂದಿದೆ.

ಕೆಳಸಹಿದಾರರು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002 (ಕಾಯಿದೆ) ಮತ್ತು ಸೆಕ್ಷನ್ 13(2)ರ ನಿಯಮ 9ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ, 2002 (ನಿಯಮಗಳು)ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 24.08.2022 ಮತ್ತು 16.08.2022 1ರಂದು ಈ ಕೆಳಗಿನ ಸಾಲಗಾರರಾದ 1. ಶ್ರೀ ಇಮ್ರಾನ್ ಮೊಹಮ್ಮದ್ ಮುಕ್ಕ, 2. ಶ್ರೀಮತಿ ರೇಷ್ಮ ಎಮ್ ಹೆಚ್, ವಾಸ : 16-62/7(3) ಕಟೀಲ್ ರೆಸಿಡೆನ್ಸಿ, ಫ್ಲ್ಯಾಟ್ ನಂ. 101, ಉದಯ ನಗರ, ಕಾರ್ಪೋರೇಶನ್ ಬ್ಯಾಂಕ್ ಎದುರು, ಮುಕ್ಕ, ಮಂಗಳೂರು, ಪಿನ್ ಕೋಡ್ - 574146 ಮತ್ತು ಹಾಗೂ : ಶ್ರೀ ಇಮ್ರಾನ್ ಮೊಹಮ್ಮದ್ ಮುಕ್ಕ (ವ್ಯವಸ್ಥಾಪಕ ನಿರ್ದೇಶಕ), ಮೆ॥ ಐಎಮ್‌ಎಸ್ ಎಕ್ಸನ್ ಬಿಲ್ಡಿಂಗ್ ಹಾರ್ಡ್ ವೇರ್ ಟೂಲ್ಸ್ ಆಂಡ್ ಟ್ರೇಡಿಂಗ್ ಎಲ್‌ಎಲ್‌ಸಿ, # 905, ಮಕೆಟರ್ ಬಿಲ್ಡಿಂಗ್, ಅಂಚೆ ಸಯೀದ್, ವಿಮಾನ ನಿಲ್ದಾಣ ರಸ್ತೆ, ದಿಯರ, ದುಬೈ-172450 ಯುಎಇ ಹಾಗೂ : ಇಮ್ರಾನ್ ಮೊಹಮ್ಮದ್ ಮುಕ್ಕ, ಎಫ್ 707, ಅಲ್ಮಾಮ್‌ಝರ್ (ಎಸ್‌ಹೆಚ್) ಎನ್‌ಎ ಎಮಿರೇಟ್ಸ್, ಇಂಡ್ ಸಿಟಿ, ಶಾರ್ಜಾ, ದುಬೈ-562333, ಯುಎಇ ಮತ್ತು ಹಾಗೂ: ಶ್ರೀ ಇಮ್ರಾನ್ ಮೊಹಮ್ಮದ್ ಮುಕ್ಕ, ಬಂಡಸಾಲೆ ಮನೆ, ಸುರತ್ಕಲ್, ಮುಕ್ಕ ಅಂಚೆ, ಮಂಗಳೂರು-575021, ಕರ್ನಾಟಕ. ಮತ್ತು ಹಾಗೂ: ಶ್ರೀಮತಿ ರೇಷ್ಮ ಎಮ್ ಹೆಚ್, #ನಂ. 3, 3ನೇ ಮಹಡಿ, 2ನೇ ಮುಖ್ಯ ರಸ್ತೆ, ಚಿನ್ನಣ್ಣ ಲೇಔಟ್, ಕಾವಲ್‌ಭೈರಸಂದ್ರ, ಆರ್ ಟಿ ನಗರ ಅಂಚೆ, ಬೆಂಗಳೂರು-560032, ಕರ್ನಾಟಕ ಮತ್ತು ಹಾಗೂ: ಶ್ರೀಮತಿ ರೇಷ್ಮ ಎಮ್ ಹೆಚ್, #259/4, 4ನೇ ಬ್ಲಾಕ್ ರಾಧಾಕೃಷ್ಣ ಎಕ್ಸ್‌ಟೆನ್ಶನ್ ಕುಶಾಲ ನಗರ, ಸೋಮವಾರಪೇಟೆ, ಕೊಡಗು-571234, ಕರ್ನಾಟಕ (ಸಾಲಗಾರರು / ಸಹ-ಸಾಲಗಾರರು) ಇವರಿಗೆ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸಿನಲ್ಲಿ ತಿಳಿಸಿರುವ ಮೊತ್ತ ರೂ.3,05,65,200.72/-(ಮೂರು ಕೋಟಿ ಐದು ಲಕ್ಷ ಅರುವತ್ತೈದು ಸಾವಿರದ ಇನ್ನೂರು ರೂಪಾಯಿಗಳು ಹಾಗು ಪೈಸೆ ಎಪ್ಪತ್ತೆರಡು ಮಾತ್ರ) ವನ್ನು ಹಾಗೂ ಅದರೊಂದಿಗೆ ಬಾಕಿ ಹಣ ಸಂಪೂರ್ಣವಾಗಿ ಮರುಪಾವತಿಯಾಗುವವರೆಗೆ ಬಡ್ಡಿ ಮತ್ತು ಪೀನಲ್ ಬಡ್ಡಿ ಮತ್ತು /ಅಥವಾ ಇತರೆ ದರಗಳನ್ನು ಈ ನೋಟೀಸ್ ನೀಡಿದ 60ದಿನಗಳ ಒಳಗೆ ಮರುಪಾವತಿಸುವಂತೆ ಸೂಚನೆ ನೀಡಲಾಗಿತ್ತು. ಒಂದು ವೇಳೆ ಪಾವತಿಸಲು ವಿಫಲವಾದರೆ, ಬ್ಯಾಂಕ್ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002 ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲಿದೆ.

ಸಾಲಗಾರ/ರು ಹಣವನ್ನು ಮರುಪಾವತಿಸಲು ವಿಫಲರಾದುದರಿಂದ ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಕೆಳಸಹಿದಾರರು ಬ್ಯಾಂಕ್‌ಗೆ ಅಡಮಾನ ಮಾಡಿರುವ ಈ ಕೆಳಗಿನ ಸ್ಥಿರಾಸ್ತಿಯನ್ನು ಬರಬೇಕಾದ ಬಾಕಿ ಹಣಕ್ಕಾಗಿ ಸೆಕ್ಷನ್ 13(4)ರ ಕಾಯಿದೆ ನಿಯಮ 8ನ್ನು ಓದಿಕೊಂಡಂತೆ 19.12.2024 ರಂದು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸ್ವಾಧೀನಪಡಿಸಿಕೊಂಡಿರುತ್ತಾರೆ.

ಇದೀಗ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಹೇಳಲಾಗುವ ಆಸ್ತಿಯ ಇ-ಹರಾಜನ್ನು 25 ಎಪ್ರಿಲ್ 2025 ರಂದು ಇ-ಹರಾಜು ಫ್ಲ್ಯಾಟ್‌ಫಾರಂ ಮೂಲಕ ಒದಗಿಸಲಾದ ವೆಬ್‌ಪೋರ್ಟಲ್ www.matexauctions.com ಮೂಲಕ ನಡೆಸಲಾಗುವುದು ಹಾಗೂ ಬಿಡ್ಡಿಂಗ್ ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್ ಮೂಲಕ ಈ ಕೆಳಗೆ ನೀಡಲಾದ ನಿಯಮ ಮತ್ತು ನಿಬಂಧನೆಗಳ ಅನುಸಾರ ನಡೆಯಲಿದೆ.

ಆಸ್ತಿಯ ಮೀಸಲು ಬೆಲೆ: ರೂ.3,22,35,600/- (ಮೂರು ಕೋಟಿ ಇಪ್ಪತ್ತೆರಡು ಲಕ್ಷ ಮೂವತ್ತೈದು ಸಾವಿರದ ಆರುನೂರು ರೂಪಾಯಿಗಳು ಮಾತ್ರ). ಅರ್ನೆಸ್ಟ್ ಠೇವಣಿ ಹಣ: ರೂ.32,23,560/- (ಮೂವತ್ತೆರಡು ಲಕ್ಷ ಇಪ್ಪತ್ಮೂರು ಸಾವಿರದ ಐನೂರು ಅರುವತ್ತು ರೂಪಾಯಿಗಳು ಮಾತ್ರ)

ಬಿಡ್ ಆಹ್ವಾನದ ಮೂಲಕ ನಡೆಯುವ ಬಹಿರಂಗ ಹರಾಜಿನ ವಿಧಾನ, ನಿಯಮ ಮತ್ತು ನಿಬಂಧನೆಗಳು.

ಆಸ್ತಿಯನ್ನು ಎಪ್ರಿಲ್ 07 ಮತ್ತು 10, 2025 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯ ನಡುವೆ ಪರಿವೀಕ್ಷಿಸಬಹುದು.

1. ನಿಯಮ ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಟೆಂಡರ್/ಬಿಡ್ ಅರ್ಜಿಗಳನ್ನು ಆನ್‌ಲೈನ್ ಜಾಲತಾಣ http://www.matexauctions.com ನಿಂದ ಪಡೆದುಕೊಳ್ಳಬಹುದು. ಟೆಂಡರ್ ಅರ್ಜಿ ಹಾಗೂ ನಿಯಮ ಮತ್ತು ನಿಬಂಧನೆಗಳು ಜಾಲತಾಣದಲ್ಲಿ 28ನೇ ಮಾರ್ಚ್ 2025ರಿಂದ 24 ಎಪ್ರಿಲ್ 2025ರಂದು ಸಂಜೆ 5.00 ಗಂಟೆಯವರೆಗೆ ಲಭ್ಯವಿರುತ್ತದೆ. ಟೆಂಡರ್/ಬಿಡ್ ಗಳನ್ನು ಅಗತ್ಯವಿರುವ ಎಲ್ಲಾ ದಾಖಲೆ ಹಾಗೂ ಇಎಂಡಿ ಮೊತ್ತ ರೂ.32,23,560/- (ಮೂವತ್ತೆರಡು ಲಕ್ಷ ಇಪ್ಪತ್ಮೂರು ಸಾವಿರದ ಐನೂರ ಅರುವತ್ತು ರೂಪಾಯಿಗಳು ಮಾತ್ರ) ನ್ನು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಪರವಾಗಿ ಇಎಫ್‌ಟಿ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಮಾರ್ಟ್‌ಗೇಜ್ ಸಸ್ಪೆನ್ಸ್ ಖಾತಾ ನಂ. 42705095742; IFSC: SCBL0036078 ಕ್ಕೆ ಪಾವತಿಮಾಡಿರುವುದಕ್ಕೆ ಸಾಕ್ಷಿ ಸಹಿತ ಸಲ್ಲಿಸಬೇಕು. ಅರ್ನೆಸ್ಟ್ ಠೇವಣಿ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ವೆಬ್‌ಸೈಟ್ http://www.matexauctions.com ರಲ್ಲಿ ಬಿಡ್ ನಮೂನೆಗಳನ್ನು ಡೌನ್‌ಲೋಡ್ ಹಾಗೂ ಭರ್ತಿ ಮಾಡಿದ ಬಿಡ್‌ಗಳನ್ನು ಅಪ್‌ಲೋಡ್ ಮಾಡಬಹುದು.
2. ಅರ್ನೆಸ್ಟ್ ಠೇವಣಿ ಹಣದೊಂದಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 24ನೇ ಎಪ್ರಿಲ್ 2025 ಸಂಜೆ 5.00 ಗಂಟೆ
3. ಬಿಡ್ ಅರ್ಜಿಯ ಜೊತೆ ಆತ/ಅವಳು ತನ್ನ ಗುರುತಿನ ಚೀಟಿ, ವಾಸದ ಪುರಾವೆಗಳಾದಂತಹ ಪಾಸ್‌ಪೋರ್ಟ್, ಚುನಾವಣಾ ಗುರುತಿನ ಚೀಟಿ, ರೇಷನ್ ಕಾರ್ಡ್, ಚಾಲನಾ ಪರವಾನಿಗೆ ಇತ್ಯಾದಿಗಳ ಪ್ರತಿ ಹಾಗೂ ಭಾರತೀಯ ಆದಾಯ ತೆರಿಗೆ ಇಲಾಖೆಯಿಂದ ನೀಡಲಾದ ಪ್ಯಾನ್ ಕಾರ್ಡ್‌ನ ಪ್ರತಿಯನ್ನು ಸಲ್ಲಿಸಬೇಕು.
4. ಬಿಡ್ಡುದಾರರು ಸಂಬಂಧಿಸಿದ ಪ್ರಾಧಿಕಾರದಿಂದ ನೀಡಲ್ಪಟ್ಟ ಸೂಕ್ತವಾದ ಡಿಜಿಟಲ್ ಸಹಿ ಪ್ರಮಾಣಪತ್ರ ಹಾಗೂ ಇ-ಮೇಲ್ ವಿಳಾಸವನ್ನು ಹೊಂದಿರಬೇಕು (ಇ-ಮೇಲ್ ವಿಳಾಸವು ಆಸಕ್ತ ಬಿಡ್ಡುದಾರರಿಗೆ ಅತೀ ಅಗತ್ಯವಾಗಿದ್ದು ಎಲ್ಲಾ ಮಾಹಿತಿಗಳನ್ನು ಮತ್ತು ಐಡಿ ಹಾಗು ಪಾಸ್‌ವರ್ಡ್ ಹಂಚಿಕೆ ಮಾಹಿತಿಯನ್ನು ಮೆ॥ ಮೇಟೆಕ್ಸ್ ನೆಟ್ ಪ್ರೈ.ಲಿ. ಇ-ಮೇಲ್ ಮೂಲಕವೇ ನಡೆಸಲಿದೆ.
5. ಹರಾಜಿನ ದಿನಾಂಕದಂದು ಸ್ವೀಕೃತವಾದ ಎಲ್ಲಾ ಬಿಡ್‌ಗಳನ್ನು ತೆರೆದು, ಅದರಲ್ಲಿ ಮೀಸಲು ಬೆಲೆಗಿಂತ ಅತೀ ಹೆಚ್ಚು ಬಿಡ್ ಮಾಡಿರುವ ಬಿಡ್‌ದಾರರ ಬಿಡ್ಡನ್ನು ಬ್ಯಾಂಕ್ ಸ್ವೀಕರಿಸಲಿದೆ. ಯಾವುದೇ ಸಂದರ್ಭದಲ್ಲೂ ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. ಆದರೂ ಬಿಡ್‌ದಾರರು ಹರಾಜಿನ ಸಮಯದಲ್ಲಿ ಹಾಜರಿದ್ದು ತಮ್ಮ ಬಿಡ್ ಮೌಲ್ಯದ ಕನಿಷ್ಠ ಮೊತ್ತವನ್ನು ರೂ.50,000/- ವರೆಗೆ ಹೆಚ್ಚಿಸಬಹುದು ಹಾಗೂ ಇದರಲ್ಲಿ ಅತೀ ಹೆಚ್ಚು ಮೊತ್ತವನ್ನು ಬ್ಯಾಂಕ್ ಸ್ವೀಕರಿಸುವ ಅಧಿಕಾರವನ್ನು ಹೊಂದಿದೆ. ಪ್ರತೀ ಬಿಡ್‌ನ ನಂತರ ಮತ್ತೊಂದು ಬಿಡ್ ನ ಮಧ್ಯೆ 5 ನಿಮಿಷಗಳ ಅಂತರವಿರುವುದು. ಹರಾಜು 120 ನಿಮಿಷಗಳ ಕಾಲ ಅಂದರೆ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ನಡೆಯಲಿದೆ. ಒಂದು ವೇಳೆ ಇ-ಹರಾಜು ಮುಕ್ತಾಯದ 5 ನಿಮಿಷಗಳ ಮೊದಲು ಬಿಡ್ ಸ್ವೀಕೃತವಾದರೆ ಹರಾಜಿನ ಮುಕ್ತಾಯವು ಸ್ವಯಂಚಾಲಿತವಾಗಿ 5 ನಿಮಿಷಗಳ ಕಾಲ ವಿಸ್ತರಣೆಯಾಗಲಿದೆ.
6. ತದನಂತರ ಬ್ಯಾಂಕ್ ಮಾರಾಟ ದೃಢೀಕರಿಸಿದ ಮೇಲೆ ಇಎಂಡಿಗೆ ಹೊಂದಿಕೆಯಾಗುವಂತೆ ಖರೀದಿದಾರರು 25% (ಶೇಕಡಾ ಇಪ್ಪತ್ತೈದು) ಮಾರಾಟ ಬೆಲೆಯನ್ನು ಕೂಡಲೇ ಕೆಳಸಹಿದಾರರಿಗೆ ಪಾವತಿಸಬೇಕು. ಬಾಕಿ ಉಳಿದ ಮೊತ್ತವನ್ನು ಖರೀದಿದಾರರು ಕೆಳಸಹಿದಾರರಿಗೆ ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗಾಗಿ ಪಾವತಿಸಬೇಕು ಅಥವಾ ಒಂದು ವೇಳೆ ಸಮಯಾವಕಾಶ ವಿಸ್ತರಿಸಬೇಕಾದಲ್ಲಿ ಅದನ್ನು ಲಿಖಿತ ರೂಪದಲ್ಲಿ ಇಬ್ಬರ ಮಧ್ಯೆ ಒಪ್ಪಂದ ಮಾಡಿಕೊಳ್ಳಬೇಕು. ಹೇಳಿದ ಸಮಯಾವಕಾಶದಲ್ಲಿ ಹಣ ಪಾವತಿಸಲು ವಿಫಲವಾದಲ್ಲಿ, ಬ್ಯಾಂಕ್ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಸ್ವತ್ತನ್ನು ಮರುಹರಾಜು ನಡೆಸುವ ಅಧಿಕಾರವನ್ನು ಹೊಂದಿದೆ. ಉಪೇಕ್ಷಿತ ಖರೀದಿದಾರರಿಗೆ ಆಸ್ತಿಯ ಮೇಲಿನ ಅಥವಾ ಮಾರಾಟ ನಡೆಸುವ ಆಸ್ತಿಯ ಮೊತ್ತದ ಮೇಲಿರುವ ಎಲ್ಲಾ ಕ್ಲೈಮುಗಳನ್ನು ಮುಟ್ಟುಗೋಲು ಹಾಕಲಾಗುವುದು.
7. ಖರೀದಿದಾರರು ಎಲ್ಲಾ ಪಾವತಿಗಳನ್ನುಇಎಫ್‌ಟಿ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಮಾರ್ಟ್‌ಗೇಜ್ ಸಸ್ಪೆನ್ಸ್ ಖಾತಾ ನಂ. 42705095742; IFSC: SCBL0036078 ಕ್ಕೆ ಠೇವಣಿಯಿಡಬೇಕು.
8. ಮಾರಾಟ ಬೆಲೆಯು ಸಂಪೂರ್ಣಗೊಂಡ ನಂತರ ಬ್ಯಾಂಕ್ ಖರೀದಿದಾರರ ಪರವಾಗಿ ಮಾರಾಟ ಪ್ರಮಾಣಪತ್ರವನ್ನು ನೀಡಿ ಆಸ್ತಿಯ ಸ್ವಾಧೀನತೆಯನ್ನು ಖರೀದಿದಾರರಿಗೆ ನೀಡುತ್ತದೆ.
9. ಹೇಳಲಾದ ಆಸ್ತಿಯ ಶೆಡ್ಯೂಲ್ ಈ ಕೆಳಗೆ ನೀಡಲಾಗಿದ್ದು, ಕೆಳಸಹಿದಾರರಾದ ಅಧಿಕೃತ ಅಧಿಕಾರಿಗಳು ಮರಾಟ ಪ್ರಮಾಣಪತ್ರ ನೀಡಿದ ನಂತರ ಬೆಂಕಿ, ಕಳ್ಳತನ ಇತ್ಯಾದಿ ಯಾವುದೇ ರೀತಿಯಲ್ಲಿ ಹಾನಿ ಸಂಭವಿಸಿದಲ್ಲಿ ಅದಕ್ಕೆ ಖರೀದಿದಾರರೇ ಹೊಣೆಯಾಗಿರುತ್ತಾರೆ. ಖರೀದಿದಾರ ಯಾವುದೇ ಆಧಾರದ ಮೇಲೆ ಮಾರಾಟವನ್ನು ರದ್ದುಗೊಳಿಸಲು ಅರ್ಹನಾಗಿರುವುದಿಲ್ಲ.
10. ಯಶಸ್ವಿಯಾಗದ ಬಿಡ್ಡುದಾರರ ಇಎಂಡಿ ಹಣವನ್ನು ಅವರು ಬಿಡ್ ಅರ್ಜಿಯಲ್ಲಿ ನೀಡಿದ್ದ ಖಾತೆಗೆ ಡಿಡಿ/ಪಿಒ/ಇಎಫ್‌ಟಿ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ವರ್ಗಾಯಿಸಿ ಇ-ಮೇಲ್ ಮಾಹಿತಿ ನೀಡಲಾಗುವುದು.
11. ಎಲ್ಲಾ ಉದ್ದೇಶಗಳಿಂದ ಆಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆ" ಆಧಾರದ ಮೇಲೆ ಮಾರಾಟ ಮಾಡಲಾಗುವುದು. ಬ್ಯಾಂಕಿಗೆ ತಿಳಿದಿರುವ ಮಟ್ಟಿಗೆ ಈ ಆಸ್ತಿಗೆ ಯಾವುದೇ ಪರಭಾರೆ ಇರುವುದಿಲ್ಲ.
12. ಮೇಲಿನ ಆಸ್ತಿಯ ಎಲ್ಲಾ ವೆಚ್ಚಗಳಾದ ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ, ವರ್ಗಾವಣೆ ದರ ಹಾಗೂ ಇನ್ನಿತರ ಯಾವುದೇ ಶಾಸನಬದ್ಧ ಶುಲ್ಕಗಳಾದ ಆಸ್ತಿ ತೆರಿಗೆ, ವಿದ್ಯುತ್ ದರ ಮತ್ತು ನೀರಿನ ಶುಲ್ಕಗಳನ್ನು ಖರೀದಿದಾರರೇ ಪಾವತಿಸಬೇಕು.
13. ಅಧಿಕೃತ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
14. ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಆಸ್ತಿಗಳ ವಿವರಗಳು ಅಧಿಕೃತ ಅಧಿಕಾರಿಯವರಿಗೆ ತಿಳಿದ ಅತ್ಯುತ್ತಮ ಮಾಹಿತಿಯಾಗಿರುತ್ತದೆ. ಇ ಘೋಷಣೆಯಲ್ಲಿ ಯಾವುದೇ ಲೋಪ, ಬಿಟ್ಟುಹೋಗಿರುವಿಕೆ ಅಥವಾ ತಪ್ಪುಹೇಳಿಕೆಗಳು ಇತ್ಯಾದಿಗಳಿಗೆ ಅವರು ಉತ್ತರಿಸಬೇಕಾಗಿರುವುದಿಲ್ಲ. ಆದಾಗ್ಯೂ ಬ್ಯಾಂಕ್‌ಗೆ ಈ ಭದ್ರತಾ ಸ್ವತ್ತಿನ ಮೇಲಿನ ಯಾವುದೇ ಇತರೆ ಪರಭಾರೆ ಬಗ್ಗೆ ತಿಳಿದಿರುವುದಿಲ್ಲ. ಹಾಗೂ ಈ ಸೂಚನೆಯನ್ನು 1. ಶ್ರೀ ಇಮ್ರಾನ್ ಮೊಹಮ್ಮದ್ ಮುಕ್ಕ, 2. ಶ್ರೀಮತಿ ರೇಷ್ಮ ಎಮ್ ಹೆಚ್, ವಾಸ : 16-62/7(3) ಕಟೀಲ್ ರೆಸಿಡೆನ್ಸಿ, ಫ್ಲ್ಯಾಟ್ ನಂ. 101, ಉದಯ ನಗರ, ಕಾರ್ಪೋರೇಶನ್ ಬ್ಯಾಂಕ್ ಎದುರು, ಮುಕ್ಕ, ಮಂಗಳೂರು, ಪಿನ್ ಕೋಡ್ - 574146 ಮತ್ತು ಹಾಗೂ : ಶ್ರೀ ಇಮ್ರಾನ್ ಮೊಹಮ್ಮದ್ ಮುಕ್ಕ (ವ್ಯವಸ್ಥಾಪಕ ನಿರ್ದೇಶಕ), ಮೆ॥ ಐಎಮ್‌ಎಸ್ ಎಕ್ಸನ್ ಬಿಲ್ಡಿಂಗ್ ಹಾರ್ಡ್ ವೇರ್ ಟೂಲ್ಸ್ ಆಂಡ್ ಟ್ರೇಡಿಂಗ್ ಎಲ್‌ಎಲ್‌ಸಿ, # 905, ಮಕೆಟರ್ ಬಿಲ್ಡಿಂಗ್, ಅಂಚೆ ಸಯೀದ್, ವಿಮಾನ ನಿಲ್ದಾಣ ರಸ್ತೆ, ದಿಯರ, ದುಬೈ-172450 ಯುಎಇ ಹಗೂ : ಇಮ್ರಾನ್ ಮೊಹಮ್ಮದ್ ಮುಕ್ಕ, ಎಫ್ 707, ಅಲ್ಮಾಮ್‌ಝರ್ (ಎಸ್‌ಹೆಚ್) ಎನ್‌ಎ ಎಮಿರೇಟ್ಸ್, ಇಂಡ್ ಸಿಟಿ, ಶಾರ್ಜಾ, ದುಬೈ-562333, ಯುಎಇ ಮತ್ತು ಹಾಗೂ: ಶ್ರೀ ಇಮ್ರಾನ್ ಮೊಹಮ್ಮದ್ ಮುಕ್ಕ, ಬಂಡಸಾಲೆ ಮನೆ, ಸುರತ್ಕಲ್, ಮುಕ್ಕ ಅಂಚೆ, ಮಂಗಳೂರು-575021, ಕರ್ನಾಟಕ. ಮತ್ತು ಹಾಗೂ: ಶ್ರೀಮತಿ ರೇಷ್ಮ ಎಮ್ ಹೆಚ್, #ನಂ. 3, 3ನೇ ಮಹಡಿ, 2ನೇ ಮುಖ್ಯ ರಸ್ತೆ, ಚಿನ್ನಣ್ಣ ಲೇಔಟ್, ಕಾವಲ್‌ಭೈರಸಂದ್ರ, ಆರ್ ಟಿ ನಗರ ಅಂಚೆ, ಬೆಂಗಳೂರು-560032, ಕರ್ನಾಟಕ ಮತ್ತು ಹಾಗೂ: ಶ್ರೀಮತಿ ರೇಷ್ಮ ಎಮ್ ಹೆಚ್, #259/4, 4ನೇ ಬ್ಲಾಕ್ ರಾಧಾಕೃಷ್ಣ ಎಕ್ಸ್‌ಟೆನ್ಶನ್ ಕುಶಾಲ ನಗರ, ಸೋಮವಾರಪೇಟೆ, ಕೊಡಗು-571234, ಕರ್ನಾಟಕ ಇವರಿಗೆ ನಿಯಮ 8(6)ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಅನ್ವಯ ನೀಡಲಾಗಿದೆ.

ಶೆಡ್ಯೂಲ್
(ಹೇಳಲಾದ ಆಸ್ತಿ ವಿವರ)

ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ವಿಲ್ಲಾ ನಂ. 28, ಸೈಟ್ ನಂ. 28, ಪರಿವರ್ತಿತ ಭೂಮಿಯ ಸರ್ವೆ ನಂ,83 ರಲ್ಲಿ ರಚಿತವಾಗಿದ್ದು, ಚಿಕ್ಕನಾಗಮಂಗಲ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಜಿಲ್ಲೆ ಇಲ್ಲಿದ್ದು, ವಿಸ್ತೀರ್ಣ 4097 ಚದರ ಅಡಿಗಳ ಸೈಟ್ ವಿಸ್ತೀರ್ಣ ಜೊತೆಗೆ ಡ್ಯುಪ್ಲೆಕ್ಸ್ ವಾಸಯೋಗ್ಯ ವಿಲ್ಲಾ ವಿಸ್ತೀರ್ಣ 3902 ಚದರ ಅಡಿಗಳ ಬಿಲ್ಟಪ್ ಪ್ರದೇಶ ಎರಡು ಲಿವಿಂಗ್ ರೂಮ್‌ಗಳು, ನಾಲ್ಕು ಬೆಡ್ ರೂಮ್‌ಗಳು, ಡೈನಿಂಗ್, ಕಿಚನ್, ಐದು ಬಾತ್‌ರೂಮ್‌ಗಳು, ಒಂದು ಕೆಲಸಗಾರರ ಕೊಠಡಿಯನ್ನು ಹೊಂದಿದ್ದು, ಎಲ್ಲಾ ಗುಣಮಟ್ಟದ ಅಳವಡಿಕೆಗಳು, ಇಟಾಲಿಯನ್ ಮಾರ್ಬಲ್‌ನ ನೆಲಹಾಸು ಸಂಪೂರ್ಣ ಕಟ್ಟಡಕ್ಕೆ ಬಳಸಿದ್ದು, 3 ಬೆಡ್‌ರೂಮ್‌ಗಳಿಗೆ ಮರದ ನೆಲಹಾಸು ಸಿಟ್ ಔಟ್‌ಗಳು, ಬಾಲ್ಕನಿ ಮತ್ತು 2 ಕಾರು ಪಾರ್ಕಿಂಗ್ ಇರುವ ಯೋಜನೆಯನ್ನು"ವಾಟರ್‌ಫೋರ್ಡ್"ಎನ್ನಲಾಗುತ್ತಿದ್ದು, ಬಿಡಿಎ ಯಿಂದ ಅನುಮೋದಿತವಾದ ಯೋಜನೆ ಸಂ. ಬಿಡಿಎ/ಟಿಪಿಎಮ್/ಪಿಆರ್‌ಎಲ್-21/12-16/2360/13-14 ದಿನಾಂಕ 13.08.2013, ಗ್ರಾಮ ಪಂಚಾಯತ್ ಖಾತೆಯ್ನು ಹೊಂದಿದ್ದು, ಗ್ರಾಮ ಪಂಚಾಯತ್ ಕಚೇರಿ, ಶಾಂತಿಪುರ ಇವರಿಂದ ನೀಡಲ್ಪಟ್ಟಿದ್ದು, ಸಂ. 402/28, ಪಿಐಡಿ ನಂ. 150200100500622992 ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: ಉತ್ತರದ ಕಡೆಗೆ : 44'.3" ಅಡಿ ದಕ್ಷಿಣದ ಕಡೆಗೆ : 48'22" ಅಡಿ ಉತ್ತರದಿಂದ ದಕ್ಷಿಣಕ್ಕೆ: ಪೂರ್ವದ ಕಡೆಗೆ : 88' 6" ಅಡಿ ಪಶ್ಚಿಮದ ಕಡೆಗೆ : 88'. 6" ಅಡಿ ಮತ್ತು ಚಕ್ಕುಬಂದಿ; ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸರ್ವೆ ನಂ. 98, ಉತ್ತರಕ್ಕೆ: ಸೈಟ್ ನಂ. 27, ದಕ್ಷಿಣಕ್ಕೆ: ರಸ್ತೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
ಶ್ರೀ ಬತಿನ ರಾಜೇಶ್ ಕುಮಾರ್, ದೂ: 080-49431228, ಇ-ಮೇಲ್: rajeshkumar.bathina@sc.com, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ https://www.sc.com/in/important-information/public-sale-notice-of-properties-under-the-possession-of-bank ನ್ನು ಆಧಾರ ಮಾಡಿಕೊಳ್ಳಿ.

ದಿನಾಂಕ: 27.03.2025
ಸ್ಥಳ: ಬೆಂಗಳೂರು

ಸಹಿ/-
ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್
ಅಧಿಕೃತ ಅಧಿಕಾರಿ

IN THE COURT OF THE II ADDL.CIVIL JUDGE & JMFC AT KANAKAPURA
F.D.P. No. 9/2018 IN O.S.No0.222/2010
Decree Holder :Jayamma & others
V/s
Judgment Debtors :Hemavathi & others
NOTICE/SUMMONS TO THE JUDGMENT DEBTORS APPLICATION UNDER ORDER 5 RULE 20 OF CPC
Judgment Debtors NO
7. Smt. Prabhavathi. W/o late Lakshmana, Aged about 45 years, 8. Poornima, D/o late Lakshmana, 25 years 9. Manjula, D/o.late Lakshmana, Aged about 23 years, 10. Shruthi. D/o late Lakshmana, Aged about 20 years, All are at Arekattedoddi village, Kabbalu post, Sathnur Hobli, Kanakapura Taluk, Ramanagara District.

WHEREAS, the Decree Holder has filed the above F.D.P. for against all of you and others, hence all of you are hereby directed to appear in person or through a pleader on 28.04.2025. at 11'0 clock before this Hon'ble Court to answer the said proceedings. Take notice that in default of your appearance, the said F.D.P. will be heard and determined ex-parte. In the below suit schedule properties.

SCHEDULE

1. All the part and parcel of agricultural land bearing survey No.82/9A7, measuring 0.01½ guntas, Sy. No.82/9A15, measuring 0.02½ guntas, Sy.No.115/5A measuring 0-25 guntas, and Sy. No. 139/3, measuring 0-28 guntas, are all situated at Hosahalli village, Sathnur Hobli, Kanakapura Taluk end the same is bounded on the: East by: Gendana Katte West by: Land of Thimmegowda North by: Land of Siddegowdara Channegowda South by: Land of Thimmegowda
2. All the part and parcel of the agricultural land bearing Sy.No.210, New Sy.No.210/1 & 210/5, measuring 2 acres 18 guntas, situated at Kabbalu Village, Sathnur Hobli, Kanakapura Taluk and the same is bounded on the: East by : Land of Doddachari West by : Land of Byregowdara Kenchanna North by : Land of Dasegowdara Venkatagiri, South by : Land of Ogigowda
3. All the part and parcel of the House properties bearing Khaneshumari No.372/1A and Khaneshumari No.372/1B total measuring East to West 30 feet and North to South 20 feet situated at Arekattedoddi village, Sathnur Hobli, Kanakapura Taluk and the same is bounded on the: East by : Road, West by: House of Bisalaiah, North by: House of Nathamma and South by: House of Thimmegowda

GIVEN UNDER MY HAND AND SEAL OF THE COURT ON THIS 26th DAY OF MARCH, 2025
//By Order of the court//

ADDRESS:
Advocate for Decree Holder Manjunatha H.B.
Advocate, Office at No. 170, 2nd Ground Floor, K.G.Road, Alankar Pearl Plaza, Bengaluru-560 009.

ಮಾನ್ಯ 2ನೇ ಅಪರ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 5/2025

ಅರ್ಜಿದಾರರು: ಶ್ರೀ ಕೆಂಚೇಗೌಡ ಬಿನ್ ಲೇಟ್ ಕೆಂಪಣ್ಣಗೌಡ @ ಕೆಂಪೇಗೌಡ, ವಯಸ್ಸು 80 ವರ್ಷ
ವಾಸ: ಹೊಸಕೋಟೆ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ಹೊಸಕೋಟೆ ಗ್ರಾಮ, ತಾಮಸಂದ್ರ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 4 ಮತ್ತು 6ನೇ ಅರ್ಜಿದಾರರ ತಂದೆ ಹಾಗೂ 5ನೇ ಅರ್ಜಿದಾರರ ಮಾವನವರಾದ ಶ್ರೀ ಕೆಂಪಣ್ಣಗೌಡ @ ಕೆಂಪೇಗೌಡ ಬಿನ ಲೇಟ್ ಚಿಕ್ಕಸಿದ್ದೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹೊಸಕೋಟೆ ಗ್ರಾಮದಲ್ಲಿ ದಿನಾಂಕ 13.04.1999 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ-ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಅಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, **02.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ** ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಮಾರ್ಚ್ 25ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ 2ನೇ ಅಪರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 21.03.2025

ಮಾನ್ಯ 2ನೇ ಅಪರ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 6/2025

ಅರ್ಜಿದಾರರು: ಶ್ರೀ ಕೆಂಚೇಗೌಡ ಬಿನ್ ಲೇಟ್ ಕೆಂಪಣ್ಣಗೌಡ @ ಕೆಂಪೇಗೌಡ ವಯಸ್ಸು 80 ವರ್ಷ, ವಾಸ: ಹೊಸಕೋಟೆ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ಹೊಸಕೋಟೆ ಗ್ರಾಮ, ತಾಮಸಂದ್ರ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ರಿಂದ 4 ಮತ್ತು 6ನೇ ಅರ್ಜಿದಾರರ ತಾಯಿ ಹಾಗೂ 5ನೇ ಅರ್ಜಿದಾರರ ಅತ್ತೆಯವರಾದ ಶ್ರೀಮತಿ ಮಾರಮ್ಮ ಕೋಂ ಲೇಟ್ ಕೆಂಪಣ್ಣಗೌಡ @ ಕೆಂಪೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹೊಸಕೋಟೆ ಗ್ರಾಮದಲ್ಲಿ ದಿನಾಂಕ 29.08.2003 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 02.05.2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಮಾರ್ಚ್ 25ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ 2ನೇ ಅಪರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹರೀಶ್ ಟಿ.ಎ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 21.03.2025

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **27.10.2021** ರಂದು ಕರೆದು ಸಾಲಗಾರ **ಮಾಂಡವ ಭಾಸ್ಕರ್ ಮತ್ತು ಅರಾವಲಿಪಲ್ಲಿ ಕೃಷ್ಣ ದೀಪ್ತಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 34,82,044.20 (ಮೂವತ್ನಾಲ್ಕು ಲಕ್ಷ ಎಂಬತ್ತೆರಡು ಸಾವಿರದ ನಲವತ್ನಾಲ್ಕು ರೂಪಾಯಿ ಮತ್ತು ಇಪ್ಪತ್ತು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00298794** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **20.10.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೂಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **21.03.2025** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 34,82,044.20 (ಮೂವತ್ನಾಲ್ಕು ಲಕ್ಷ ಎಂಬತ್ತೆರಡು ಸಾವಿರದ ನಲವತ್ನಾಲ್ಕು ರೂಪಾಯಿ ಮತ್ತು ಇಪ್ಪತ್ತು ಪೈಸೆ ಮಾತ್ರ) 20.10.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಈ ವಸತಿಯ ಸಂಪೂರ್ಣ ಪ್ರಾಪರ್ಟಿ: ನಂ. 202, ವಿಸ್ತೀರ್ಣ 1250 ಚ. ಅಡಿ ಸೂಪರ್ ಬಿಲ್ಟ್-ಅಪ್ ಏರಿಯ, 2ನೇ ಮಹಡಿ, ಎ ಬ್ಲಾಕ್, "ಸರೋಜ್ ಟುಲಿಪ್" ಬಿಲ್ಡಿಂಗ್. ಈ ಪ್ರಾಪರ್ಟಿಯಲ್ಲಿ ಎರಡು ಬೆಡ್‌ರೂಮ್‌ಗಳು, ಆರ್‌ಸಿಸಿ ರೂಫಿಂಗ್, ವಿಟ್ರಿಫೈಡ್ ಟೈಲ್ಸ್ ಫ್ಲೋರಿಂಗ್ ಇವೆ, ಜೊತೆಗೆ ಇದಕ್ಕೆ ಒಂದು ಕಾರ್ ಪಾರ್ಕಿಂಗ್ ಜಾಗ ಕೂಡ ಇದೆ. ಇದರ ಸ್ಥಳ ವಿವರ: ಸರ್ವೇ ನಂ. 27/8 (ಹಳೆಯ ಸರ್ವೇ ನಂ. 27/1), ಬೆಳತೂರು ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು - 560042, ಕರ್ನಾಟಕ. ಅಲ್ಲದೆಯೆ, ಎಲ್ಲರ ಬಳಕೆಯ ಕಾಮನ್ ಏರಿಯಗಳು, ಪ್ಯಾಸೇಜ್‌ಗಳು, ಲಾಬಿಗಳು, ಲಿಫ್ಟ್‌ಗಳು, ಸ್ಟೇರ್‌ಕೇಸ್‌ಗಳು ಮತ್ತು ಇತರ ಕಾಮನ್ ಏರಿಯಗಳಲ್ಲಿ ಈ ಪ್ರಾಪರ್ಟಿಗೆ ಸಮಾನ ಪ್ರಮಾಣದಲ್ಲಿ ಅವಿಭಾಜಿತ 429 ಚ. ಅಡಿ ಜಾಗದ ಮೇಲೆ, ಹಕ್ಕು, ಹಿತಾಸಕ್ತಿ ಮತ್ತು ಹಕ್ಕುಪತ್ರ ಇರುತ್ತದೆ.

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 21.03.2025
ಸ್ಥಳ : ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆಯಲಿದ್ದಾರೆ
ಸಮಾಲೋಚನಾ ಸಭೆಯಲ್ಲಿ ಸಚಿವ ಕೆ.ಎಚ್.ಮುನಿಯಪ್ಪ ಭರವಸೆ

ಒಳ ಮೀಸಲು ಜಾರಿಗೆ ಸರಕಾರ ಬದ್ಧ

ಬೆಂಗಳೂರು: ಒಳಮೀಸಲಾತಿ ಅನುಷ್ಠಾನಗೊಳಿಸಲು ನಮ್ಮ ಸರಕಾರ ಬದ್ಧವಾಗಿದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದ್ದಾರೆ.

ಮಾದಿಗ ಸಮುದಾಯಗಳ ಸ್ವಾಭಿಮಾನದ ಒಕ್ಕೂಟದ ವತಿಯಿಂದ ನಗರದ ಲಿಡ್ಕರ್ ಸಭಾಂಗಣದಲ್ಲಿ ನಡೆದ ಒಳಮೀಸಲಾತಿ ಚಳುವಳಿಯ ಮುಂದಿನ ಹೋರಾಟದ ಬಗ್ಗೆ ಸಮಾಲೋಚನಾ ಸಭೆಯಲ್ಲಿ ಮಾತನಾಡಿ, ಪರಿಶಿಷ್ಟ ಜಾತಿಯ ಬಾಂಧವರು ಶಾಂತಿಯಿಂದ ಇರಬೇಕು. ಯಾವುದೇ ಪಕ್ಷದ ಅಥವಾ ಸಂಘ ಸಂಸ್ಥೆಗಳ ಮುಖಂಡರು ಸಹಕರಿಸಿಬೇಕು. ನಮ್ಮ ಸರಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಒಳ ಮೀಸಲಾತಿ ಜಾರಿಗೊಳಿಸಲು ಬದ್ಧರಾಗಿದ್ದಾರೆ. ತಾವು ಯಾರೂ ಧೃತಿಗೆಡಬಾರದು ನ್ಯಾ.ನಾಗಮೋಹನ್ ದಾಸ್ ಅವರು ವೈಜ್ಞಾನಿಕವಾಗಿ ಸಂಪೂರ್ಣ ಪರಿಶೀಲಿಸಿ ತೀರ್ಮಾನ ಮಾಡಲಿದ್ದಾರೆ ಕಾಲಮಿತಿ ಬಹಳ ದೂರವಿಲ್ಲ ನಾವು ಅಂತಿಮ ಘಟ್ಟದಲ್ಲಿ ಇದ್ದೀವಿ ಮೂವತ್ತು ವರ್ಷಗಳ ಹೋರಾಟಕ್ಕೆ ಪ್ರತಿಫಲ ಸಿಗಲಿದೆ ಎಂದರು.

ಸಚಿವರು ಒಳ ಮೀಸಲಾತಿ ಪರವಾಗಿದ್ದಾರೆ

ನಮ್ಮ ಸಮುದಾಯ ಬಹಳಷ್ಟು ನೊಂದಿದೆ ಸರಕಾರ ಒಂದು ಐತಿಹಾಸಿಕ ತೀರ್ಮಾನ ಮಾಡಲಿದೆ ನಮ್ಮ ಸಹೋದರರಾದ ಪರಮೇಶ್ವರ್, ಮಹದೇವಪ್ಪ, ಶಿವರಾಜ್ ತಂಗಡಗಿ, ಪ್ರಿಯಾಂಕ್ ಖರ್ಗೆ ಅವರು ಒಮ್ಮತ ಅಭಿಪ್ರಾಯ ಸೂಚಿಸಿದ್ದು ಇದರಲ್ಲಿ ಯಾರ ಮೇಲೆಯೂ ಸಂಶಯ ಪಡಬಾರದು. ನಮ್ಮ ಪರಿಶಿಷ್ಟ ಜಾತಿಯ ಸಚಿವರು ಒಕ್ಕೊರಲಿನಿಂದ ಇದರ ಪರವಾಗಿದ್ದು ತಾವೂ ಅನಗತ್ಯ ಗೊಂದಲಕ್ಕೆ ಒಳಗಾಗಬೇಡಿ ಸರಕಾರ ಒಳಮೀಸಲಾತಿ ಅನುಷ್ಠಾನಕ್ಕೆ ಬದ್ಧವಾಗಿದೆ. ಸುಪ್ರೀಂಕೋರ್ಟ್‌ನ ಮಹತ್ವದ ಆದೇಶವಿರುವುದರಿಂದ ಸರಿಯಾದ ದತ್ತಾಂಶಗಳ ಸಂಗ್ರಹಣೆ ಮಾಡಿ ಮುಖ್ಯಮಂತ್ರಿಗಳು ಶೀಘ್ರವಾಗಿ ಅನುಷ್ಠಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ, ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, ನಿವೃತ್ತ ಅಧಿಕಾರಿಗಳಾದ ತೇಗನೂರು, ಗೋನಾಳ ಬೀಮಪ್ಪ, ಭೀಮಾಶಂಕರ್, ಸಿದ್ದರಾಜು, ಕೃಷ್ಣಪ್ಪ, ಕೇಶವ ಮೂರ್ತಿ, ದೇವರಾಜು, ಪಕೀರಪ್ಪ, ಗುರುಮೂರ್ತಿ, ವೆಂಕಟೇಶ್ ಹಾಗೂ ವಿವಿಧ ಸಂಘಟನೆಗಳ ನಾಯಕರು ಉಪಸ್ಥಿತರಿದ್ದರು.

ಮಾದಿಗ ಸಮುದಾಯಗಳ ಸ್ವಾಭಿಮಾನದ ಒಕ್ಕೂಟದ ವತಿಯಿಂದ ಲಿಡಕರ್ ಸಭಾಂಗಣದಲ್ಲಿ ಒಳಮೀಸಲಾತಿ ಚಳುವಳಿಯ ಮುಂದಿನ ಹೋರಾಟದ ಬಗ್ಗೆ ನಡೆದ ಸಮಾಲೋಚನಾ ಸಭೆಯಲ್ಲಿ ಸಚಿವ ಕೆ.ಎಚ್.ಮುನಿಯಪ್ಪ ಭಾಗವಹಿಸಿದ್ದರು.

> ಒಳಮೀಸಲಾತಿ ವಿಷಯವು ಬಹಳ ಸೂಕ್ಷ್ಮವಾಗಿದ್ದು ಈ ವರದಿಯ ಮೇಲೆ ಕೋರ್ಟ್‌ಗೆ ಹೋಗಬಾರದು ಎಂಬ ಉದ್ದೇಶದಿಂದ ನಾವು ಸರಿಯಾದ ಮಾಹಿತಿ ಸಂಗ್ರಹಿಸಿ ನಂತರ ಅನುಷ್ಠಾನ ಮಾಡಬೇಕಾಗುತ್ತದೆ. ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳದೆ ಒಳಮೀಸಲಾತಿ ಅನುಷ್ಠಾನ ಅತಿ ಶೀಘ್ರದಲ್ಲಿ ಆಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆಯುತ್ತಾರೆ, ನಮ್ಮ ಸರಕಾರ ಅನುಷ್ಠಾನದಲ್ಲಿ ಬದ್ಧವಾಗಿದೆ ತಾವು ಶಾಂತವಾಗಿರಿ.
>
> -ಕೆ.ಎಚ್.ಮುನಿಯಪ್ಪ, ಸಚಿವ

ಉಪಜಾತಿ ಗೊಂದಲ ನಿವಾರಣೆ ಕ್ರಮಕ್ಕೆ ಮನವಿ

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹಾಗೂ ಆದಿ ಕರ್ನಾಟಕ ಆದಿ ದ್ರಾವಿಡ ಜಾತಿ ಪ್ರಮಾಣ ಪತ್ರ, ಹೊಂದಿರುವವರಿಗೆ ನಿರ್ದಿಷ್ಟ ಜಾತಿ ಪ್ರಮಾಣ ಪತ್ರ ಹೊಂದಲು ತಕ್ಷಣ ಕ್ರಮ ಕೈಗೊಳ್ಳುವಂತೆ ಸಚಿವ ಕೆ.ಎಚ್.ಮುನಿಯಪ್ಪ ಅವರಿಗೆ ಷಡಕ್ಷರಿ ಮುನಿ ಸ್ವಾಮೀಜಿ ನಿಯೋಗ ಮನವಿ ಮಾಡಿದ್ದಾರೆ.

ಆದಿಜಾಂಬವ ಬೃಹ್ಮಠದ ಪೀಠಾಧ್ಯಕ್ಷ ಷಡಕ್ಷರಿ ಮುನಿ ಸ್ವಾಮೀಜಿ ಹಾಗೂ ರಾಜ್ಯ ಮಾತಂಗ ಜಾಗೃತಿ ಸಮಿತಿ ಅಧ್ಯಕ್ಷ ಆರ್.ಲೋಕೇಶ್ ನೇತೃತ್ವದ ನಿಯೋಗ ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ಭೇಟಿ ಮಾಡಿ ಒಳ ಮೀಸಲಾತಿ ಜಾರಿಯ ಕುರಿತಾಗಿ ನಡೆಸಿದ ಚರ್ಚೆಯಲ್ಲಿ, ಸದಾಶಿವ ಆಯೋಗದ ವರದಿ, ಮಾಧುಸ್ವಾಮಿ ಸಮಿತಿ ಶಿಫಾರಸ್ಸು ಇದ್ದವು. ಅದೆಲ್ಲವೂ ಕಳೆದ ವರ್ಷ ಆ.1 ಸುಪ್ರೀಂ ಕೋರ್ಟ್‌ನ ತೀರ್ಪು ಬಂದ ನಂತರ ಕೋರ್ಟ್ ಸೂಚನೆಗಳನ್ನು ಆಯಾ ರಾಜ್ಯಗಳ ಸರಕಾರಗಳು ಪಾಲಿಸಬೇಕಿದೆ. ಸದಾಶಿವ ಆಯೋಗದ ವರದಿಯಲ್ಲಿ ಸುಮಾರು ಎಂಟು ಲಕ್ಷ ಪರಿಶಿಷ್ಟರ ಜಾತಿಯ ಮೂಲ ಪತ್ತೆ ಹಚ್ಚಲು ಸಾಧ್ಯವಾಗಿಲ್ಲ, ಹಾಗೂ ಅದಕ್ಕಿಂತ ಮುಖ್ಯವಾಗಿ ಜಾತಿಯ ಗುಂಪುಗಳಾಗಿರುವ ಆದಿ ಕರ್ನಾಟಕ ಆದಿ ದ್ರಾವಿಡ ಹಾಗೂ ಆದಿ ಆಂಧ್ರ ಹೆಸರಿನಲ್ಲಿ 36 ಲಕ್ಷಕ್ಕೂ ಅಧಿಕ ಮಂದಿ ಗುರುತಿಸಿಕೊಂಡಿರುವುದು ಅತ್ಯಂತ ಗೊಂದಲಕ್ಕೆ ಕಾರಣವಾಗಿದೆ. ಇದು ಮುಂದೆ ಬಹಳ ದೊಡ್ಡ ಸಮಸ್ಯೆ ಆಗಿ ಜಾತಿ ಜಾತಿಗಳ ಮಧ್ಯೆ ವೈಷಮ್ಯಕ್ಕೆ ಕಾರಣವಾಗುವುದರಿಂದ ಇದನ್ನು ಬಗೆಹರಿಸಲೇಬೇಕು ಎಂದು ಸಚಿವರಿಗೆ ಒತ್ತಾಯಿಸಿದರು.

ಜಲ ಸಂರಕ್ಷಿತ ಗ್ರಾಮ ರೂಪಿಸಲು ಸೂಚನೆ

ಬೆಂಗಳೂರು: ನೀರಿನ ಮೂಲ ಅನ್ವೇಷಣೆ, ಜಲ ಸುಸ್ಥಿರತೆ, ಜಲ ಸಂರಕ್ಷಣೆ, ನೀರು ಕಲುಷಿತವಾಗದಂತೆ ತಡೆಯುವಿಕೆ, ಮಳೆನೀರು ಸಂರಕ್ಷಣೆ, ಮಿತ ಬಳಕೆ ಮುಂತಾದ ಆಶಯಗಳೊಂದಿಗೆ ಜಲ ಸಂರಕ್ಷಿತ ಗ್ರಾಮ ರೂಪಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ನೀರು ಸರಬರಾಜು ಇಲಾಖೆ ಹಾಗೂ ನರೇಗಾ ಇಲಾಖಾ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಸಚಿವರು, 2025-26ರ ಬಜೆಟ್‌ನಲ್ಲಿ

ನೀರು ಸರಬರಾಜು ಮೂಲಭೂತ ಸೌಕರ್ಯಗಳ ಸುಸ್ಥಿರ ಮತ್ತು ವೈಜ್ಞಾನಿಕ ಮಾಹಿತಿ ವ್ಯವಸ್ಥೆ ಆಧಾರಿತ ಮೊಬೈಲ್ ಮತ್ತು ವೆಬ್ ತಂತ್ರಾಂಶ ಅಭಿವೃದ್ಧಿಪಡಿಸುವ ಘೋಷಣೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಸುಸ್ಥಿರ ನೀರು ಸರಬರಾಜು ಮಾಡುವ ಮಹತ್ತರ ಆಶಯದೊಂದಿಗೆ ಹೊಸ ಆರ್ಥಿಕ ವರ್ಷದಲ್ಲಿ ಹೊಸ ಹೆಜ್ಜೆ ಇರಿಸಲು ಚಿಂತನೆ ನಡೆಸಲಾಗಿದೆ ಎಂದರು.

ತಜ್ಞರ ಸಲಹೆ ಪಡೆಯಲು ಸೂಚನೆ: ಇಸ್ರೊ ಸಂಸ್ಥೆ ಉಪಗ್ರಹ ಆಧಾರಿತ ಅಂತರ್ಜಲ ಶೋಧನೆ ಮಾಡಿದ್ದು ಈ ಮಾಹಿತಿಯ ಲಾಭ ಪಡೆಯಲು ನಿರ್ದೇಶಿಸಿದ ಸಚಿವರು ಜಿಲ್ಲಾ ಪಂಚಾಯತಿ ಅಧಿಕಾರಿಗಳೊಂದಿಗೆ ಭೂಗರ್ಭ ಇಲಾಖೆ, ಭಾರಿ ನೀರಾವರಿ ಹಾಗೂ ಸಣ್ಣ ಹಾಗೂ ಮಧ್ಯಮ ನೀರಾವರಿ ಇಲಾಖೆಗಳು, ಜಲಾನಯನ ಇಲಾಖೆ, ನಗರಾಭಿವೃದ್ಧಿ ಹಾಗೂ ಇನ್ನಿತರ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳನ್ನು ಮತ್ತು ಸರಕಾರೇತರ ಸೇವಾ ಸಂಸ್ಥೆಗಳು ಹಾಗೂ ಇತರ ವಿಷಯ ತಜ್ಞರ ಸಲಹೆ ಪಡೆದು ಜಲ ಸಂರಕ್ಷಿತ ಗ್ರಾಮ ರೂಪಿಸಲು ನೀಲನಕ್ಷೆ ತಯಾರಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸ್ವಚ್ಛವಾಹಿನಿ ಚಾಲಕಿಯರ ಸಮಸ್ಯೆ ಪರಿಹಾರಕ್ಕೆ ಆದ್ಯತೆ

ಬೆಂಗಳೂರು: ಗ್ರಾಮೀಣ ಭಾಗದ ಸ್ವಚ್ಛವಾಹಿನಿ ಚಾಲಕಿಯರ ಸಮಸ್ಯೆಗಳನ್ನು ಆದ್ಯತೆಯ ಮೇಲೆ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದ್ದಾರೆ.

ಸಚಿವರ ನಿವಾಸ ಕಚೇರಿಯಲ್ಲಿ ಭೇಟಿ ಮಾಡಿ ತಮ್ಮ ಸಮಸ್ಯೆ ನಿವೇದಿಸಿಕೊಂಡ ಸ್ವಚ್ಛವಾಹಿನಿ ಚಾಲಕಿಯರ ಜತೆ ಮಾತನಾಡಿದ ಅವರು, ಗ್ರಾಮೀಣ ಮಹಿಳೆಯರು ಔದ್ಯೋಗಿಕವಾಗಿ ತೊಡಗಿಸಿಕೊಳ್ಳಲು ಉತ್ಸಾಹ ತೋರಿಸಿರುವಾಗ, ಅವರಿಗೆ ಉತ್ತಮ ವಾತಾವರಣ ನೀಡಿ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯವಾಗಿದೆ. ಕುಟುಂಬವನ್ನಾಗಲಿ, ಸಂಸ್ಥೆಗಳನ್ನಾಗಲಿ ಅಥವಾ ವಾಹನವನ್ನೇ ಆಗಲಿ, ಮಹಿಳೆಯರು ಅತ್ಯಂತ ಜವಾಬ್ದಾರಿಯಿಂದ ಮುನ್ನಡೆಸಬಲ್ಲರು. ಅವರಲ್ಲಿ ಆತ್ಮವಿಶ್ವಾಸ ತುಂಬಿ, ಸ್ವಾವಲಂಭಿಗಳನ್ನಾಗಿಸುವ ನಿಟ್ಟಿನಲ್ಲಿ ಕಸ ಸಂಗ್ರಹಣೆ ನಿರ್ವಹಣೆಯಲ್ಲಿ ಮಹಿಳೆಯರಿಗೆ ಮುಂದಾಳತ್ವ ವಹಿಸಲಾಗಿದ್ದು, ಸ್ವಚ್ಛ ವಾಹಿನಿ ವಾಹನಗಳಿಗೆ ಮಹಿಳೆಯರನ್ನೇ ಚಾಲಕರನ್ನಾಗಿ ಆಯ್ಕೆ ಮಾಡಲಾಗಿದೆ, ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಕಾರ್ಯನಿರ್ವಹಿಸಲು ಉತ್ತಮ ವಾತಾವರಣ ನಿರ್ಮಿಸಿಕೊಡುವ ನಿಟ್ಟಿನಲ್ಲಿ ಒಂದು ವಾರದೊಳಗಾಗಿ ಅಧಿಕಾರಿಗಳ ಸಭೆ ಕರೆದು ಚರ್ಚಿಸಲಾಗುವುದು ಎಂದು ತಿಳಿಸಿದರು.

ಗ್ರಾಮೀಣ ಭಾಗದ ಸ್ವಚ್ಛವಾಹಿನಿ ಚಾಲಕಿಯರು ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ನಿವಾಸ ಕಚೇರಿಯಲ್ಲಿ ಭೇಟಿ ಮಾಡಿ ತಮ್ಮ ಸಮಸ್ಯೆ ಹೇಳಿಕೊಂಡರು.

ಎಚ್‌ಪಿವಿ ಲಸಿಕಾ ಪ್ರಾಯೋಗಿಕ ಅಭಿಯಾನ ಶೀಘ್ರ ಅನುಷ್ಠಾನ

ಬೆಂಗಳೂರು: ಮಹಿಳೆಯರನ್ನು ಸಂಭಾವ್ಯ ಗರ್ಭಕಂಠ ಕ್ಯಾನ್ಸರ್‌ನಿಂದ ಪಾರು ಮಾಡುವ ಎಚ್‌ಪಿವಿ ಲಸಿಕಾ ಪ್ರಾಯೋಗಿಕ ಅಭಿಯಾನವನ್ನು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಶೀಘ್ರವೇ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಗರ್ಭಕಂಠ ಕ್ಯಾನ್ಸರ್ ಮುಕ್ತ ಕರ್ನಾಟಕ ಧ್ಯೇಯದೊಂದಿಗೆ ಕರ್ನಾಟಕದಲ್ಲಿ ಎಚ್‌ಪಿವಿ ಲಸಿಕಾ ಅಭಿಯಾನ, ಜಾಗೃತಿಯಿಂದ ಅನುಷ್ಠಾನದವರೆಗೆ ಕುರಿತು ಎಚ್‌ಡಿಆರ್ ಫೌಂಡೇಷನ್ ಮತ್ತು ಆರ್ಟಿಸ್ಟ್ ಫಾರ್ ಹರ್ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉದ್ಘಾಟನಾ ಭಾಷಣ ಮಾಡಿ ಅವರು ಮಾತನಾಡಿ, ಹದಿಹರೆಯದ ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ ಹಾಕುವುದರಿಂದ ಭವಿಷ್ಯದಲ್ಲಿ ಅವರಿಗೆ ಎದುರಾಗಬಹುದಾದ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟಬಹುದು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದರ ಪ್ರಾಯೋಗಿಕ ಅನುಷ್ಠಾನಕ್ಕೆ ಸಂಬಂಧಿಸಿದ ಪ್ರಸ್ತಾವ ಸರಕಾರದ ಮುಂದಿದ್ದು, ಶೀಘ್ರವೇ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ವಿವರಿಸಿದರು.

ಗರ್ಭಕಂಠ ಕ್ಯಾನ್ಸರ್ ನಿರ್ಮೂಲನೆಗಾಗಿ ವಿಶ್ವ ಆರೋಗ್ಯ ಸಂಸ್ಥೆ ರೂಪಿಸಿರುವ 90-70-90 ಸೂತ್ರಕ್ಕೆ (14 ವರ್ಷದೊಳಗಿನ ಶೇ 90ರಷ್ಟು ಹೆಣ್ಣು ಮಕ್ಕಳಿಗೆ ಲಸಿಕೆ, 25 ವರ್ಷದ ನಂತರ ಶೇ.70ರಷ್ಟು ಮಹಿಳೆಯರ ಸ್ಕ್ರೀನಿಂಗ್, ಬಾಧಿತರ ಪೈಕಿ ಶೇ 90ರಷ್ಟು ಮಹಿಳೆಯರಿಗೆ ಚಿಕಿತ್ಸೆ ಲಭ್ಯತೆ) ಅನುಗುಣವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದರ ಪ್ರಾಯೋಗಿಕ ಅನುಷ್ಠಾನ ನಡೆಯಲಿದೆ. ಈ ವಿಷಯದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ರಾಜ್ಯಕ್ಕೆ ಮಾದರಿಯಾಗಬೇಕು ಎಂಬುದು ಸರಕಾರದ ಆಶಯ ಎಂದರು.

ಏ.1ಕ್ಕೆ ರಾಜ್ಯದಲ್ಲಿ ಗೃಹ ಆರೋಗ್ಯ ಉಪಕ್ರಮಕ್ಕೆ ಚಾಲನೆ

ಏಪ್ರಿಲ್ 1ರಂದು ರಾಜ್ಯದಲ್ಲಿ ಗೃಹ ಆರೋಗ್ಯ ಉಪಕ್ರಮಕ್ಕೆ ಚಾಲನೆ ನೀಡಲಾಗುವುದು. ಇದರಡಿಯಲ್ಲಿ, ಮಹಿಳೆಯರನ್ನು ಆರೋಗ್ಯ ಉಪಕೇಂದ್ರಗಳಲ್ಲಿ ಸ್ತನ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ಬಾಯಿ ಕ್ಯಾನ್ಸರ್ ಸೇರಿದಂತೆ ಸುಮಾರು 15 ಅನಾರೋಗ್ಯಗಳ ಪತ್ತೆಗಾಗಿ ಸ್ಕ್ರೀನಿಂಗ್‌ಗೆ ಒಳಪಡಿಸಲಾಗುವುದು. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಹಚ್ಚುವ ದಿಸೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸ್ಕ್ರೀನಿಂಗ್‌ಗೆ ಒಳಪಡಬೇಕು ಎಂಬುದು ಸರಕಾರದ ಆಶಯವಾಗಿದೆ. ಇದಕ್ಕಾಗಿ, ಮನೆ ಮನೆಗೂ ತೆರಳಿ ಜಾಗೃತಿ ಮೂಡಿಸುವ ಕಾರ್ಯವನ್ನೂ ನಡೆಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಉದ್ಯಾನ, ಗಿಡ-ಮರಗಳಿಗೆ ಸಂಸ್ಕರಿತ ನೀರು ಬಳಕೆಗೆ ಕ್ರಮ

ಬೆಂಗಳೂರು: ನಗರದಲ್ಲಿ ತಾಪಮಾನ ಹೆಚ್ಚಳದ ಹಿನ್ನೆಲೆ ಪಾಲಿಕೆಯು ತನ್ನ ಮಿತಿಯೊಳಗಿನ 1287 ಉದ್ಯಾನವನಗಳಿಗೆ ಸಂಸ್ಕರಿಸಿದ ನೀರು ಬಳಕೆ ಮಾಡಲು ನಿರ್ಧರಿಸಿದ್ದು, 300 ಟ್ರ್ಯಾಕ್ಟರ್‌ಗಳನ್ನು ನಿಯೋಜಿಸಲು ಮುಂದಾಗಿದೆ.

ಈ ಸಮಸ್ಯೆಯನ್ನು ನಿಭಾಯಿಸಲು ಜನವರಿಯಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿತ್ತು. ಮಾರ್ಚ್ ಆರಂಭದಲ್ಲಿಯೇ ಪಾಲಿಕಾ ವ್ಯಾಪ್ತಿಯಲ್ಲಿ ಉದ್ಯಾನವನಗಳ ಬೋರ್‌ವೆಲ್‌ಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಿದೆ. ಈ ಹಿನ್ನೆಲೆ ಸಂಸ್ಕರಿಸಿದ ನೀರನ್ನು ಮರ ಗಿಡಗಳಿಗೆ ಬಳಕೆ ಮಾಡಲು ಟ್ರ್ಯಾಕ್ಟರ್‌ಗಳನ್ನು ನಿಯೋಜಿಸಲು ನಿರ್ಧರಿಸಿದ್ದೇವೆ ಎಂದು ಬಿಬಿಎಂಪಿ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಚಂದ್ರಶೇಖರ್ ಹೇಳಿದರು.

ಬೈರಸಂದ್ರ, ನಾಯಂಡಹಳ್ಳಿ, ಜೆಸಿ ರಸ್ತೆ, ಹೆಬ್ಬಾಳ, ನಾಗಸಂದ್ರ ಮತ್ತು ಮಹದೇವಪುರದಲ್ಲಿರುವ ಎಸ್‌ಟಿಪಿಗಳಿಂದ ಪ್ರತಿದಿನ 30-40 ಟ್ರ್ಯಾಕ್ಟರ್‌ಗಳ ಮೂಲಕ ಪ್ರತಿ ಟ್ರ್ಯಾಕ್ಟರ್ 6,000 ಲೀಟರ್ ಸಂಸ್ಕರಿಸಿದ ನೀರನ್ನು ಸಾಗಿಸಲಿದೆ ನೀರನ್ನು ಸಂಗ್ರಹಿಸಲಾಗುತ್ತಿದ್ದು, ಈ ವ್ಯವಸ್ಥೆಯು ಮೇ ಅಂತ್ಯದವರೆಗೆ ಅಥವಾ ಮಳೆಗಾಲ ಪ್ರಾರಂಭವಾಗುವವರೆಗೆ ಮುಂದುವರಿಯಲಿದೆ. ಸುಮಾರು 400 ಉದ್ಯಾನವನಗಳಲ್ಲಿ ಯುನೈಟೆಡ್ ವೇ ಬೆಂಗಳೂರು ಎಂಬ ಸರಕಾರೇತರ ಸಂಸ್ಥೆಯು 1,000 ಮಳೆನೀರು ಇಂಗು ಗುಂಡಿಗಳನ್ನು ಸ್ಥಾಪಿಸಿದೆ, ಇದು ಟ್ರ್ಯಾಕ್ಟರ್ ನೀರು ಸರಬರಾಜಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿದೆ.

ಜಲಮಂಡಳಿ ಅಧಿಕಾರಿಯೊಬ್ಬರು ಮಾತನಾಡಿ, ಮಂಡಳಿಯು 1,000 ಲೀಟರ್ ಸಂಸ್ಕರಿಸಿದ ನೀರಿಗೆ 20 ರು. ಶುಲ್ಕ ವಿಧಿಸುತ್ತದೆ. ನೀರಿನ ಸಂರಕ್ಷಣೆಗೆ ಸಹಾಯ ಮಾಡಲು ಬೇಸಿಗೆಯಲ್ಲಿ ನಿವಾಸಿಗಳು ಸಂಸ್ಕರಿಸಿದ ನೀರನ್ನು ದ್ವಿತೀಯ ಉದ್ದೇಶಗಳಿಗಾಗಿ ಬಳಸಬೇಕು ಎಂದು ಮಂಡಳಿ ಮನವಿ ಮಾಡಿದೆ ಎಂದು ತಿಳಿಸಿದರು.

ಎರಡು ದಿನ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ 66/11ಕೆವಿ ಗೊಲ್ಲಹಳ್ಳಿ (ಬನ್ನೇರುಘಟ್ಟ) ಎಫ್-8 ಕಾಸರಗುಪ್ಪೆ ವಿದ್ಯುತ್ ಮಾರ್ಗದಲ್ಲಿ ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಮಾ.27ಮತ್ತು 28ರಂದು ಬೆಳಗ್ಗೆ 10ರಿಂದ 5.00 ಗಂಟೆಯವರೆಗೆ ಶ್ಯಾನುಭೋಗನಹಳ್ಳಿ, ಕುಲುಮೆಪಾಳ್ಯ, ಕನ್ನಾಯಕನ ಅಗ್ರಹಾರ, ಕೆಂಚಯ್ಯನದೊಡ್ಡಿ, ಮುನಿಮಾರನದೊಡ್ಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

31 ವರ್ಷಗಳ ವಿಶ್ವಾಸ, ಅತ್ಯುತ್ತಮವಾದುದರಲ್ಲಿ ನಂಬಿಕೆ
ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಭವಿ ಸೇವಾ ಪೂರೈಕೆದಾರ' ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ
ಅಡಿಗಾಸ್ ಯಾತ್ರಾ®
ಸ್ಥಳ, ಸಮಯ, ಹಣಕ್ಕೆ ಅಧಿಕ ಮೌಲ್ಯ
9449478944
email: care@adigasyatra.com website: www.adigasyatra.com
500ಕ್ಕೂ ಅಧಿಕ ವೈವಿಧ್ಯಮಯ ಪ್ರವಾಸಗಳು
ಕನ್ನಡಿಗರಿಂದ, ಕನ್ನಡಿಗರಿಗಾಗಿ ಸಿದ್ಧಪಡಿಸಿದ ಸಮಾನ ಮನಸ್ಕ ಪ್ರತಿಷ್ಠಿತ ಕನ್ನಡಿಗರೊಂದಿಗೆ ವಿದೇಶ ಪ್ರವಾಸಗಳು
INTERNATIONAL TOURS
• NO COMPROMISE IN QUALITY !!! NO FALSE PROMISES !!!
• VALUE FOR MONEY !!! BEST QUALITY ASSURANCE !!!
• NO DISCOUNTS !!! NO SALES GIMMICKS !!!

EUROPE — 9 / 13 Days
France, Belgium, The Netherlands, Luxembourg, Germany, Switzerland, Liechtenstein, Austria, Vatican City, Italy.
2025 : May 3, 17, 31. Jun 14, 21, 28. July 5, 12, 19. Aug 9, 16, 23. Sep 6, 13, 27. Oct 4, 11, 25. Nov 8, 15

UNITED KINGDOM — 10 Days
London, Oxford, Manchester, Lake Windermere, Glasgow, Edinburgh, Belfast, Dublin.
2025: May 14, 28. June 11, 18, 21. July 2, 9, 16. Aug 6, 13, 20. Sep 3, 10, 24. Oct 1, 8, 22. Nov 5, 12.

AUSTRALIA — 13 Days
SYDNEY: Blue Mountain. Wollongong.
MELBOURNE: Penguin Parade, Great Ocean Road
CAIRNS: Kuranda, Great Barrier Reef
GOLD COAST: Sea world, Crystal Castle & Shambhala Gardens
BRISBANE
2025: May 18. Aug 15, 29. Sep 14, 28. Oct 5, 19. Nov 2, 16, 23. Dec 7.

SINGAPORE - MALAYSIA - THAILAND — 4/5/7/8/11/15 Days
SINGAPORE : Universal Studios, Sentosa Island, Wings Of Time, Cable Car, Singapore City Tour, Gardens by the Bay, Sea Aquarium.
MALAYSIA : Kuala Lumpur City Tour, Putrajaya, Genting Highlands.
THAILAND: Pattaya, Coral Island, Alcazar Show, Nong Nooch Village, Bangkok City Tour, Safari World & Marine Park.
2025 : Apr 25. May 2, 9, 26. June 13, 20, 27. July 11, 25. Aug 8, 15, 22. Sep 5, 19, 26. Oct 3, 17, 24.

CAMBODIA - VIETNAM — 6 / 7 / 10 / 12 Days
CAMBODIA: Phnom Penh, Siem Reap, Angkor Wat, Tonle Sap, Thousand Lingas River.
VIETNAM: Hanoi, Ninh Binh, Halong bay, Da Nang, Hoi An, Ba Na Hills, Mekong Delta, Ho Chi Minh City, Cu Chi Tunnels.
2025: Apr 10, 24. May 8, 22. June 5, 19. July 10, 24. Aug 7, 14, 21. Sep 11, 18, 25.

DUBAI - ABU DHABI — 6 Days
Dhow Cruise, Dubai City, Abu Dhabi City, Burj Khalifa, Desert Safari, Dubai Frame, Global Village.
2025: Apr 10, 24. May 8, 22. June 19. July 10, 24. Aug 7, 14, 28. Sep 11, 18, 25. Oct 2, 16, 30.

SRILANKA RAMAYANA TRAILS — 5 / 7 / 8 DAYS
Ramayana Temples, Manavari Temple, Muneshwaram Temple, Trincomalee, Matale, Sigirya Rock Photostop, Kandy, Ramboda Hanuman, Nuwara Eliya, Ashoka Vatika, Sita Agnipariksha, Bentota Beach, Madu River Safari, Vibhishana Temple, Colombo City Tour.
2025: Apr 3, 10, 24. May 8, 22. June 19. July 10, 24. Aug 7, 14, 28. Sep 11, 18, 25.

BHUTAN: THE LAND OF HAPPINESS — 8 Days
Phuentsholing, Punakha, Paro, Thimpu
2025: Apr 10, 24. May 8, 15, 22. June 2, 19. July 10, 24. Aug 14, 28. Sep 11, 18.

NEPAL-MUKTHINATH — 5 / 9 Days
Lumbini, Pokhara, Jomsom, Muktinath, Phewa Lake, Manokamana, Kathmandu, Bhakthapur, Doleshwar Mahadev, Janakpur etc.
2025: Apr 10, 24. May 8, 15, 22. June 2, 19, 26. July 10, 17, 24. Aug 7, 14, 28. Sep 11, 18.

BALI : THE LAND OF GODS — 5 / 7 / 9 Days
Denpasar, Nusa Penida Island, Kintamani, Ubud, Garuda Wisnu Cultural Park, Tanah Lot, Beraton Lake, Ulun Danu, Taman Ayun, Tanjung Benoa Beach, Uluwatu, Besakih, Tirta Empul, Lempuyang Temple, Tirta Gangga Kings Palace, Bat Caves Temple.
2025 : Apr 7, 21, 28. May 5, 19. June 2, 16. July 7, 21. Aug 4, 18. Sep 1, 15, 22. Oct 6, 20, 27.

For more details call:
ಬಸವನಗುಡಿ : 080-26616678 / 7022259008
ಮಲ್ಲೇಶ್ವರಂ : 080-23346678 / 7022259003
ರಾಜರಾಜೇಶ್ವರಿ ನಗರ : 080-26696678 / 7975001378
ವಿಜಯನಗರ : 080-23356678 / 9845631379
ಹುಬ್ಬಳ್ಳಿ : 0836-2256678 / 9364104366
ಹಾಸನ : 08172-261888 / 8884679122

ಸಮಾಚಾರ ಸಣ್ಣದಲ್ಲ

ಪತ್ರಕರ್ತ ವಿಶ್ವಾಮಿತ್ರ ಹೆಗಡೆ ನಿಧನ

ಶಿರಸಿ: ತಾಲೂಕಿನ ಭತ್ತಗುತ್ತಿಗೆ ಮೂಲದ ಪತ್ರಕರ್ತ ವಿಶ್ವಾಮಿತ್ರ ಹೆಗಡೆ ಅವರು ಬುಧವಾರ ಹೃದಯಸ್ತಂಭನದಿಂದ ನಿಧನರಾದರು. ಅವರಿಗೆ ಪತ್ನಿ ಹಾಗೂ ಅಪಾರ ಬಂಧು-ಬಳಗವಿದೆ. ವಿಶ್ವಾಮಿತ್ರ ಹೆಗಡೆ ಅವರು ಶಿರಸಿಯಲ್ಲಿ ಪತ್ರಕರ್ತರಾಗಿ ಕೆಲಸ ಆರಂಭಿಸಿದ್ದರು. ದೂರದರ್ಶನ ಮತ್ತು ಕನ್ನಡ ಪ್ರಭ ವರದಿಗಾರರಾಗಿ ಶಿರಸಿಯಲ್ಲಿ ಸೇವೆ ಸಲ್ಲಿಸಿದ್ದರು. ನಂತರದಲ್ಲಿ ಕನ್ನಡಪ್ರಭ ಹುಬ್ಬಳ್ಳಿ ಆವೃತ್ತಿ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸಿದ್ದರು. ನಂತರ ವಿಶ್ವವಾಣಿ ಪತ್ರಿಕೆಯ ಹುಬ್ಬಳ್ಳಿ ಆವೃತ್ತಿ ಸ್ಥಾನಿಕ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಸದ್ಯ ಹುಬ್ಬಳ್ಳಿಯಲ್ಲಿ ವಾಸವಾಗಿದ್ದರು. ವಿಶ್ವಾಮಿತ್ರ ಹೆಗಡೆ ಅವರ ನಿಧನಕ್ಕೆ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಜನಶಕ್ತಿ ವಿಶ್ವಸ್ಥ ಮಂಡಳಿಯ ಟ್ರಸ್ಟಿ ಸವಿತಾ ಭಟ್ ಸಂತಾಪ ಸೂಚಿಸಿದ್ದಾರೆ.

ಜಾರಕಿಹೊಳಿಗೆ ಮುಕ್ತ ವಿವಿ ಗೌರವ ಡಾಕ್ಟರೇಟ್

ಮೈಸೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸೇರಿ ಮೂವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿದೆ. ಸುದ್ದಿಗಾರರೊಂದಿಗೆ ವಿಶ್ವವಿದ್ಯಾಲಯದ ಕುಲಪತಿ ವಿ. ಶರಣಪ್ಪ ಹಲಸೆ ಮಾತನಾಡಿ, ಚಿತ್ರ ದುರ್ಗದ ಐಡಿಯಲ್ ಎಜುಕೇಶನ್ ಸೊಸೈಟಿ ಅಧ್ಯಕ್ಷ ಸಿ.ಎಂ. ಇರ್ಫಾನುಲ್ಲಾ ಷರೀಫ್ ಹಾಗೂ ಕಲಬುರ ಗಿಯ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ದಾಕ್ಷಾಯಿಣಿ ಅಪ್ಪಾ ಗೌರವ ಡಾಕ್ಟರೇಟ್ ಪಡೆದ ಇನ್ನಿಬ್ಬರು. ಗುರುವಾರ ಮೈಸೂರಿನ ಮುಕ್ತ ವಿ.ವಿ. ಭವನದಲ್ಲಿ ನಡೆಯಲಿರುವ ವಿಶ್ವವಿದ್ಯಾಲಯದ ಇಪ್ಪತ್ತನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ. ಇದೇ ವೇಳೆ 17,307 ಮಂದಿಗೆ ಪದವಿ ಪ್ರದಾನ ಮಾಡಲಾಗುವುದು. ಜಾರಕಿಹೊಳಿ ಅವರ ಸಮಾಜಸೇವೆ ಯನ್ನು ಗುರುತಿಸಿ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ ಎಂದು ಸ್ಪಷ್ಟನೆ ನೀಡಿದರು.

ಬಿಜೆಪಿಯವರ ಸುಳ್ಳು ಆರೋಪಗಳನ್ನು ಒಪ್ಪಲಾಗದು: ಇಂಧನ ಸಚಿವ ಕೆ.ಜೆ.ಜಾರ್ಜ್

ಸ್ಮಾರ್ಟ್ ಮೀಟರ್ ಟೆಂಡರ್ ಪಾರದರ್ಶಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸ್ಮಾರ್ಟ್ ಮೀಟರ್ ಟೆಂಡರ್ ಪ್ರಕ್ರಿಯೆ ಪಾರದರ್ಶಕವಾಗಿ ನಡೆದಿದ್ದು, ಈ ಕುರಿತ ಬಿಜೆಪಿಯ ಆರೋಪಗಳಲ್ಲಿ ಹುರಳಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಆದೇಶದಂತೆ ರಾಜ್ಯದಲ್ಲಿ ಹೊಸ ಮತ್ತು ತಾತ್ಕಾಲಿಕ ಸಂಪರ್ಕಗಳಿಗೆ ಮಾತ್ರ ಮೀಟರ್ ಅಳವಡಿಸಲಾಗುತ್ತಿದೆ. ಅದಕ್ಕಾಗಿ ಕೆಟಿಪಿಪಿ ಕಾಯಿದೆ ಅನುಸಾರ ಟೆಂಡರ್ ಕರೆದು ನಂತರ ಪ್ರಿಬಿಡ್ ಸಭೆಯಲ್ಲಿ ಆಸಕ್ತ ಬಿಡ್ಡುದಾರರ ಪ್ರಶ್ನೆಗಳಿಗೆ ಉತ್ತರಿಸಲಾಗಿತ್ತು. ಬಳಿಕ ಅತಿ ಕಡಿಮೆ ಬಿಡ್ ಮಾಡಿದ್ದ ರಾಜಶ್ರೀ ಎಂಟರ್ ಪ್ರೈಸಸ್ ನವರಿಗೆ ಗುತ್ತಿಗೆ ನೀಡಲಾಗಿದೆ ಎಂದರು.

ಕೇಂದ್ರ ಸರಕಾರದ ಪರಿಷ್ಕೃತ ವಿತರಣಾ ವಲಯ ಯೋಜನೆ (ಆರ್‌ಡಿಎಸ್‌ಎಸ್) ಜಾರಿಗೊಳಿಸಿದ್ದರೆ ಅಥವಾ ಕೇಂದ್ರ ಸರಕಾರದ ನಿರ್ದೇಶನದಂತೆ ನಾವು ಮುಂದುವರಿದಿದ್ದರೆ ಹೊಸ ಮತ್ತು ತಾತ್ಕಾಲಿಕ ಸ್ಥಾಪನಗಳ ಜತೆಗೆ ಹಾಲಿ ಸ್ಥಾಪನಗಳಿಗೂ (2.16 ಕೋಟಿ) ಸ್ಮಾರ್ಟ್ ಮೀಟರ್ ಅಳವಡಿಸಬೇಕಿತ್ತು. ಆದರೆ, ಗ್ರಾಹಕರ ಮೇಲೆ ಹೊರೆಯಾಗಬಾರದು ಎಂಬ ಕಾರಣಕ್ಕೆ ಅದನ್ನು ಜಾರಿಗೊಳಿಸಲಿಲ್ಲ. ಕೆಇಆರ್‌ಸಿ ಆದೇಶದಂತೆ ಹೊಸ ಮತ್ತು ತಾತ್ಕಾಲಿಕ ಸ್ಥಾಪನಗಳಿಗೆ ಮಾತ್ರ ಸ್ಮಾರ್ಟ್ ಮೀಟರ್ ಅಳವಡಿಸಲಾಗುತ್ತಿದೆ. ನಮಗೆ ಜನಹಿತ ಮುಖ್ಯವಾಗಿದ್ದರಿಂದ ಈ ನಿರ್ಧಾರ ಕೈಗೊಂಡೆವು ಎಂದರು.

ಸ್ಮಾರ್ಟ್ ಮೀಟರ್ ಅಳವಡಿಕೆ ಪ್ರಕ್ರಿಯೆಯೇ ವಿಭಿನ್ನ: ಆರ್‌ಡಿಎಸ್‌ಎಸ್ ಅನುಷ್ಠಾನಗೊಳಿಸಿರುವ ರಾಜ್ಯಗಳ ವಿದ್ಯುತ್ ಸರಬರಾಜು ಕಂಪನಿಗಳು ಎಲ್ಲಾ ಮನೆಗಳಲ್ಲಿ ಏಕ ಕಾಲದಲ್ಲಿ ಮೀಟರ್ ಅಳವಡಿಸಿ ಅದಕ್ಕೆ ಪೂರಕವಾದ ತಾಂತ್ರಿಕ ನಿರ್ವಹಣೆ ವೆಚ್ಚವನ್ನು ಪ್ರತಿತಿಂಗಳ ಬಿಲ್‌ನಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತವೆ. ಅಂದರೆ, ಕಂತಿನಲ್ಲಿ ಸ್ಮಾರ್ಟ್ ಮೀಟರ್ ಹಾಗೂ ತಾಂತ್ರಿಕ ನಿರ್ವಹಣೆ ವೆಚ್ಚ ಗ್ರಾಹಕರಿಂದ ವಸೂಲಿ ಮಾಡುತ್ತವೆ. ಆದರೆ, ನಮ್ಮ ರಾಜ್ಯದಲ್ಲಿ ಇರುವ ನಿಯಮದ ಪ್ರಕಾರ, ವಿದ್ಯುತ್ ಮೀಟರ್‌ಗಳನ್ನು ಗ್ರಾಹಕರೇ ಭರಿಸಬೇಕು. ಆರ್‌ಡಿಎಸ್‌ಎಸ್ ಅನುಷ್ಠಾನಗೊಳಿಸದ ಕಾರಣ ನಮ್ಮಲ್ಲಿ ಹೊಸ ಮತ್ತು ತಾತ್ಕಲಿಕ ಸಂಪರ್ಕಗಳಿಗೆ ಮಾತ್ರ ಸ್ಮಾರ್ಟ್ ಮೀಟರ್ ಅಳವಡಿಸುತ್ತಿರುವುದರಿಂದ ಮೀಟರ್ ದರವನ್ನು (ಸಿಂಗಲ್ ಫೇಸ್ - 4,998 ರು.) ಆ ಗ್ರಾಹಕರೇ ಭರಿಸಬೇಕಾಗುತ್ತದೆ. ಪ್ರತಿ ತಿಂಗಳ ತಾಂತ್ರಿಕ ನಿರ್ವಹಣೆ ವೆಚ್ಚ ಬೆಸ್ಕಾಂ ಭರಿಸಿ, ನಂತರ ದರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ತಾತ್ಕಾಲಿಕ ಸಂಪರ್ಕಕ್ಕೆ ಪ್ರಿ-ಪೇಯ್ಡ್‌ಗಳಿಗೆ ಮಾತ್ರ ಅವಕಾಶವಿದ್ದು, ಪೋಸ್ಟ್ ಪೇಯ್ಡ್ ಆಯ್ಕೆ ಇರುವುದಿಲ್ಲ. ಹೊಸ ಸಂಪರ್ಕಗಳಿಗೆ ಪ್ರಿ-ಪೇಯ್ಡ್ ಹಾಗೂ ಪೋಸ್ಟ್ -ಪೇಯ್ಡ್ ಆಯ್ಕೆ ಲಭ್ಯವಿರುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ಮಾತನಾಡಿದರು.

> ಬಿಜೆಪಿಯವರು ವಿಧಾನಸಭೆಯಲ್ಲಿ ಸ್ಮಾರ್ಟ್ ಮೀಟರ್ ಪ್ರಸ್ತಾಪಿಸಿದಾಗ ಉತ್ತರ ಕೊಡುವುದಾಗಿ ಹೇಳಿದ್ದೆ. ಅದರಂತೆ ಮಾರನೇ ದಿನ ಉತ್ತರ ಕೊಡಲು ಸಿದ್ಧವಾಗಿಯೇ ಬಂದು ಕಲಾಪ ಆರಂಭವಾಗುವಾಗ ಅವಕಾಶ ಕೇಳಿದ್ದೆ. ಗಲಾಟೆ ಮಾಡಿ ಉತ್ತರ ಕೊಡಲೂ ಅವಕಾಶ ನೀಡಲಿಲ್ಲ. ಹಾಗಾಗಿ ನನಗೆ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಇದನ್ನು ಮುಚ್ಚಿಟ್ಟು ಬಿಜೆಪಿಯವರು ನನ್ನ ಮೇಲೆ ವೃಥಾರೋಪ ಮಾಡುತ್ತಿದ್ದಾರೆ.
> **ಕೆ.ಜೆ.ಜಾರ್ಜ್**, ಇಂಧನ ಸಚಿವ

ಕೇಂದ್ರ ಇಂಧನ ಪ್ರಾಧಿಕಾರದ ನಿರ್ದೇಶನದಂತೆ 2021-22 ನೇ ಸಾಲಿನಲ್ಲಿ ಆರ್‌ಡಿಎಸ್‌ಎಸ್ ಯೋಜನೆ ರೂಪಿಸಿದ್ದು, ಕೇಂದ್ರದ ಇಂಧನ ಸಚಿವಾಲಯವು ಮಾರ್ಗಸೂಚಿ ಹೊರಡಿಸಿ, ವಿದ್ಯುತ್ ಸರಬರಾಜು ತಮ್ಮ ಸಬ್ಸಿಡಿ ಸೇರಿದಂತೆ ಎಲ್ಲಾ ಬಾಕಿಗಳನ್ನು ಪಾವತಿಸಿದ್ದರೆ ಸ್ಮಾರ್ಟ್ ಮೀಟರ್ ಅಳವಡಿಸಲು ಕೇಂದ್ರದಿಂದ ಪ್ರತಿ ಮೀಟರ್‌ಗೆ ಗರಿಷ್ಠ 900 ರು. ಅಥವಾ ಮೀಟರ್ ದರದ ಶೇ. 15ರಷ್ಟನ್ನು ಸಬ್ಸಿಡಿಯಾಗಿ ನೀಡುವುದಾಗಿ ಹೇಳಿತ್ತು. ಅದರಂತೆ ದೇಶದ ಇತರೆ ರಾಜ್ಯಗಳು ಯೋಜನೆಯಡಿ, ಏಕಕಾಲದಲ್ಲಿ ಎಲ್ಲಾ ಗ್ರಾಹಕರ ಸ್ಥಾಪನಗಳಿಗೂ ಸ್ಮಾರ್ಟ್ ಮೀಟರ್ ಅಳವಡಿಸಿದ್ದವು. ಆದರೆ, ನಮ್ಮ ರಾಜ್ಯ ಆಗ ಯೋಜನೆ ಅಳವಡಿಸಿಕೊಂಡಿರಲಿಲ್ಲ ಎಂದರು.

ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಡಾ.ಎನ್. ಶಿವಶಂಕರ್ ಉಪಸ್ಥಿತರಿದ್ದರು.

ಬಿಸಿಐಟಿಎಸ್ ಸಂಸ್ಥೆಯು ಕಪ್ಪುಪಟ್ಟಿಗೆ ಸೇರಿಲ್ಲ

ಬಿಸಿಐಟಿಎಸ್ ಸಂಸ್ಥೆಯು ಕಪ್ಪು ಪಟ್ಟಿಗೆ ಸೇರಿಸಲಾಗಿದೆ ಎಂಬ ಆರೋಪದ ಬಗ್ಗೆ ವಿವರಣೆ ನೀಡಿದ ಸಚಿವರು, ಟೆಂಡರ್ ಹಂತದಲ್ಲಿಯೇ ಈ ವಿಷಯ ಪರಿಶೀಲಿಸಲಾಗಿತ್ತು. ಬಿಸಿಐಟಿಎಸ್ ಸಂಸ್ಥೆ ಆರ್‌ಡಿಎಸ್‌ಎಸ್ ಯೋಜನೆಯಡಿ ವಿವಿಧ ರಾಜ್ಯಗಳ 23 ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೇವೆ ನೀಡುತ್ತಿದೆ. ಈ ಸಂಸ್ಥೆಯನ್ನು ಯಾವುದೇ ಸರಕಾರ/ಇಲಾಖೆ ಕಪ್ಪು ಪಟ್ಟಿಗೆ ಸೇರಿಸುವುದಿಲ್ಲ. ಈ ಸಂಸ್ಥೆಗೆ 2023ರ ಜ.6 ರಿಂದ 2025ರ ಜ.5ರವರೆಗೆ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಪೂರ್ವಾಂಚಲ ವಿದ್ಯುತ್ ವಿತರಣಾ ನಿಗಮ (ವಾರಾಣಸಿ ಉತ್ತರಪ್ರದೇಶ) ನಿರ್ಬಂಧಿಸಿತ್ತು. ಹಾಲಿ ಟೆಂಡರ್‌ನಲ್ಲಿನ ಎಲ್1 ಬಿಡ್‌ದಾರರಾದ ರಾಜಶ್ರೀ ಎಲೆಕ್ಟ್ರಿಕಲ್ಸ್‌ನವರು ಬಿಸಿಐಟಿಎಸ್ ಜತೆಗೆ ನಿರ್ಬಂಧಿತ ಅವಧಿಯ ಮುಕ್ತಯವಾದ ನಂತರವೇ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಹಾಗಾಗಿ ಈ ಕುರಿತ ಆರೋಪದಲ್ಲಿ ಹುರುಳಿಲ್ಲ ಎಂದರು.

ರಾಜ್ಯದಲ್ಲಿ ಮೊತ್ತ ಕಡಿಮೆ

ಕೇಂದ್ರ ಸರಕಾರದ ಸಬ್ಸಿಡಿ ಸೇರಿ 10 ವರ್ಷಗಳ ಕಾಲ ಪ್ರತಿ ಸ್ಮಾರ್ಟ್ ಮೀಟರ್ ಮತ್ತು ತಾಂತ್ರಿಕ ನಿರ್ವಹಣೆಗೆ ಪ್ರತಿ ತಿಂಗಳು ತಗಲುವ ವೆಚ್ಚ -ಮಹಾರಾಷ್ಟ್ರದಲ್ಲಿ 120.34 ರು., ಪಶ್ಚಿಮ ಬಂಗಾಳದಲ್ಲಿ 117.81 ರು., ಸಿಕ್ಕಿಂ ರಾಜ್ಯದಲ್ಲಿ 148.88 ರು., ಮಣಿಪುರದಲ್ಲಿ 130.30 ರು., ಮಧ್ಯಪ್ರದೇಶದಲ್ಲಿ 115.84 ರು. ಆಗುತ್ತದೆ. ಕರ್ನಾಟಕದಲ್ಲಿ ಈ ಮೊತ್ತ ಕೇವಲ 116.65 ರು. ಆಗುತ್ತದೆ.

ಯತ್ನಾಳ್‌ಗೆ ಗೇಟ್ ಪಾಸ್

ಮೊದಲಪುಟದಿಂದ

ಸಂಭ್ರಮಿಸಲಾರೆ ಎಂದ ವಿಜಯೇಂದ್ರ

ಸಂಘದ ಹಿರಿಯರು ಮತ್ತು ಪಕ್ಷದ ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇನೆ. ಕೆಲ ದಿನಗಳ ಹಿಂದೆ ನಡೆದ ಕಹಿ ಪ್ರಸಂಗಗಳಿಂದ ಎಂದಿಗೂ ನಾನು ಉದ್ವೇಗಗೊಳ್ಳಲಿಲ್ಲ, ಯಾರೊಂದಿಗೂ ದುಃಖ ತೋಡಿ ಕೊಂಡಿಲ್ಲ, ಸಮರ್ಪಣೆ-ತ್ಯಾಗದ ಪಾಠವನ್ನು ಹೇಳಿಕೊಡುವ ಸಂಸ್ಕಾರವಂತ ಸಂಘಟನೆಯ ವ್ಯವಸ್ಥೆಯಲ್ಲಿ ಬೆಳೆದು ಬಂದ ನಾನು ಸಹನೆ-ತಾಳ್ಮೆಯನ್ನು ಜವಾಬ್ದಾರಿ ನಿರ್ವಹಿಸುವ ನಿಟ್ಟಿನಲ್ಲಿ ಆಧಾರ ಸ್ತಂಭವೆಂದು ಪರಿಗಣಿಸಿ ಮುನ್ನಡೆದಿದ್ದೇನೆ. ಎಲ್ಲರೂ ಸೇರಿ ರಚನಾತ್ಮಕ ಸಲಹೆಗಳನ್ನು ಸ್ವೀಕರಿಸಿ ಪಕ್ಷವನ್ನು ಮುನ್ನಡೆಸೋಣ, ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತದಲ್ಲಿ ಮುಳುಗಿರುವ ಜನವಿರೋಧಿ ಕಾಂಗ್ರೆಸ್ ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸಿ, ಸಮೃದ್ಧ ಕರ್ನಾಟಕವನ್ನು ಕಟ್ಟುವ ನಿಟ್ಟಿನಲ್ಲಿ ವಿಕಸಿತ ಭಾರತದ ಸಂಕಲ್ಪ ಹೊತ್ತ ಮಾನ್ಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೆಗಲು ಕೊಡೋಣ, ಪಕ್ಷದ ವರಿಷ್ಠರ ನಿರೀಕ್ಷೆಯ ಗುರಿ ತಲುಪೋಣ ಎಂದಿದ್ದಾರೆ.

ಶಿಸ್ತು ಉಲ್ಲಂಘಿಸಿಲ್ಲ: ಸೋಮಶೇಖರ್: ನಾನು ಕಾಂಗ್ರೆಸ್‌ನ ಯಾವುದೇ ಕಾರ್ಯಕ್ರಮದಲ್ಲಿ ಪಾಲ್ಗೊಂಡಿಲ್ಲ. ನಾನು ಪಕ್ಷದ ಶಿಸ್ತು ಉಲ್ಲಂಘಿಸಿಲ್ಲ. ನಾನು ಬೆಳಗಾವಿಯಲ್ಲಿ ಗಾಂಧಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ಬಿಜೆಪಿಗೆ ಮುಜುಗರ ಆಗುವಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿಲ್ಲ. ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಲ್ಲ ಸಚಿವರ ಜತೆ ಮಾತನಾಡುತ್ತೇನೆ. ಡಿ.ಕೆ.ಶಿವ ಕುಮಾರ್ ಕ್ಷೇತ್ರಕ್ಕೆ ಬಂದರೆ ಭೇಟಿಯಾಗಿದ್ದೇನೆ. ಕಾಂಗ್ರೆಸ್‌ನ ಯಾವ ಕಾರ್ಯಕ್ರಮದಲ್ಲೂ ಭಾಗಿಯಾಗಿಲ್ಲ. ಬಿಜೆಪಿಯವರೇ ಅಪಪ್ರಚಾರ ಮಾಡಿದ್ದಾರೆ. ಕ್ಷೇತ್ರದ ವಿಚಾರಕ್ಕೆ ಮಂತ್ರಿಗಳನ್ನು ಭೇಟಿ ಮಾಡಲೇಬೇಕಾಗುತ್ತದೆ. ಸರಕಾರಿ ಕಾರ್ಯಕ್ರಮಗಳಲ್ಲಿ ಮಾತ್ರ ನಾನು ಭಾಗವಹಿಸಿದ್ದೇನೆ. ಕಾಂಗ್ರೆಸ್ ಸಭೆಗಳಲ್ಲಿ ಭಾಗವಹಿಸಿಲ್ಲ, ಪಕ್ಷದ ಶಿಸ್ತು ಉಲ್ಲಂಘಿಸಿಲ್ಲ. ನಾನು ಬಿಜೆಪಿಯ ಯಾವ ನಾಯಕರ ವಿರುದ್ಧವೂ ಮಾತನಾಡಿಲ್ಲ. ಪಕ್ಷಕ್ಕೆ ಮುಜುಗರ ಮಾಡುವವರು ಬೇರೆಯವರು ಇದ್ದಾರೆ. ನನ್ನ ವಕೀಲರ ಜತೆ ಚರ್ಚಿಸಿ ಶೋಕಾಸ್ ನೋಟಿಸ್‌ಗೆ ಉತ್ತರ ಕೊಡುತ್ತೇನೆ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.

> ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಣಯವನ್ನು ನಾವೆಲ್ಲರೂ ಪಾಲಿಸಬೇಕಾಗುತ್ತದೆ. ಬರುವ ದಿನಗಳಲ್ಲಿ ಪಕ್ಷಕ್ಕೆ ಯಾವುದೇ ರೀತಿಯ ನಷ್ಟವಾಗದ ರೀತಿಯಲ್ಲಿ ನಾವು ನಡೆದುಕೊಳ್ಳಬೇಕಿದೆ. ಈಗ ಶಿಸ್ತು ಮುಖ್ಯ ಎಂದು ಕೆಲವರ ಮೇಲೆ ಕ್ರಮ ಕೈಗೊಂಡಿದ್ದಾರೆ. ಯತ್ನಾಳ ಅವರ ವಿಷಯದ ಬಗ್ಗೆ ವರಿಷ್ಠರೊಂದಿಗೆ ಚರ್ಚಿಸುತ್ತೇನೆ. ಆದಷ್ಟು ಎಲ್ಲರನ್ನೂ ಒಂದುಗೂಡಿಸಿ ಕರೆದುಕೊಂಡು ಹೋಗುವುದು ಇಂದಿನ ಅನಿವಾರ್ಯತೆ ಇದೆ.
> **-ಬಸವರಾಜ ಬೊಮ್ಮಾಯಿ**, ಮಾಜಿ ಮುಖ್ಯಮಂತ್ರಿ

ಉತ್ತರಿಸುವೆ: ರೇಣುಕಾಚಾರ್ಯ

ಹೈಕಮಾಂಡ್‌ಗೆ ತಪ್ಪು ಸಂದೇಶ ನೀಡಿದ್ದಾರೆ. ನನಗೆ ನೋಟಿಸ್ ನೀಡಿದ್ದಕ್ಕೆ ಭಯ ವಿಲ್ಲ. ನಾನು ಹೆದರಲ್ಲ. ಬಿಜೆಪಿಯಲ್ಲಿ ಆಗಿರುವ ಗೊಂದಲ, ಪಕ್ಷ ವಿರೋಧಿ ಚಟುವಟಿಕೆ ಕುರಿತು ಎಲ್ಲದಕ್ಕೂ ಉತ್ತರ ನೀಡುತ್ತೇನೆ. ನಾನು ಎರಡು ಬಾರಿ ಜೈಲಿಗೆ ಹೋಗಿ ಬಂದಿದ್ದೇನೆ. ಪಕ್ಷ ಸಂಘಟನೆ ಮಾಡಿದ್ದೇನೆ. ನನ್ನಂಥವರಿಗೆ ನೋಟಿಸ್ ನೀಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷರನ್ನು ಟೀಕಿಸಿದರೆ ಒಳ್ಳೆಯವನಾ? ಪಕ್ಷವನ್ನು ಸಮರ್ಥನೆ ಮಾಡಿಕೊಳ್ಳುವುದು ಅಪರಾಧನಾ? ಶೋಕಾಸ್ ನೋಟಿಸ್‌ಗೆ ದಾಖಲೆ ಸಮೇತ ಉತ್ತರ ನೀಡುತ್ತೇನೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದ್ದಾರೆ.

ವಿಜಯಪುರದಲ್ಲಿ ಯತ್ನಾಳ ವಿರೋಧಿ ಬಣ ಸಂಭ್ರಮಾಚರಣೆ

ಬಿಜೆಪಿಯಿಂದ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಉಚ್ಚಾಟನೆ ಪ್ರಕಟಣೆ ಬೆನ್ನಲ್ಲೇ ಸ್ವಕ್ಷೇತ್ರ ವಿಜಯಪುರ ನಗರದಲ್ಲಿ ಯತ್ನಾಳ ವಿರೋಧಿ ಬಣಗಳ ನಾಯಕರು, ಕಾರ್ಯಕರ್ತರು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ, ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು. ಬಿಜೆಪಿ ಮುಖಂಡ ಹಾಗೂ ಮಾಜಿ ಪಾಲಿಕೆ ಸದಸ್ಯ ಉಮೇಶ ವಂದಾಲ ನೇತೃತ್ವದಲ್ಲಿ ನಗರದ ಶಾಹುನಗರದ ಕಾಳಿಕಾದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಬಿಜೆಪಿಗೆ ಅಂಟಿದ ಕಳಂಕ ತೊಲಗಿತು ಎಂದು ಘೋಷಣೆ ಕೂಗುತ್ತ ಕೆಲ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಯತ್ನಾಳ ಬೆಂಬಲಿಗರ ಪೋಸ್ಟ್ ವಾರ್: ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಿಜೆಪಿ ಪಕ್ಷದಿಂದ ಉಚ್ಚಾಟನೆ ವಿಷಯ ತಿಳಿಯುತ್ತಲೇ ಪಕ್ಷದ ವಿವಿಧ ಮೋರ್ಚಾ ಪದಾಧಿಕಾರಿಗಳು ಹಾಗೂ ಯತ್ನಾಳ ಬೆಂಬಲಿಗರು ಪೋಸ್ಟ್ ವಾರ್ ನಡೆಸಿದ್ದಾರೆ. ಬಿಜೆಪಿ ವಿಜಯಪುರ ನಗರ ಮಂಡಲ ಅಧ್ಯಕ್ಷ ಶಂಕರ ಹೂಗಾರ, ಉಪಾಧ್ಯಕ್ಷ ಬಸವರಾಜ ಗೊಳಸಂಗಿ, ಮಂಡಲ ರೈತ ಮೋರ್ಚಾ ಅಧ್ಯಕ್ಷ ರಾಚೂ ಬಿರಾದಾರ ಸೇರಿದಂತೆ ಹಲವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡುತ್ತಿರುವುದಾಗಿ ಪೋಸ್ಟ್ ಮಾಡಿ ತಮ್ಮ ಆಕ್ರೋಶ ಹೊರಹಾಕಿದ್ದಾರೆ. ಉಳಿದಂತೆ ಬೆಂಬಲಿಗ ಕಾರ್ಯಕರ್ತರು ನಾನಾ ರೀತಿಯಲ್ಲಿ ಪಕ್ಷದ ವಿರುದ್ಧ ಬಿಎಸ್‌ವೈ ಕುಟುಂಬದ ವಿರುದ್ಧ ಪೋಸ್ಟ್‌ಗಳನ್ನು ಹಾಕುವ ಮೂಲಕ ಕಿಡಿಕಾರುತ್ತಿದ್ದಾರೆ.

ಕೈ ನಾಯಕನ ನಡೆ: ಪಕ್ಷದಲ್ಲಿ ಸಂಚಲನ

ಮೊದಲಪುಟದಿಂದ

ಪ್ರಮುಖವಾಗಿ ಹನಿಟ್ರ್ಯಾಪ್ ಪ್ರಕರಣದಲ್ಲಿ ಕುಮಾರಸ್ವಾಮಿ ಹಾಗೂ ಸತೀಶ್ ಜಾರಕಿಹೊಳಿ ಅವರ 'ಸಾಮಾನ್ಯ' ರಾಜಕೀಯ ವಿರೋಧಿಗಳ ಹೆಸರು ದೊಡ್ಡ ಪ್ರಮಾಣದಲ್ಲಿ ಕೇಳಿಬರುತ್ತಿರುವುದರಿಂದ ಈ ವಿಷಯದಲ್ಲಿ ಕುಮಾರಸ್ವಾಮಿ ಅವರಿಗೂ ಹೆಚ್ಚು ಆಸಕ್ತಿಯಿದೆ. ಆದ್ದರಿಂದ ಕುಮಾರಸ್ವಾಮಿ ಅವರ ಕಡೆಯಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಈ ಪ್ರಕರಣದ ತನಿಖೆಗೆ ಮನವಿ ಮಾಡಿಸುವುದು ಸತೀಶ್ ಲೆಕ್ಕಾಚಾರವಾಗಿದೆ. ಸಿಬಿಐ ನಿಂದ ಪ್ರಕರಣದ ತನಿಖೆ ನಡೆಸಲು ರಾಜ್ಯ ಸರಕಾರ ಅನುಮತಿ ಅಗತ್ಯ. ಆದ್ದರಿಂದ ಸಿಬಿಐಗೆ ಪ್ರಕರಣವನ್ನು ವಹಿಸುವುದು ತಾರ್ತಿಕವಾಗಿ ಕಷ್ಟಸಾಧ್ಯ. ಆದರೆ ಈಗಾಗಲೇ ಬಿಜೆಪಿಯಿಂದ ಕೇಳಿಬರುತ್ತಿರುವ ಒತ್ತಾಯವನ್ನು ಹೇರಿಸಿ, ರಾಜಕೀಯವಾಗಿ ಪ್ರಕರಣವನ್ನು ಬಳಸಿಕೊಳ್ಳಲು ಈ ಇಬ್ಬರು ಸಿದ್ಧತೆ ನಡೆಸಿಕೊಂಡಿದ್ದಾರೆ ಎನ್ನಲಾಗಿದೆ.

ಚಾಮರಾಜನಗರ ಆಕ್ಸಿಜನ್: ದುರಂತ ಬಿ.ಎ.ಪಾಟೀಲ್ ವರದಿ ತಿರಸ್ಕಾರ

ಮೊದಲಪುಟದಿಂದ

ಇದರಲ್ಲಿ ಕಾನೂನು ಸಂಬಂಧಿತ, ಕ್ರಿಮಿನಲ್ ಸಂಬಂಧಿತ ವಿಚಾರಗಳನ್ನು ಗಮನಿಸಲು ಸಹಾಯ ತೆಗೆದುಕೊಳ್ಳಲಾಗುತ್ತಿದೆ ಎಂದರು.

15 ದಿನಗಳಿಗೊಮ್ಮೆ ಸಭೆ, ಸಮಿತಿಗೆ ಹಿರಿಯ ಅಧಿಕಾರಿಗಳ ನೇಮಕ: ಮುಂದಿನ ದಿನಗಳಲ್ಲಿ ಪ್ರತಿ 15 ದಿನಗಳಿಗೊಮ್ಮೆ ಉಪಸಮಿತಿ ಸಭೆ ನಡೆಸಬೇಕು ಎನ್ನುವ ತೀರ್ಮಾನಕ್ಕೆ ಬರಲಾಗಿದೆ. ಅಧಿಕಾರಿಗಳ ಕೊರತೆ ಇರುವ ಕಾರಣಕ್ಕೆ ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಸಮಿತಿಗೆ ನೇಮಕ ಮಾಡಿ ಅವರಿಗೂ ಕೆಲವು ಜವಾಬ್ದಾರಿಗಳನ್ನು ನೀಡಬೇಕು ಎಂದು ತೀರ್ಮಾನ ಮಾಡಲಾಗಿದೆ. ಆರೋಗ್ಯ ಇಲಾಖೆ ನಡೆಸುವುದು ಪ್ರತಿ ದಿನವೂ ಸವಾಲಿನಿಂದ ಕೂಡಿರುವ ಕೆಲಸ. ಇಲಾಖೆ ಅಡಿಯಲ್ಲಿ 70 ಮೆಡಿಕಲ್ ಕಾಲೇಜುಗಳು ಬರುತ್ತವೆ. ಪ್ರತಿದಿನ ಹೊಸ ಸವಾಲುಗಳು ಎದುರಾಗುತ್ತವೆ. ಆದ ಕಾರಣ ಒಂದಷ್ಟು ಜವಾಬ್ದಾರಿಗಳನ್ನು ಹಿರಿಯ ಅಧಿಕಾರಿಗಳಿಗೆ ನೀಡಲಾಗುವುದು ಎಂದು ಹೇಳಿದರು. **ಸಂಪುಟ ಉಪ ಸಮಿತಿಯಿಂದ ಜಿಲ್ಲಾ ಆಸ್ಪತ್ರೆಗಳಿಗೆ ಭೇಟಿ:**

ಕೋವಿಡ್ ಸಮಯದಲ್ಲಿ ಖರೀದಿ ಮಾಡಿದ ಅನೇಕ ವೈದ್ಯಕೀಯ ಉಪಕರಣಗಳು ಕೆಲಸ ಮಾಡುತ್ತಿಲ್ಲ. ಅಲ್ಲದೇ ದಿನಾಂಕ ಮುಗಿದಿರುವ ಅನೇಕ ಔಷಧಿಗಳ ಬಗ್ಗೆ ಕೇಳಿದಾಗ, ನ್ಯಾ.ಕುನ್ಹಾ ಅವರ ವರದಿಯಲ್ಲಿ ಅನೇಕ ವಿಚಾರಗಳಿವೆ. ಆದರೂ ಸಮಿತಿಯ ವರು ಇದೆಲ್ಲವನ್ನು ನೇರವಾಗಿ ನೋಡಿ ಪ್ರಮಾಣಿಸಬೇಕು, ನಮಗೂ ಇದು ಅರ್ಥವಾಗಬೇಕು. ಇಡೀ ಸಮಿತಿಯ ಸದಸ್ಯರು ಔಷಧಿಗಳು, ಉಪಕರಣಗಳನ್ನು ವೀಕ್ಷಣೆ ಮಾಡುತ್ತಾರೆ. ಅನೇಕ ಕಡೆ ವೈದ್ಯಕೀಯ ಉಪಕರಣಗಳನ್ನು ಅಳವಡಿಸಿಲ್ಲ ಎಂದು ಹೇಳಲಾಗಿದೆ. ಹಾಗಾದರೆ ಅದು ಏನಾಗಿದೆ ಎಂದು ಪರಿಶೀಲನೆ ಮಾಡುತ್ತೇವೆ. ಒಂದಷ್ಟನ್ನು ಉಗ್ರಾಣಗಳಿಗೆ, ಜಿಲ್ಲಾ ಕೇಂದ್ರಗಳಿಗೆ ಕಳಿಸಲಾಗಿದೆ ಎನ್ನುವ ಮಾಹಿತಿಯಿದೆ.

ಅಕ್ರಮ ಅಕ್ಕಿ ಸಾಗಾಟ: ಲಾರಿ ವಶ

ಕಲಬುರಗಿ: ಸರಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಲಾರಿಯನ್ನು ಜಪ್ತಿ ಮಾಡಿದ ಘಟನೆ ನಡೆದಿದೆ. ನಗರದ ರಿಂಗ್ ರೋಡ್ ಬಳಿಯ ತಾಜ್ ನಗರದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಲಾರಿಯಲ್ಲಿ 104 ಕ್ವಿಂಟಾಲ್ ಅಕ್ರಮ ಅಕ್ಕಿ ಪತ್ತೆಯಾಗಿದ್ದು, ಚಾಲಕ ವಿರೇಶ್‌ನನ್ನು ಪೊಲೀಸರು ವಶಕ್ಕೆ ಪಡೆಯಲಾಗಿದೆ. ಕಲಬುರಗಿಯಿಂದ ಮಹಾರಾಷ್ಟ್ರಕ್ಕೆ ಅಕ್ಕಿ ಸಾಗಿಸುತ್ತಿದ್ದ ಸಂದರ್ಭದಲ್ಲಿ ಸ್ಥಳೀಯರ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ, ಈ ಜಪ್ತಿ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ಕಲಬುರಗಿಯ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.
ಐ.ಎಸ್.ಆರ್‌ರಸ್ತೆ, ಚಿತ್ತವಾಡ್ಗಿ,
ಹೊಸಪೇಟೆ-583 201,
ದೂ.ಸಂ: 08394-227749, E-mail:hospethuda@gmail.com
ಸಂಖ್ಯೆ:ಹೊನಅಪ್ರಾ/ಎ1/ಮ.ಯೋ.(ಪ-2)/2024-25 ದಿನಾಂಕ:26.3.2024.

:ದರಪಟ್ಟಿ ಅಹ್ವಾನ ಪ್ರಕಟಣೆ:

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರವು ಕೆ.ಟಿ.ಸಿ.ಪಿ.ಕಾಯ್ದೆ 1961 ರನ್ವಯ ಹಾಲಿ ಮತ್ತು ವಿಸ್ತರಿಸಲಾದ ಒಟ್ಟು 254.55 ಚ.ಕಿ.ಮೀ ಸ್ಥಳೀಯ ಯೋಜನಾ ಪ್ರದೇಶಕ್ಕೆ ಜಿ.ಐ.ಎಸ್.ಆಧಾರಿತ ಅಮೃತ ಟಿ.ಒ.ಆರ್. ನಿಯಮಾವಳಿಗಳನ್ವಯ (ಎನ್‌ಆರ್‌ಎಸ್‌ಸಿ ಹೈದರಾಬಾದ್ ನಿಂದ ಉಪಗ್ರಹ ಚಿತ್ರಣಗಳನ್ನು ಪಡೆದು -ಕೊಳ್ಳುವುದು ಹಾಗೂ ಸಂಬಂಧಿಸಿದ ಇಲಾಖೆಗಳಿಂದ ದಾಖಲೆಗಳನ್ನು ಪಡೆದುಕೊಳ್ಳುವುದು ಹಾಗೂ ಇತರೆ ಕೆಲಸಗಳನ್ನು ಒಳಗೊಂಡು) ಮಹಾಯೋಜನೆ(ಪ-2) ತಯಾರಿಸಲು ಅರ್ಹ ಏಜೆನ್ಸಿಗಳಿಂದ ದರಪಟ್ಟಿಯನ್ನು ಅಹ್ವಾನಿಸಲಾಗಿದೆ. ಆಸಕ್ತಿ ಏಜೆನ್ಸಿಗಳು ಪ್ರಕಟಣೆಯ ದಿನದಿಂದ 7 ದಿನಗಳೊಳಗಾಗಿ ತಮ್ಮ ದರಗಳನ್ನು ಕಚೇರಿ ವೇಳೆಯಲ್ಲಿ ಸಲ್ಲಿಸಲು ತಿಳಿಸಲಾಗಿದೆ. ಈ ದರವನ್ನು ಅಂದಾಜು ಪತ್ರಿಕೆ ತಯಾರಿಸಲು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ.

ಸಹಿ/- ಆಯುಕ್ತರು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/612

ಕರ್ನಾಟಕ ಅರಣ್ಯ ಇಲಾಖೆ
ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ.
No:A1/BUD/034 MAC/E-Tender/CR-1/2025-26
Date: 24.03.2025

ಇ-ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2025-26 ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ ಉಪ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಅಗತ್ಯವಿರುವ ಕಳ್ಳಬೇಟೆ ರಕ್ಷಣಾ ಶಿಬಿರದ ಕಾವಲುಗಾರರು, ಡಾಟಾ ಎಂಟ್ರಿ ಆಪರೇಟರ್, ಡ್ರೈವರ್, ಸೂಪರ್‌ವೈಸರ್ (ಕೇರ್‌ಟೇಕರ್), ವಾಚರ್, ಪಿವನ್, ಮೇಟಿ, ಆನೆ ಕವಾಡಿ, ವೆಟರ್‌ನರಿ ಅಸಿಸ್ಟೆಂಟ್ ಸೇವೆಯನ್ನು ದಿನಾಂಕ: 01/04/2025 ರಿಂದ 31/03/2026 ರ ವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲಗಳನ್ನು ಪೂರೈಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ ಅನುಭವ ಹೊಂದಿರುವ ಅರ್ಹಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.04.2025 ರ ಸಂಜೆ 4.00 ಗಂಟೆಯವರೆಗೆ ನಿಗದಿ ಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ www.kppp.karnataka.gov.in ಮೂಲಕ ಪಡೆದು ಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/24-25/168/03/1945

ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ
1ನೇ ಮಹಡಿ, ಬುಡಾ ಕಛೇರಿ, ಅಶೋಕ ನಗರ,
ಬೆಳಗಾವಿ - 590 016. ದೂರವಾಣಿ : 0831-2461352,
ಇಮೇಲ್ : bscltd16@gmail.com ವೆಬ್‌ಸೈಟ್ : www.bscl.in
ಸಂಖ್ಯೆ : ಬಿ.ಎಸ್.ಸಿ.ಎಲ್./ಟೆಂಡರ್/2024-25/1450 ದಿನಾಂಕ : 25-03-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ ಬೆಳಗಾವಿ ಇವರ ಪರವಾಗಿ ಉಪಪ್ರಧಾನ ವ್ಯವಸ್ಥಾಪಕರು, (ಪ್ರೊಕ್ಯೂರ್‌ಮೆಂಟ್) ಇವರಿಂದ ಈ ಕೆಳಗಿನ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ (https:kppp.karnataka.gov.in) ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಿ ಕೊಳ್ಳಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

ಕಾಮಗಾರಿಗಳ ಹೆಸರು : 1) ಬೆಳಗಾವಿ ನಗರದಲ್ಲಿ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣಾ (ಒ & ಎಂ) ವಾರಂಟಿಯೊಂದಿಗೆ ಮತ್ತು ಸ್ಥಳೀಯ ಬೆಂಬಲದೊಂದಿಗೆ ಅಭಿವೃದ್ಧಿಶೀಲ ಮತ್ತು ತಲ್ಲೀನಗೊಳಿಸುವ ಕಲಿಕೆ ಪರಿಹಾರವನ್ನು ಒಳಗೊಂಡ ಸ್ಮಾರ್ಟ ಶಾಲೆಯ ಅನುಷ್ಠಾನ. (ಇ.ಎಂ.ಡಿ. ಇ-ಪೋರ್ಟಲ್‌ನಲ್ಲಿ ಇದ್ದಂತೆ).

1) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ : 27-03-2025 ರಿಂದ 11-04-2025 ರ ಸಂಜೆ 5.00 ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಪೂರ್ವ ಅರ್ಹತಾ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 11-04-2025 ರ ಸಂಜೆ 5.30 ಗಂಟೆಯವರೆಗೆ, 3) ಟೆಂಡರ್ ಕ್ವರೀಸ್ ಸಲ್ಲಿಸುವ ಕೊನೆಯ ದಿನಾಂಕ : 04-04-2025 ರ ಸಂಜೆ 4.00 ಗಂಟೆಯವರೆಗೆ, 4) ಪೂರ್ವ ಬಿಡ್ ಸಭೆಯ ದಿನಾಂಕ : 07-04-2025 ರ ಬೆಳಿಗ್ಗೆ 11.30 ಗಂಟೆಗೆ ಬೆ.ಸ್ಮಾ.ಸಿ.ಲಿ. ಕಛೇರಿಯಲ್ಲಿ, 5) ಪೂರ್ವ ಅರ್ಹತಾ ಬಿಡ್ ತೆರೆಯುವ ದಿನಾಂಕ : 15-04-2025 ರ ಬೆಳಿಗ್ಗೆ 11.00 ಗಂಟೆಗೆ, 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : 21-04-2025 ರ ಬೆಳಿಗ್ಗೆ 11.00 ಗಂಟೆಗೆ.

ಸಹಿ/- ಉಪಪ್ರಧಾನ ವ್ಯವಸ್ಥಾಪಕರು, (ಪ್ರೊಕ್ಯೂರ್‌ಮೆಂಟ್)
ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ,
ಬೆಳಗಾವಿ.
ಡಿಐಪಿಆರ್/ಬೆಳಗಾವಿ/2011/ಮಣಿಪಾಲ್/2024-25

ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-560 001.
ದೂ : 080-2286 4681/4604, ಫ್ಯಾಕ್ಸ್: 080-2286 4619,
ಇ-ಮೇಲ್: dof-blr-ka@nic.in,
ಟೆಂಡರ್ ಪ್ರಕಟಣೆ ಸಂಖ್ಯೆ: DOF-TECHOMVH/05/2025,E-1699705 ದಿನಾಂಕ: 20.03.2025

ಇ-ಟೆಂಡರ್ ಪ್ರಕಟಣೆ

2025-26ನೇ ಸಾಲಿಗೆ ಮೀನುಗಾರಿಕೆ ನಿರ್ದೇಶನಾಲಯ ಕಛೇರಿಯ ಉಪಯೋಗಕ್ಕಾಗಿ 2017 ರ ಅಥವಾ ನಂತರದ ಮಾಡೆಲ್‌ನ ಹವಾನಿಯಂತ್ರಿತ ಕನಿಷ್ಠ 2 ವಾಹನಗಳ ಅಗತ್ಯವಿರುತ್ತದೆ. ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಹ್ಯಾಚ್ ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ ಟೊಯೋಟಾ ಇಟಿಯೋಸ್ ಹಾಗೂ ಇತರೆ ಸಮಾನಾಂತರ ಮಾದರಿ ವಾಹನಗಳನ್ನು ನುರಿತ ಚಾಲಕರೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ಒದಗಿಸಲು ಅರ್ಹ ವಾಹನ ಮಾಲೀಕರು/ ಟ್ರಾವೆಲ್ಸ್ ಸಂಸ್ಥೆ/ಏಜೆನ್ಸಿಗಳಿಂದ ದ್ವಿ ಲಕೋಟೆ (TWO COVERS SYSTEM) ಪದ್ಧತಿಯಲ್ಲಿ ಇ-ಟೆಂಡರ್ (e-Procurement Portal ಮುಖಾಂತರ) ಕರೆಯಲಾಗಿದೆ.

ಟೆಂಡರ್ ವಿವರಗಳು : 1. ಕಛೇರಿ : ಮೀನುಗಾರಿಕೆ ನಿರ್ದೇಶನಾಲಯ ಬೆಂಗಳೂರು, 2. ಮಾಸಿಕ ದರ ಹಾಗೂ ಇ.ಎಂ.ಡಿ. ಮೊತ್ತದ ವಿವರಗಳು : ಗರಿಷ್ಠ ರೂ.40,000/- AC + ತೆರಿಗೆ ಇ.ಎಂ.ಡಿ. ಮೊತ್ತ : ರೂ.48,000/-

ಸೂಚನೆ: ಹೆಚ್ಚಿನ ಮಾಹಿತಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

1) ಇ-ಟೆಂಡರ್(e-Provurement) ಗೆ ಸಂಬಂಧಿಸಿದ ದಾಖಲೆಗಳನ್ನು ಅಂತರ್ಜಾಲಕ್ಕೆ ರವಾನಿಸಲು (Upload ಮಾಡಲು): ಅಂತಿಮ ದಿನಾಂಕ ಮತ್ತು ವೇಳೆ : 15.04.2025 ಸಂಜೆ 5.00 ಗಂಟೆಗೆ. 2) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ: (ಇ-ಪೋರ್ಟಲ್‌ನಲ್ಲಿ) 17.04.2025 ಬೆಳಿಗ್ಗೆ 11.00 ಗಂಟೆಗೆ. 3) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ : 19.04.2025 ಬೆಳಿಗ್ಗೆ 11.00 ಗಂಟೆಗೆ.

ಸಹಿ/-
ಮೀನುಗಾರಿಕೆ ನಿರ್ದೇಶಕರು
ವಾಸಾಸಂಇ/ವಾ.ಪ್ರ/5915/ಶಿರಡಿ ಸಾಯಿ/2024-25

ಕರ್ನಾಟಕ ಸರಕಾರ
ಸಹಾಯಕ ಆಯುಕ್ತರ ಕಾರ್ಯಾಲಯ, ರಾಯಚೂರು ಉಪವಿಭಾಗ ರಾಯಚೂರು -584101
OFFICE OF THE ASSISTANT COMMISSIONER,
RAICHUR SUBDIVISION, RAICHUR-584101
Telephone No: 08532- 225630, Fax :08532-225630
ನಂ/ಕಂದಾಯ/ AC-jurala-Surplus Fund/01/2024-25 ದಿನಾಂಕ: 21-3-2025

ಟೆಂಡರ ಪ್ರಕಟಣೆ

- ಸಂಗ್ರಹಣೆ ಮಾಡಬೇಕಾದ ವಿವರ Surplus Fund Fixed Deposit
- ಟೆಂಡರ್‌ಗೆ ಇಟ್ಟ ಮೊತ್ತ ರೂ.3200/- ಲಕ್ಷಗಳು
- ಟೆಂಡರ್ ನಂ. RD/2024-25/SEO 437
- ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 01-04-2025 @ 17.30 PM
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಇ-ಸಂಗ್ರಹಣಾ ವೇದಿಕೆಯ ಅಧಿಕೃತ ಜಾಲತಾಣದ ವಿಳಾಸ ಮತ್ತು ಪ್ರಿಬಿಡ್ ಸಭೆಯ ಸ್ಥಳ ದಿನಾಂಕ ಮತ್ತು ಸಮಯ - https://kppp.karnataka.gov.in. Pre-bid Meeting Details Date: 26-03-2025 Time: 11-00 AM Place - AC Office Raichur
- In e-Tender the Regional / Zonal / Head Offices of banks only shall Participate and no individual bank branch shall participate in e-Tender

ಸಹಿ/- ಸಹಾಯಕ ಆಯುಕ್ತರು
ರಾಯಚೂರು
DIP/RCR/858/KSMC&A/862/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020
ಬೆಂಅಪ್ರಾ/ನಯೋಸ/CLU-447/3485/2024-25 ದಿನಾಂಕ: 26.03.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ-2015 ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಜಿ.ಭಾಗ್ಯಲಕ್ಷ್ಮಿ	ಆನೇಕಲ್	ಜಿಗಣಿ	ನಂಜಾಪುರ	19	2-10	ವ್ಯವಸಾಯ ವಲಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು 'ವ್ಯವಸಾಯವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಕರ್ನಾಟಕ ಸರ್ಕಾರ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು-570010
ದೂರವಾಣಿ ಸಂಖ್ಯೆ :0821-2590027 ಇ-ಮೇಲ್ : eochamunditemple@gmail.com
ಪತ್ರ ಸಂಖ್ಯೆ:ಎಸ್‌ಸಿಟಿ(5)ಸಿಆರ್: /2024-25 ದಿನಾಂಕ: 24.03.2025

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ (ದ್ವಿ ಲಕೋಟೆ)

ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಗಳನ್ನು ಇ-ಪ್ರೋಕ್ಯೂರ್‌ಮೆಂಟ್ (https://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರ. ಸಂ.	ಟೆಂಡರ್ ಹೆಸರು	ಅಂದಾಜು ಮೊತ್ತ (ರೂಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಲಾಡು ಪ್ರಸಾದ, ತಯಾರಿಸಿ ಪ್ಯಾಕ್ ಮಾಡಿಕೊಡಲು ಒಂದು ಲಾಡು ಪ್ರಸಾದ ತಯಾರಿಕೆಗೆ ಮಜೂರಿಯ ಗುತ್ತಿಗೆ(ಒಂದು ವರ್ಷದ ಅವಧಿಗೆ)	50,00,000	1,00,000-00
2	ಲಾಡು ಪ್ರಸಾದ ಪ್ಯಾಕ್ ಮಾಡಲು ಆಯಿಲ್ ಪ್ರೂಫ್ ಪೇಪರ್‌ಕವರ್‌ಗಳನ್ನು ಸರಬರಾಜು ಮಾಡುವ ಗುತ್ತಿಗೆ (ಒಂದು ವರ್ಷದ ಅವಧಿಗೆ)	40,00,000	80,000-00

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.
1) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವುದು: 24.03.2025 ರ ಸಂಜೆ 5.00 ಗಂಟೆಯ ನಂತರ. 2) ಟೆಂಡರ್ ಗೆ ಸಂಬಂಧಿಸಿದ ವಿಚಾರಣೆಗಾಗಿ ಕೊನೆಯ ದಿ: 29.03.2025 ರ ಸಂಜೆ 5.00 ಗಂಟೆಯ ತನಕ. 3) ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: 01.04.2025 ರ ಸಂಜೆ 5.00 ಗಂಟೆ ವರೆಗೆ. 4) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿ: 2.04.2025ರ ಬೆಳಿಗ್ಗೆ 11.00 ಗಂಟೆ ನಂತರ. 5) ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿ: 3.04.2025ರ ಬೆಳಿಗ್ಗೆ 11.00 ಗಂಟೆ ನಂತರ

ಸಹಿ/- ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ
DIPR-DD-MYS/1497/KSMCA-1125/2024-25

ರಾಜ್ಯಪಾಲರ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ

ಸಚಿವ ಸಂಪುಟದಲ್ಲಿ ಗಂಭೀರ ಚರ್ಚೆಯ ಸಾಧ್ಯತೆ | ಏಳು ಬಿಲ್‌ಗೆ ಸ್ಪಷ್ಟನೆ ಕೇಳಿರುವ ಗೆಹ್ಲೋಥ್

ಬೆಂಗಳೂರು: ಉಭಯ ಕಲಾಪದಲ್ಲಿ ಅನುಮೋದನೆಗೊಂಡಿರುವ ರಾಜಭವನಕ್ಕೆ ರವಾನಿಸಿರುವ ವಿವಿಧ ವಿಧೇಯಕಗಳಿಗೆ ಸಹಿ ಹಾಕದೇ ಕೇಳಿರುವ ಸ್ಪಷ್ಟನೆಗಳಿಗೆ ಇಂದಿನ ಸಚಿವ ಸಂಪುಟದಲ್ಲಿ ಉತ್ತರ ಕಂಡುಕೊಳ್ಳುವ ಸಾಧ್ಯತೆಯಿದೆ.

ರಾಜ್ಯ ಸರಕಾರ ರಾಜಭವನಕ್ಕೆ ಕಳುಹಿಸಿರುವ ವಿಧೇಯಕಗಳ ಪೈಕಿ ನಾಲ್ಕು ಬಿಲ್‌ಗಳನ್ನು ಬಾಕಿ ಉಳಿಸಿಕೊಂಡಿದ್ದರೆ, ಏಳು ಬಿಲ್‌ಗಳಿಗೆ ಸ್ಪಷ್ಟನೆ ಕೇಳಿದ್ದಾರೆ. ಅದರಲ್ಲಿಯೂ ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷೆ ಬಿಲ್ ಎನಿಸಿರುವ ಗ್ರೇಟರ್ ಬೆಂಗಳೂರು ವಿಧೇಯಕಕ್ಕೆ 'ಗಡಿ' ಗುರುತಿಸುವಿಕೆಯ ಬಗ್ಗೆ ಸ್ಪಷ್ಟನೆ ಕೇಳಿದ್ದಾರೆ. ಆದ್ದರಿಂದ ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಗಿದೆ.

ಈ ಬಗ್ಗೆ ಮಾತನಾಡಿರುವ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರು ರಾಜ್ಯ ವಿಧಾನಮಂಡಲದ ಎರಡೂ ಸದನಗಳಲ್ಲಿ ಅಂಗೀಕಾರವಾದ ಗ್ರೇಟರ್ ಬೆಂಗಳೂರು ವಿಧೇಯಕದ ಬಗ್ಗೆ ಸ್ಪಷ್ಟೀಕರಣ ಕೇಳಿ ಸರಕಾರಕ್ಕೆ ಹಿಂದಿರುಗಿಸಿದ್ದಾರೆ. ಅನುಮೋದನೆಗಾಗಿ ಸ್ಪಷ್ಟೀಕರಣಗಳೊಂದಿಗೆ ಮಸೂದೆ ಮತ್ತೆ ರಾಜ್ಯಪಾಲರಿಗೆ ಕಳುಹಿಸಲಾಗುವುದು ಎಂದು ಹೇಳಿದರು.

ಆಗಸ್ಟ್ 2023ರಿಂದ ಇಲ್ಲಿಯವರೆಗೆ ಒಟ್ಟು 119 ವಿಧೇಯಕಗಳನ್ನು ಅಂಗೀಕರಿಸಲಾಗಿದೆ ಮತ್ತು ಈ ಪೈಕಿ 83 ವಿಧೇಯಕಗಳನ್ನು ಕಾನೂನುಗಳಾಗಿ ಸೂಚಿಸಲಾಗಿದೆ. ಏಳು ವಿಧೇಯಕದ ಕುರಿತು ರಾಜ್ಯಪಾಲರು ಸ್ಪಷ್ಟೀಕರಣವನ್ನು ಕೋರಿದ್ದಾರೆ. ನಾಲ್ಕು ಅವರ ಬಳಿ ಇವೆ ಮತ್ತು 5 ಮಸೂದೆಗಳನ್ನು ರಾಷ್ಟ್ರಪತಿಗಳ ಒಪ್ಪಿಗೆಗಾಗಿ ಕಳುಹಿಸಲಾಗಿದೆ. ಇದೀಗ ಮತ್ತೆ 20 ವಿಧೇಯಕಗಳನ್ನು ರಾಜ್ಯಪಾಲರಿಗೆ ಕಳುಹಿಸಲಾಗಿದೆ ಎಂದು ತಿಳಿಸಿದರು.

ಗ್ರೇಟರ್ ಬೆಂಗಳೂರಿಗೆ ರಾಜ್ಯಪಾಲರ ವಿರೋಧವೇಕೆ?

ನಾಗರಿಕ ಸಂಘಟನೆಗಳು ಮತ್ತು ಪ್ರತಿಪಕ್ಷ ಬಿಜೆಪಿಯ ಪ್ರಾತಿನಿಧ್ಯವನ್ನು ಉಲ್ಲೇಖಿಸಿ, ರಾಜ್ಯಪಾಲರು ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಯನ್ನು ಸೂಕ್ತ ಸ್ಪಷ್ಟೀಕರಣಗಳೊಂದಿಗೆ ಮರುಸಲ್ಲಿಕೆ ಮಾಡುವಂತೆ ಹಿಂತಿರುಗಿಸಿದ್ದಾರೆ. ಮಸೂದೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ದೆಹಲಿ ಮಹಾನಗರದ ಮಾದರಿಯಲ್ಲಿ 7 ಪ್ರತ್ಯೇಕ ಮಹಾನಗರಗಳಾಗಿ ವಿಂಗಡಿಸಲು ಪ್ರಸ್ತಾಪಿಸುತ್ತದೆ ಎಂದು ಗಮನಿಸಿದ ರಾಜ್ಯಪಾಲರು, ಆದರೆ ಈ ಪ್ರಯೋಗ ದೆಹಲಿಯಲ್ಲಿ ವಿಫಲವಾಗಿದೆ ಮತ್ತು ಇಲ್ಲಿಯೂ ಇದೇ ರೀತಿಯ ಪರಿಸ್ಥಿತಿ ಉದ್ಭವಿಸಬಹುದು. ಆದ್ದರಿಂದ, ಇದನ್ನು ಸಹ ಪರಿಗಣನೆಗೆ ತೆಗೆದುಕೊಳ್ಳುವಂತೆ ರಾಜ್ಯಪಾಲರು ಸೂಚಿಸಿದ್ದಾರೆ. ಉದ್ದೇಶಿತ ಏಳು ಮಹಾನಗರ ಪಾಲಿಕೆಗಳ ಮೇಲ್ವಿಚಾರಣೆಗಾಗಿ ಗ್ರೇಟರ್ ಬೆಂಗಳೂರು ಆಡಳಿತ ಪ್ರಾಧಿಕಾರ ರಚಿಸಲು ವಿಧೇಯಕ ಪ್ರಸ್ತಾಪಿಸಿದ್ದು, ಇದು ಸಂವಿಧಾನದ 74ನೇ ತಿದ್ದುಪಡಿಯಲ್ಲಿ ಪ್ರತಿಪಾದಿಸಲಾದ ಚುನಾಯಿತ ಸ್ಥಳೀಯ ಸಂಸ್ಥೆಗಳ ಅಧಿಕಾರದಲ್ಲಿ ಹಸ್ತಕ್ಷೇಪಕ್ಕೆ ಕಾರಣವಾಗಬಹುದು ಎಂದು ಗೆಹ್ಲೋಥ್ ಗಮನಸೆಳೆದಿದ್ದಾರೆ. ಆದ್ದರಿಂದ, ಈ ಸಮಸ್ಯೆಯನ್ನು ಮರುಪರಿಶೀಲಿಸಬೇಕಾಗಿದೆ. ನಾನು ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕದ ಬಗ್ಗೆ ಪ್ರಾತಿನಿಧ್ಯಗಳು ಮತ್ತು ಅವುಗಳ ಕಾಳಜಿ ಎರಡನ್ನೂ ಪರಿಶೀಲಿಸಿದ್ದೇನೆ. ಮುಂದುವರಿಯುವ ಮೊದಲು, ಎರಡೂ ಜ್ಞಾಪಕ ಪತ್ರಗಳಲ್ಲಿ ಪ್ರಸ್ತಾಪಿಸಿರುವ ಕಾಳಜಿಗಳನ್ನು ಸ್ಪಷ್ಟಪಡಿಸಬೇಕಾಗಿದೆ. ಏಕೆಂದರೆ ಇದು ಕಾನೂನು ಮತ್ತು ಸಾರ್ವಜನಿಕ ಹಿತಾಸಕ್ತಿ ಸಮಸ್ಯೆಗಳನ್ನು ಒಳಗೊಂಡಿದೆ ಎಂದು ರಾಜ್ಯಪಾಲರು ಹೇಳಿದ್ದಾರೆ.



ಕಾನೂನು ನೀತಿಯನ್ನು ಜಾರಿಗೆ ತಂದು ಕಾನೂನು ಸುಧಾರಣೆಗೆ ಒತ್ತು ಕೊಟ್ಟಿದ್ದೇವೆ. ಬಡವರ ಪ್ರಕರಣಗಳಲ್ಲಿ ಆರು ತಿಂಗಳಲ್ಲಿ ಇತ್ಯರ್ಥಪಡಿಸುವ ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಕಿತ ದೊರೆತಿದೆ. ಇದಕ್ಕೆ ಸಂಬಂಧಿಸಿದ ಮತ್ತೊಂದು ವಿಧೇಯಕಕ್ಕೆ ಅನುಮತಿ ಬೇಕಿದೆ. ಸಾಮಾಜಿಕ ನ್ಯಾಯ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಗುತ್ತಿಗೆಯಲ್ಲಿ ಮೀಸಲಾತಿ ನೀಡುವುದು, ತಂಬಾಕು ಬೆಳೆಗಾರರ ಹಿತ ಕಾಪಾಡುವುದು, ವಕೀಲರ ಮೇಲಿನ ಹಿಂಸಾಚಾರ ತಡೆಯುವುದು, ಪರೀಕ್ಷಾ ಅಕ್ರಮ ತಡೆಯಲು 10 ವರ್ಷಗಳ ಕಠಿಣ ಶಿಕ್ಷೆ ವಿಧಿಸುವಂತಹ ವಿಧೇಯಕಗಳನ್ನು ತಂದಿದ್ದೇವೆ.

- **ಎಚ್.ಕೆ. ಪಾಟೀಲ್** ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಹನಿಟ್ರ್ಯಾಪ್, ಶಾಸಕರ ಅಮಾನತಿನ ಬಗ್ಗೆಯೂ ಚರ್ಚೆ?

ಇದರೊಂದಿಗೆ ರಾಜ್ಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಶಾಸಕರ ಅಮಾನತು ಹಾಗೂ ಹನಿಟ್ರ್ಯಾಪ್ ಪ್ರಕರಣದ ಬಗ್ಗೆಯೂ ಚರ್ಚೆಯಾಗುವ ಸಾಧ್ಯತೆಯಿದೆ. ಈ ಎರಡೂ ಪ್ರಕರಣವನ್ನು ಅಧಿಕೃತವಾಗಿ ಚರ್ಚೆಯಾಗದಿದ್ದರೂ, ಕಿಚನ್ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗುವ ಸಾಧ್ಯತೆಯಿದೆ. ಅದರಲ್ಲಿಯೂ ಸತೀಶ್ ಜಾರಕಿಹೊಳಿ ಅವರು ಕುಮಾರಸ್ವಾಮಿ ಅವರನ್ನು ಭೇಟಿಯಾಗಿರುವುದರಿಂದ ಈ ಬಗ್ಗೆಯೂ ತೀವ್ರ ಚರ್ಚೆಯಾಗಲಿದೆ ಎನ್ನಲಾಗಿದೆ.

ಟ್ವೀಟೂ-ಖಾರಾ

ಬಿಜೆಪಿ ಕರ್ನಾಟಕ

ಸ್ಮಾರ್ಟ್ ಮೀಟರ್ ಹೆಸರಲ್ಲಿ ರಾಜ್ಯದ ಜನರನ್ನು ಲೂಟಿ ಹೊಡೆಯುತ್ತಿದೆ INCKarnataka ಸರಕಾರ. ಬೇರೆ ರಾಜ್ಯಗಳಲ್ಲಿ ಕೇವಲ 900 ರು.ಗೆ ದೊರೆಯುವ ಸ್ಮಾರ್ಟ್ ಮೀಟರ್‌ಗಳಿಗೆ ರಾಜ್ಯದಲ್ಲಿ 8,510 ರು. ಫಿಕ್ಸ್ ಮಾಡಲಾಗಿದೆ. ಬೆಸ್ಕಾಂ ಮತ್ತು ಇತರ ಎಸ್ಕಾಂಗಳ ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಸುಮಾರು 15,568 ಕೋಟಿ ರು. ಮೊತ್ತದ ಅವ್ಯವಹಾರ ನಡೆದಿದೆ. ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ ನಿಯಮಾವಳಿ ಪ್ರಕಾರವೂ ಸ್ಮಾರ್ಟ್ ಮೀಟರ್ ಕಡ್ಡಾಯವಲ್ಲ. ಕೆಇಆರ್‌ಸಿ ನಿಯಮಾವಳಿಗಳಲ್ಲಿ ಸ್ಮಾರ್ಟ್ ಮೀಟರ್ ಕಡ್ಡಾಯ ಎಂದು ಎಲ್ಲೂ ಹೇಳಿಲ್ಲ. ಆದರೂ ಭ್ರಷ್ಟ siddaramaiah ಸರಕಾರ ರಾಜ್ಯದ ಜನತೆಯ ಮೇಲೆ ಸ್ಮಾರ್ಟ್ ಮೀಟರ್ ಹೊರೆ ಏರಿಸಿದೆ. ಸರಕಾರ ಈ ಕೂಡಲೇ ಸ್ಮಾರ್ಟ್ ಮೀಟರ್ ಟೆಂಡರ್ ಪ್ರಕ್ರಿಯೆ ರದ್ದು ಮಾಡಬೇಕು.

ರಾಜು.ಪಿ

ಅವಿವೇಕಿಗಳಾ. ಮನೆಗಳಿಗೆ ವಿದ್ಯುತ್ ಡಿಜಿಟಲ್ ಮೀಟರ್ ಅಳವಡಿಸುವ ನಿರ್ಧಾರ ನಿಮ್ಮ ಬಿಜೆಪಿ ಸರಕಾರ. ಕಮಿಷನ್ ನೀವು ತಿಂದು ಕಾಂಗ್ರೆಸ್ ಸರಕಾರದ ಕಡೆ ತೋರುವುದು ಎಷ್ಟು ಸರಿ?

ತನಿಖೆ ಕೋರಿದ್ದ ಪಿಐಎಲ್ ವಜಾಗೊಳಿಸಿದ ಸುಪ್ರೀಂಕೋರ್ಟ್

ಹನಿಟ್ರ್ಯಾಪ್: ಸಿಐಡಿ ತನಿಖೆ ಸಂಭವ

ಬೆಂಗಳೂರು: ಹನಿಟ್ರ್ಯಾಪ್ ಪ್ರಕರಣದವನ್ನು ಸಿಐಡಿ ಅಥವಾ ಎಸ್‌ಐಟಿ ಮೂಲಕ ತನಿಖೆ ನಡೆಸುವ ನಿಟ್ಟನಲ್ಲಿ ಸರಕಾರ ಚಿಂತನೆ ನಡೆಸಿದ್ದು, ಶೀಘ್ರದಲ್ಲಿಯೇ ಈ ಬಗ್ಗೆ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ.

ರಾಜಕೀಯ ಕಾರಣಕ್ಕೆ ಈ ಪ್ರಕರಣದಲ್ಲಿ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಎಳೆದು ತರಲು ಸತೀಶ್ ಜಾರಕಿಹೊಳಿ ಪ್ರಯತ್ನಿಸುತ್ತಿದ್ದಾರೆ. ಆದರೆ ರಾಜ್ಯ ಸರಕಾರ ಸಿಐಡಿ ಅಥವಾ ಎಸ್‌ಐಟಿ ಮೂಲಕ ತನಿಖೆ ನಡೆಸಿ, ಮಾಹಿತಿ ಪಡೆದು ಬಳಿಕ ಮುಂದಿನ ತೀರ್ಮಾನ ಕೈಗೊಳ್ಳುವ ಲೆಕ್ಕಾಚಾರದಲ್ಲಿದೆ. ಪ್ರಮುಖವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಪರಮೇಶ್ವರ ಅವರು, ಈ ಪ್ರಕರಣವನ್ನು ರಾಜಕೀಯವಾಗಿಯೂ ನೋಡುತ್ತಿರುವುದರಿಂದ ಯಾವ ರೀತಿಯ ತೀರ್ಮಾನ ಕೈಗೊಳ್ಳಲಿದ್ದಾರೆ ಎನ್ನುವ ಕುತೂಹಲವಿದೆ. ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿಯೂ ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸುಪ್ರೀಂನಲ್ಲಿ ಅರ್ಜಿ ವಜಾ: ಕರ್ನಾಟಕ ಸರಕಾರದ ಸಚಿವರ ಮೇಲೆ ನಡೆದಿದೆ ಎನ್ನಲಾದ ಹನಿಟ್ರ್ಯಾಪ್ ಪ್ರಕರಣದ ಕುರಿತು ತನಿಖೆಗೆ ಆಗ್ರಹಿಸಿ ಜಾರ್ಖಂಡ್‌ನ ಬಿನಯ್ ಕುಮಾರ್ ಸಿಂಗ್ ಎಂಬುವವರು ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ವಿಕ್ರಂನಾಥ್ ನೇತೃತ್ವದ ತ್ರಿಸದಸ್ಯ ಪೀಠ ವಜಾಗೊಳಿಸಿದೆ. ಅಲ್ಲದೇ ವಿಚಾರಣೆ ವೇಳೆ, 'ಅರ್ಜಿದಾರರಾದ ನೀವು ಜಾರ್ಖಂಡ್ ಮೂಲದವರು, ಕರ್ನಾಟಕಕ್ಕೂ ನಿಮಗೂ ಏನು ಸಂಬಂಧ? ರಾಜಕೀಯ ನಾನ್‌ಸೆನ್ಸ್‌ಗಳನ್ನು ವಿಚಾರಣೆ ನಡೆಸಲು ನಾವು ಇಲ್ಲಿ ಕುಳಿತಿಲ್ಲ. ನ್ಯಾಯಾಧೀಶರು ಯಾಕೆ ಹನಿಟ್ರ್ಯಾಪ್‌ಗೆ ಒಳಗಾಗುತ್ತಾರೆ? ಅದನ್ನು ನ್ಯಾಯಾಧೀಶರು ನೋಡಿಕೊಳುತ್ತಾರೆ. ಇಂತಹ ಅರ್ಜಿ ವಿಚಾರಣೆ ನಡೆಸಿಕೊಂಡು ಕೂರಲು ನಮಗೆ ಸಾಧ್ಯವಿಲ್ಲ' ತರಾಟೆ ತೆಗೆದುಕೊಂಡಿದೆ.

ಬಿಜೆಪಿಯಲ್ಲಿ ಜೈಕಾರ ಹಾಕೋನೇ ಬೇರೆ, ಜಿಲೇಬಿ ತಿನ್ನೋರೆ ಬೇರೆ

ಬಿಜೆಪಿ ಬಂಡಾಯ ಶಾಸಕ ಶಿವರಾಮ್ ಹೆಬ್ಬಾರ್ ಕಿಡಿ

ಕಾರವಾರ: ಬಿಜೆಪಿಯಲ್ಲಿ ಜೈಕಾರ ಹಾಕೋನೇ ಬೇರೆ, ಜಿಲೇಬಿ ತಿನ್ನೋರೆ ಬೇರೆ, ಜೈಲಿಗೆ ಹೋಗೋನೇ ಬೇರೆ ಎಂದು ಬಿಜೆಪಿ ಬಂಡಾಯ ಶಾಸಕ ಶಿವರಾಮ್ ಹೆಬ್ಬಾರ್ ಹೇಳಿದ್ದಾರೆ.

ಹೈಕಮಾಂಡ್‌ನ ಶಿಸ್ತು ಸಮಿತಿಯಿಂದ ನೋಟಿಸ್ ಬಂದ ಕುರಿತು ಮಾತನಾಡಿದ ಅವರು, ನನಗೆ ನೋಟಿಸ್ ಮಂಗಳವಾರ ರಾತ್ರಿ ತಲುಪಿದೆ. ಅವರು ಏನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಸೂಕ್ತವಾದ ಉತ್ತರವನ್ನು ಅವರು ನಿಗದಿ ಮಾಡಿದ ಸಮಯದಲ್ಲೇ ಕಳುಹಿಸಬೇಕಾದ ಜಾಗದಲ್ಲಿ ಕಳುಹಿಸಿ ಕೊಡುತ್ತೇನೆ ಎಂದು ತಿಳಿಸಿದ್ದಾರೆ.

ಯಾರು ಇದೆಕ್ಕೆಲ್ಲ ಪ್ರಚೋದನೆ ಕೊಟ್ಟರೋ, ಯಾರನ್ನು ಉಳಿಸಲು ಮಾತನಾಡಿದ ನಾಯಕರಿಗೆ ಯಾವುದೇ ನೋಟಿಸ್ ಕೊಟ್ಟಿಲ್ಲ. ಪಕ್ಷದ ಅಧ್ಯಕ್ಷ, ಮಹಾ ನಾಯಕರನ್ನು ವಾಚಾನುಗೋಚರವಾಗಿ ಬೈದರೋ ಅವರ ವಿರುದ್ಧ ಕ್ರಮ ಆಗಿಲ್ಲ. ರೇಣುಕಾಚಾರ್ಯ ಯಾರನ್ನೋ ಗೌರವಿಸಬೇಕು, ಯಾರನ್ನೋ ಬದುಕಿಸಬೇಕು ಎಂದು ರಸ್ತೆ ಮೇಲೆ ಬಿದ್ದು ಹೊಯ್ದಾಡಿದ ಅವರ ಬಗ್ಗೆ ಯಾರೂ ಏನು ಮಾಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ

ನಾವು ಯಾವುದೇ ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಅವರ ಪರವಾಗಿ ಮಾಡದೇ ಇರಬಹುದು. ಅದಕ್ಕೆ ಅದರದ್ದೇ ಆದ ಕಾರಣವಿದೆ. ನಾವು ಕಾಂಗ್ರೆಸ್ ಸಭೆಯಲ್ಲಿ ಭಾಗವಹಿಸಿಲ್ಲ. ನಾವು ಪಕ್ಷದ ವಿರುದ್ಧ ಹೇಳಿಕೆ ಕೊಟ್ಟಿಲ್ಲ. ನನಗೆ ಆದ ಅನ್ಯಾಯದ ಕುರಿತು ಪತ್ರದ ಮುಖೇನ ತಿಳಿಸಿದ್ದೇನೆ ಎಂದು ಬಿಜೆಪಿ ಬಂಡಾಯ ಶಾಸಕ ಶಿವರಾಮ್ ಹೆಬ್ಬಾರ್ ಹೇಳಿದರು.

ಯತ್ನಾಳ್ ಉಚ್ಚಾಟನೆ ದುಃಖ ತಂದಿದೆ, ನಿರ್ಧಾರಕ್ಕೆ ತಲೆ ಬಾಗುವೆ: ಬೆಲ್ಲದ

ಹುಬ್ಬಳ್ಳಿ: ಪಕ್ಷದಿಂದ ಬಸನಗೌಡ ಪಾಟೀಲ್ ಯತ್ನಾಳ್‌ರನ್ನು ಉಚ್ಚಾಟನೆ ಮಾಡಿರುವುದು ಬಹಳಷ್ಟು ದುಃಖ ತಂದಿದೆ ಎಂದು ವಿಧಾನಸಭೆ ವಿಪಕ್ಷ ಉಪನಾಯಕ ಅರವಿಂದ್ ಬೆಲ್ಲದ್ ಹೇಳಿದರು.

ಯತ್ನಾಳ್‌ರನ್ನು ಬಿಜೆಪಿ ಪಕ್ಷದಿಂದ 6 ವರ್ಷ ಹೈಕಮಾಂಡ್ ಉಚ್ಚಾಟನೆ ಮಾಡಿರುವ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿ, ಯತ್ನಾಳ್ ಒಬ್ಬ ಪಕ್ಷದ ಹಿರಿಯ ಜನಪ್ರಿಯ ನಾಯಕರು. ಅವರು ಪಕ್ಷದಿಂದ ದೂರವಾಗುತ್ತಿರುವುದು ನನಗೆ ದುಃಖ ತಂದಿದೆ ಎಂದು ಬೇಸರ ವ್ಯಕ್ತಪಡಿಸಿದರು. ಹೈಕಮಾಂಡ್‌ನ ನಿರ್ಧಾರಕ್ಕೆ ನಾನು ತಲೆ ಬಾಗುತ್ತೇನೆ. ಪಕ್ಷದಲ್ಲಿ ಮುಂದೆ ಎಲ್ಲವೂ ಸರಿಯಾಗುತ್ತದೆ ಎನ್ನುವ ಭರವಸೆ ನನಗಿದೆ. ಯತ್ನಾಳ್ ಅವರಿಗೆ ಕೇಂದ್ರದ ಮಂತ್ರಿಯಾಗಿ, ಶಾಸಕರಾಗಿ ಸಾಕಷ್ಟು ಅನುಭವವಿದೆ. ಅವರು ಏನೇ ವಿಷಯವಿದ್ದರೂ ನೇರವಾಗಿಯೇ ಹೇಳುತ್ತಾರೆ ಎಂದು ಹೇಳಿದರು.



ಸಮಾಚಾರ ಸಣ್ಣದಲ್ಲ

ಲೋಕಾಯುಕ್ತ ಬಲೆಗೆ ಬಿದ್ದ ಪಿಡಿಒ

ರಾಮನಗರ: ಗುತ್ತಿಗೆದಾರರೊಬ್ಬರ ಬಳಿಯಿಂದ ಲಂಚ ಪಡೆಯುತ್ತಿದ್ದ ಪಿಡಿಒ ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ಕನಕಪುರ ತಾಲೂಕಿನ ಸೋಮದಪ್ಪನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಡೆದಿದೆ. ತಾಲೂಕಿನ ಸೋಮದಪ್ಪನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಮುನಿರಾಜು 20 ಸಾವಿರ ರೂಪಾಯಿ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಗುತ್ತಿಗೆದಾರ ವೆಂಕಟಾಚಲಯ್ಯ ಎಂಬವರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಪಿಡಿಒ ಮುನಿರಾಜು 20 ಸಾವಿರ ರು. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಗುತ್ತಿಗೆದಾರ ರಾಮನಗರ ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡ ರಾಮನಗರ ಲೋಕಾಯುಕ್ತ ಪೊಲೀಸರು ಪಿಡಿಒ ಮುನಿರಾಜು ಅವರನ್ನು ಲಂಚ ಪಡೆಯುತ್ತಿದ್ದ ವೇಳೆ ರೆಡ್ ಹ್ಯಾಂಡ್ ಆಗಿ ಹಿಡಿದಿದ್ದಾರೆ. ಪಿಡಿಒ ಮುನಿರಾಜುನನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದುಕೊಂಡು ತನಿಖೆ ನಡೆಸುತ್ತಿದ್ದಾರೆ.

ಟ್ರ್ಯಾಕ್ಟರ್ ಹರಿದು ಮಗು ಸಾವು

ತುಮಕೂರು: ಮಣ್ಣು ತುಂಬಿದ ಟ್ರ್ಯಾಕ್ಟರ್ ಹರಿದು ಐದು ವರ್ಷದ ಮಗು ಸಾವನ್ನಪ್ಪಿರುವ ಘಟನೆ ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ತಿಮ್ಮನಹಳ್ಳಿ ಗ್ರಾಮದಲ್ಲಿ ನಡೆದಿದೆ. ಮೃತ ಮಗುವನ್ನು ವರುಣ್ (5) ಎಂದು ತಿಳಿಯಲಾಗಿದೆ. ಮನೆಯ ಮುಂದೆ ವರುಣ್ ಆಟವಾಡುತ್ತಿದ್ದ. ಇದೇ ವೇಳೆ ಮಣ್ಣು ತುಂಬಿದ್ದ ಟ್ರ್ಯಾಕ್ಟರ್ ಬಂದಿದ್ದು, ಮಗುವಿನ ಮೇಲೆ ಹಾದು ಹೋಗಿದೆ. ಪರಿಣಾಮ ಮಗು ಸಾವನ್ನಪ್ಪಿದ್ದಾನೆ. ವೈಎನ್ ಹೊಸಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಅಂಗನವಾಡಿ ಆಹಾರ ಕಳ್ಳತನ ನೀಚ ಕೆಲಸ

ದಾಂಡೇಲಿ: ಅಂಗನವಾಡಿ ಮಕ್ಕಳಿಗೆ, ಬಾಣಂತಿ ಮತ್ತು ಗರ್ಭಿಣಿಯರಿಗೆ ಉಚಿತವಾಗಿ ನೀಡಲಾಗುವ ಪೌಷ್ಟಿಕ ಆಹಾರ ವಸ್ತುಗಳು ಸೇರಿದಂತೆ ಹಾಲಿನ ಪೌಡರ್ ಪ್ಯಾಕೆಟ್‌ಗಳನ್ನು ಕಳ್ಳತನ ಮಾಡಿರುವ ಪ್ರಕರಣ ಗಂಭೀರವಾದ ಪ್ರಕರಣ ಎಂದು ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು. ಅಂಗನವಾಡಿ ಆಹಾರ ವಸ್ತುಗಳ ಕಳ್ಳತನದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಅವರು, ಅಂಗನವಾಡಿ ಮಕ್ಕಳ ಆಹಾರ ವಸ್ತುಗಳನ್ನು ಮಾರಾಟ ಮಾಡುವುದು ನೀಚ ಮತ್ತು ಪಾಪದ ಕೆಲಸವಾಗಿದೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಯಾರೇ ಇರಲಿ, ನಿರ್ದಾಕ್ಷಿಣ್ಯವಾಗಿ ಸರಕಾರ ಕಠಿಣ ಕ್ರಮವನ್ನು ಕೈಗೊಳ್ಳಲಿದೆ. ಇಂತಹ ಪಾಪದ ಕೆಲಸ ಯಾವತ್ತೂ ಯಾರು ಮಾಡಬಾರದು ಎಂದು ಹೇಳಿದರು.

ಹೊಸಬಾಳೆ ಶೋಭಾ ಹೆಗಡೆ ಇನ್ನಿಲ್ಲ

ಶಿರಸಿ: ಶಿರಸಿ ತಾಲೂಕಿನ ಹೊಸಬಾಳೆ ನಿವಾಸಿ ಶೋಭಾ ಹೆಗಡೆ (60) ಆಕಸ್ಮಿಕ ಅವಘಡದಲ್ಲಿ ಬುಧವಾರ ನಿಧನರಾಗಿದ್ದಾರೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ, ಪ್ರಗತಿಪರ ಕೃಷಿಕ ವೆಂಕಟೇಶ ಹೆಗಡೆ ಹೊಸಬಾಳೆ ಅವರ ಧರ್ಮ ಪತ್ನಿಯಾಗಿದ್ದ ಶೋಭಾ ಹೆಗಡೆ ಅವರು ಕೃಷಿ ಕಾರ್ಯದಲ್ಲಿಯೂ ತೊಡಗಿಸಿಕೊಂಡಿದ್ದರು. ಸದ್ಯ ಅಡಕೆ ಸುಲಿಯುವ ಕಾರ್ಯ ಮನೆಯಲ್ಲಿ ನಡೆಯುತ್ತಿತ್ತು. ಶೋಭಾ ಹೆಗಡೆ ಅವರು ಕೆಲಸಗಾರರ ದೇಖರೇಖಿ ನೋಡಿಕೊಳ್ಳಲು ಹೋಗಿದ್ದರು. ಈ ವೇಳೆ ಚಾಲಿ ಸುಲಿಯುವ ಯಂತ್ರಕ್ಕೆ ಆಕಸ್ಮಿಕವಾಗಿ ಸೀರೆಯ ಸೆರಗು ಸಿಲುಕಿ, ಯಂತ್ರ ತನ್ನತ್ತ ಸೆಳೆದು ಬಿಸಾಡಿದ ಪರಿಣಾಮ ಸ್ಥಳದಲ್ಲಿಯೇ ಮೃತರಾದರು. ಕೆಲಸಗಾರರು ಅಲ್ಲಿಯೇ ಇದ್ದರೂ ಕ್ಷಣಾರ್ಧದಲ್ಲಿ ಘಟನೆ ಸಂಭವಿಸಿದೆ. ಕಳೆದ ಮೂರು ವರ್ಷಗಳಿಂದ ಚಾಲಿ ಸುಲಿಯುವ ವೇಳೆ ಶೋಭಾ ಹೆಗಡೆ ಅವರೇ ದೇಖರೇಖಿ ನೋಡಿಕೊಳ್ಳುತ್ತಿದ್ದರು. ಆದರೆ ಬುಧವಾರ ವಿಧಿ ಕೈಕೊಟ್ಟಿತ್ತು ಎಂದು ಕುಟುಂಬಸ್ಥರು ಹೇಳಿದ್ದಾರೆ.

ಘಟನೆಯ ಕುರಿತು ಶಿರಸಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದಾರೆ. ಶೋಭಾ ಹೆಗಡೆ ಅವರು ಕಾಂಗ್ರೆಸ್ ಮುಖಂಡ ವೆಂಕಟೇಶ ಹೆಗಡೆ ಅವರ ಪತ್ನಿಯಾಗಿ ಕುಟುಂಬ ಕಾಳಜಿ, ಕೃಷಿ ಮುತುವರ್ಜಿ ವಹಿಸುತ್ತಿದ್ದರು. ತಮ್ಮ ಪತಿಯ ಸಮಾಜಸೇವೆ ಮತ್ತು ರಾಜಕೀಯ ಕಾರ್ಯಗಳಿಗೆ ಪ್ರೋತ್ಸಾಹಕರಾಗಿ ಬೆಂಬಲವಾಗಿ ನಿಂತಿದ್ದರು. ಶೋಭಾ ಹೆಗಡೆ ಅವರಿಗೆ ಪತಿ ವೆಂಕಟೇಶ ಹೆಗಡೆ, ಪುತ್ರ ನಾಗರಾಜ ಅಪಾರ ಬಂಧು-ಬಳಗವಿದೆ. ಮೃತರ ಅಂತ್ಯಕ್ರಿಯೆಯು ಗುರುವಾರ ಬೆಳಗ್ಗೆ ಹೊಸಬಾಳೆಯಲ್ಲಿ ನಡೆಯಲಿದೆ.

ಶೋಭಾ ಹೆಗಡೆ ಅವರು ನಿಧನಕ್ಕೆ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಆತ್ಮೀಯರಾದ ವೆಂಕಟೇಶ ಹೆಗಡೆ ಅವರ ಪತ್ನಿ ಶೋಭಾ ಅವರ ಆಕಸ್ಮಿಕ ನಿಧನ ಆಘಾತಕಾರಿ. ವೆಂಕಟೇಶ ಹೆಗಡೆ ಮತ್ತು ಅವರ ಕುಟುಂಬಸ್ಥರಿಗೆ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ಭಗವಂತನು ಕರುಣಿಸಲಿ. ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಹೇಳಿದ್ದಾರೆ.

ಹಿರಿಯ ರಾಜಕೀಯ ಧುರೀಣರು ಮತ್ತು ಸಮಾಜ ಸೇವಕರು ಆದ ವೆಂಕಟೇಶ ಹೆಗಡೆ ಹೊಸಬಾಳೆ ಅವರ ಧರ್ಮಪತ್ನಿಯವರು ಆಕಸ್ಮಿಕ ಮರಣ ಹೊಂದಿದ ಸುದ್ದಿ ಕೇಳಿ ಬಹಳ ಆಘಾತವಾಯಿತು. ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ. ಕುಟುಂಬ ವರ್ಗದವರಿಗೆ ದುಃಖವನ್ನು ಸಹಿಸುವ ಶಕ್ತಿ ನೀಡಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

- **ವಿಶ್ವೇಶ್ವರ ಹೆಗಡೆ ಕಾಗೇರಿ** ಸಂಸದ

ನಮ್ಮ ಪಕ್ಷದ ಮುಖಂಡರಾದ ವೆಂಕಟೇಶ ಹೆಗಡೆ ಅವರ ಪತ್ನಿ ಅವರ ಸಾವಿನ ಸುದ್ದಿ ತಿಳಿದು ತೀವ್ರ ಆಘಾತವಾಗಿದೆ. ವೆಂಕಟೇಶ ಹೆಗಡೆ ಹೊಸಬಾಳೆ ಅವರಿಗೆ ಮತ್ತು ಅವರ ಕುಟುಂಬಸ್ಥರಿಗೆ ದುಃಖ ಸಹಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ.

- **ಭೀಮಣ್ಣ ನಾಯ್ಕ** ಶಾಸಕ

ಹೊಂದಾಣಿಕೆ ರಾಜಕಾರಣ ಕೊನೆಯಾಗಲಿ

ದಾವಣಗೆರೆ: ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಹೊಂದಾಣಿಕೆ ರಾಜಕಾರಣ ಕೊನೆಗೊಂಡು ಪಕ್ಷದ ಪ್ರಾಮಾಣಿಕ ಕಾರ್ಯಕರ್ತರಿಗೆ ನ್ಯಾಯ ಸಿಗಬೇಕು. ಇದನ್ನು ವರಿಷ್ಠರ ಗಮನಕ್ಕೆ ತರಲು ಶೋಕಾಸ್ ನೋಟಿಸ್ ಅವಕಾಶ ಕಲ್ಪಿಸಿದೆ. 72 ಗಂಟೆಯಲ್ಲಿ ಉತ್ತರ ನೀಡುವೆ ಎಂದು ಶಾಸಕ ಬಿ.ಪಿ.ಹರೀಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ಕೆಲ ನಾಯಕರು ಕಾಂಗ್ರೆಸ್ ಏಜೆಂಟ್‌ರಂತೆ ಕೆಲಸ ಮಾಡುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಚುನಾವಣೆಗೂ ಮುನ್ನವೇ ಇದನ್ನು ಪಕ್ಷದ ಗಮನಕ್ಕೆ ತರಲಾಗಿತ್ತು. ಮತ್ತೊಮ್ಮೆ ವರಿಷ್ಠರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುವೆ ಎಂದು ಹೇಳಿದರು.

ಪಕ್ಷಕ್ಕೆ ಮುಜುಗರಕ್ಕೆ ಆಗುವಂತೆ ನಾನು ನಡೆದುಕೊಳ್ಳುವುದಿಲ್ಲ. ಪಕ್ಷದ ಕಾರ್ಯಕರ್ತರಿಗೆ ಒಳಿತಾಗುವ ದಿನಗಳು ಸಮೀಪಿಸಿವೆ. ನೋಟಿಸ್ ನೀಡಿರುವುದರಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಕೈವಾಡ ಇಲ್ಲ ಎಂದು ಹೇಳಿದರು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವುದು ಮಾಧ್ಯಮಗಳ ಮೂಲಕ ಗಮನಕ್ಕೆ ಬಂದಿದೆ. ಈ ಕುರಿತು ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ ಎಂದರು.

ಹನಿಟ್ರ್ಯಾಪ್ ಹಿಂದೆ ಡಿಕೆಶಿ ಕೈವಾಡವಿಲ್ಲ

ಮೈಸೂರು: ಹನಿಟ್ರ್ಯಾಪ್ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೈವಾಡವಿಲ್ಲ ಎಂದು ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಸಚಿವ ರಾಜಣ್ಣ ಮನೆಯಲ್ಲಿ ಸಿಸಿ ಟಿವಿ ಇಲ್ಲದ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಬಿಜೆಪಿಯ 17 ಜನ ಕೋರ್ಟ್‌ನಿಂದ ಇನ್ ಜೆಂಕ್ಷನ್ ತಂದಿದ್ದರು. ಹಾಗಾದರೆ ಅವರ ವಿಡಿಯೋ ಬಿಜೆಪಿ ಅವರೇ ಮಾಡಿಸಿದ್ದ? ಬಿಜೆಪಿ ಅವರಿಗೆ ಕಾಂಗ್ರೆಸ್ ಪಕ್ಷದ ಯಾವುದೇ ನಾಯಕರ ವಿರುದ್ಧ ಮಾತನಾಡುವ ನೈತಿಕ ಹಕ್ಕಿಲ್ಲ ಎಂದು ಕಿಡಿಕಾರಿದರು.

ದೂರು ನೀಡಲು ಸಚಿವ ಕೆ.ಎನ್. ರಾಜಣ್ಣ ವಿಳಂಬ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಏನು ಮಾಡಿದರೆ ಒಳ್ಳೆಯದು ಅಂತ ಚರ್ಚೆ ಮಾಡುತ್ತಿದ್ದಾರೆ. ಗೃಹ ಸಚಿವರ ಜೊತೆ ಮಾತುಕತೆ ನಡೆಸಿದ್ದಾರೆ ಎಂದರು.

ಸಚಿವ ರಾಜಣ್ಣ ಮನೆಯಲ್ಲಿ ಸಿಸಿ ಟಿವಿ ಇಲ್ಲದ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ಸಿಎಂ ಮನೆಯಲ್ಲಿ ಸಿಸಿ ಟಿವಿ ಇದೆ. ಸಚಿವರ ಮನೆಯಲ್ಲಿ ಸಿಸಿ ಟಿವಿ ಇದಿಯಾ ಇಲ್ವಾ ಗೊತ್ತಿಲ್ಲ. ಸಿಸಿಟಿವಿ ಇದ್ದರೆ ಒಳ್ಳೆಯದು. ಇಲ್ಲಿ ರಾಜಣ್ಣ ಕೂಡ ಟಾರ್ಗೆಟ್ ಆಗಿಲ್ಲ. ಯಾರು ಯಾರನ್ನು ಟಾರ್ಗೆಟ್ ಮಾಡೋಕೆ ಆಗಲ್ಲ. ರಾಜಣ್ಣ ಅವರಿಗೆ ಆದ ಅನುಭವ ಸದನದಲ್ಲಿ ಹೇಳಿದ್ದಾರೆ ಅಷ್ಟೇ. ತನಿಖೆ ಆಗುತ್ತದೆ, ಮುಂದೆ ಸತ್ಯ ಹೊರಬರಲಿದೆ ಎಂದು ಹೇಳಿದರು.

ಮೈಸೂರು: ಚಿಕ್ಕಪ್ಪನಿಂದಲೇ ಬಾಲಕಿ ಮೇಲೆ ಅತ್ಯಾಚಾರ

ಮೈಸೂರು: ಸಂಬಂಧದ ವರಸೆಯಲ್ಲಿ ಮಗಳು ಆಗಬೇಕಿದ್ದ ಬಾಲಕಿಯೊಬ್ಬಳ ಮೇಲೆ ಚಿಕ್ಕಪ್ಪನೇ ಅತ್ಯಾಚಾರವೆಸಗಿ ಆಕೆಯನ್ನು ಗರ್ಭಿಣಿ ಮಾಡಿರುವ ಪೈಶಾಚಿಕ ಕೃತ್ಯ ಜಿಲ್ಲೆಯ ನಂಜನಗೂಡಿನಲ್ಲಿ ನಡೆದಿದೆ. ನಂಜುಂಡಸ್ವಾಮಿ ಎಂಬಾತನೇ ಅತ್ಯಾಚಾರವೆಸಗಿದ ಆರೋಪಿಯಾಗಿದ್ದು, ಇದೀಗ ಪೋಕ್ಸೊ ಪ್ರಕರಣದಡಿ ಬಂಧಿತನಾಗಿ ಜೈಲು ಸೇರಿದ್ದಾನೆ.

ಶಾಲೆಗೆ ತೆರಳಿದ್ದ ತನ್ನ ಅಣ್ಣನ ಮಗಳನ್ನು ಮನೆಗೆ ಕರೆತಂದ ಚಿಕ್ಕಪ್ಪ ನಂಜುಂಡಸ್ವಾಮಿ ಅತ್ಯಾಚಾರವೆಸಗಿರುವುದು ತಡವಾಗಿ ಬೆಳಕಿಗೆ ಬಂದಿದೆ. ಕಳೆದ ಎರಡು ತಿಂಗಳಿಂದ ಬಾಲಕಿ ಮುಟ್ಟಾಗಿಲ್ಲವೆಂಬ ಕಾರಣಕ್ಕೆ ವೈದ್ಯರು ಪರಿಶೀಲನೆ ನಡೆಸಿದಾಗ ವಿಚಾರ ಗೊತ್ತಾಗಿದೆ. ಶಾಲೆಗೆ ತೆರಳಿದ್ದ ಬಾಲಕಿಯನ್ನು ಪುಸಲಾಯಿಸಿ ಮನೆಗೆ ಕರೆತಂದು ಬಲವಂತವಾಗಿ ದೈಹಿಕ ಸಂಪರ್ಕ ನಡೆಸಿ ಯಾರಿಗೂ ತಿಳಿಸಬಾರದೆಂದು ತಿಳಿಸಿ ಮತ್ತೆ ಶಾಲೆಗೆ ಬಿಟ್ಟಿದ್ದಾನೆ ಎಂದು ಹೇಳಲಾಗಿದೆ. ಮಾಸಿಕ ಮುಟ್ಟಿನಲ್ಲಿ ವ್ಯತ್ಯಾಸ ಕಂಡುಬಂದ ಹಿನ್ನೆಲೆಯಲ್ಲಿ ಪೋಷಕರು ವೈದ್ಯರ ಬಳಿ ತೋರಿಸಿದಾಗ ಬಾಲಕಿ 6 ತಿಂಗಳ ಗರ್ಭಿಣಿಯಾಗಿರುವುದು ಬೆಳಕಿಗೆ ಬಂದಿದೆ. ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಬಾಲಕಿ ವಶಕ್ಕೆ ಪಡೆದಿದ್ದಾರೆ. ನಂಜುಂಡಸ್ವಾಮಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ.

ಬಿಜೆಪಿಯಿಂದ ಈದ್ ಕಿಟ್; ಕೈ ನಾಯಕರ ವ್ಯಂಗ್ಯ

ಪ್ರಧಾನಿ ನರೇಂದ್ರ ಮೋದಿ ಹೆಸರಲ್ಲಿ ಈದ್ ಕಿಟ್ ಕೊಡುವುದು ತುಷ್ಟೀಕರಣವಲ್ಲವೇ?

ಬೆಂಗಳೂರು: ರಂಜಾನ್ ಪ್ರಯುಕ್ತ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ದೇಶಾದ್ಯಂತ 32 ಲಕ್ಷ ಮುಸ್ಲಿಂ ಕುಟುಂಬಗಳಿಗೆ ಈದ್ ಕಿಟ್ ವಿತರಿಸಿರುವುದಕ್ಕೆ ಕಾಂಗ್ರೆಸ್ ನಾಯಕರು ಕಿಡಿಕಾರಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಸಚಿವ ದಿನೇಶ್ ಗುಂಡೂರಾವ್, ಸೌಗತ್-1 ಮೋದಿ ಹೆಸರಿನಲ್ಲಿ ಬಿಜೆಪಿಯ ವರಿಷ್ಠ ನಾಯಕರೇ ಮುಸ್ಲಿಮರಿಗೆ ಈದ್ ಕಿಟ್ ಕೊಡುತ್ತಿದ್ದಾರೆ. ಇದು ತುಷ್ಟೀಕರಣವಲ್ಲವೇ? ಓಲೈಕೆ ರಾಜಕಾರಣ ವಲ್ಲವೇ? ಕಾಂಗ್ರೆಸ್‌ನವರು ಈದ್ ಕಿಟ್ ಕೊಟ್ಟಿದ್ದರೆ ಬಿಜೆಪಿಯ ಪುಡಿ ನಾಯಕರು ಈ ವೇಳೆಗೆ ಬೀದಿಗಿಳಿಯುತ್ತಿದ್ದರು. ಕಾಂಗ್ರೆಸ್ ಮುಸ್ಲಿಮರ ತುಷ್ಟೀಕರಣ ಮಾಡುತ್ತಿದೆ. ಓಲೈಕೆ ರಾಜಕಾರಣ ಮಾಡುತ್ತಿದೆ ಎಂದು ಬೊಂಬಡ ಬಜಾಯಿಸುತ್ತಿದ್ದರು ಎಂದು ಹೇಳಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ.ನಡ್ಡಾ ಅವರು 32 ಲಕ್ಷ ಕುಟುಂಬಗಳಿಗೆ ಪ್ರಧಾನಿ ನರೇಂದ್ರ ಮೋದಿ ಹೆಸರಿನಲ್ಲಿ ಈದ್ ಕಿಟ್ ನೀಡಿದ್ದಾರೆ. ಪವಿತ್ರ ರಂಜಾನ್ ಸಮಯದಲ್ಲಿ ಮುಸ್ಲಿಮರಿಗೆ ಈದ್ ಕಿಟ್ ಕೊಡಲಿ. ಇದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ ಇದೇ ಕಾರ್ಯಕ್ರಮವನ್ನು ಕಾಂಗ್ರೆಸ್‌ನವರು ಮಾಡಿದ್ದರೆ ಪರಿಸ್ಥಿತಿ ಹೇಗಿರುತ್ತಿತ್ತು ಎಂದು ಊಹಿಸಿಕೊಳ್ಳಿ ಎಂದು ವ್ಯಂಗ್ಯವಾಡಿದ್ದಾರೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, 'ಸೌಗಾದ್ ಎ ಮೋದಿ' ಹೆಸರಿನಲ್ಲಿ 32 ಲಕ್ಷ ಗಿಫ್ಟ್ ಕಿಟ್ ಕೊಡೋದು ಮುಸ್ಲಿಂ ಓಲೈಕೆ ಅಲ್ಲವೇ? ಇವರ ಮಕ್ಕಳು ಎಸಿ ರೂಮಲ್ಲಿ ಕೂತಿರ್ತಾರೆ. ಹೊರಗಡೆ ಬೇರೆಯವರು ಮಾತ್ರ ಹೋರಾಟ ಮಾಡಬೇಕು ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿಯವರಿಗೆ ಸಾಮಾನ್ಯ ಜ್ಞಾನವಿದೆಯಾ?

ಉತ್ತರ ಪ್ರದೇಶ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಮುಸ್ಲಿಮರನ್ನು ಒಬಿಸಿಗೆ ಸೇರಿಸಿದ್ದಾರೆ. ಧಾರ್ಮಿಕ ಆಧಾರದ ಮೀಸಲು ಎನ್ನುವ ಬಿಜೆಪಿಯವರಿಗೆ ಸಾಮಾನ್ಯ ಜ್ಞಾನವಿದೆಯಾ? ನಾಲ್ಕು ಆಯೋಗಗಳು ಮುಸ್ಲಿಮರಿಗೆ ಮೀಸಲು ನೀಡಲು ಶಿಫಾರಸು ಮಾಡಿವೆ. ಮುಸ್ಲಿಮರು ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗ ಎಂದು ಶಿಫಾರಸು ಮಾಡಿದೆ. ನಾಲ್ಕು ಆಯೋಗದ ಅಧ್ಯಕ್ಷರು ಮುಸಲ್ಮಾನರಾ? ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ಕೆ.ಎನ್.ರಾಜಣ್ಣ ಮನವಿ ಕಾನೂನಿನ ಚೌಕಟ್ಟಿನೊಳಗೆ ಪರಿಶೀಲಿಸಿ ಕ್ರಮ

ಗೋಕರ್ಣ: ಹನಿಟ್ರ್ಯಾಪ್ ಮಾಡಲು ಪ್ರಯತ್ನಿಸಲಾಗಿದೆ ಎಂಬ ಆರೋಪದ ಮೇಲೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಲ್ಲಿಸಿರುವ ಅರ್ಜಿಯನ್ನು ಕಾನೂನು ಚೌಕಟ್ಟಿನೊಳಗೆ ವಿವೇಚನೆಯಿಂದ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜಣ್ಣ ಅವರು ನನಗೆ ಮನವಿ ನೀಡಿದ್ದಾರೆ, ಸರಕಾರ ಅದನ್ನು ಕಾನೂನಿನ ಚೌಕಟ್ಟಿನೊಳಗೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದರು.

ಸದನದಲ್ಲಿ ವಿಷಯವನ್ನು ಪ್ರಸ್ತಾಪಿಸಿದ 5 ದಿನಗಳ ಬಳಿಕ ಗೃಹ ಸಚಿವ ಡಾ.ಪರಮೇಶ್ವರ್ ಅವರಿಗೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಮೂರು ಪುಟಗಳ ಮನವಿ ಪತ್ರ ಸಲ್ಲಿಸಿದ್ದರು. ಮಂಗಳವಾರ ಸಂಜೆ ರಾಜಣ್ಣ ಅವರಿಂದ ಮನವಿ ಸ್ವೀಕರಿಸಿದ ಕೂಡಲೇ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ಭೇಟಿ ನೀಡಿದ್ದರು.

ಬಿಜೆಪಿ ಶಾಸಕರ ಅಮಾನತು ಸರಿಯಾದ ಕ್ರಮ

ವಿಧಾನಸಭೆಯಲ್ಲಿ ಏನು ನಡೆಯಬೇಕು, ಏನು ಮಾತಾಡಬೇಕು ಎಂದು ನಿರ್ಧರಿಸುವುದು ಸಭಾಧ್ಯಕ್ಷರ ಕೆಲಸ. ಸಭೆಯ ಘನತೆ, ಗೌರವ, ಮರ್ಯಾದೆ ಕಾಪಾಡುವುದು ಸಭೆಯ ಅಧ್ಯಕ್ಷರ ಕರ್ತವ್ಯ. ಅದನ್ನು ಅವರು ಸರಿಯಾಗಿ ನಿಭಾಯಿಸಿದ್ದಾರೆ. ಶಾಸಕರನ್ನು ಅಮಾನತು ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇದೆ. ಶಾಸಕರೂ ಸದನದಲ್ಲಿ ಗೌರವದಿಂದ ನಡೆಯಬೇಕು. ಸದನದ ಘನತೆ ಕಾಪಾಡುವುದು ಶಾಸಕರ ಕರ್ತವ್ಯವೂ ಹೌದು. ಅಸಭ್ಯತೆಯಿಂದ ವರ್ತಿಸಿದಾಗ ಬೇರೆ ದಾರಿಯಿಲ್ಲದೇ ಸಭಾಧ್ಯಕ್ಷರು ಅಮಾನತು ಮಾಡುವ ನಿರ್ಧಾರ ಕೈಗೊಂಡಿದ್ದಾರೆ. ಅದು ಸರಿಯಾದ ಕ್ರಮ ಎಂದು ಸಭಾಧ್ಯಕ್ಷರನ್ನು ಸಮರ್ಥಿಸಿಕೊಂಡರು.

ವಿಶ್ವವಾಣಿ

ಸಂಪಾದಕೀಯ

ಕಾನೂನು ಮೇಲ್ಮಟ್ಟದಿಂದ ಜಾರಿಯಾಗಲಿ

ಚುನಾಯಿತ ಕಾರ್ಪೊರೇಟರ್‌ಗಳು ನಿಯಮಗಳ ಪ್ರಕಾರ ತಮ್ಮ ಆಸ್ತಿ ವಿವರ ಘೋಷಿಸಲು ವಿಫಲವಾದ ಹಿನ್ನೆಲೆಯಲ್ಲಿ ವಿಜಯಪುರ ಮಹಾನಗರ ಪಾಲಿಕೆಯ 35 ಕಾರ್ಪೊರೇಟರ್‌ಗಳನ್ನು ಅನರ್ಹಗೊಳಿಸಿ ಬೆಳಗಾವಿ ಪ್ರಾದೇಶಿಕ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಈ ಪ್ರಕರಣ ರಾಜ್ಯ ಮಟ್ಟದಲ್ಲಿ ಸಂಚಲ ಸೃಷ್ಟಿಸಿದೆ. ಗ್ರಾಮಪಂಚಾಯಿತಿ ಸದಸ್ಯರಿಂದ ಹಿಡಿದು ಶಾಸಕ, ಸಂಸದರ ತನಕ ಚುನಾವಣೆಗೆ ಮುನ್ನ ಮತ್ತು ಚುನಾವಣೆಯ ನಂತರ ಅಧಿಕಾರವಧಿ ಮುಗಿಯುವ ತನಕ ಪ್ರತೀ ವರ್ಷ ಜನಪ್ರತಿನಿಧಿಗಳು ತಮ್ಮ ಆಸ್ತಿ ವಿವರ ಸಲ್ಲಿಸುವುದು ಕಡ್ಡಾಯ. ಆದರೆ ಜನಪ್ರತಿನಿಧಿಗಳು ಈ ಆದೇಶವನ್ನು ಇದುವರೆಗೆ ಗಂಭೀರವಾಗಿ ಪರಿಗಣಿಸಿಲ್ಲ. ರಾಜ್ಯದ ಎಲ್ಲ ಶಾಸಕರು ಪ್ರತೀ ವರ್ಷ ಲೋಕಾಯುಕ್ತಕ್ಕೆ ತಮ್ಮ ಆಸ್ತಿ ವಿವರ ನೀಡಬೇಕು. ಆದರೆ ಆಸ್ತಿ ವಿವರ ನೀಡದ ಹಿನ್ನೆಲೆಯಲ್ಲಿ ಈ ತನಕ ಯಾವುದೇ ಶಾಸಕರ ಸದಸ್ಯತ್ವ ರದ್ದಾಗಿಲ್ಲ. ಆದರೆ ಆಸ್ತಿ ವಿವರ ಸಲ್ಲಿಸದ ಕಾರಣಕ್ಕೆ ರಾಜ್ಯ ಚುನಾವಣೆ ಆಯೋಗ ಕಳೆದ ಜನವರಿಯಲ್ಲಿ ಆರೇಳು ಗ್ರಾಮ ಪಂಚಾಯಿತಿ ಸದಸ್ಯರ ಸದಸ್ಯತ್ವವನ್ನು ರದ್ದು ಮಾಡಿತ್ತು. ಇದೇ ಕಾರಣ ಮುಂದಿಟ್ಟು ಮಹಾನಗರಪಾಲಿಕೆಯೊಂದರ ಬಹುತೇಕ ಎಲ್ಲ ಸದಸ್ಯರು ಅನರ್ಹಗೊಂಡಿರುವುದು ಇದೇ ಮೊದಲು. ಪ್ರಾದೇಶಿಕ ಆಯುಕ್ತರ ಈ ಆದೇಶವನ್ನು ಸದಸ್ಯರು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಆದರೆ 9 ವರ್ಷಗಳ ಹಿಂದೆ ಜಾರಿಗೆ ಬಂದ ಕಾಯಿದೆಯೊಂದರ ಬಗ್ಗೆ ಸದಸ್ಯರಲ್ಲಿ ಈಗಲೂ ಸ್ಪಷ್ಟತೆ ಇಲ್ಲದಿರುವುದು ಅಚ್ಚರಿಯ ಸಂಗತಿ. 2016ರಲ್ಲಿ ಅಂಗೀಕರಿಸಲಾದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಪಂ, ತಾಪಂ, ಜಿಪಂ ಸದಸ್ಯರ ಆಸ್ತಿ ಘೋಷಣೆ)ನಿಯಮಗಳ ಪ್ರಕಾರ ಚುನಾಯಿತ ಸದಸ್ಯರು ತಾವು ಅಧಿಕಾರ ಸ್ವೀಕರಿಸಿದ ಮೂರು ತಿಂಗಳೊಳಗೆ ಮತ್ತು ಪ್ರತೀ ಆರ್ಥಿಕ ವರ್ಷ ಮುಕ್ತಾಯವಾದ ಮರು ತಿಂಗಳಲ್ಲಿ ಆಸ್ತಿ ವಿವರ ಸಲ್ಲಿಸುವುದು ಕಡ್ಡಾಯ. ವಿಜಯಪುರ ಪಾಲಿಕೆಯ ಇಬ್ಬರು ಮಾಜಿ ಸದಸ್ಯರು ಕಾರ್ಪೊರೇಟರುಗಳು ಆಸ್ತಿ ವಿವರ ಸಲ್ಲಿಸದಿರುವುದನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠದ ಮೆಟ್ಟಿಲೇರಿದ್ದರು. ಕಾನೂನು ಜಿಜ್ಞಾಸೆ ಏನೇ ಇರಲಿ, ಕಾನೂನಿನ ಗುರಾಣಿಯನ್ನು ಕೆಳಮಟ್ಟದಲ್ಲಿ ಪ್ರಯೋಗಿಸುವ ಮೊದಲು ಮೇಲ್ಮಟ್ಟದಲ್ಲಿ ಪ್ರಯೋಗಿಸಬೇಕು. ಆಸ್ತಿ ವಿವರ ಸಲ್ಲಿಸದ ಶಾಸಕರು, ಸಂಸದರ ಸದಸ್ಯತ್ವವೂ ರದ್ದಾಗಬೇಕು.

ಸೊಂಪಾದಕೀಯ

ಯತ್ನಾಳ್ ಔಟ್

ಭಾರತೀಯ ಜನತಾ ಪಾರ್ಟಿಯಲ್ಲಿ ಕೊನೆಗೂ ಬಣಗುಟ್ಟುವವರಿಗೆ ಬಿಸಿ ಮುಟ್ಟಿದೆ. ಪಕ್ಷದ ರಾಜ್ಯ ಪ್ರಮುಖ ನಾಯಕ, ಮುಂದಿನ ಸಿಎಂ ಎಂದೇ ತಮ್ಮನ್ನು ಬಿಂಬಿಸಿಕೊಳ್ಳುತ್ತಿದ್ದ ಬಸನಗೌಡ ಯತ್ನಾಳ್ ಅವರನ್ನು ಬಿಜೆಪಿ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಿದೆ. ಈ ಮೂಲಕ ಪಕ್ಷದ ಒಳಗಿದ್ದುಕೊಂಡು ಪಕ್ಷ ವಿರೋಧಿ ಹುಚ್ಚಾಟ ಆಡಿದರೆ ಸುಮ್ಮನೆ ಇರಲ್ಲ ಅನ್ನೋ ಸಂದೇಶ ರವಾನೆ ಮಾಡಿದೆ. ಶಿಸ್ತಿನ ಪಕ್ಷ ಎಂದು ತಮ್ಮನ್ನು ತಾವು ಕರೆದುಕೊಳ್ಳುವ ಬಿಜೆಪಿಯಲ್ಲಿ ಇತ್ತೀಚೆಗೆ ಅರಾಜಕತೆಯೇ ಮೈವೆತ್ತಂತೆ ಆಗಿತ್ತು. ಹೇಳೋರು ಕೇಳೋರು ಇಲ್ಲದಂತೆ ಅವರವರ ಇಷ್ಟ ಬಂದಂತೆ ಹೇಳಿಕೆ ನೀಡೋದು, ತಮ್ಮದೇ ಆದ ಮೀಟಿಂಗ್ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳೋದು ಇದೆಲ್ಲಾ ನಡೆದೇ ಇತ್ತು. ಹಾಗಾಗಿ ಇತ್ತೀಚೆಗೆ ವಿರೋಧಿಗಳೆಲ್ಲ ಇದು ಭಾರತೀಯ ಜನತಾ ಪಕ್ಷ ಅಲ್ಲ, ಬಣಗಳ ಜನತಾ ಪಕ್ಷ ಅಂತ ಆಡಿಕೊಳ್ಳುತ್ತಿದ್ದರು. ಅದರಲ್ಲೂ ಇತ್ತೀಚೆಗೆ ಬಸನಗೌಡ ಯತ್ನಾಳ ಅವರಂಥ ನಾಯಕರು ಮುಲಾಜಿಲ್ಲದೆ ಹೈಕಮ್ಯಾಂಡ್ ಗೂ ಕೇರ್ ಮಾಡದೆ ಬಾಯಿಗೆ ಬಂದಂತೆ ಹೇಳಿಕೆ ನೀಡಿ, ತಮ್ಮ ನಾಯಕರನ್ನೇ ಟೀಕೆ ಮಾಡುತ್ತಿದ್ದರು. ಇಷ್ಟೆಲ್ಲಾ ಮಾಡಿದರೂ ಹೈಕಮ್ಯಾಂಡ್ ಸುಮ್ಮನೇ ಇದೆಯಲ್ಲ ಎನ್ನುವ ಅನುಮಾನ ಕಾಡಿತ್ತು. ಹೈ ಕಮ್ಯಾಂಡ್ ಆಗೊಮ್ಮೆ ಈಗೊಮ್ಮೆ ಗುಟುರು ಹಾಕಿದರು ಬಣ ರಾಜಕೀಯ ಮಾಡುವವರಿಗೆ ಬ್ರೇಕ್ ಹಾಕೋ ಕೆಲಸ ಆಗಿರಲಿಲ್ಲ. ಆಗಾಗ ತೋಳ ಬಂತು ತೋಳ ಎನ್ನುವಂತೆ ಭಿನ್ನಮತೀಯರಿಗೆ ನೋಟೀಸ್ ಕಳಿಸಿದರೂ ಅದು ಪ್ರಯೋಜನ ಆಗಿರಲಿಲ್ಲ. ಯತ್ನಾಳ ಅವರಂಥ ನಾಯಕರು ನೋಟೀಸನ್ನು ತಮ್ಮ ಕಾಲಕಸದಂತೆ ನೋಡಿದ್ದರು. ಹಾಗಾಗಿ ಈಗ ಪಕ್ಷ ಪರಮೋಚ್ಚ ನಿರ್ಧಾರ ಕೈಗೊಂಡಿದೆ. ಇದು ಇತ್ತೀಚೆಗೆ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ವಿರುದ್ಧ ಪದೇ ಪದೇ ವಾಗ್ದಾಳಿ ಮಾಡುತ್ತಿದ್ದ ಯತ್ನಾಳ ಬಣಕ್ಕೆ ಹೊಡೆತ ಬಿದ್ದಂತೆ ಆಗಿದೆ. ಹಾಗಾಗಿ ಇನ್ನು ಮುಂದೆ ವಿಜಯೇಂದ್ರ ತಕ್ಕ ಮಟ್ಟಿಗೆ ಸೇಫ್ ಅನ್ನೋದು ನಿಜ. ಮತ್ತು ಯತ್ನಾಳ ಅವರನ್ನು ಉಚ್ಚಾಟನೆ ಮಾಡಿರೋ ವಿಷಯದಲ್ಲಿ ವಿಜಯೇಂದ್ರ ಅವರ ಕೈವಾಡ ಇದೆ ಅನ್ನೋದನ್ನು ಒತ್ತಿ ಹೇಳಬೇಕಿಲ್ಲ ಬಿಡಿ. ಆದರೆ ಇನ್ನುಮುಂದೆಯಾದರೂ ಬಿಜೆಪಿಯಲ್ಲಿ ಬಣಗುಟ್ಟುವಿಕೆ, ಗೊಣಗುಟ್ಟುವಿಕೆ ಕಡಿಮೆ ಆಗುತ್ತದಾ, ಯತ್ನಾಳ ಅವರು ಸಾರಿ ಗೀರಿ ಕೇಳಿ ಮತ್ತೆ ಬಿಜೆಪಿ ಸೇರುವ ದಾರಿ ಹಿಡಿತಾರಾ ಅನ್ನೋದು ಮುಂದಿನ ಕುತೂಹಲ.

ಸಂಪಾದಕರ ಸದ್ಯಶೋಧನೆ

ಬೆರಗಿನ ಫಾಂಟ್ ಲೋಕ

ಒಂದೊಂದು ಅಕ್ಷರಗಳ (ಫಾಂಟ್) ಸ್ವರೂಪ ಒಂದೊಂದು ರೀತಿ. ಇಂಗ್ಲಿಷಿನಲ್ಲಿ ಫಾಂಟ್‌ಗಳ ಬಹುದೊಡ್ಡ ಆಗರವೇ ಇದೆ. ಪ್ರತಿಯೊಂದರ ಪಾತ್ರ, ಸ್ವರೂಪ, ಉದ್ದೇಶ ಒಂದೊಂದು ರೀತಿ. ಜಗತ್ತಿನೆಲ್ಲೆಡೆ ಇಂಗ್ಲಿಷಿನಲ್ಲಿ ಏನಿಲ್ಲವೆಂದರೂ ಎರಡು ಲಕ್ಷಕ್ಕೂ ಅಧಿಕ ಫಾಂಟ್‌ಗಳಿರಬಹುದು ಎಂದು ಅಂದಾಜು ಮಾಡಲಾಗಿದೆ. ಈ ಎರಡು ಲಕ್ಷ ಫಾಂಟ್‌ಗಳ ಪೈಕಿ ಒಂದು ಇರುವಂತೆ ಮತ್ತೊಂದಿಲ್ಲ. ಎಲ್ಲವೂ ಭಿನ್ನ. ಫಾಂಟ್‌ಗಳ ಮೂಲಕವೇ ಒಂದು ಕಂಪನಿಯ ಹೆಸರನ್ನು ಗುರುತಿಸಬಹುದು. ನೋಕಿಯಾ ಎಂಬುದನ್ನು ಬರೆಯಲು ಯಾವ ಫಾಂಟ್ ಬಳಸಿದ್ದಾರೆ ಎಂಬುದನ್ನು ಗಮನಿಸಿ. ಅದನ್ನು ನೋಡುತ್ತಿದ್ದಂತೆ, ಮನಸ್ಸಿನಲ್ಲಿ ನೋಕಿಯಾ ಹೆಸರು ಕಣ್ಮುಂದೆ ಬಂದುಬಿಡುತ್ತದೆ. ಹಾಗೆಯೇ ಸ್ಯಾಮ್‌ಸಂಗ್. ನೋಕಿಯಾ ಪಾಂಟ್ ಇದ್ದಂತೆ, ಸ್ಯಾಮ್‌ಸಂಗ್ ಫಾಂಟ್ ಇಲ್ಲ. ಹೀಗಾಗಿ ಎಲ್ಲ ಸಂಸ್ಥೆ ಅಥವಾ ಕಂಪನಿಗಳು ತಮಗಾಗಿ ವಿಶೇಷವಾದ ಫಾಂಟ್‌ಗಳನ್ನು ಡಿಸೈನ್ ಮಾಡಿಕೊಳ್ಳುತ್ತವೆ. ಇದಕ್ಕಾಗಿ ಕೋಟ್ಯಂತರ ರುಪಾಯಿ ಸುರಿಯುತ್ತವೆ. ಇದು ಅವುಗಳನ್ನು ಗುರುತಿಸಲು ಸಹಾಯಕವಾಗುತ್ತವೆ. ಇಂಗ್ಲಿಷಿನಲ್ಲಿ ಮದುವೆಗೆ nuptial knot ಎಂದೂ ಕರೆಯುತ್ತಾರೆ. ಹೀಗಾಗಿ ಮದುವೆ ಆಮಂತ್ರಣ ಪತ್ರಿಕೆಯನ್ನು Nuptial Knot ಎಂಬ ಫಾಂಟ್ ಬಳಸಿಯೇ ಮುದ್ರಿಸುತ್ತಾರೆ. ಆ ಫಾಂಟ್ ಬಳಸಿ ಏನನ್ನೇ ಮುದ್ರಿಸಿದರೂ, ಅದರ ಬಗ್ಗೆ ಗೊತ್ತಿದ್ದವರು ತಕ್ಷಣ ಇದು ವಿವಾಹ ಆಮಂತ್ರಣ ಪತ್ರಿಕೆ ಎಂಬ ನಿರ್ಧಾರಕ್ಕೆ ಬರುತ್ತಾರೆ. Nuptial Knot ಬದಲು ಬೇರೆ ಫಾಂಟ್ ಬಳಸಿದರೆ, ಆಗ ಗೊಂದಲವಾಗುತ್ತದೆ. ಅನೇಕರಿಗೆ ಫಾಂಟ್ ಗಳ ನಡುವಿನ ವ್ಯತ್ಯಾಸ ಗೊತ್ತಿರುವುದಿಲ್ಲ. ಅಂಥವರು Nuptial Knot ಫಾಂಟನ್ನು ಶ್ರದ್ಧಾಂಜಲಿ ಸಭೆಯ ಆಮಂತ್ರಣಕ್ಕೂ ಬಳಸುವುದುಂಟು. ಆಪಲ್ ಕಂಪನಿಯ ಮುಖ್ಯಸ್ಥನಾಗಿದ್ದ ದಿವಂಗತ ಸ್ಟೀವ್ ಜಾಬ್ಸ್‌ಗೆ ಫಾಂಟ್‌ಗಳ ಬಗ್ಗೆ ವಿಶೇಷ ಆಸಕ್ತಿ ಇತ್ತು. ಆತ ಫಾಂಟ್‌ಗಳ ಬಗ್ಗೆ (Calligraphy) ವಿಶೇಷ ಅಧ್ಯಯನ ಮಾಡಿದ್ದ. ಅದನ್ನು ಒಂದು ಶಿಸ್ತಾಗಿ, ಅಧ್ಯಯನದ ವಿಷಯವಾಗಿ ಅಭ್ಯಸಿಸಿದ್ದ. ಅಲ್ಲಿಯ ತನಕ ಕಂಪ್ಯೂಟರುಗಳಲ್ಲಿ ಫಾಂಟ್ ಬಗ್ಗೆ ಯಾರೂ ವಿಶೇಷ ಗಮನಹರಿಸಿರಲಿಲ್ಲ. ಸ್ಟೀವ್ ಜಾಬ್ಸ್ ಅಭಿವೃದ್ಧಿಪಡಿಸಿದ ಮೆಕಿಂತೋಷ್ ಪರ್ಸನಲ್ ಕಂಪ್ಯೂಟರ್‌ನಲ್ಲಿ ಫಾಂಟುಗಳಿಗೆ ವಿಶೇಷ ಒತ್ತು ನೀಡಲಾಗಿತ್ತು. ಅದಾದ ನಂತರ ಕಂಪ್ಯೂಟರುಗಳು ಫಾಂಟ್‌ಗಳ ಆಯ್ಕೆ ಬಗ್ಗೆ ಗಮನಹರಿಸಲಾರಂಭಿಸಿದವು. Fonts can affect people's trust ಎಂಬ ಮಾತಿದೆ. ಗಹನವಾದ ವಿಷಯವನ್ನು, ಕಾಮಿಕ್ ಫಾಂಟ್ (ಕಾಮಿಕ್ ಪುಸ್ತಕಗಳಲ್ಲಿ ಉಪಯೋಗಿಸುತ್ತಾರಲ್ಲ, ಆ ಫಾಂಟ್) ಬಳಸಿದರೆ, ಅದರ ಗಾಂಭೀರ್ಯವೇ ಹೊರಟು ಹೋಗುತ್ತದೆ. ಅಮೆರಿಕದ ಸ್ವಾತಂತ್ರ್ಯ ಘೋಷಣೆ ಮತ್ತು ಸಂವಿಧಾನ ಪ್ರಕಟಣೆಗೆ, 1776ರಲ್ಲಿ ಬೆಂಜಾಮಿನ್ ಫ್ರಾಂಕ್ಲಿನ್ 'ಕ್ಯಾಸ್ಲೋನ್' ಎಂಬ ಫಾಂಟ್ ಬಳಸಿದ. ಇದು ಮೂಲತಃ ಬ್ರಿಟಿಷ್ ಲಿಪಿಕಾರ ವಿನ್ಯಾಸಗೊಳಿಸಿದ್ದು. ಅಮೆರಿಕದ ಸಿನೆಟ್‌ನಲ್ಲಿ ಇಂದಿಗೂ ಪ್ರಮುಖ ಘೋಷಣೆಗೆ ಬಳಸುವುದು ಈ ಫಾಂಟ್‌ನ್ನೇ. ಇಂದು ಜಗತ್ತಿನಾದ್ಯಂತ ವ್ಯಾಪಕವಾಗಿ ಬಳಸುವ ಫ್ಯೂಚುರಾ ಎಂಬ ಫಾಂಟ್‌ನ್ನು 1927ರಲ್ಲಿ ಪಾಲ್ ರೆನ್ನೆರ್ ಎಂಬಾತ ವಿನ್ಯಾಸಗೊಳಿಸಿದ. ಅದಾಗಿ 23 ವರ್ಷಗಳ ವರೆಗೆ ಆ ಫಾಂಟ್‌ನ್ನು ಯಾರೂ ಬಳಸುತ್ತಿರಲಿಲ್ಲ. ಆದರೆ ನಾಸಾ ಮೊದಲ ಬಾರಿಗೆ ಇದನ್ನು ಬಳಸಲು ನಿರ್ಧರಿಸಿತು. ಅಪೋಲೋ 11 ಗಗನನೌಕೆಯಲ್ಲಿ ಒಂದು ಅಲ್ಯೂಮಿನಿಯಂ ಸ್ಮರಣಿಕೆಯನ್ನು ಇಡಲಾಗಿತ್ತಲ್ಲ, ಅದರ ಮೇಲೆ ಕೆತ್ತಿದ ಅಕ್ಷರಗಳು 'ಫ್ಯೂಚುರಾ' ಫಾಂಟ್ ನಲ್ಲಿದ್ದವು. ಅದಾದ ಬಳಿಕ ಅದರ ಬಳಕೆ ವೃದ್ಧಿಸಿತು. 2008ರಲ್ಲಿ ಅಮೆರಿಕದ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿದ ಬರಾಕ್ ಒಬಾಮ ತಮ್ಮ ಪ್ರಚಾರ ಸಾಮಗ್ರಿ, ಪೋಸ್ಟರ್ ಗಳೆಲ್ಲವನ್ನೂ ವಿಶೇಷವಾಗಿ ವಿನ್ಯಾಸಗೊಳಿಸಿದ 'ಗೋಥಮ್' ಎಂಬ ಫಾಂಟ್ ಬಳಸಿದ್ದರು. ಅದಕ್ಕಾಗಿಯೇ ಅವರು ಇಬ್ಬರು ವಿನ್ಯಾಸಕಾರರ ಸಹಾಯ ಪಡೆದಿದ್ದರು. ಪ್ರತಿ ಫಾಂಟ್‌ಗೂ ತನ್ನದೇ ಆದ ಪರ್ಸನಾಲಿಟಿ ಎಂಬುದಿರುತ್ತದೆ. ಹೀಗಾಗಿ ಅವನ್ನು ಜಾಗರೂಕವಾಗಿ ಬಳಸಬೇಕು.

ವಿಮಾನದಿಂದಲೇ ದೇವರನ್ನು ತೋರಿಸಿದ ಆ ಪೈಲಟ್

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಆ ಪೈಲಟ್ ಹಾಗಿರಲಿಲ್ಲ!

ಕೆಲವು ಪೈಲಟ್‌ಗಳು ಮಾತೇ ಆಡುವುದಿಲ್ಲ. ತಮ್ಮ ಪಾಡಿಗೆ ತಾವಿದ್ದು ಬಿಡುತ್ತಾರೆ. ವಿಮಾನ ಟೇಕಾಫ್ ಆಗುತ್ತಿದ್ದಂತೆ, ತಮ್ಮದೇ ಹರಟೆಯಲ್ಲಿ ನಿರತರಾಗಿ ಬಿಡುತ್ತಾರೆ. ಕೆಲವು ಪೈಲಟ್‌ಗಳು ವಿಮಾನ ಎಷ್ಟು ಎತ್ತರದಲ್ಲಿ ಹಾರುತ್ತಿದೆ, ಹೊರಗಿನ ತಾಪಮಾನ ಎಷ್ಟಿದೆ, ಯಾವ ನಗರ, ದೇಶದ ಮೇಲೆ ಹಾರುತ್ತಿದ್ದೇವೆ... ಇತ್ಯಾದಿ ವಿವರಗಳನ್ನು ಪ್ರಯಾಣಿಕರಿಗೆ ವಿಮಾನದೊಳಗಿನ ಧ್ವನಿವರ್ಧಕಗಳ ಮೂಲಕ ತಿಳಿಸುತ್ತಾರೆ. ಇನ್ನು ಕೆಲವರು ಇದನ್ನೂ ಹೇಳುವುದಿಲ್ಲ. ಪ್ರಯಾಣಿಕರಂತೂ ಪೈಲಟ್‌ಗಳ ಮುಖ ಸಹ ನೋಡಿರುವುದಿಲ್ಲ. ಅವರ ಜತೆ ವ್ಯವಹರಿಸುವ ಪ್ರಸಂಗವೂ ಬರುವುದಿಲ್ಲ. ಹೀಗಿರುವಾಗ ಪ್ರಯಾಣಿಕರ ಜತೆ ಮಾತುಕತೆ ಏಕೆ ಎಂಬ ಭಾವನೆಯೂ ಇದ್ದಿರಬಹುದು.

10 ವರ್ಷದ ಹಿಂದೆ ಏಕದಿನ ಕ್ರಿಕೆಟ್ ಪಂದ್ಯದ ವಿಶ್ವಕಪ್ ಫೈನಲ್ ಪಂದ್ಯ ನಡೆಯುತ್ತಿತ್ತು. ಮೆಲ್ಬರ್ನ್ ಎಂಸಿಜಿ ಕ್ರೀಡಾಂಗಣದಲ್ಲಿ ಸುಮಾರು 93 ಸಾವಿರ ಪ್ರೇಕ್ಷಕರ ಸಮ್ಮುಖದಲ್ಲಿ ಆಸ್ಟ್ರೇಲಿಯಾ-ನ್ಯೂಜಿಲೆಂಡ್ ನಡುವೆ ಅಂತಿಮ ಪಂದ್ಯ. ಅದೇ ದಿನ ನಾನು ಇಥಿಯೋಪಿಯಾದ ಅಡಿಸ್ ಅಬಾಬಾದಿಂದ ಮುಂಬೈಗೆ ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಸುತ್ತಿದ್ದೆ. ಟಿಕೆಟ್ ಬುಕ್ ಮಾಡುವಾಗ ಆ ದಿನ ಫೈನಲ್ ಪಂದ್ಯವಿರುತ್ತದೆಂಬುದನ್ನು ಯೋಚಿಸಲೇ ಇಲ್ಲ. ಆದರೆ ಪ್ರಯಾಣದ ಹಿಂದಿನ ದಿನ ಈ ಸಂಗತಿ ಗೊತ್ತಾಯಿತು. ಆದರೆ ಪ್ರಯಾಣವನ್ನು ಮುಂದೂಡುವಂತಿರಲಿಲ್ಲ. ಹಾಗೆಂದು ಫೈನಲ್ ಪಂದ್ಯ ತಪ್ಪಿಸಿಕೊಳ್ಳಲೂ ಮನಸ್ಸಿರಲಿಲ್ಲ. ಒಲ್ಲದ ಮನಸ್ಸಿನಿಂದ ವಿಮಾನವನ್ನೇರಿದೆ. ವಿಮಾನವೇರುವ ಹೊತ್ತಿಗೆ ನ್ಯೂಜಿಲ್ಯಾಂಡ್ 45 ಓವರ್‌ಗಳಲ್ಲಿ 183 ರನ್‌ಗೆ ಆಲೌಟ್ ಆಗಿತ್ತು. ಪಂದ್ಯ ಏನಾಗಬಹುದೆಂಬ ಕುತೂಹಲ.

ವಿಮಾನ ಟೇಕಾಫ್ ಆಗಿ ಕೆಲ ಸಮಯದ ನಂತರ, ಪೈಲಟ್ ಅನೌನ್ಸ್ ಮಾಡಿದ- 'ನಿಮ್ಮಲ್ಲಿ ಅನೇಕರು ಕ್ರಿಕೆಟ್ ಅಭಿಮಾನಿಗಳಿದ್ದಿರಬಹುದು. ಅವರಿಗಾಗಿ ನಾನು ಪ್ರತಿ ಓವರ್‌ನ ಬೆಳವಣಿಗೆಗಳನ್ನು ನೀಡುತ್ತೇನೆ. ಕ್ರಿಕೆಟ್ ಮ್ಯಾಚ್ ನೋಡಲಾಗಲಿಲ್ಲ ಎಂಬ ಬೇಸರ ಬೇಡ. ನೀವೆಲ್ಲರೂ ಶಾಂತ ರೀತಿಯಿಂದ ಕೇಳಿ ಸಹಕರಿಸಿ.' ಇಡೀ ವಿಮಾನದಲ್ಲಿ ಇದ್ದವರೆಲ್ಲ 'ಹೋ' ಎಂದು ಕೂಗಿ ಸಂಭ್ರಮಿಸಿದರು. ಕ್ರಿಕೆಟ್ ಪಂದ್ಯ ತಪ್ಪಿಹೋಯಿತಲ್ಲ ಎಂದು ವಿಷಾದವಾಗಲಿಲ್ಲ. ಪೈಲಟ್ ಏರ್ ಟ್ರಾಫಿಕ್ ಕಂಟ್ರೋಲ್‌ನಿಂದ ಪ್ರತಿ ಓವರ್‌ನ ಮಾಹಿತಿ ಪಡೆದು, ಪ್ರಯಾಣಿಕರಿಗೆ ಒಪ್ಪಿಸುತ್ತಿದ್ದ. ಕೊನೆಕೊನೆಗೆ ಪ್ರತಿ ಬಾಲ್‌ನ ವಿವರ ನೀಡುತ್ತಾ ವೀಕ್ಷಕ ವಿವರಣಕಾರನಾದ. ಆ ಪಂದ್ಯದಲ್ಲಿ ಆಸ್ಟ್ರೇಲಿಯಾ 33 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 186 ರನ್ ಹೊಡೆದು ವಿಶ್ವಕಪ್ ಬಾಚಿಕೊಂಡಿತು! ವಿಮಾನದಲ್ಲಿ ಕೆಲವು ಆಸ್ಟ್ರೇಲಿಯನ್ ಪ್ರಜೆಗಳೂ ಇದ್ದರು. ಅವರೆಲ್ಲ ವಿಮಾನದಲ್ಲಿ ಕೂಗಿ, ಕಿರುಚಾಡಿ, ಸಂಭ್ರಮಿಸಿದರು. ನನಗೆ ಪೈಲಟ್‌ನ ಆಸಕ್ತಿ, ಪ್ರಯಾಣಿಕರಿಗೆ ಎಲ್ಲ ವಿವರ ನೀಡಬೇಕೆಂಬ ಕಳಕಳಿ ಬಹಳ ಖುಷಿ ನೀಡಿತು. ಆತ ಆ ಎಲ್ಲ ತಾಪತ್ರಯಗಳನ್ನು ತೆಗೆದುಕೊಳ್ಳಬೇಕಾದ ಆಗತ್ಯವಿರಲಿಲ್ಲ. ಆದರೆ ಪ್ರಯಾಣಿಕರ ಕ್ರಿಕೆಟ್ ಹಸಿವು ನೀಗಿಸಲು ಆತ ಅಂದು ಸಾಕಷ್ಟು ಮುತುವರ್ಜಿ ವಹಿಸಿದ್ದ. ಸಾಕಷ್ಟು ಪರಿಶ್ರಮವನ್ನೂ ಹಾಕಿದ್ದ. ವಿಮಾನ ಲ್ಯಾಂಡ್ ಆದ ಬಳಿಕ ಕಾಕ್‌ಪಿಟ್‌ನ ಹತ್ತಿರ ಹೋಗಿ ನಾನು ಪೈಲಟ್‌ನಿಗೆ ಧನ್ಯವಾದ ಹೇಳಿ ಬಂದೆ. ಆನಂತರ ಎಲ್ಲರೂ ಅವನ ಕೈಕುಲುಕಿ ಬಂದರು. ನನಗೆ ಅವನ ಬಗ್ಗೆ ಅತೀವ ಹೆಮ್ಮೆ ಹಾಗೂ ಅಭಿಮಾನ ಮೂಡಿತು.

ಇದೇ ರೀತಿ, ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟವಾಗುವ ದಿನ ನಾನು ದಿಲ್ಲಿಯಿಂದ ಬೆಂಗಳೂರಿಗೆ ಬರುತ್ತಿದ್ದೆ. ಅಂದೂ ಸಹ ಪೈಲಟ್, ಚುನಾವಣೆ ಫಲಿತಾಂಶವನ್ನು ಪ್ರತಿ ಹದಿನೈದು ನಿಮಿಷಕ್ಕೊಮ್ಮೆ ಹೇಳುತ್ತಿದ್ದ. ಯಾವ ಯಾವ ಕ್ಷೇತ್ರದಲ್ಲಿ ಯಾರು ಮುಂದಿದ್ದಾರೆ, ಪಕ್ಷಗಳ ಬಲಾಬಲ ವಿವರಗಳನ್ನೆಲ್ಲ ಒಪ್ಪಿಸುತ್ತಿದ್ದ. ಪ್ರಯಾಣಿಕರೆಲ್ಲ ತದೇಕಚಿತ್ತದಿಂದ ಕೇಳುತ್ತಿದ್ದರು.

ಇಂಥ ಪೈಲಟ್‌ಗಳು ಅಪರೂಪ. ತಮ್ಮ ವಿಮಾನದಲ್ಲಿ ಪ್ರಯಾಣಿಸುವ 'ಅತಿಥಿ'ಗಳಿಗೆ ಏನಾದರೂ ವಿಶೇಷ ಅನುಭವ ನೀಡಲು ಸದಾ ಕಾತರರಾಗಿರುತ್ತಾರೆ. ಇದರಿಂದ ಏರ್‌ಲೈನ್ಸ್ ಕಂಪನಿಯವರೇನು ಶಹಭಾಷ್ ಅನ್ನುವುದಿಲ್ಲ. ಪ್ರಯಾಣಿಕರು 'ಥ್ಯಾಂಕ್ಸ್' ಎಂದೂ ಹೇಳುವುದಿಲ್ಲ. ಕೆಲವರು ವಿಮಾನದಲ್ಲಿ ನಿದ್ದೆ ಮಾಡಲು ಬಿಡಲಿಲ್ಲ ಎಂದು ಗೊಣಗುವುದೂ ಉಂಟು. ಏನೇ ಆಗಲಿ, ಪೈಲಟ್‌ಗಳ ಈ 'ಅತಿ ಉತ್ಸಾಹ ಹಾಗೂ ಅತಿ ಕಾಳಜಿ'ಯನ್ನು ಮೆಚ್ಚಲೇಬೇಕು. ಪ್ರಯಾಣಿಕರ ಅಗತ್ಯ, ಆಸಕ್ತಿ ಅರಿತು ಹೆಚ್ಚು ಶ್ರಮವಹಿಸಿ ಅವರ ಕುತೂಹಲ ತಣಿಸುವ ಪ್ರಯತ್ನ ಮಾಡುತ್ತಾರೆ.

ಯುರೋಪಿನ ಕೆಲದೇಶಗಳಲ್ಲಿ ಪ್ರಯಾಣ ಮಾಡುವಾಗ, ಪೈಲಟ್ ಸುರಕ್ಷಿತವಾಗಿ, Smooth landing ಮಾಡಿದರೆ, ಪ್ರಯಾಣಿಕರು ಚಪ್ಪಾಳೆ ಹೊಡೆದು ಪ್ರಶಂಸೆ ವ್ಯಕ್ತಪಡಿಸುತ್ತಾರೆ. ಪ್ರಯಾಣಿಕರು ಮತ್ತು ಪೈಲಟ್‌ಗಳ ಮಧ್ಯೆ ಇಂಥದೊಂದು ಸುಮಧುರ ಕೊಡು-ಕೊಳ್ಳುವಿಕೆಯಿರಬೇಕು. ಆದರೆ ಬಹುತೇಕ ಸಂದರ್ಭಗಳಲ್ಲಿ ಇದು ನಡೆಯುವುದೇ ಇಲ್ಲ. ಪೈಲಟ್‌ಗಳೂ ಬಾಯಿಗೆ ಬೀಗ ಹಾಕಿ ಕುಳಿತಿರುತ್ತಾರೆ. ಸುರಕ್ಷಿತವಾಗಿ ಕರೆತಂದ ಪೈಲಟ್ ಹಾಗೂ ಗಗನಸಖಿಯರಿಗೆ ಧನ್ಯವಾದವನ್ನೂ ಸಲ್ಲಿಸುವುದಿಲ್ಲ.

ನಾನು ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ದಿಂದ ಕೀನ್ಯಾದ ರಾಜಧಾನಿ ನೈರೋಬಿಗೆ ಕೀನ್ಯಾ ಏರ್‌ವೇಸ್ ವಿಮಾನದಲ್ಲಿ ಬರುತ್ತಿದ್ದೆ. ಅದೇ ದಿನ ಬೆಳಗ್ಗೆ ದಕ್ಷಿಣ ಆಫ್ರಿಕಾದ ತುತ್ತತುದಿಯಲ್ಲಿರುವ ಕೇಪ್‌ಟೌನ್‌ನಿಂದ ಜೋಹಾನ್ಸ್‌ಬರ್ಗ್‌ಗೆ ಬಂದಿದ್ದೆ. ಎರಡು ಗಂಟೆ ವಿಮಾನ ಪ್ರಯಾಣದ ನಂತರ, ವಿಮಾನ ನಿಲ್ದಾಣದಲ್ಲಿ ಮೂರು ಗಂಟೆಗಳ ಕಾಲ ಕಾಯು ವಂತಾಗಿತ್ತು. ನಿದ್ದೆಯಿಲ್ಲದೇ ದಣಿದಿದ್ದರಿಂದ ಜೋಹಾನ್ಸ್‌ಬರ್ಗ್‌ನಲ್ಲಿ ವಿಮಾನವನ್ನೇರಿದವನೇ ಮಲಗಿಬಿಟ್ಟೆ. ಜೋರು ನಿದ್ದೆ ಕಣ್ಣಿನೊಳಗೆ ಇಳಿದಿತ್ತು.

ನಾನು ಗಾಢ ನಿದ್ದೆಯಲ್ಲಿದ್ದಾಗ ಪೈಲಟ್ ಏನೋ ಅನೌನ್ಸ್ ಮಾಡುತ್ತಿದ್ದ. ಆತ ಏನು ಹೇಳುತ್ತಿದ್ದಾನೆಂಬುದು ನಿದ್ದೆಗಣ್ಣಿನಲ್ಲಿದ್ದ ನನಗೆ ಸ್ಪಷ್ಟವಾಗಲಿಲ್ಲ. ಆದರೆ ಆತ ಹೇಳಿದ ಒಂದು ಪದ ಮಾತ್ರ ಸ್ಪಷ್ಟವಾಗಿ ಕೇಳಿಸಿತು.

ಮೌಂಟ್ ಕಿಲಿಮಂಜಾರೋ!

ದಡಕ್ಕನೆ ಎದ್ದು ಕುಳಿತೆ. ಪಕ್ಕದಲ್ಲಿದ್ದ ಪ್ರಯಾಣಿಕನನ್ನು ಕೇಳಿದೆ. ಆತನಿಗೂ ಸ್ಪಷ್ಟವಾಗಿ ಪೈಲಟ್ ಏನು ಹೇಳಿದ್ದಾನೆಂಬುದು ತಿಳಿದಿರಲಿಲ್ಲ. ಗಗನಸಖಿಯನ್ನು ಕೇಳಿದೆ. ಆಕೆ 'ಒನ್ ಮಿನಿಟ್' ಎಂದು ಹೇಳಿ ಹೋದವಳು ಬರಲೇ ಇಲ್ಲ. ಅಷ್ಟರೊಳಗೆ ಪೈಲಟ್ ಪುನಃ ಅನೌನ್ಸ್ ಮಾಡಿದ -'ಈಗ ನಾವು ಟಾಂಜೇನಿಯಾ ದೇಶದ ಮೇಲೆ ಹಾರುತ್ತಿದ್ದೇವೆ. ಇಲ್ಲಿ ಜಗತ್ಪ್ರಸಿದ್ಧವಾದ ಮೌಂಟ್ ಕಿಲಿಮಂಜಾರೋ ಎಂಬ ಪರ್ವತವಿದೆ. ಸಾಮಾನ್ಯವಾಗಿ ಈ ಪರ್ವತ ಮೋಡದಿಂದ ಮುಚ್ಚಿರುತ್ತದೆ. ನಿಮ್ಮ ಅದೃಷ್ಟ ಚೆನ್ನಾಗಿದ್ದರೆ, ಕಾಣಲೂಬಹುದು. ಆ ಪರ್ವತ ಕಾಣಲು ಇನ್ನೂ ಇಪ್ಪತ್ತು ನಿಮಿಷ ಪ್ರಯಾಣಿಸಬೇಕಾಗಬಹುದು. ನಾನು ಈ ಮಾರ್ಗದಲ್ಲಿ ಹಲವು ವರ್ಷಗಳಿಂದ ಪ್ರಯಾಣಿಸಿದ್ದೇ. ನನಗೆ ಹತ್ತು-ಹನ್ನೆರಡು ಸಲ ಮಾತ್ರ ಗೋಚರವಾಗಿತ್ತು. ಉಳಿದ ಸಂದರ್ಭದಲ್ಲಿ ಈ ಪರ್ವತ ಮೋಡದಿಂದ ಮುಚ್ಚಿರುತ್ತದೆ. ಇದು ನಿಮ್ಮ ಅದೃಷ್ಟ ಪರೀಕ್ಷೆಯೂ ಹೌದು. ಯಾವುದಕ್ಕೂ ಎಚ್ಚರವಾಗಿರಿ.'

ವಾವ್ ! ಮೌಂಟ್ ಕಿಲಿಮಂಜಾರೋ !!

ನನಗೆ ನಂಬಲು ಸಾಧ್ಯವೇ ಆಗಲಿಲ್ಲ, ಕಾರಣ ಅದನ್ನು ನೋಡಲೇಬೇಕೆಂಬುದು ನನ್ನ ಜೀವಮಾನದ ಕನಸು. ಹೈಸ್ಕೂಲಿನಲ್ಲಿ ಭೂಗೋಳ ಓದುವಾಗ, ಆ ಪರ್ವತದ ಬಗ್ಗೆ ಮೊದಲ ಬಾರಿಗೆ ಕೇಳಿದ್ದೆ. ನಮಗೆ ಹಬ್ಬು ಮಾಸ್ತರೆಂಬುವವರು ಇದ್ದರು. ಅವರು ಬಹಳ ಸ್ವಾರಸ್ಯವಾಗಿ ಆ ಪರ್ವತದ ಬಗ್ಗೆ ಹೇಳಿದ್ದರು. ಇದು ಸುಮಾರು ಮೂವತ್ತೇಳು ವರ್ಷಗಳ ಹಿಂದೆ. ಅಂದಿನಿಂದಲೂ ಕಿಲಿಮಂಜಾರೋ ನನ್ನ ಮನಸ್ಸಿನಲ್ಲಿ ಅಚ್ಚರಿಯ ಪರ್ವತವಾಗಿ ಬೆಳೆಯುತ್ತಲೇ ಇದೆ. ಕೆಲವು ವರ್ಷಗಳ ಹಿಂದೆ, ಟಾಂಜೇನಿಯಾಕ್ಕೆ ಹೋಗಿದ್ದಾಗಲೂ ಆ ಪರ್ವತದ ಕಡೆಗೆ ಹೋಗಲು ಆಗಿರಲಿಲ್ಲ.

ಒಮ್ಮೆ 'ಡಿಸ್ಕವರಿ' ಚಾನೆಲ್‌ನಲ್ಲಿ ಐದಾರು ವರ್ಷಗಳ ಹಿಂದೆ, ಮೌಂಟ್ ಕಿಲಿಮಂಜಾರೋ ಬಗ್ಗೆ ಒಂದು ಅಪರೂಪದ ಸಾಕ್ಷ್ಯಚಿತ್ರ ನೋಡಿದ್ದೆ. ಅದು ನನ್ನ ಕೌತುಕದ ಗೊಣವೆಗೆ ಬೆಂಕಿ ಹಚ್ಚಿದಂತಾಗಿತ್ತು. ಕಿಲಿಮಂಜಾರೋ ಪರ್ವತದ ಬೆರಗುಗಳನ್ನು ಅನಾವರಣಗೊಳಿಸಿತ್ತು. ಅದಾದ ಬಳಿಕ ನಾನು ಕಿಲಿಮಂಜಾರೋ ಕುರಿತ ಪುಸ್ತಕ, ಸಿಡಿ, ಸಾಕ್ಷ್ಯಚಿತ್ರಗಳಿಗಾಗಿ ತಡಕಾಡಲಾರಂಭಿಸಿದೆ. ಸೆರೆಬ್ರಲ್ ಪಾಲ್ಸಿಗೆ ತುತ್ತಾಗಿ, ಕಿಲಿಮಂಜಾರೋವನ್ನು ಏರಿದ ಬೋನ್ನರ್ ಪಡ್ಡೋಕ್ ಎಂಬಾತ ಬರೆದ One more step ಎಂಬ ಕೃತಿ ಓದಿದೆ. ಆ ಲೇಖಕ ಪರ್ವತದ ಬಗ್ಗೆ ಹೊಸ ಚಿತ್ರಣ ಕಟ್ಟಿಕೊಟ್ಟಿದ್ದ.

ಪಡ್ಡೋಕ್ ಮೂಲತಃ ಪರ್ವತಾರೋಹಿ ಅಲ್ಲ. ಕಿಲಿಮಂಜಾರೋ ಪರ್ವತವನ್ನು ಏರುತ್ತೇನೆಂದು ಹೇಳಿದಾಗ, ಯಾವ ಕಾರಣಕ್ಕೂ ಅಂಥ ದುಸ್ಸಾಹಸಕ್ಕೆ ಮುಂದಾಗಬೇಡ ಎಂದು ಅವನ ವೈದ್ಯರು ಬುದ್ಧಿಮಾತು ಹೇಳಿದರು. ಆದರೆ ಆತ ಕೇಳಲಿಲ್ಲ. ತನ್ನಲ್ಲಿರುವ ನ್ಯೂನತೆಗಳನ್ನು ಆತನಿಗೆ ಗೆಲ್ಲಲೇಬೇಕಿತ್ತು. ಹೀಗಾಗಿ ಆತ ಹರಸಾಹಸಕ್ಕೆ ಮುಂದಾದ. 2011 ರಲ್ಲಿ ತನ್ನ ಸಾಹಸಗಾಥೆಯನ್ನು ಚಿತ್ರಿಸುವ Beyond Limits ಎಂಬ ಸಾಕ್ಷ್ಯಚಿತ್ರವನ್ನು ಬಿಡುಗಡೆ ಮಾಡಿದ. ನಾನು ಇದನ್ನು ನೋಡಿದ್ದೆ.

ಬ್ರಿಟನ್ನಿನ ಆರನ್ ಫಿಪ್ಸ್ ಎಂಬ ಎರಡೂ ಕಾಲಿಲ್ಲದ ಪ್ಯಾರಾ ಒಲಿಂಪಿಕ್ ಅಥ್ಲೀಟ್ ವೀಲ್‌ಚೇರ್‌ನಲ್ಲಿ ಕಿಲಿಮಂಜಾರೋ ಪರ್ವತವನ್ನೇರಿದಾಗ ನನಗೆ ರೋಮಾಂಚನವಾಗಿತ್ತು. ಈ ಸಾಹಸಕ್ಕಾಗಿ ಆತ ಯಾರ ಸಹಾಯವನ್ನೂ ಪಡೆದಿರಲಿಲ್ಲ. 33 ವರ್ಷದ, ಎರಡು ಮಕ್ಕಳ ತಂದೆಯಾದ ಫಿಪ್ಸ್ ಈ ಸಾಹಸವನ್ನು ಮಾಡಿದಾಗ, ಬ್ರಿಟನ್ನಿನ ರಾಣಿ ಅವನ ಮನೆಗೆ ಹೋಗಿ ಅಭಿನಂದನೆ ಸಲ್ಲಿಸಿ ಬಂದಳು. ಎಂಟು ದಿನಗಳ ಕಾಲ ಆತ ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ, ತನ್ನೆಲ್ಲ ದೌರ್ಬಲ್ಯಗಳನ್ನು ಮೀರಿ ಆತ ಆ ಅಗಾಧ ಸಾಧನೆ ಮೆರೆದಿದ್ದ.

'ಆಫ್ರಿಕಾದ ಛಾವಣಿ' (Roof Of Africa) ಎಂದು ಕರೆಯಿಸಿಕೊಳ್ಳುವ ಈ ಪರ್ವತವನ್ನು ಅದಾದ ಬಳಿಕ ಅನೇಕ ವಿಕಲಚೇತನರು ಏರಿದ್ದಾರೆ. 'ಕಿಲಿಮಂಜಾರೋ : ಟು ದಿ ರೂಫ್ ಆಫ್ ಆಫ್ರಿಕಾ' ಮತ್ತು 'ದಿ ಸ್ನೋ ಆಫ್ ಕಿಲಿಮಂಜಾರೋ' ಎಂಬ ಎರಡು ಸಿನಿಮಾಗಳು ಈ ಪರ್ವತದ ಬಗ್ಗೆ ಇರುವ ಕಲ್ಪನೆಗಳನ್ನು ಮತ್ತಷ್ಟು ಹಿರಿದುಗೊಳಿಸಿದ್ದು ಸುಳ್ಳಲ್ಲ. ಈ ಪರ್ವತದ ಬಗ್ಗೆ ಸಾವಿರಾರು ಪುಸ್ತಕಗಳು ಪ್ರಕಟವಾಗಿವೆ. ನಮ್ಮ ಕನ್ನಡದ ಕತೆಗಾರ ವಸುಧೇಂದ್ರ ಸಹ ಕಿಲಿಮಂಜಾರೋ ಏರಿ ಬಂದಿದ್ದಾರೆ. ಪ್ರಶಾಂತ್ ಎಂಬ ಕನ್ನಡಿಗರೊಬ್ಬರು ಸಹ ಈ ಪರ್ವತವನ್ನೇರಿ 'ಕಿಲಿಮಂಜಾರೋ' ಎಂಬ ಪುಸ್ತಕ ಬರೆದಿದ್ದಾರೆ. ಯಾರ್ಯಾರು ಇದರ ನೆತ್ತಿ ಮೇಲೆ ಕಾಲನ್ನೂರಿ ಬಂದಿದ್ದಾರೋ ಅವರೆಲ್ಲ ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ.

ಕಿಲಿಮಂಜಾರೋ ಬಗ್ಗೆ ಯಾವ ಪುಸ್ತಕವೂ ಒಂದೇ ಥರ ಇಲ್ಲವಂತೆ. ಅಂದರೆ ಈ ಪರ್ವತ ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣಿಸುತ್ತದೆ. ಅಲ್ಲದೇ ಇದು ಎಲ್ಲ ದಿನ ಒಂದೇ ರೀತಿ ಕಾಣಿಸುವುದಿಲ್ಲ. ಒಂದೊಂದು ದಿನ ಒಂದೊಂದು ರೀತಿ ಕಾಣಿಸುತ್ತದೆ. ಅದರ ನೋಟ ಕ್ಷಣ ಕ್ಷಣವೂ ಬದಲಾಗುತ್ತದೆ. ದಿನದಲ್ಲಿ ಸೂರ್ಯನ ಪಥ ಬದಲಾದಂತೆ ಪರ್ವತದ ಚಮಕ್ ಕೂಡ ಬದಲಾಗುತ್ತದೆ.

ಆಫ್ರಿಕಾದಲ್ಲಿ ಈ ಪರ್ವತದಷ್ಟು ಎತ್ತರದ ಮತ್ತೊಂದು ಪರ್ವತವಿಲ್ಲ. ದೂರದಿಂದ ನೋಡಲು ಅಷ್ಟು ಎತ್ತರದ ಪರ್ವತ ಎಂದು ಅನಿಸುವುದಿಲ್ಲ. ಆದರೆ ಕಿಲಿಮಂಜಾರೋ 4900 ಮೀಟರ್ ಅಥವಾ ಹತ್ತಿರ ಹತ್ತಿರ ಐದು ಕಿಮಿ ಎತ್ತರದ ಪರ್ವತ. ಸಮುದ್ರ ಮಟ್ಟದಿಂದ 5895 ಮೀಟರ್ ಎತ್ತರದಲ್ಲಿದೆ. 1889 ರಲ್ಲೇ ಈ ಪರ್ವತದ ತಲೆಯ ಮೇಲೆ ಇಬ್ಬರು ಪರ್ವತಾರೋಹಿಗಳು ಹೋಗಿ ನಿಂತು ಬಂದರು. ಕಿಲಿಮಂಜಾರೋ ಪರ್ವತ ಒಂದು ಅದ್ಭುತ ಬಯಲು ವಿಶ್ವವಿದ್ಯಾಲಯವಿದ್ದಂತೆ. ಅದೊಂದು ಅಪೂರ್ವ, ವಿಸ್ಮಯ ಲೋಕ. ಅಲ್ಲಿ ಇಲ್ಲದ ಬೆರಗುಗಳಿಲ್ಲ. ಎರಡೂವರೆ ಲಕ್ಷ ಎಕರೆ ವಿಸ್ತಾರ ಪ್ರದೇಶದಲ್ಲಿ ಹರಡಿರುವ ಇಲ್ಲಿನ ಕಾಡಿನಲ್ಲಿ ಸಾವಿರಾರು ಬಗೆಯ ಸಸ್ಯ ಪ್ರಭೇದಗಳಿವೆ. ಪರ್ವತದ ತಪ್ಪಲಿನಲ್ಲಿ ಅಪರೂಪದ ಕಾಫಿ ತೋಟವಿದೆ. ಕಿಲಿಮಂಜಾರೋ ಎಂಬ ಬ್ರಾಂಡ್ ಹೆಸರಿನಲ್ಲಿ ಇದು ಲೋಕ ಪ್ರಸಿದ್ಧವಾಗಿದೆ.

ಪರ್ವತಾರೋಹಿಗಳಿಗೆ ಅಲ್ಲಲ್ಲಿ ಆನೆ, ಜೀಬ್ರಾ, ಕಾಡುಕೋಣ, ಕಾಡೆಮ್ಮೆ, ಮುಂಗುಸಿ ಮುಂತಾದ ಪ್ರಾಣಿಗಳ ದರ್ಶನವಾಗುತ್ತವೆ. ಇಲ್ಲಿನ ವಾತಾವರಣ ಪರ್ವತಾರೋಹಿಗಳಿಗೆ ಉಲ್ಲಾಸದಾಯಕವಾಗಿಲ್ಲ. ಹವಾಮಾನ ಕಾಲ ಕಾಲಕ್ಕೆ ಬದಲಾಗುತ್ತಿರುತ್ತದೆ. ಅಲ್ಲದೇ ಪರ್ವತವನ್ನೇರುವಾಗ ಐದು ಬೇರೆ ಬೇರೆ ಹವಾಮಾನ ವಲಯಗಳನ್ನು ದಾಟಿ ಹೋಗಬೇಕಾಗುತ್ತದೆ. ಪರ್ವತದ ತುತ್ತ ತುದಿಯ ಮೇಲೆ ಯಾವತ್ತೂ ಮೈ ಕೊರೆಯುವ ಚಳಿ. ಮೈನಸ್ ಏಳರಿಂದ ಹತ್ತು ಡಿಗ್ರಿ!

ಪ್ರತಿ ವರ್ಷ ಈ ಪರ್ವತದ ಹಣೆಯನ್ನು ಸವರಿ, ನೆತ್ತಿಯನ್ನು ಗುದ್ದಲು ಮೂವತ್ತೈದರಿಂದ ನಲವತ್ತು ಸಾವಿರ ಜನ ಹೋಗುತ್ತಾರೆ. ಆ ಪೈಕಿ ಏನಿಲ್ಲವೆಂದರೂ ಹತ್ತು ಸಾವಿರ ಮಂದಿ ಕೈ ಚೆಲ್ಲುತ್ತಾರೆ. ಆರರಿಂದ ಎಂಟು ದಿನಗಳ ಕಾಲ ಹಿಡಿಯುವ ಈ ಪರ್ವತಾರೋಹಣದಲ್ಲಿ ಪ್ರತಿವರ್ಷ ಮೂವತ್ತು ನಲವತ್ತು ಮಂದಿ ಪ್ರಾಣ ಕಳೆದುಕೊಳ್ಳುತ್ತಾರೆ. ಆದರೂ ಇದನ್ನು Every Man's Mount Everest ಎಂದು ಕರೆಯುತ್ತಾರೆ. ಸ್ವಲ್ಪ ಶ್ರಮ ಪಟ್ಟರೆ ಯಾರು ಬೇಕಾದರೂ ಇದನ್ನು ಏರಬಹುದು. ಹಾಗಂತ ಸುಲಿದ ಬಾಳೆಹಣ್ಣಲ್ಲ, ಬಹಳ ಜನ ಸಾಯುವುದು mountain sickness ನಿಂದ.

ಪರ್ವತದ ತುತ್ತ ತುದಿಯನ್ನು ಏರಿದವರೆಲ್ಲ ಅಲ್ಲಿ ಇಟ್ಟಿರುವ ಮರದ ಪೆಟ್ಟಿಗೆಯಲ್ಲಿ ಇಟ್ಟಿರುವ ಪುಸ್ತಕದಲ್ಲಿ ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ಬರೆದಿಟ್ಟು ಬರುವುದು ವಾಡಿಕೆ. ಅದು ನೀವು ಪರ್ವತವೇರಿರುವುದಕ್ಕೆ ದಾಖಲೆಯೂ ಹೌದು. ಮೌಂಟ್ ಎವರೆಸ್ಟ್ ಏರುವುದಕ್ಕೆ ಮುನ್ನ ಕಿಲಿಮಂಜಾರೋ ಏರಿದ್ದೀಯಾ ಎಂದು ಕೇಳುವುದುಂಟು. ಅಂದರೆ ಕಿಲಿಮಂಜಾರೋ ಏರಿದರೆ, ಎವರೆಸ್ಟ್ ಏರಲು ಅರ್ಹತೆ ಪಡೆದ ಹಾಗೆ.

ಪೈಲಟ್ ಕಿಲಿಮಂಜಾರೋ ಬಗ್ಗೆ ಅನೌನ್ಸ್ ಮಾಡಿದಾಗ ನನ್ನ ಮನಸ್ಸಿನಲ್ಲಿ ಇಷ್ಟೆಲ್ಲಾ ಸಂಗತಿಗಳು ಹಾದು ಹೋದವು. ಅಂಥ ಅಪರೂಪದ ಪರ್ವತವನ್ನು ಮೇಲಿಂದ ಖುದ್ದು ನೋಡಲು ನಾನು ಕ್ಷಣಗಳನ್ನು ಎಣಿಸುತ್ತಿದ್ದೆ. 'ಇನ್ನು ಎರಡು -ಮೂರು ನಿಮಿಷಗಳಲ್ಲಿ ನಾವು ಮೌಂಟ್ ಕಿಲಿಮಂಜಾರೋ ಮೇಲೆ ಹಾರಲಿದ್ದೇವೆ. ಆದರೆ ಪರ್ವತದ ತುತ್ತ ತುದಿ ಕಾಣಿಸುವುದೋ ಇಲ್ಲವೋ ಗೊತ್ತಿಲ್ಲ, ಯಾವುದಕ್ಕೂ ರೆಡಿ ಆಗಿರಿ. ವಿಮಾನದ ಎಡ ಭಾಗದಲ್ಲಿ ಕುಳಿತಿರುವವರು ತಮ್ಮ ಮೊಬೈಲ್ ಮತ್ತು ಕ್ಯಾಮೆರಾಗಳನ್ನು ತೆಗೆದಿಟ್ಟುಕೊಂಡಿರಿ' ಎಂದು ಪೈಲಟ್ ಅನೌನ್ಸ್ ಮಾಡಿದ.

ನಾನು ಬಿರಬಿರನೆ ನನ್ನ ಮೊಬೈಲ್ ಮತ್ತು ಕ್ಯಾಮೆರಾಗಳನ್ನು ಹೊರತೆಗೆದೆ. ಅದೃಷ್ಟವಶಾತ್ ನಾನು ವಿಮಾನದ ಎಡ ಭಾಗದಲ್ಲಿಯೇ ಕುಳಿತಿದ್ದೆ.

'You are very very lucky ... ಈಗ ಕೆಳಗೆ ನೋಡಿ... ಅದೋ ಮೌಂಟ್ ಕಿಲಿಮಂಜಾರೋ !' ಎಂದ ಪೈಲಟ್.

ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಒಂದು ವೇಳೆ ದೇವರು ಬಂದು ಎದುರು ನಿಂತರೆ ಏನಾಗಬಹುದೋ ಅಂಥ ಭಾವ! ಮೈಯಲ್ಲೆಲ್ಲಾ ಪುಳಕ, ರೋಮಾಂಚನ. ನನ್ನ ಜೀವನದಲ್ಲಿ ಅಂಥದ್ದೊಂದು ಕ್ಷಣಕ್ಕೆ ಎದುರಾಗುತ್ತೇನೆ ಎಂದು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಖುದ್ದಾಗಿ ಕಿಲಿಮಂಜಾರೋ ಏರಿದವರಿಗೂ ಪರ್ವತ ಹಾಗೆ ಕಾಣಿಸಲಿಕ್ಕಿಲ್ಲ. ಅಂಥ ಅದ್ಭುತ ದೃಶ್ಯಗಳು ನನ್ನ ಮುಂದೆ ತೆರೆದುಕೊಂಡಿದ್ದವು. ಕಣ್ಣು ಹಾಯುವ ತನಕ ಎಲ್ಲಿ ನೋಡಿದರೂ ಬೆಳ್ಳಿ ಮೋಡಗಳ ಹಾಸು. ಮಧ್ಯದಲ್ಲಿ ಕಪ್ಪು ಪರ್ವತ. ಅದರ ಮಧ್ಯದಲ್ಲಿ ಆಳವಾದ ಬಾವಿ. ಅಲ್ಲಲ್ಲಿ ಬಿದ್ದ ಹಿಮ ರಾಶಿ. ತಟ್ಟನೆ ನೋಡಿದರೆ ಥೇಟು ಈಶ್ವರ ಲಿಂಗ!

ಅದಕ್ಕೂ ಮೊದಲು ಪೈಲಟ್ ಏರ್ ಟ್ರಾಫಿಕ್ ಕಂಟ್ರೋಲ್ ಅನುಮತಿ ಪಡೆದಿದ್ದ. ಪರ್ವತದ ಸುತ್ತ ಒಂದು ಸುತ್ತು ಹೊಡೆಯುವುದಾಗಿ ಹೇಳಿದ. ಅದೇ ಪ್ರಕಾರ ಆ 'ಈಶ್ವರ ಲಿಂಗ'ಕ್ಕೆ ಒಂದು ಪ್ರದಕ್ಷಿಣೆ ಹಾಕಿದ. ಹೀಗೆ ಸುತ್ತು ಹಾಕುವಾಗ ಇಡೀ ವಿಮಾನವನ್ನು ಮತ್ತಷ್ಟು ವಾಲಿಸಿದಾಗ ಪರ್ವತ ಇನ್ನಷ್ಟು ಸ್ಪಷ್ಟವಾಗಿ ಗೋಚರಿಸಿತು. ಹಾಲು ಮೋಡಗಳ ಮಧ್ಯೆ ಸೂರ್ಯನ ಕಿರಣಗಳು ಸರಿಯಾಗಿ ಪರ್ವತದ ಶೃಂಗದ ಮೇಲೆ ಬಿದ್ದು ಅದರ ತುತ್ತ ತುದಿ ಇನ್ನಷ್ಟು ಕಪ್ಪಾಗಿ ಎದ್ದು ಕಾಣುತ್ತಿತ್ತು.

ವಿಮಾನದಲ್ಲಿದ್ದ ಪ್ರಯಾಣಿಕರಲ್ಲಿ ಉತ್ಸಾಹವೋ ಉತ್ಸಾಹ. ಮೂರ್ನಾಲ್ಕು ನಿಮಿಷಗಳಲ್ಲಿ ಒಂದು ಕನಸಿನಂತೆ ಎಲ್ಲವೂ ಪಟಪಟನೆ ನಡೆದುಹೋಯಿತು. ನನ್ನ ಪಾಲಿಗೆ ಅದು ಜೀವಮಾನದ ಆಸೆಯನ್ನು ತಣಿಸಿದ ಕ್ಷಣ. ಕಿಲಿಮಂಜಾರೋ ಏರಿದ್ದರೆ ನನಗೆ ಅಷ್ಟು ಸಂತಸವಾಗುತ್ತಿತ್ತೋ ಇಲ್ಲವೋ. ಆದರೆ ನಾನು ಅದನ್ನು ಏರಿದವರಿಗಿಂತ ಒಂದು ಹಿಡಿ ಎತ್ತರದಲ್ಲಿದ್ದೆ.

ಮನಸ್ಸಿನಲ್ಲಿ ಏನೋ ಧನ್ಯತೆಯ ಭಾವ ಇಳಿದಂತಾಗಿತ್ತು.

ಬೆಂಕಿಗೆ ಹಿಂದು ಮುಸ್ಲಿಂ ವ್ಯತ್ಯಾಸ ತಿಳಿಯದು!

ಸಂಗತ
ಡಾ.ವಿಜಯ್ ದರಡಾ
vveditoped@gmail.com

ನನಗೆ ನಿಜಕ್ಕೂ ಆಘಾತವಾಗಿದೆ. ಬಹಳ ಬೇಸರ ಕೂಡ ಆಗಿದೆ. ಮಹಾರಾಷ್ಟ್ರದ ಎರಡನೇ ರಾಜಧಾನಿ, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ತವರು ಹಾಗೂ ನನ್ನ ಪ್ರೀತಿಯ ನಗರ ಏಕೆ ದಂಗೆಯ ಬೆಂಕಿಯಲ್ಲಿ ಉರಿದುಹೋಗಿದೆ? ನಾಗ್ಪುರದ ಮಹಲ್ ಪ್ರದೇಶದಲ್ಲಿ 1923, 1927 ಹಾಗೂ 1991ರಲ್ಲೂ ಗಲಭೆಗಳು ನಡೆದಿದ್ದವು. ಆಗಲೂ ಅಪಾರ ಪ್ರಮಾಣದ ಆಸ್ತಿಪಾಸ್ತಿ ನಷ್ಟವುಂಟಾಗಿತ್ತು. ಆದರೆ ನಂತರದ ವರ್ಷಗಳಲ್ಲಿ ಒಂದಷ್ಟು ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ನಾಗ್ಪುರ ಬಹುತೇಕ ಶಾಂತವಾಗಿಯೇ ಇತ್ತು. ಹಾಗಿದ್ದರೆ ಈಗೇಕೆ ಇದ್ದಕ್ಕಿದ್ದಂತೆ ಮತ್ತೆ ಬೆಂಕಿ ಹೊತ್ತಿಕೊಂಡಿತು?

ನಾಗ್ಪುರವನ್ನು ಕಟ್ಟಿದ್ದು ಗೊಂಡ ರಾಜಮನೆತನದ ಭಕ್ತ್ ಬುಲಂದ್ ಶಾ ಮತ್ತು ಭೋಂಸ್ಲೆ ಮನೆತನದ ರಾಜರು. ಅವರು ಎಷ್ಟು ಚೆನ್ನಾಗಿ ಈ ನಗರವನ್ನು ನಿರ್ಮಾಣ ಮಾಡಿದ್ದಾರೆಂದರೆ, ಜನರು ಅನಾದಿ ಕಾಲದಿಂದಲೂ ಇಲ್ಲಿ ಧರ್ಮ ಸಾಮರಸ್ಯದಿಂದ ಶಾಂತ ಜೀವನ ನಡೆಸುತ್ತಿದ್ದರು. ಹಿಂದುಗಳ ರಾಮನವಮಿಯ ಮೆರವಣಿಗೆಯ ವೇಳೆ ಇಲ್ಲಿ ಮುಸ್ಲಿಮರು ಮತ್ತು ಸಿಖ್ಖರು ಸೇವೆ ಸಲ್ಲಿಸಿ, ಶರಬತ್ ವಿತರಿಸುತ್ತಾರೆ. ಮುಸ್ಲಿಮರ ರಂಜಾನ್ ಮತ್ತು ಈದ್ ಆಚರಣೆಯಲ್ಲಿ ಹಿಂದುಗಳೂ ಸಕ್ರಿಯವಾಗಿ ಪಾಲ್ಗೊಂಡು, ಸಂಭ್ರಮಾಚರಣೆಗೆ ಕೈಜೋಡಿಸುತ್ತಾರೆ. ಹೀಗೆ ನಾಗ್ಪುರದಲ್ಲಿ ಸಾಮಾನ್ಯವಾಗಿ ಯಾವುದೇ ಧರ್ಮದ ಆಚರಣೆಯಲ್ಲಿ ಇನ್ನುಳಿದ ಧರ್ಮೀಯರು ಭಾಗವಹಿಸಿ ಸಾಮಾಜಿಕ ಸಾಮರಸ್ಯವನ್ನು ಪ್ರದರ್ಶಿಸುತ್ತಾರೆ. ತಾಜುದ್ದೀನ್ ಬಾಬಾನ ನಗರ ಇರುವುದೇ ಹೀಗೆ. ಸಬ್ ಕಾ ಮಾಲಿಕ್ ಏಕ್ (ದೇವರು ಒಬ್ಬನೇ) ಎಂದು ಬೋಧಿಸಿದ ಸಾಯಿಬಾಬಾನ ಭಕ್ತರು ಇರುವ ನಗರ ಇರುವುದೇ ಹೀಗೆ. ಮಹಾವೀರ ಜಯಂತಿಯಂದು ಇಲ್ಲಿ ಜೈನ ಧರ್ಮೀಯರು ದೊಡ್ಡ ಮೆರವಣಿಗೆ ಆಯೋಜಿಸುತ್ತಾರೆ. ಅವರನ್ನು ರಸ್ತೆಯ ಬದಿಗಳಲ್ಲಿ ನಿಂತು ಸ್ವಾಗತಿಸಲು ಇನ್ನುಳಿದ ಎಲ್ಲಾ ಧರ್ಮೀಯರೂ ಬರುತ್ತಾರೆ. ಹೀಗಾಗಿ ನಾಗ್ಪುರ ನಗರ ಯಾವಾಗಲೂ ಇನ್ನೊಬ್ಬರ ನಂಬಿಕೆಗಳನ್ನು ಗೌರವಿಸುವ, ಎಲ್ಲಾ ನಂಬಿಕೆಗಳ ಜನರಿಗೂ ಆತಿಥ್ಯ ನೀಡುವ, ದ್ವೇಷ ಮತ್ತು ವೈಷಮ್ಯಕ್ಕೆ ಅವಕಾಶವಿಲ್ಲದಂತೆ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವ ಸೌಹಾರ್ದ ನಗರವೆಂದೇ ಪ್ರಸಿದ್ಧಿ ಪಡೆದಿದೆ.

ಇಂತಹ ನಗರದಲ್ಲಿ ಹಿಂಸಾಚಾರ ಭುಗಿಲೆದ್ದಿರುವುದು ಕೆಲ ವ್ಯಕ್ತಿಗಳ ಷಡ್ಯಂತ್ರದ ಪರಿಣಾಮ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಅವರು ಸುಳ್ಳು ವದಂತಿಗಳನ್ನು ಹರಡಿದ್ದರು. ಪೊಲೀಸರು ಪ್ರಮುಖ ಷಡ್ಯಂತ್ರಗಾರನನ್ನು ಬಂಧಿಸಿದ್ದಾರೆ. ಅವನ ಹೆಸರು ಫಾಹಿಮ್ ಖಾನ್. ವಿಡಿಯೋವನ್ನು ತಿರುಚಿದ, ಸುಳ್ಳು ಸುದ್ದಿಗಳನ್ನು ಹರಡಿದ ಹಾಗೂ ಜನರನ್ನು ಅಕ್ರಮವಾಗಿ ಒಂದೆಡೆ ಸೇರಿಸಿದ ಆರೋಪವನ್ನು ಅವನ ಮೇಲೆ ಹೊರಿಸಲಾಗಿದೆ. ಹಿಂಸಾಚಾರ ಸೃಷ್ಟಿಸಲೆಂದೇ ಅವನು ಈ ಕೃತ್ಯಗಳನ್ನು ಎಸಗಿದ್ದಾನೆಂದು ಆರೋಪಿಸಲಾಗಿದೆ. ಚಾದರ ಸುಟ್ಟವನ ಮೇಲೆ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಇನ್ನೊಂದು ವದಂತಿಯನ್ನೂ ಹರಡಲಾಗಿತ್ತು. ಆದರೆ, ಅದಕ್ಕೂ ಮೊದಲೇ ಪೊಲೀಸರು ಚಾದರ ಸುಟ್ಟವನ ವಿರುದ್ಧ ಕೇಸು ದಾಖಲಿಸಿದ್ದರು. ಹೀಗಾಗಿ ಸುಳ್ಳು ವದಂತಿಯಿಂದ ಬೆಂಕಿ ಹೊತ್ತಿಕೊಂಡಿತು ಎಂಬುದು ಸ್ಪಷ್ಟ. ನಾಗ್ಪುರದಲ್ಲಿ ಶಾಂತಿ ಕದಡಿದವರು ಯಾವುದೇ ಸಮುದಾಯಕ್ಕೆ ಸೇರಿದವರಾಗಿರಲಿ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲೇಬೇಕು. ತಪ್ಪಿತಸ್ಥರು ಯಾರೋ ಅವರನ್ನು ಹುಡುಕಿ, ಬಂಧಿಸಿ, ಶಿಕ್ಷಿಸುವ ಕೆಲಸವಾಗಬೇಕು. ಮುಂದೆ ಇಂತಹ ಘಟನೆಗಳು ನಡೆಯಬಾರದು ಅಂದರೆ ಪೊಲೀಸರು ಅತ್ಯಂತ ದಕ್ಷವಾಗಿ ಈ ಪ್ರಕರಣವನ್ನು ಇತ್ಯರ್ಥಪಡಿಸಬೇಕು. ಅದೇ ವೇಳೆ, ತನಿಖೆಯ ನೆಪದಲ್ಲಿ ಮುಗ್ಧ ಜನರಿಗೆ ಕಿರುಕುಳವಾಗದಂತೆ ನೋಡಿಕೊಳ್ಳಬೇಕು. ಅದರಲ್ಲೂ ಹಬ್ಬದ ಸಂದರ್ಭದಲ್ಲಿ ಜನರ ಸಂಭ್ರಮಾಚರಣೆಗಳಿಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಈ ಘಟನೆಯಲ್ಲಿ ಗುಪ್ತಚರ ದಳಗಳು ಸಂಪೂರ್ಣ ವಿಫಲವಾಗಿವೆ ಎಂದೇನೂ ನಾನು ಹೇಳುವುದಿಲ್ಲ. ಆದರೆ ಅವು ಮೊದಲೇ ಎಚ್ಚೆತ್ತುಕೊಂಡು ಇನ್ನಷ್ಟು ನಿಖರವಾದ ಮಾಹಿತಿ ನೀಡಿದ್ದರೆ ಇಷ್ಟೊಂದು ಹಿಂಸಾಚಾರ ನಡೆಯುವುದನ್ನು ತಪ್ಪಿಸಬಹುದಿತ್ತು. ಆದರೂ ನಾನು ನಾಗ್ಪುರ ಸಿಟಿ ಪೊಲೀಸರ ಶ್ರಮವನ್ನು ಶ್ಲಾಘಿಸುತ್ತೇನೆ. ಅದರಲ್ಲೂ ಪೊಲೀಸ್ ಆಯುಕ್ತ ರವಿಂದರ್ ಸಿಂಘಲ್ ಮತ್ತು ಅವರ ತಂಡವರು ಪರಿಸ್ಥಿತಿಯನ್ನು ಬಹಳ ನಾಜೂಕಾಗಿ ನಿಭಾಯಿಸಿದ್ದಾರೆ. ಎಷ್ಟು ಸಾಧ್ಯವೋ ಅಷ್ಟು ತ್ವರಿತವಾಗಿ ಪರಿಸ್ಥಿತಿಯನ್ನು ಸಹಜಗೊಳಿಸಲು ಅವರು ಯತ್ನಿಸಿದ್ದಾರೆ. ಅದೇ ವೇಳೆ, ಎರಡೂ ಸಮುದಾಯಗಳಲ್ಲಿರುವ ಶಾಂತಿ ಪ್ರಿಯ ಜನರು ಈ ಸಂಘರ್ಷವನ್ನು ಕೊನೆಗೊಳಿಸಲು ಪೊಲೀಸರಿಗೆ ಸಾಕಷ್ಟು ಸಹಕಾರ ನೀಡಿದರು. ಮತೀಯ ದಂಗೆಯು ನಗರದ ಇನ್ನಷ್ಟು ಭಾಗಗಳಿಗೆ ಹರಡುವುದನ್ನು ತಡೆಯುವಲ್ಲಿ ಅವರ ಶ್ರಮ ಬಹಳ ಮುಖ್ಯವಾಗಿತ್ತು. ಉಭಯ ಧರ್ಮಗಳ ಮುಖಂಡರು ಶಾಂತಿ ಸ್ಥಾಪನೆಗೆ ಪ್ರಯತ್ನಿಸದೆ ಇದ್ದಿದ್ದರೆ ಈ ಘಟನೆ ಎಲ್ಲಿಗೆ ಹೋಗಿ ತಲುಪುತ್ತಿತ್ತೋ ಬಲ್ಲವರಾರು.

ಧರ್ಮಗಳಿಗೆ ಸಂಬಂಧಿಸಿದ ವಿಷಯದಲ್ಲಿ ನಾನು ಯಾವಾಗಲೂ ಭಾವಜೀವಿ. ಹಾಗೆಯೇ ಧಾರ್ಮಿಕ ಸಂಘರ್ಷಗಳು ನಡೆಯುತ್ತಿರುವುದನ್ನು ನೋಡಿದರೆ ನನ್ನ ಕರುಳು ಹಿಚುಕಿದಂತಾಗುತ್ತದೆ. ಏಕೆಂದರೆ ಕೋಮುಗಲಭೆಗಳು ಹೇಗೆ ಜನಸಾಮಾನ್ಯರ ಬದುಕನ್ನು ನಾಶ ಮಾಡುತ್ತವೆ ಎಂಬುದನ್ನು ನನ್ನ ರಾಜಕೀಯ ಮತ್ತು ಪತ್ರಿಕಾ ಜೀವನದ ಅನುಭವದಲ್ಲಿ ಸಾಕಷ್ಟು ಬಾರಿ ಪ್ರತ್ಯಕ್ಷವಾಗಿ ನೋಡಿದ್ದೇನೆ. ಆದ್ದರಿಂದಲೇ ಕೋವಿಡ್-19 ಸಮಯದಲ್ಲಿ ನಾನು ಹಾರ್ವರ್ಡ್ ವಿಶ್ವವಿದ್ಯಾಲಯಕ್ಕಾಗಿ 'ಧರ್ಮ, ಸಂಘರ್ಷ ಮತ್ತು ಶಾಂತಿ ಎಂಬ ವಿಷಯದಲ್ಲಿ ವಿಸ್ತೃತವಾದ ಮತ್ತು ಆಳವಾದ ಅಧ್ಯಯನ ವರದಿಯೊಂದನ್ನು ತಯಾರಿಸಿ ಕೊಟ್ಟಿದ್ದೇನೆ. ನನ್ನ ಸಂಶೋಧನಾ ವರದಿಯ ಪ್ರಮುಖ ಅಂಶವೆಂದರೆ, ಧರ್ಮವು ಅತ್ಯಂತ ಖಾಸಗಿ ವಿಚಾರ. ಪ್ರತಿಯೊಬ್ಬ ವ್ಯಕ್ತಿಯ ಬದುಕಿನಲ್ಲೂ ಧರ್ಮವು ವೈಯಕ್ತಿಕವಾಗಿ ಸಾಕಷ್ಟು ಪರಿಣಾಮಗಳನ್ನು ಬೀರುತ್ತದೆ. ಹೀಗಾಗಿ ಅದನ್ನು ಬಳಸಿಕೊಂಡು ಪ್ರೀತಿಯನ್ನು ಹರಡಬೇಕೋ ಅಥವಾ ದ್ವೇಷದ ಬೆಂಕಿಯನ್ನು ಹೊತ್ತಿಸಬೇಕೋ ಎಂಬುದು ನಮಗೆ ಬಿಟ್ಟದ್ದು. ಎಲ್ಲಾ ಧರ್ಮಗಳೂ ಶಾಂತಿ ಮತ್ತು ಸಹೋದರತ್ವವನ್ನು ಬೋಧಿಸುತ್ತವೆ. ಆದರೆ ಕೆಲವರ ಸ್ವಾರ್ಥದಿಂದ ದ್ವೇಷ ಹುಟ್ಟಿಕೊಳ್ಳುತ್ತದೆ. ರಾಜಕಾರಣಿಗಳು ಮತ್ತು ಧಾರ್ಮಿಕ ಮುಖಂಡರು ಸೇರಿಕೊಂಡು ಧರ್ಮದ ಹೆಸರಿನಲ್ಲಿ ಎಂತಹುದೇ ಸಂದರ್ಭದಲ್ಲೂ ನಾವು ಅಶಾಂತಿ ಮೂಡಲು ಅವಕಾಶ ನೀಡುವುದಿಲ್ಲ ಎಂದು ಕಠಿಣವಾದ ನಿಲುವು ತಾಳಿದರೆ ಆಗ ಸಹಜವಾಗಿಯೇ ಇಂತಹ ಹಿಂಸಾಚಾರಗಳು ಭುಗಿಲೇಳುವುದೇ ಇಲ್ಲ.

ಆದರೆ ನಾವು ವಾಸಿಸುತ್ತಿರುವ ಸಮಾಜದಲ್ಲಿನ ವಾಸ್ತವ ಸ್ಥಿತಿ ಹೀಗೆ ಇಲ್ಲ. ಇಲ್ಲಿ ದುರದೃಷ್ಟವಶಾತ್ ಕ್ಷುಲ್ಲಕ ರಾಜಕಾರಣವೇ ಎಲ್ಲೆಡೆ ವಿಜೃಂಭಿಸುತ್ತಿದೆ. ರಾಜಕೀಯ ಲಾಭಕ್ಕಾಗಿ ಧರ್ಮವನ್ನು ಶೋಷಣೆ ಮಾಡುವ ಕುತ್ಸಿತ ವ್ಯಕ್ತಿಗಳು ನಮ್ಮ ಸುತ್ತಮುತ್ತಲೂ ಇದ್ದಾರೆ. ಧರ್ಮವನ್ನು ಶೋಷಿಸುವುದರಲ್ಲಿ ಅವರಿಗೆ ವೈಯಕ್ತಿಕ ಲಾಭವಿದೆ. ಹೀಗಾಗಿ ಯಾವಾಗಲೂ ಅವರು ಏನಾದರೊಂದು ವಿವಾದವನ್ನು ಹುಟ್ಟುಹಾಕುತ್ತಲೇ ಇರುತ್ತಾರೆ. ನಾಗ್ಪುರದಲ್ಲಿ ನಡೆದ ಇತ್ತೀಚಿನ ಗಲಭೆಗೆ ಮೂಲ ಕಾರಣ ಔರಂಗಜೇಬನ ಗೋರಿ. ಆದರೆ, ಎಲ್ಲರೂ ಕೇಳಿಕೊಳ್ಳಬೇಕಾದ ನಿಜವಾದ ಪ್ರಶ್ನೆ ಏನೆಂದರೆ, 21ನೇ ಶತಮಾನದಲ್ಲಿ ನಾವು ಯಾವುದೋ ಹಳೆಯ ಕಾಲದ ಸಮಾಧಿಯೊಂದರ ಬಗ್ಗೆ ಯಾಕೆ ತಲೆ ಕೆಡಿಸಿಕೊಳ್ಳಬೇಕು? ಮತ್ತೆ ಮಧ್ಯ ಯುಗಕ್ಕೆ ಹೋಗಿ ಬದುಕಲು ನಮ್ಮಿಂದ ಸಾಧ್ಯವಿದೆಯೇ? ಅಲ್ಲಿ ಪ್ರತಿಯೊಬ್ಬ ಸುಲ್ತಾನನೂ, ಪ್ರತಿಯೊಬ್ಬ ರಾಜನೂ ದಬ್ಬಾಳಿಕೆಯ ಹೊಸ ಹೊಸ ಕತೆಗಳನ್ನು ಬರೆಯುತ್ತಿದ್ದರು. ಮತ್ತೆ ಆ ಕಾಲಕ್ಕೆ ಹೋಗಿ ಅವರ ಕತೆಗಳಲ್ಲಿ ನಾವೂ ಪಾತ್ರವಾಗೋಣವೇ?

ತಂತ್ರಜ್ಞಾನದ ಆಧುನಿಕ ಯುಗದಲ್ಲಿ ಬದುಕುತ್ತಿರುವ ನಾವು ಮತ್ತೆ ಮಾನಸಿಕವಾಗಿ ಬುಡಕಟ್ಟು ಅಥವಾ ಗುಡ್ಡಗಾಡು ಜನರ ನಾಗರಿಕತೆಯ ವಿಕಾಸಕ್ಕೂ ಮುಂಚಿನ ಕಾಲದಲ್ಲಿ ಬದುಕಲು ಸಾಧ್ಯವಿದೆಯೇ? ಹಿಂದೆ ಪರಸ್ಪರ ದ್ವೇಷ ಕಾರಿಕೊಳ್ಳುತ್ತಿದ್ದ ಬುಡಕಟ್ಟು ಸಮುದಾಯಗಳು ಕೂಡ ಇಂದು ಶಾಂತಿ ಮತ್ತು ಸಹಬಾಳ್ವೆಯನ್ನು ಅಪ್ಪಿಕೊಂಡು ನೆಮ್ಮದಿಯ ಬದುಕು ನಡೆಸುತ್ತಿವೆ. ಒಂದು ಕಾಲವಿತ್ತು; ಆಗ ನಾಗಾಲ್ಯಾಂಡಿನ ಬುಡಕಟ್ಟು ಸಮುದಾಯವೊಂದು ತನ್ನ ವೈರಿ ಸಮುದಾಯದ ವ್ಯಕ್ತಿಯೊಬ್ಬ ಕಂಡರೆ ತಲೆ ಕಡಿದು, ಅವನ ಬುರುಡೆಯನ್ನು ತಮ್ಮ ಮನೆಯ ಮುಂದೆ ನೇತು ಹಾಕುತ್ತಿತ್ತು. ಆದರೆ ಈಗ ಅವರೂ ಕೂಡ ಅಂತಹ ಕ್ರೂರ ಮನಸ್ಥಿತಿಯನ್ನೂ, ಆಚರಣೆಗಳನ್ನೂ ಕೈಬಿಟ್ಟು ಮುಂದೆ ಸಾಗಿದ್ದಾರೆ. ಅವರ ಕತೆ ಹಾಗಿರಲಿ, ನಾವಂತೂ ಆಧುನಿಕ ಸಮಾಜದಲ್ಲಿ ಬದುಕುತ್ತಿದ್ದೇವೆ. ನಮ್ಮ ಯೋಚನೆಗಳು ಪುರೋಗಾಮಿಯಾಗಿ ಮತ್ತು ವಿಶಾಲವಾಗಿ ಇರಬೇಕೇ ಹೊರತು ಸಂಕುಚಿತವಾಗಬಾರದು. ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಅಖಿಲ ಭಾರತ ಪ್ರಚಾರ ವಿಭಾಗದ ಮುಖ್ಯಸ್ಥ ಸುನಿಲ್ ಅಂಬೇಕರ್ ಅವರ ಮಾತನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ಔರಂಗಜೇಬ ಇಂದು ಪ್ರಸ್ತುತವೇ ಅಲ್ಲ, ಹೀಗಾಗಿ ಅವನ ಕಾರಣಕ್ಕೆ ಯಾವುದೇ ರೀತಿಯಲ್ಲಿ ಸಂಘರ್ಷ ನಡೆಯುತ್ತಿದ್ದರೂ ಮೊದಲು ಅದನ್ನು ನಿಲ್ಲಿಸಬೇಕು ಎಂದು ಅವರು ಹೇಳಿದ್ದರು. ಆದರೇನು ಮಾಡೋಣ, ದೇಶದಲ್ಲಿ ಮತೀಯ ಹಿಂಸಾಚಾರಗಳು ನಡೆಯುತ್ತಲೇ ಇವೆ. ನಾನು ಅವುಗಳ ಅಂಕಿಅಂಶಗಳನ್ನು ಮತ್ತೆ ನಿಮ್ಮ ಮುಂದಿಡಲು ಹೋಗುವುದಿಲ್ಲ. ಯಾವ ವರ್ಷ ಎಷ್ಟು ಮತೀಯ ಗಲಭೆಗಳು ನಡೆದಿವೆ, ಈಗಿನ ಪರಿಸ್ಥಿತಿ ಏನಿದೆ ಎಂಬುದನ್ನೆಲ್ಲ ಇಲ್ಲಿ ಚರ್ಚಿಸುವ ಅಗತ್ಯವಿಲ್ಲ. ಕೆಲ ಸಮಯದ ಹಿಂದೆ ಸಂಭಲ್‌ನಲ್ಲಿ ನಡೆದ ಘಟನೆಯ ಚರ್ಚೆಯೂ ಇಲ್ಲಿ ಬೇಕಿಲ್ಲ. ನಾನು ಹೇಳುವುದು ಇಷ್ಟೆ. ಎಲ್ಲೇ ಮತೀಯ ಗಲಭೆಗಳು ಉಂಟಾದರೂ ಅದರ ಜ್ವಾಲೆ ಸಮಾಜವನ್ನು ಸುಡುತ್ತದೆ. ತನ್ಮೂಲಕ ದೇಶವನ್ನೂ ಸುಡುತ್ತದೆ. ಹೀಗಾಗಿ ಎಲ್ಲರೂ ಸಂಯಮದಿಂದ ನಡೆದುಕೊಳ್ಳಬೇಕು. ಇಂತಹ ಸೂಕ್ಷ್ಮ ವಿಷಯದಲ್ಲಿ ತಾಳ್ಮೆಯಿಂದ ವರ್ತಿಸೋಣ. ನನಗಿಲ್ಲಿ ಬಶೀರ್ ಬದರ್‌ನ ಒಂದು ಶೇರ್ ನೆನಪಾಗುತ್ತಿದೆ:

ಜನರು ಸುಸ್ತಾಗಿ ಹೋಗುತ್ತಾರೆ ಒಂದು
ಮನೆಯನ್ನು ಕಟ್ಟುವುದಕ್ಕೆ,
ನೀನು ಹಿಂದೆಮುಂದೆ ನೋಡುವುದಿಲ್ಲ
ಇಡೀ ಓಣಿಗೆ ಬೆಂಕಿ ಹಚ್ಚುವುದಕ್ಕೆ!

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

- **ರಾಘಣ್ಣ ಮೈಸೂರು, (ಇಮೇಲ್ ಮೂಲಕ)**
ಅಶ್ವಮೇಧದ ಕುದುರೆಯನ್ನಾದರೂ ಕಟ್ಟಬಹುದು, 'ವಿಶ್ವವಾಣಿ' ಭಟ್ಟರನ್ನು ಒಂದು ಕಡೆ ಕಟ್ಟಿಹಾಕಲು ಸಾಧ್ಯವಿಲ್ಲವಲ್ಲ?
- **ಈ ವಿಷಯದಲ್ಲಿ ನನ್ನ ಪತ್ನಿಯೇ ಸೋತು ಕೈಚೆಲ್ಲಿದ್ದಾಳಲ್ಲ!**

- **ನಿಂಗರಾಜು ಆರ್., (ಇಮೇಲ್ ಮೂಲಕ)**
ಭಟ್ರೇ, ಹುಟ್ಟುವ ಮಗು ನನ್ನ ಥರಾನೇ ಇರಬೇಕು ಅಂತ ಇಲ್ಲೊಬ್ಬಳು ಹರಕೆ ಹೊತ್ತಿದ್ದಾಳಲ್ಲ?
- **ಹುಟ್ಟಿಸಿದವರ ಐಡೆಂಟಿಟಿ ಗೊತ್ತಾಗದಿರಲಿ ಎಂಬ ದೂರಾಲೋಚನೆ**

- **ಅಮಾಸೆ ಸುಬ್ಬು, ಮೈಸೂರು**
ಹೆಣ್ಣಿನ ಕೊರಳಿಗೆ ಮೂರು ಗಂಟಿನ ತಾಳಿ ಕಟ್ಟಲು ಪುರೋಹಿತರ ಹೆಲ್ಪ್ ಬಯಸುವ ಗಂಡಸರ ಬಗ್ಗೆ ಏನಂತೀರಾ?
- **ಕೆಲವರು ಅಪರಾಧ ಮಾಡುವಾಗಲೂ ಸಾಕ್ಷಿಗಳನ್ನು ಹತ್ತಿರ ಇಟ್ಟುಕೊಳ್ಳುತ್ತಾರೆ!**

- **ಪುಂಗನೂರು ಪೂರ್ಣಯ್ಯ, (ಇಮೇಲ್ ಮೂಲಕ)**
ಮೊದಲಿಗೆ ಗುದ್ದು ಕೊಟ್ಟವಳು, ಕೊನೆಗೆ ಮುದ್ದು ಕೊಟ್ಟೇ ಕೊಡುತ್ತಾಳೆ ಎನ್ನುವ ಆಶಾಭಾವನೆ ಇಟ್ಟುಕೊಳ್ಳಲೇ?
- **ಕೊಡಲಿ ಬಿಡಲಿ, ಭಾವನೆ ಇಟ್ಟುಕೊಳ್ಳುವ ಬದಲು ಆಶಾಳನ್ನು ಇಟ್ಟುಕೊಳ್ಳಿ!**

- **ನಿಜಗುಣ ಭರತ, (ಇಮೇಲ್ ಮೂಲಕ)**
ಭಟ್ರೇ, ಪುಸ್ತಕಗಳ ಸನಿಹ ಇದ್ರೆ ಸಾಕು, ಬುದ್ಧಿವಂತರಾಗುವಂತಿದ್ದರೆ?
- **ಲೈಬ್ರರಿಯನ್‌ಗಳಷ್ಟು ಬುದ್ಧಿವಂತರು ಯಾರೂ ಇರುತ್ತಿರಲಿಲ್ಲ**

- **ಕಿರಣ್ ಸಾಲಿಗ್ರಾಮ, (ಇಮೇಲ್ ಮೂಲಕ)**
ಸರ್, ನಿಮಗೆ ಪದ್ಮಶ್ರೀ ಕೊಟ್ರೆ ಸ್ವೀಕರಿಸುತ್ತೀರಾ?
- **ಪದ್ಮ ನನಗಿರಲಿ, ಶ್ರೀ ನಿನಗಿರಲಿ!**

- **ಶ್ರೀನಾಥ ಜೋಯಿಸ್, ಶಿವಮೊಗ್ಗ**
ಭಟ್ರೇ, ಸೊಳ್ಳೆಗಳು ರಾತ್ರಿಯೇ ಆಕ್ಟಿವ್ ಆಗಿರಲು ಕಾರಣವೇನು?
- **ಗಂಡ-ಹೆಂಡತಿ ಸಂಭಾಷಣೆ ಕದ್ದು ಕೇಳಲು ಇದ್ದಿರಲಿಕ್ಕಿಲ್ಲ ಅಲ್ವಾ!?**

- **ಅಭಿಲಾಷ್, ಚಿನಕುರುಳಿ**
ಮದುವೆಯಾದ ಬಳಿಕ ತಿಳಿದುಕೊಳ್ಳಬೇಕಾದ ಮುಖ್ಯ ವಿಷಯವೇನು, ಸಾರ್?
- **ಹೆಂಡತಿಗಿಂತ ಮಿಗಿಲಾದವಳು ಯಾರೂ ಇಲ್ಲ!**

ಹುಡುಗ, ಹುಡುಗಿ ಮತ್ತು ಬೇಸಿಗೆ ರಜೆ

ಕಾಡುದಾರಿ

ಹರೀಶ್ ಕೇರ

vveditoped@gmail.com

ಹಳೆಯ ತರಗತಿ ಅವನನ್ನು ಬೀಳ್ಕೊಟ್ಟಿದೆ. ಮತ್ತಿನ್ನೆರಡು ತಿಂಗಳು ಬಿಟ್ಟು ಅವರನ್ನೆಲ್ಲ ಭೇಟಿಯಾಗಲಿದ್ದಾನಾದರೂ ಮನದಲ್ಲಿ ಏನೋ ಸಣ್ಣ ಬೇಸರದ ಭಾವ. ಒಂದೆರಡು ಮಂದಿ, ಅಪ್ಪನ ಟ್ರಾನ್ಸ್‌ಫರ್‌ನಿಂದಾಗಿ ಊರನ್ನೇ ಬಿಟ್ಟು ಹೋಗುವವರು ಮಾತ್ರ ಈ ಶಾಲೆ ಬಿಟ್ಟು ಬಾಯ್ ಹೇಳಿದ್ದಾರೆ. ಅವರೂ ಮುಂದೆ ಎಂದಾದರೂ ಸಿಗಬಹುದು; ಆದರೆ ಅವರ ಜೊತೆ ಕ್ರಿಕೆಟ್ ಆಡಿದ, ಜಗಳವಾಡಿದ ನೆನಪುಗಳು ತಾಜಾ ಆಗಿವೆ. ಮನೆಗೆ ಬಂದರೆ ಇಡೀ ದಿನದ ಇಪ್ಪತ್ತನಾಲ್ಕು ಗಂಟೆಗಳು ಹರಡಿ ಬಿದ್ದಿವೆ. ಅರ್ಧ ದಿನ ಶಾಲೆಯಲ್ಲಿ ಕಳೆದು ಹೋಗುತ್ತಿತ್ತು. ಸಂಜೆಗಳು ಹರಟೆ ಹೊಡೆಯಲೂ ರಾತ್ರಿಗಳು ಓದಲೂ ಸಿಗುತ್ತಿದ್ದವು. ಈಗ ನಡು ಮಧ್ಯಾಹ್ನಗಳನ್ನು ಏನು ಮಾಡುವುದೋ ತಿಳಿಯುತ್ತಿಲ್ಲ. ಮನೆಯ ಪಕ್ಕ ಇರುವ ಪುಟ್ಟ ಕೆರೆಯಲ್ಲಿ ಈಸುಬಿದ್ದದ್ದಾಯಿತು. ಕಾಡುಗುಡ್ಡ ಹತ್ತಿಳಿದು, ಗೇರುಬೀಜ ಹೆಕ್ಕಿ, ಮಾವು ತಿಂದು, ಹೀಗೆಲ್ಲ ಹೊತ್ತು ಹೋಗುತ್ತದೆ. ಆದರೆ ಅಕ್ಕಪಕ್ಕದಲ್ಲಿ ಕೂತಿರುತ್ತಿದ್ದ ಸಮಾನ ವಯಸ್ಸಿನವರ ಗ್ಯಾಂಗು ಇಲ್ಲದೆ, ಜೀವ ಒಳಗಿದ್ದೂ ಒಳಗಿಲ್ಲ ಎಂಬ ಭಾವ.

ಇದೇ ಹೊತ್ತಿನಲ್ಲೇ ಪಟ್ಟಣದಿಂದ ಸೋದರ ಮಾವನ ಮನೆಯ ಕರೆ ಬರುತ್ತದೆ. 'ಈಗ ಮದುವೆಯ ಸೀಸನ್. ಊಟಕ್ಕೆ ಬಡಿಸಲು ಜನವಿಲ್ಲ. ಒಂದು ದಿನಕ್ಕೆ ಒಂದು ಸಾವಿರ ಕೊಡ್ತಾರೆ. ಬಂದರೆ ಸುಲಭವಾಗಿ ಒಂದಿಷ್ಟು ದುಡ್ಡು ಮಾಡಿಕೊಂಡು ಹೋಗಬಹುದು' ಅಂತ. ಇದೇ ಸಮಯ ಅಂತ ಹೊರಟುಬಿಡುತ್ತಾನೆ. ರಾತ್ರಿ ಇಡೀ ನಿದ್ರೆ ಕೊಡದೆ ಕೆಂಪು ಬಸ್ಸು ಅವನನ್ನು ಪಟ್ಟಣದ ಜನಸಾಗರದ ನಡುವೆ ತಂದುಬಿಡುತ್ತದೆ. ಸಾವರಿಸಿಕೊಂಡು ನೋಡುತ್ತಿದ್ದಾಗ ಮಾವನ ಮಗ ಬಂದು ಬೈಕಿನಲ್ಲಿ ಕೂರಿಸಿಕೊಂಡು ಮನೆಗೆ ಕರೆದೊಯ್ಯುತ್ತಾನೆ. ತಲೆಗೆ ಹೆಲ್ಮೆಟ್ ಇಲ್ಲ, ಒನ್‌ವೇಯಲ್ಲಿ ಉಲ್ಟಾ ದಿಕ್ಕಿನಿಂದ ಶರವೇಗದಲ್ಲಿ ಬೈಕ್ ಓಡಿಸಿ ಟ್ರಾಫಿಕ್ ಪೊಲೀಸರನ್ನೂ ಯಾಮಾರಿಸುವ ವೀರಾಧಿವೀರ ಭಾವನ ಹಿಂದೆ ಕುಳಿತ ಇವನಿಗೆ ದಿಗಿಲು.

ಮಾರನೆಯ ದಿನದಿಂದಲೇ ಕೆಲಸ ಶುರು. ಮಾವನೇ ಕರೆದೊಯ್ದಿದ್ದಾನೆ. ಬಡಿಸುವವರು ಪ್ಯಾಂಟು– ಅಂಗಿ ಧರಿಸುವಂತಿಲ್ಲ. ಬಿಳೀ ಪಂಚೆ ಉಟ್ಟು ಶಾಲು ಹೊದ್ದಿರಬೇಕು. ಕೈಕಾಲು ಕ್ಲೀನ್ ಆಗಿರಬೇಕು. ಊಟ ಶುರುವಾಗುವವರೆಗೂ ಕಾಯಿ ತುರಿ, ನೀರು ತಾ. ಹನ್ನೆರಡು ಗಂಟೆಗೆ ಊಟ ಬಡಿಸಲು ಶುರುವಾದರೆ ನಾಲ್ಕು ಗಂಟೆಯವರೆಗೂ ಪಂಕ್ತಿಗಳು ಬೀಳುತ್ತಲೇ ಇರುತ್ತವೆ. ಉಪ್ಪು ಎಲ್ಲಿ ಹಾಕಬೇಕು, ಪಲ್ಯ ಎಲ್ಲಿಗೆ, ಹಪ್ಪಳ ಬಾಳೆಲೆಗೆ ಇಡುವುದೋ ಕೈಗೆ ಕೊಡುವುದೋ, ಸಾಂಬಾರು ಬಡಿಸುವಾಗ ಎಷ್ಟು ಹೋಳು ಇರಬೇಕು, ಅನ್ನ ವೇಸ್ಟ್ ಆಗದ ಹಾಗೆ ಬಡಿಸುವುದು ಹೇಗೆ– ಎಲ್ಲವನ್ನೂ ಚಕಚಕ ಕಲಿತುಕೊಂಡಿದ್ದಾನೆ. ಅತಿಥಿಗಳ ಸಾಲೆಲ್ಲಾ ಮುಗಿದು ನಾಲ್ಕು ಗಂಟೆಗೆ ಇವನ ಸರದಿ ಬರುವಷ್ಟರಲ್ಲಿ ನೀರು ಕುಡಿದೂ ಕುಡಿದೂ ಇವನ ಹಸಿವೇ ಇಂಗಿಹೋಗಿದೆ. ಸ್ವೀಟು ಇದ್ದರೂ ತಿನ್ನಲು ಮನಸ್ಸಾಗದೆ ಸಾರಿನಲ್ಲಿ ನಾಲ್ಕು ತುತ್ತು ಕಲಸಿ ಬಾಯಿಗಿಟ್ಟು ಎದ್ದುಬಿಡುತ್ತಾನೆ.

ಇದು ಹೀಗೇ ಮುಂದುವರಿಯುತ್ತದೆ. ಒಂದೊಂದು ದಿನ ಒಂದೊಂದು ಕಡೆ. ಮಾವನೋ ಭಾವನೋ ಕರದೊಯ್ಯುತ್ತಾರೆ. ಪ್ರತಿದಿನ ಮನೆಗೆ ಹಿಂದಿರುಗುವಾಗ ಒಂದಿಷ್ಟು ನೋಟುಗಳು ಅವನ ಜೇಬು ಸೇರುತ್ತವೆ. ಈ ನೋಟುಗಳನ್ನು ಎಟಿಎಂ ಮಶಿನ್‌ನಲ್ಲಿ ಅಕೌಂಟ್‌ಗೆ ತುಂಬಿಸುವುದು ಹೇಗೆ, ತೆಗೆಯುವುದು ಹೇಗೆ ಎಂಬುದನ್ನೆಲ್ಲ ಭಾವ ಹೇಳಿಕೊಟ್ಟಿದ್ದಾನೆ. ಸಂಜೆ ಮೆತ್ತಗೆ ಮನೆಯಿಂದ ಹೊರಬಿದ್ದು ಬೀದಿ ಸುತ್ತುತ್ತಾನೆ. ಸಮಾರಂಭ ಇಲ್ಲದ ದಿನ ಹಾಗೇ ಸಿಟಿ ಬಸ್ಸು ಹತ್ತಿ ಲಾಲ್‌ಬಾಗ್‌ಗೆ, ಕಬ್ಬನ್‌ಪಾರ್ಕ್‌ಗೆ ಹೋಗಿ ಬರಲು ಕಲಿತಿದ್ದಾನೆ. ಒಂದು ಸಂಜೆ ಭಾವ ಅವನನ್ನು ಲುಲು ಮಾಲ್‌ಗೂ ಕರೆದೊಯ್ದಿದ್ದಾನೆ. ಅಲ್ಲಿ ಇತ್ತೀಚೆಗೆ ತಾನೆ ರಿಲೀಸ್ ಆದ ಪ್ಯಾನ್ ಇಂಡಿಯಾ ಮೂವಿಯೊಂದು ಪ್ರದರ್ಶಿತವಾಗುತ್ತಿದೆ. ಪಾಪ್‌ಕಾರ್ನ್ ತಿನ್ನುತ್ತಾ ಪೆಪ್ಸಿ ಕುಡಿಯುತ್ತಾ ಸಿನಿಮಾ ನೋಡುವ ಕಲೆ ಅವನಿಗೆ ಕರಗತವಾಗುತ್ತದೆ.

ಹಾಗೇ ಒಂದು ಸಂಜೆ ವಾಕಿಂಗ್ ಮುಗಿಸಿ ಬಂದಾಗ ಮಾವನ ಮನೆಗೆ ಅಂಟಿಕೊಂಡೇ ಇರುವ ಪಕ್ಕದ ಮನೆಯ ಗೋಡೆಗೆ ಒರಗಿ ಅವನದೇ ಪ್ರಾಯದ ಹುಡುಗಿಯೊಬ್ಬಳು ನಿಂತಿದ್ದಾಳೆ. ಇವನನ್ನೇ ದಿಟ್ಟಿಸಿ ನೋಡಿ ಮುಗುಳ್ನಕ್ಕಾಗ ಬೆಚ್ಚುತ್ತಾನೆ. ಊರಿನಲ್ಲಿ, ಅವನ ಕ್ಲಾಸಿನ ಹುಡುಗಿಯರಲ್ಲಿ ಯಾರೂ ಹೀಗೆ ಮಾಡುವ ಧೈರ್ಯ ತೋರುವುದಿಲ್ಲ. ಏನಿದ್ದರೂ ಹುಡುಗರೇ ಮೊದಲು ಮಾತಾಡಿಸಬೇಕು. 'ಅರೇ ನೀನು ನಿನ್ನೆ ಇಂತಿಂತ ಛತ್ರದ ಮದುವೆ ಕಾರ್ಯಕ್ರಮದಲ್ಲಿ ಊಟ ಬಡಿಸ್ತಾ ಇದ್ದೆ ಅಲ್ವಾ?' ಅಂತ ಇಂಗ್ಲಿಷ್‌ನಲ್ಲಿ ಕೇಳುತ್ತಾಳೆ. ಹುಡುಗ ಇವಳೆಲ್ಲಿ ನೋಡಿದಳಪ್ಪ ಎಂದುಕೊಂಡು ಹೌದು ಎಂದು ಗೋಣು ಹಾಕುತ್ತಾನೆ. 'ನಾನೂ ಬಂದಿದ್ದೆ ಅಲ್ಲಿಗೆ. ನನ್ನ ಗೆಳತಿಯ ಅಕ್ಕನ ಮದುವೆ ಅದಾಗಿತ್ತು' ಅನ್ನುತ್ತಾಳೆ. ಇದೇ ನಿಮ್ಮನೇನಾ ಅನ್ನುತ್ತಾಳೆ. ಬರುವ ಹರುಕುಮುರುಕು ಇಂಗ್ಲಿಷ್‌ನಲ್ಲೇ– ಇಲ್ಲ ಇದು ನನ್ನ ಮಾವನ ಮನೆ ಅನ್ನುತ್ತಾನೆ. ಅಂಕಲ್ ಅಂದರೆ ಪ್ಯಾಟರ್ನಲ್ಲೋ ಮ್ಯಾಟರ್ನಲ್ಲೋ ಅಂತ ಕೇಳುತ್ತಾಳೆ. ಅವನಿಗೆ ಅರ್ಥವಾಗುವುದಿಲ್ಲ. ಅವಳೇ ಅರ್ಥ ಮಾಡಿಸುತ್ತಾಳೆ. ಪಕ್ಕದ ಮನೆ ಅವಳ ಚಿಕ್ಕಪ್ಪನದು ಎಂದು ಅವನಿಗೆ ಗೊತ್ತಾಗುತ್ತದೆ. ಅವಳೂ ಆಂಧ್ರದಿಂದ ರಜೆಯಲ್ಲಿ ಬಂದಿದ್ದಾಳೆ.

ಒಳಗೆ ಬಂದ ಮೇಲೆ, ಅವಳ ಹೆಸರು ಕೇಳಲು ಮರೆತು ಹೋದೆನಲ್ಲಾ ಎಂದು ಹಳಹಳಿಸುತ್ತಾನೆ. ತನ್ನ ಹೆಸರನ್ನೂ ಅವಳು ಕೇಳಿಲ್ಲ. ನಾಳೆ ಸಿಕ್ಕರೆ ಕೇಳೋಣ ಎಂದುಕೊಳ್ಳುತ್ತಾನೆ. ಮರುದಿನದ ಮದುವೆಯ ಕಾರ್ಯಕ್ರಮದಲ್ಲಿ ಬಡಿಸುವಾಗ ಎಂದಿಗಿಂತ ಚುರುಕಾಗಿ ಓಡಾಡುತ್ತಾನೆ. ನಾಲ್ಕು ಗಂಟೆಯಾದರೂ ಮುಗಿಯದಿದ್ದಾಗ ಅವನಿಗೆ ಗಾಬರಿಯಾಗುತ್ತದೆ. ಅವಳು ಇಂದು ಮನೆಯ ಹೊರಗೆ ಬಾರದಿದ್ದರೆ? ಬಂದರೂ ಬೇಗನೆ ಒಳಗೆ ಹೋಗಿಬಿಟ್ಟರೆ? ಎಂದೆಲ್ಲ ಪ್ರಶ್ನೆಗಳು ಕಾಡುತ್ತವೆ. ಕಾರ್ಯಕ್ರಮ ಮುಗಿಸಿ ಬರುವಾಗ ಅವಳು ಗೇಟಿಗೆ ಒರಗಿ ಯಾರನ್ನೋ ಕಾಯುತ್ತಿರುವಂತೆ ಕಾಣುತ್ತಿದೆ. ತನ್ನನ್ನೇ ಕಾಯುತ್ತಿದ್ದಾಳೆ ಅನಿಸಿ ಎದೆಯ ಮೇಲೆ ಒಳಗೆಲ್ಲ ಯಾರೋ ಇಸ್ತ್ರಿ ಮಾಡಿದಂತಾಗಿ ಬೆಚ್ಚಗಾಗುತ್ತದೆ. ಅಚಾನಕ್ಕಾಗಿ ಇಬ್ಬರದೂ ಕಣ್ಣು ಬೆಳಗುತ್ತದೆ, ಬಾಯಿ ಹಾಯ್ ಎನ್ನುತ್ತದೆ. ಮಾತುಗಳು ಅತ್ತಿಂದಿತ್ತ ಹರಿದಾಡುತ್ತವೆ. ಅವಳ ಹೆಸರು ಶಮಾ ಎಂದು ಅವನಿಗೂ, ಇವನ ಹೆಸರು ಸುಮಿತ್ ಎಂದು ಅವಳಿಗೂ ತಿಳಿಯುತ್ತದೆ.

ಹೀಗೇ ಒಂದು ವಾರ ಸರಿಯುತ್ತದೆ. ಒಂದು ದಿನ ಅವಳೇ ಪಕ್ಕದ ಬೀದಿಯಲ್ಲಿ ಗೋಲ್‌ಗಪ್ಪಾ ಚೆನ್ನಾಗಿರುತ್ತೆ, ತಿನ್ನೋಣವಾ ಎಂದು ಕೇಳುತ್ತಾಳೆ. ಇವನ ಎದೆ ಪುಕಪುಕ ಎನ್ನುತ್ತಿದೆಯಾದರೂ ಒಪ್ಪಿದ್ದಾನೆ. ಇಬ್ಬರೂ ಅಕ್ಕಪಕ್ಕ ನಡೆದುಕೊಂಡೇ ಸಾಗುತ್ತಾರೆ. ಅವಳ ಮೈಯಿಂದ ಜಾಸ್ಮಿನ್ ಪರ್‌ಫ್ಯೂಮಿನ ಪರಿಮಳ, ಇವನ ಮೈಯಿಂದ ಮದುವೆ ಮನೆಯ ಅಡುಗೆಯ ಪರಿಮಳ ವಿನಿಮಯ



ವಾಗುತ್ತವೆ. ಮೊದಲ ಬಾರಿಗೆ ಅವನ ಚಪ್ಪಲಿ ಹಾಗೂ ಪ್ಯಾಂಟಿನ ಬಗ್ಗೆ ಅವನಿಗೆ ಅಸಮಾಧಾನವಾಗುತ್ತದೆ. ಗೋಲ್‌ಗಪ್ಪಾ ಮಾಡುವ ಭಯ್ಯಾನಿಗೆ ಇವಳ ಪರಿಚಯ ಚೆನ್ನಾಗಿದ್ದಂತಿದೆ. ನೋಡಿದವನೇ ನಕ್ಕು ಸರಸರ ಎರಡು ಪ್ಲೇಟು ಕೈಗೆ ಕೊಟ್ಟು ಪುರಿ ಪಾನಿಯಲ್ಲಿ ಮುಳುಗಿಸಿ ಮುಳುಗಿಸಿ ಕೊಡುತ್ತಿದ್ದಾನೆ. ಇವನು ಮೊದಲ ಬಾರಿಗೆ ಇಷ್ಟೊಂದು ರುಚಿಯಾದ ಗೋಲ್‌ಗಪ್ಪಾ ತಿನ್ನುತ್ತಿರುವಂತಿದೆ.

ಅಂದು ರಾತ್ರಿ ಅವನ ಕನಸಿನಲ್ಲಿ ಆ ಹುಡುಗಿ ಬಂದುಬಿಟ್ಟಿದ್ದಾಳೆ. ಅವನಿಗೆ ಎಚ್ಚರವಾಗಿ ನೋಡಿದರೆ ಮೈಯೆಲ್ಲ ಬೆವರಿ ಒದ್ದೆಯಾಗಿದೆ. ಮರಳಿ ನಿದ್ದೆ ಬರುವುದೇ ಇಲ್ಲ. ಮರುದಿನ ನಿದ್ರೆಗೆಟ್ಟೇ ಊಟ ಬಡಿಸಲು ಹೋಗಿದ್ದಾನೆ. ಅಲ್ಲಿ ಅನ್ನದ ಮೇಲೆ ಪಾಯಸ ಬಡಿಸಿ ಬಯ್ಯಿಸಿಕೊಂಡಿದ್ದಾನೆ. ಸಂಜೆ ವಾಪಸು ಬರುವಾಗ ಅವಳು ಮತ್ತದೇ ಜಾಗದಲ್ಲಿ ಕಾಯುತ್ತಿದ್ದಾಳೆ. ಕನಸಿನ ವಿಷಯ ಹೇಳಲೋ ಬೇಡವೋ ಅಂದುಕೊಂಡು, ಬೇಡವೆಂದೇ ನಿರ್ಧರಿಸುತ್ತಾನೆ. ಅಂದು ಅವರು ಪಕ್ಕದ ಪಾರ್ಕೊಂದಕ್ಕೆ ಹೋಗುತ್ತಾರೆ. ಅಲ್ಲಿ ಮಕ್ಕಳು ಆಡುತ್ತಿದ್ದಾರೆ. ಅವಳು ತಾನು ಚಿಕ್ಕವಳಿದ್ದಾಗ ಉಯ್ಯಾಲೆಯಿಂದ ಬಿದ್ದಿದ್ದನ್ನು ಹೇಳುತ್ತಾಳೆ. ಇವನು ತೋಟದ ಕೆರೆಯಲ್ಲಿ ತಾನು ನೀರು ಕುಡಿದದ್ದನ್ನು ಹೇಳುತ್ತಾನೆ. ಒಂದು ಸಲ ನಿಮ್ಮ ಊರಿಗೆ ಬಂದು ತೋಟವನ್ನೆಲ್ಲ ನೋಡಬೇಕಲ್ಲ ಅನ್ನುತ್ತಾಳೆ. ಅದಕ್ಕೇನು, ಯಾವಾಗ ಬೇಕಾದರೂ ಬರಬಹುದು ಅನ್ನುತ್ತಾನೆ. ಇಬ್ಬರೂ ತಮ್ಮ ಫೋನ್ ನಂಬರ್ ವಿನಿಮಯಿಸಿಕೊಳ್ಳುತ್ತಾರೆ. ಅವಳ ಕೈಯಲ್ಲಿರುವ ದುಬಾರಿ ಸ್ಮಾರ್ಟ್‌ಫೋನು, ಅವನ ಬಳಿ ಇರುವ ಪುರಾತನ ಬಟನ್ ಫೋನನ್ನು ನೋಡಿ ನಗುತ್ತದೆ.

ಅವರು ಹಿಂದಿರುಗಿ ಬರುತ್ತಿರುವಾಗ ಮನೆಯ ಮುಂದೆ ಆಕೆಯ ಅಂಕಲ್ ನಿಂತಿದ್ದಾನೆ. ಅವನು ಪೊಲೀಸ್ ಇಲಾಖೆಯಲ್ಲಿರುವವನು ಎಂದು ಅವನ ನಿಲುವೇ ಹೇಳುತ್ತಿದೆ. ಅವನ ದಪ್ಪ ಹುಬ್ಬಿನ ಕೆಳಗಿರುವ ಕಂಗಳು ಇವನನ್ನು ಇರಿಯುವಂತೆ ದಿಟ್ಟಿಸುತ್ತವೆ. ಅವಳು ಬಾಯ್ ಎಂದಾಗ ಅಸ್ಪಷ್ಟವಾಗಿ ತೊದಲಿ ಇವನು ಕಳವಳದಿಂದ ಮನೆ ಸೇರಿಕೊಳ್ಳುತ್ತಾನೆ. ಅಂದು ಲಾಕಪ್ಪಿನಲ್ಲಿ ಇವನನ್ನು ನಾಲ್ಕಾರು ಮಂದಿ ಲಟ್ಟಿಸಿದಂತೆ ಇವನಿಗೆ ಕನಸು ಬಿದ್ದು ಬೆಚ್ಚಿ ಎದ್ದು ಕೂರುತ್ತಾನೆ. ಮರುದಿನವೂ ಮದುವೆ ಮನೆಯಲ್ಲಿ ಮೈಮುರಿಯುವಷ್ಟು ಕೆಲಸ. ಇಂದು ಸಂಜೆ ಮನೆಯ ಮುಂದೇ ಕಾದು ನಿಂತರೂ ಅವಳ ಸುಳಿವಿಲ್ಲ. ಅವಳು ಈಗ ಬರಬಹುದು, ಮತ್ತೆ ಬರಬಹುದು ಎಂದು ನಾಲ್ಕಾರು ಬಾರಿ ಮನೆ ಮುಂದೆ ಠಳಾಯಿಸಿದರೂ ಇಲ್ಲ. ಬೇಸರದಿಂದ ಒಳಬಂದು ಒಂದು ತಂಬಿಗೆ ಮಜ್ಜಿಗೆ ಕುಡಿದು ಮಲಗುತ್ತಾನೆ.

ರಜೆ ಮುಗಿಯುತ್ತಾ ಬಂದಿದೆ. ಕಾರ್ಯಕ್ರಮಗಳೂ ವಿರಳವಾಗುತ್ತಿವೆ. ಊರು ಕೈಬೀಸಿ ಕರೆಯುತ್ತಿದೆ. ಅವಳು ಮನೆ ಮುಂದೆ ಬರುವುದಿಲ್ಲ. ಮನೆಯೊಳಗೆ ಇದ್ದಾಳೋ ಇಲ್ಲವೋ ಗೊತ್ತೇ ಆಗುವುದಿಲ್ಲ. ಒಂದು ವಾರ ಹೀಗೇ ಕಳೆದಿದೆ. ಅವಳು ಕೊಟ್ಟಿರುವ ನಂಬರ್‌ಗೆ ಡಯಲ್ ಮಾಡುತ್ತಾನೆ. ಇಂಥದೊಂದು ನಂಬರ್ ಅಸ್ತಿತ್ವದಲ್ಲೇ ಇಲ್ಲ ಎನ್ನುತ್ತದೆ ಅದು. ಮೊದಲ ಬಾರಿಗೆ ಅವನಿಗೆ ತನ್ನೊಳಗೇ ಏನೋ ಮುರಿದುಬಿದ್ದಂತಾಗಿದೆ.

ಹುಡುಗ ಇದ್ದಕ್ಕಿದ್ದಂತೆ ದೊಡ್ಡವನಾಗಿ ಬಿಟ್ಟಿದ್ದಾನೆ. ಬೇಸಿಗೆ ರಜೆ ಅವನಲ್ಲಿ ಆಳವಾದ ಏನೋ ಒಂದನ್ನು ಬಿಟ್ಟು ಹೋಗುತ್ತಿದೆ. ಹಲವು ಗುರುತುಗಳು– ಕೆಲವು ನೋವಿನ, ಕೆಲವು ಸಿಹಿಯ, ಕೆಲವು ವಿಷಾದದ, ಕೆಲವು ಪುಳಕದ, ಇನ್ನೂ ಏನೇನೋ ಅರ್ಥವಾಗದ ಭಾವಗಳು. ಬೇಸಿಗೆ ರಜೆ ಮುಗಿದು ಊರಿಗೆ ಹಿಂದಿರುಗುತ್ತಿರುವ ಅವನ ಅಕೌಂಟ್‌ನಲ್ಲಿ ಈಗ ಒಂದು ಒಳ್ಳೆಯ ಮೊಬೈಲು ಕೊಳ್ಳಬಹುದಾದಷ್ಟು ಹಣವಿದೆ. ಎದೆಯ ಒಳಗೂ ಕೆಲವು ನೆನಪುಗಳು ಭಾರವಾಗಿ ಕೂತಿವೆ. ಅವನು ಈಗ ಮೊದಲಿನ ಹುಡುಗನಲ್ಲ, ಅವನ ಹೆಗಲುಗಳು ಮತ್ತಷ್ಟು ಗಟ್ಟಿಯಾಗಿವೆ. ಕಣ್ಣಿನಲ್ಲಿ ಮುರಿದುಬಿದ್ದ ಕನಸಿನಂಥದೇನೋ ತೇಲುತ್ತಿದೆ. ಅದು ಅವನ ಪ್ರಾಯದ ಎಲ್ಲ ಹುಡುಗರ ಬೇಸಿಗೆ ರಜೆಯ ಒಂದು ರೂಪಕದಂತಿದೆ.

ಪ್ರಸ್ತುತ

ಡಾ. ಅಮ್ಮಸಂದ್ರ ಸುರೇಶ್

ರಂಗಭೂಮಿಯ ಬೆನ್ನೆಲುಬು ಮುದ್ರಣ ಮಾಧ್ಯಮ

ರಂಗಭೂಮಿ ಮತ್ತು ಮುದ್ರಣ ಮಾಧ್ಯಮಗಳೆರಡು ಪ್ರತ್ಯೇಕ ಮಾಧ್ಯಮಗಳಾದರೂ ಗುರಿ ಮಾತ್ರ ಒಂದೇ ಆಗಿದೆ. ಬಹಳ ಪ್ರಾಚೀನ ಕಾಲದಿಂದಲೇ ರಂಗಭೂಮಿ ಹುಟ್ಟಿಕೊಂಡರೆ, ಜೇಮ್ಸ್ ಅಗಸ್ಟಸ್ ಹಿಕ್ಕಿಯಿಂದ ಭಾರತೀಯ ಪತ್ರಿಕೋದ್ಯಮ ಮತ್ತು ಹರ್ಮನ್ ಮೊಗ್ಲಿಂಗ್ ಕಾಲದಿಂದ ಕನ್ನಡ ಪತ್ರಿಕೋದ್ಯಮ ಆರಂಭವಾಯಿತು. ಪ್ರಾಚೀನ ಕಾಲದಿಂದ ಆರಂಭವಾದ ಕನ್ನಡ ರಂಗಭೂಮಿ ಇಂದಿನವರೆಗೂ ತಲುಪಿರುವ ಹಾದಿಯನ್ನು ಗಮನಿಸಿದಾಗ ಅದು ಸರಿಸುಮಾರು ಎರಡು ಶತಮಾನಗಳಷ್ಟು ಪ್ರಾಚೀನತೆಯನ್ನು ಹೊಂದಿದೆ ಎಂದು ಹೇಳಬಹುದು. ಕನ್ನಡ ನುಡಿಯಾಡುವ ಪ್ರದೇಶಕ್ಕೆ ಪಾರ್ಸಿ ರಂಗಭೂಮಿ ಎಂಬ ನೇರವಾಗಿ ಮಾರುಕಟ್ಟೆಯನ್ನೇ ಗುರಿಯಾಗಿಸಿಕೊಂಡಿದ್ದ ಮನರಂಜನಾ ನಾಟಕ ಪ್ರವೇಶಿಸಿದ ಕೂಡಲೇ ನಮ್ಮಲ್ಲಿದ್ದ ರಂಗಭೂಮಿಯು ಅದೇ ಪಾರ್ಸಿ ರಂಗ ಭೂಮಿಯ ಗುಣಗಳನ್ನು ತನ್ನೊಳಗೆ ಆವಾಹಿಸಿಕೊಂಡು ಮನರಂಜನೆಯೇ ಪ್ರಧಾನ ಉದ್ದೇಶವನ್ನಾಗಿ ಇಟ್ಟುಕೊಂಡ ನಾಟಕಗಳನ್ನು ಅಭಿನಯಿಸಲಾರಂಭಿಸಿತು. ಅದರೊಂದಿಗೆ ಮುದ್ರಣ ಮಾಧ್ಯಮಕ್ಕೆ ಜಾಹೀರಾತು ಎಂಬ ಪೋಷಕ ದ್ರವ್ಯವೊಂದು ದೊರೆಯತೊಡಗಿತು.

ಜಾಹೀರಾತಿನ ಮೂಲಕ ಪತ್ರಿಕೆಗಳಿಗೆ ರಂಗಭೂಮಿಯ ನಂಟು ಆರಂಭವಾಯಿತು ಎಂದು ಹೇಳಬಹುದು. ನಾಟಕಗಳ ವಿಮರ್ಶೆಗೆ ಪತ್ರಿಕೆಗಳಲ್ಲಿ ಸ್ಥಳದ ಕೊರತೆಯಿತ್ತು. ಸಾಮಾನ್ಯವಾಗಿ ವಿಮರ್ಶೆಯೆಂದರೆ ಒಂದು ರೀತಿಯಲ್ಲಿ ನಾಟಕಕ್ಕೆ ಓದುಗ ವರ್ಗವನ್ನು ಪ್ರೇಕ್ಷಕರಾಗಿ ಸೆಳೆಯುವ ಉದ್ದೇಶ ಸಹ ಇದರಲ್ಲಿ ಅಡಗಿತ್ತು. ಈ ಆಲೋಚನೆಯು ಪತ್ರಿಕೋದ್ಯಮವು ರಂಗಭೂಮಿಯನ್ನು ನೋಡುವ ಕ್ರಮದಲ್ಲಿ ವಿಶಿಷ್ಟ ಬದಲಾವಣೆಗಳಾಗಲು ಅನುವು ಮಾಡಿಕೊಟ್ಟಿತು. ಸಾಮಾನ್ಯವಾಗಿ ವೃತ್ತಪತ್ರಿಕೆಗಳು ಹವ್ಯಾಸಿ ರಂಗಭೂಮಿಯನ್ನು ವಿಲಾಸಿ ಎಂದು ಆರಂಭದಲ್ಲಿ ಎಣಿಸಿತು. ರಂಗಭೂಮಿಗೂ ಪತ್ರಿಕೋದ್ಯಮಕ್ಕೂ ಅವಿನಾಭಾವದ ನಂಟಿದೆ. ಅನೇಕ ಪತ್ರಿಕೆಗಳು ಈ ರಂಗಭೂಮಿಯನ್ನು ಒಳಗೊಂಡು ಕಾರ್ಯ ನಿರ್ವಹಿಸುತ್ತಿವೆ ಎನ್ನಬಹುದು. ಒಟ್ಟಾರೆಯಾಗಿ ಆಧುನಿಕ ರಂಗಭೂಮಿಯ ಹುಟ್ಟಿದ ಅವಧಿಯಲ್ಲಿಯೇ ಪ್ರವರ್ಧಮಾನಕ್ಕೆ ಬಂದ ಪತ್ರಿಕೋದ್ಯಮವೂ ತನ್ನ ಸಹೋದರನಂತೆ ರಂಗಭೂಮಿಯನ್ನು ಪೋಷಿಸುವ ಪ್ರಯತ್ನ ಮಾಡುತ್ತಾ ಬಂದಿದೆ. ವೃತ್ತಿ ರಂಗಭೂಮಿಯನ್ನು ಪತ್ರಿಕೆಗಳು ಆರಂಭದಲ್ಲಿ ಹೆಚ್ಚು ಪ್ರೋತ್ಸಾಹದಾಯಕವಾಗಿ ನೋಡಿದವು. ಅರವತ್ತರ ದಶಕದ ಆದಿಭಾಗದಲ್ಲಿ ಕನ್ನಡ ರಂಗಭೂಮಿಗೆ ಹೊಸ ಚಿಂತಕರು ಮತ್ತು ಹೊಸ ತಜ್ಞರು ಬರತೊಡಗಿದರು. ಇದೇ ಕಾಲಘಟ್ಟದಲ್ಲಿ ಪತ್ರಿಕೋದ್ಯಮ ಕ್ಷೇತ್ರಕ್ಕೆ ಬಹುತೇಕ ಹೊಸಬರ ಆಗಮನವಾಯಿತು. ಇದರಿಂದಾಗಿ ರಂಗಭೂಮಿ ಮತ್ತು ಪತ್ರಿಕೋದ್ಯಮದ ನಡುವೆ ವಿಶೇಷವಾಗಿ ಹವ್ಯಾಸಿ ರಂಗಭೂಮಿಯ ಜೊತೆಗೆ ಒಂದು ಹೊಸ ಸಂಬಂಧ ಆರಂಭವಾಯಿತು.

ಇಂದು ವಿಶ್ವ ರಂಗಭೂಮಿ ದಿನ

ರಂಗವಿಮರ್ಶೆಯ ಆರಂಭಿಕ ಕಾಲದಲ್ಲಿನ ಪತ್ರಿಕಾ ವಿಮರ್ಶೆಗಳು ಬಹುತೇಕ ನಾಟಕ ಪ್ರದರ್ಶನವನ್ನು ವೈಭವೀಕರಿಸುವುದು ಮತ್ತು ನಾಟಕಗಳನ್ನು ಹೆಚ್ಚು ಹೆಚ್ಚು ಜನರು ನೋಡುವಂತೆ ಆಕರ್ಷಿಸುವುದೇ ಆಗಿತ್ತು. ಅಲ್ಲಿ ನಾಟಕದ ಗುಣಮಟ್ಟವನ್ನು ಅಳೆಯುವ ನೈಜ ಪ್ರಜ್ಞೆಗಿಂತ ಆ ನಾಟಕಕ್ಕೆ ಪತ್ರಿಕೆಗಳ ಓದುಗ ವರ್ಗವನ್ನು ಪ್ರೇಕ್ಷಕರನ್ನಾಗಿ ಸೆಳೆಯುವ ಜಾಹೀರಾತಿನ ವಿಸ್ತರಣೆಯಂತೆಯೇ ವಿಮರ್ಶೆ ಕೆಲಸ ಮಾಡತೊಡಗಿತ್ತು. (ಗುಬ್ಬಿ ವೀರಣ್ಣ ಅವರ ಜೀವನ ಚರಿತ್ರೆಯಲ್ಲಿ ಬರುವ ಪತ್ರಿಕಾ ಪ್ರಕಟಣೆ ಕುರಿತ ವಿವರಗಳನ್ನು ಆಸಕ್ತರು ಗಮನಿಸಬಹುದು.) ಮುಂಬೈ, ದೆಹಲಿಯಂತಹ ಮಹಾನಗರಗಳ ಪತ್ರಿಕೆಗಳು ವಿಮರ್ಶೆಗಳ ಜೊತೆ ಜೊತೆಗೆ ನಾಟಕಗಳ ಪಾತ್ರಧಾರಿಗಳಿಗೂ ಅಂದರೆ ನಟರಿಗೂ ಪ್ರಚಾರ ನೀಡಲಾರಂಭಿಸಿದವು. ಇದೇ ಪ್ರವೃತ್ತಿಯನ್ನು ಕನ್ನಡದ ಪತ್ರಿಕೆಗಳೂ ಕೂಡ ಅನುಸರಿಸಿದವು. ಇದರಿಂದ ರಂಗಭೂಮಿಗೆ ಬಹಳಷ್ಟು ಸಹಾಯವೂ ಆಯಿತು. ನಟರಿಗೆ ಮತ್ತು ನಾಟಕಗಳಿಗೆ ಸ್ಟಾರ್‌ಗಳನ್ನು ನೀಡುವ ಸಂಪ್ರದಾಯವನ್ನು ಅಂದಿನ ಕಾಲಘಟ್ಟದಲ್ಲಿಯೇ ಪತ್ರಿಕೆಗಳು ಅದರಲ್ಲೂ ಮುಖ್ಯವಾಗಿ ಕನ್ನಡದ ಪತ್ರಿಕೆಗಳು ಆರಂಭಿಸಿದವು. ರಂಗಭೂಮಿಗೆ ಸಂಬಂಧಿಸಿದ ಹಲವು ನಿಯತಕಾಲಿಕೆಗಳು ಕನ್ನಡದಲ್ಲಿ ಪ್ರಕಟವಾದವು. ಡಿ. ಕೆ. ಭಾರದ್ವಾಜ್ ಅವರು ಏಕಾಂಗಿಯಾಗಿ ರಂಗಭೂಮಿಗೆ ಮೀಸಲಾದ ರಂಗಭೂಮಿ ಪತ್ರಿಕೆಯನ್ನು 1925ರಲ್ಲಿ ಆರಂಭಿಸಿದರು. ಒಂದು ದಶಕಕ್ಕೂ ಮೀರಿ ಈ ಪತ್ರಿಕೆ ಯಶಸ್ವಿಯಾಗಿ ಮುನ್ನಡೆಯಿತು. ಬಿ.ವಿ.ಕೃಷ್ಣಮೂರ್ತಿಯವರ ಸಂಪಾದಕತ್ವದಲ್ಲಿ 'ಕಲಾನಿವೇದನ' ಪತ್ರಿಕೆ 1929ರಲ್ಲಿ ಆರಂಭಗೊಂಡಿತು. ಕಾರ್ಕಳದಿಂದ 1933ರಲ್ಲಿ ಆರ್.ಜಿ. ಶೆಣೈಯವರ ಸಂಪಾದಕತ್ವದಲ್ಲಿ 'ಕಲಾಚಂದ್ರ' ಎಂಬ ವಾರಪತ್ರಿಕೆ ಪ್ರಕಟಣೆಯನ್ನು ಆರಂಭಿಸಿತು. 1947ರಲ್ಲಿ ಮಂಗಳೂರಿನಿಂದ ಎಂ.ಎಸ್. ಶೆಟ್ಟಿಯವರ ಸಂಪಾದಕತ್ವದಲ್ಲಿ 'ಕಲಾವಿದ' ಎಂಬ ಮಾಸಪತ್ರಿಕೆ ಪ್ರಕಟಗೊಂಡಿತು. ಕನ್ನಡ ರಂಗಭೂಮಿಯಲ್ಲಿ ಬಹುಕಾಲ ಪ್ರಕಟಗೊಂಡ ರಂಗಭೂಮಿಗೆ ಮೀಸಲಾದ ನಿಯತಕಾಲಿಕೆಗಳು ಸಂಖ್ಯೆ ಯಲ್ಲಿ ಕಡಿಮಾಯದರೂ ಬಂದು ಹೋದ ರಂಗಭೂಮಿ ನಿಯತ ಕಾಲಿಕೆಗಳ ದೊಡ್ಡ ಪಟ್ಟಿಯನ್ನು ಮಾಡಬಹುದು. ಬಳ್ಳಾರಿಯ ಕನ್ನಡ ನಾಟಕ ಕಲಾ ಪರಿಷತ್ತು 1930ರಲ್ಲಿ ಕಲಾ ಎಂಬ ಮಾಸಪತ್ರಿಕೆ ಯೊಂದನ್ನು ಆರಂಭಿಸಿತು ಎಂಬ ಕುರಿತು ಡಾ. ಎಚ್. ವಿ. ಪಾರ್ಶ್ವ ನಾಥ್ ಅವರು ತಮ್ಮ ರಂಗಸಂಗ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಇದೇ ಸಂದರ್ಭದಲ್ಲಿ ಬೆಂಗಳೂರಿನಿಂದಲೂ ಕಲಾ ಎಂಬ ಹೆಸರಿನ ಮತ್ತೊಂದು ನಿಯತಕಾಲಿಕೆಯನ್ನು ಅ.ನ. ಸುಬ್ಬರಾಯರು ಆರಂಭಿ ಸಿದರು. 1942ರಲ್ಲಿ ರಂಗಭೂಮಿಯ ಹಿರಿಯ ಕಲಾವಿದರಾಗಿದ್ದ ಎ. ಎಸ್. ಮಾಧವರಾಯರು ವೃತ್ತಿ ರಂಗಭೂಮಿಗೆ ಮೀಸಲಾದಂತೆ ತಮ್ಮ ಸಂಪಾದಕತ್ವದಲ್ಲಿ ತಮಾಷ ಎಂಬ ಹೆಸರಿನ ಮಾಸ ಪತ್ರಿಕೆಯನ್ನು ಮೈಸೂರಿನಿಂದ ಆರಂಭಿಸಿದರು. ಇದು ಒಂದು ದಶಕಕ್ಕೂ ಹೆಚ್ಚು ಕಾಲ ಪ್ರಕಟಗೊಂಡು ಬೆಂಗಳೂರಿನ ಅಸೋಸಿಯೇಟೆಡ್ ಅಮೆಚೂರ್ ಆರ್ಟಿಸ್ಟ್ ಸಂಸ್ಥೆಯು ಫೆಬ್ರವರಿ 1969ರಲ್ಲಿ ನಾಟ್ಯ ಭಾರತಿ ಪತ್ರಿಕೆಯನ್ನು ಆರಂಭಿಸಿತು. ಸಮುದಾಯ ವಾರ್ತಾಪತ್ರವನ್ನು ಸಮುದಾಯದ ತಂಡ ಪ್ರಸಿದ್ಧ ರಂಗನಿರ್ದೇಶಕರಾದ ಪ್ರಸನ್ನರವರ ಸಂಪಾದಕತ್ವದಲ್ಲಿ 1978ರಲ್ಲಿ ಆರಂಭಿಸಿದರು. ರಂಗಭೂಮಿ ಕುರಿತಾದ ಲೇಖನಗಳು, ರಂಗಕೃತಿ ಹಾಗೂ ನಾಟಕಗಳ ವಿಮರ್ಶೆಗಳು, ಜನಪರ ಕಾಳಜಿಯ ಬರಹಗಳು, ಕಥೆ ಕವನ ಹೀಗೆ ಹತ್ತಾರು ವಿಷಯಗಳನ್ನು ಒಳಗೊಂಡು ಸಾಂಸ್ಕೃತಿಕ ವಲಯದ ಗಂಭೀರ ಪತ್ರಿಕೆಯಾಗಿ 'ಸಮುದಾಯ ವಾರ್ತಾಪತ್ರ ' ರೂಪುಗೊಂಡಿತು.

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕಲಾ ಬಳಗವೊಂದು ಅಸ್ತಿತ್ವದಲ್ಲಿತ್ತು. ಈ ಬಳಗದಲ್ಲಿ ಶ್ರೇಷ್ಠ ಕಲಾವಿದರಾಗಿದ್ದ ಬಿ. ಕೃಷ್ಣ ಅವರ ಸಂಪಾದಕತ್ವದಲ್ಲಿ ಏಪ್ರಿಲ್ 1982ರಲ್ಲಿ 'ರಂಗಮಂಟಪ' ತ್ರೈಮಾಸಿಕ ಪತ್ರಿಕೆಯು ಆರಂಭವಾಯಿತು. ಅರವತ್ತರ ದಶಕದ ಆದಿಭಾಗದಲ್ಲಿ ರಂಗಭೂಮಿ ಮತ್ತು ಪತ್ರಿಕೋದ್ಯಮದ ನಡುವೆ, ವಿಶೇಷವಾಗಿ ಹವ್ಯಾಸೀ ರಂಗಭೂಮಿಯ ಜೊತೆಗೆ ಒಂದು ಹೊಸ ಸಂಬಂಧ ಆರಂಭವಾಯಿತು. ಇದೇ ಕಾಲದಲ್ಲಿ ರಾಜ್ಯ ಮಟ್ಟದ ಹಲವು ಪತ್ರಿಕೆಗಳು ಹೊಸ ತಲೆಮಾರಿನ ಪತ್ರಕರ್ತರಿಂದ ಹವ್ಯಾಸೀ ರಂಗಭೂಮಿಯನ್ನು ಕುರಿತು ಪ್ರತ್ಯೇಕ ಲೇಖನಗಳನ್ನು ಹಾಗೂ ವಿಶಿಷ್ಟ ವಿಮರ್ಶೆಗಳನ್ನೂ ಪತ್ರಿಕೆಗಳು ಬರೆಸಲು ಆರಂಭಿಸಿದವು. ರಂಗನಾಥರಾವ್, ಎಂ.ಬಿ.ಸಿಂಗ್, ವೈಕುಂಠರಾಜು, ಜಿ.ಎಸ್.ಸದಾಶಿವ ಮುಂತಾದ ಹಿರಿಯ ಪತ್ರಕರ್ತರು ಈ ಕ್ಷೇತ್ರದಲ್ಲಿ ಹಲವು ಹೊಸತುಗಳನ್ನು ಕಂಡುಕೊಂಡು ಅವುಗಳನ್ನು ತಮ್ಮ ಬರವಣಿಗೆಯಲ್ಲಿ ಇಳಿಸಿದರು.

ಈ ಎಲ್ಲಾ ಸಂಕಷ್ಟಗಳನ್ನು ರಂಗಭೂಮಿ ಎದುರಿಸುತ್ತಾ ಇರುವಾಗಲೇ ಪತ್ರಿಕೋದ್ಯಮಕ್ಕೂ ಜಾಗತೀಕರಣದ ಭಾರೀ ಹೊಡೆತಗಳು ಬೀಳತೊಡಗಿದವು. ಅಲ್ಲಿ ವಿಸ್ತೃತ ಲೇಖನಗಳನ್ನು ಆಹ್ವಾನಿತ ಲೇಖಕರು ಮಾತ್ರ ಬರೆಯುವಂತಹ ವಾತಾವರಣ ಕನ್ನಡ ಪತ್ರಿಕೋದ್ಯಮದಲ್ಲಿಯೂ ಉಂಟಾಗತೊಡಗಿತ್ತು. ವಿಮರ್ಶೆಗಿಂತ ಚುಟುಕು ಸುದ್ದಿಗಳು ಮತ್ತು ಜಾಹೀರಾತಿಗೆ ನೀಡಬೇಕಾದ ಅವಕಾಶ ಇವೆಲ್ಲವೂ ಹೆಚ್ಚಾಗಿ ಕಲೆಯನ್ನು ಕುರಿತ ಆಸಕ್ತಿಯಿದ್ದರೂ ಪತ್ರಕರ್ತರು ಏನನ್ನೂ ಮಾಡಲಾಗದ ಸ್ಥಿತಿ ತಲುಪಿದರು. ಹೀಗಾಗಿ ಯಾವುದೇ ರಂಗಭೂಮಿಯನ್ನು ಕುರಿತ ವಿವರವು ಸಣ್ಣಸುದ್ದಿಯಾಗಿ ಮಾತ್ರ ವೃತ್ತ ಪತ್ರಿಕೆಗಳಲ್ಲಿ ಕಾಣಿಸತೊಡಗಿತು.

ಇವತ್ತಿನ ಪತ್ರಿಕಾಲೋಕವನ್ನು ಅದರಲ್ಲೂ ಮುಖ್ಯವಾಗಿ ಕನ್ನಡ ಪತ್ರಿಕೋದ್ಯಮವನ್ನು ಗಮನಿಸಿದರೆ ಅದು ಸೋಜಿಗ ಹುಟ್ಟಿಸುವಷ್ಟು ವಿಸ್ತಾರವಾಗಿ ತನ್ನ ಬಾಹುಗಳನ್ನು ಚಾಚಿಕೊಂಡಿದೆ. ವಸ್ತು ವೈವಿಧ್ಯವೂ ಅಗಾಧವಾಗಿದೆ. ಅದೇ ರೀತಿ ಸ್ಪರ್ಧೆ ಕೂಡ ಇದೆ. ಎಲ್ಲಾ ರೀತಿಯ ಹೊಸ ಸ್ಪರ್ಧೆಗಳ ನಡುವೆಯೂ ರಂಗಭೂಮಿ ಮತ್ತು ಮುದ್ರಣ ಮಾಧ್ಯಮಗಳೆರಡೂ ಕನ್ನಡಿಗರ ಬದುಕನ್ನು ವರ್ಣರಂಜಿತಗೊಳಿಸುವ ಪ್ರಯತ್ನವನ್ನಂತೂ ಸದಾ ಚಾಲ್ತಿಯಲ್ಲಿಟ್ಟಿವೆ.

ಪಂಚಾಯತ್ ವ್ಯವಸ್ಥೆಗೆ ಶಕ್ತಿ ತುಂಬಿದ ಹಣಕಾಸು ಆಯೋಗ

ಗಂಟಾಘೋಷ

ಗುರುರಾಜ್ ಗಂಟಿಹೊಳೆ

vveditoped@gmail.com

ಭಾರತದ ಹಣಕಾಸು ಆಯೋಗವು ಕೇಂದ್ರ ಸರಕಾರ ಮತ್ತು ರಾಜ್ಯಗಳ ನಡುವಿನ ಆರ್ಥಿಕ ಸಂಪನ್ಮೂಲಗಳ ವಿತರಣೆಯನ್ನು ನಿರ್ಧರಿಸುವ ಜವಾಬ್ದಾರಿಯುತ ಸಾಂವಿಧಾನಿಕ ಸಂಸ್ಥೆಯಾಗಿದೆ. 2019ರ ನವೆಂಬರ್‌ನಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ನೇಮಿಸಿದ 17ನೇ ಹಣಕಾಸು ಆಯೋಗವು ದೇಶದ ಆರ್ಥಿಕ ಆರೋಗ್ಯವನ್ನು ನಿರ್ಣಯಿಸುವ ಮತ್ತು ಫೆಡರಲ್ ಆಡಳಿತವನ್ನು ಬೆಂಬಲಿಸಲು ಸಂಪನ್ಮೂಲಗಳ ಸಮಾನ ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಕಾರ್ಯವನ್ನು ಹೊಂದಿದೆ.

ಹಣಕಾಸು ಆಯೋಗವು ಸಂವಿಧಾನದ 280ನೇ ವಿಧಿಯ ಅಡಿಯಲ್ಲಿ ರಾಷ್ಟ್ರಪತಿಗಳಿಂದ ರಚಿಸಲ್ಪಟ್ಟ ಒಂದು ಸಾಂವಿಧಾನಿಕ ಸಂಸ್ಥೆಯಾಗಿದೆ. ಇದು ಪ್ರತಿ 5ನೇ ವರ್ಷಕ್ಕೊಮ್ಮೆ ಅಥವಾ ರಾಷ್ಟ್ರಪತಿಗಳು ಅಗತ್ಯವೆಂದು ಭಾವಿಸಿದರೆ, ಅವಧಿಪೂರ್ವದಲ್ಲೂ ರಚಿಸಲಾಗುವ ಅರೆ-ನ್ಯಾಯಾಂಗ ಸಂಸ್ಥೆಯಾಗಿದೆ.

ಇದು ಅಧ್ಯಕ್ಷರು ಮತ್ತು ರಾಷ್ಟ್ರಪತಿಗಳಿಂದ ನೇಮಕಗೊಳ್ಳುವ 4 ಇತರ ಸದಸ್ಯರನ್ನು ಒಳಗೊಂಡಿದೆ. ಅವರು ಮರು ನೇಮಕಾತಿಗೆ ಅರ್ಹರಾಗಿರುತ್ತಾರೆ. ಸಂವಿಧಾನದಲ್ಲಿ ಒದಗಿಸಲಾದ ಸದಸ್ಯರ ಅರ್ಹತೆಗಳನ್ನು ಸಂಸತ್ತು ನಿರ್ಧರಿಸುತ್ತದೆಯಾದ್ದರಿಂದ, ಅದಕ್ಕೆ ಅನುಗುಣವಾಗಿ, ಸಂಸತ್ತು ಈ ಕೆಳಗಿನ ವಿಶೇಷಣಗಳನ್ನು ನಿರ್ದಿಷ್ಟಪಡಿಸಿದೆ:

ಅಧ್ಯಕ್ಷರು ಸಾರ್ವಜನಿಕ ವ್ಯವಹಾರಗಳಲ್ಲಿ ಅನುಭವ ಹೊಂದಿರುವ ವ್ಯಕ್ತಿಯಾಗಿರಬೇಕು. ಜೊತೆಗೆ, ಸದಸ್ಯರನ್ನು ಈ ಕೆಳಗಿನ ಅನುಭವ ಹೊಂದಿರುವ ಕ್ಷೇತ್ರದಿಂದ ಆಯ್ಕೆ ಮಾಡಬೇಕೆಂಬ ಸಹಜ ನಿಯಮಗಳನ್ನು ಮಾಡಲಾಗಿದ್ದು, (ಅ) ಹೈಕೋರ್ಟ್‌ನ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹರಾಗಿರುವ ಒಬ್ಬರು. (ಆ) ಸರಕಾರದ ಹಣಕಾಸು ಮತ್ತು ಖಾತೆಗಳ ಬಗ್ಗೆ ವಿಶೇಷ ಜ್ಞಾನ ಹೊಂದಿರುವ ವ್ಯಕ್ತಿ. (ಇ) ಹಣಕಾಸು ವಿಷಯಗಳು ಮತ್ತು ಆಡಳಿತದಲ್ಲಿ ವ್ಯಾಪಕ ಅನುಭವ ಹೊಂದಿರುವ ವ್ಯಕ್ತಿ. (ಈ) ಅರ್ಥಶಾಸ್ತ್ರದ ಬಗ್ಗೆ ವಿಶೇಷ ಜ್ಞಾನ ಹೊಂದಿರುವ ವ್ಯಕ್ತಿಗಳು ಸೇರಿದಂತೆ ಈ ಆಯೋಗದ ತಂಡ ರಚನೆಯಾಗುತ್ತದೆ.

1951ರಲ್ಲಿ ಕೆ.ಸಿ.ನಿಯೋಗಿ ನೇತೃತ್ವದಲ್ಲಿ ರಚನೆಯಾದ ಮೊದಲ ಹಣಕಾಸು ಆಯೋಗವು ಕೇಂದ್ರ ಮತ್ತು ರಾಜ್ಯಗಳ ನಡುವೆ ವಿಂಗಡಿಸಲಾದ ತೆರಿಗೆಗಳ ನಿವ್ವಳ ಆದಾಯದ ವಿತರಣೆಯ ಕುರಿತು ಶಿಫಾರಸು ಇದರ ಪ್ರಾಥಮಿಕ ಕಾರ್ಯವಾಗಿತ್ತು, ಜೊತೆಗೆ ರಾಜ್ಯಗಳಿಗೆ ಅನುದಾನ-ಸಹಾಯವನ್ನು ನಿಯಂತ್ರಿಸುವ ತತ್ವಗಳನ್ನು ಸಹ ನೀಡುವುದಾಗಿತ್ತು. ಇದಾಗಿ, ಪ್ರತಿ 5 ವರ್ಷಕ್ಕೊಮ್ಮೆಯಂತೆ, ಇಲ್ಲಿಯವರೆಗೆ 17 ಹಣಕಾಸು ಆಯೋಗಗಳು ರಚನೆಯಾಗಿವೆ.

ಹೀಗೆ ರಚನೆಯಾದ ಹಣಕಾಸು ಆಯೋಗವು, ಕೇಂದ್ರ ಮತ್ತು ರಾಜ್ಯಗಳ ನಡುವೆ ನಿವ್ವಳ ತೆರಿಗೆ ಆದಾಯದ ವಿತರಣೆ ಮತ್ತು ಅಂತಹ ಆದಾಯದ ಆಯಾ ಪಾಲುಗಳ ರಾಜ್ಯಗಳ ನಡುವೆ ಹಂಚಿಕೆ ಕುರಿತು ಶಿಫಾರಸುಗಳು, ಕೇಂದ್ರದಿಂದ ರಾಜ್ಯಗಳಿಗೆ ಅನುದಾನ-ಸಹಾಯವನ್ನು ನಿಯಂತ್ರಿಸುವ ತತ್ವಗಳು, ರಾಜ್ಯದಲ್ಲಿನ ಪಂಚಾಯತ್‌ಗಳು ಮತ್ತು ಪುರಸಭೆಗಳ ಸಂಪನ್ಮೂಲಗಳನ್ನು ಪೂರೈಸಲು ರಾಜ್ಯದ ಕ್ರೋಢೀಕೃತ ನಿಧಿಯನ್ನು ಹೆಚ್ಚಿಸಲು ಅಗತ್ಯವಿರುವ ಕ್ರಮಗಳು ಸೇರಿದಂತೆ ಅದರದೇ ಆದ ವಿಶೇಷತೆಗಳನ್ನು ಒಳಗೊಂಡ ಶಿಫಾರಸುಗಳ ವರದಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸುತ್ತದೆ, ಅವರು ಅದನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ಇಡುತ್ತಾರೆ.

ಹಾಗೆಯೇ, ರಾಜ್ಯ ಹಣಕಾಸು ಆಯೋಗ ಎಂಬ ಸಂಸ್ಥೆ ರಾಜ್ಯಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದು, 1992ರಲ್ಲಿ 73ನೇ ಮತ್ತು 74ನೇ ಸಾಂವಿಧಾನಿಕ ತಿದ್ದುಪಡಿಗಳ ಅಡಿಯಲ್ಲಿ ರಾಜ್ಯ ಹಣಕಾಸು ಆಯೋಗವನ್ನು ಸ್ಥಾಪಿಸಲಾಯಿತು, ಇದು ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಪುರಸಭೆಗಳಿಗೆ ಸಾಂವಿಧಾನಿಕ ಸ್ಥಾನಮಾನವನ್ನು ನೀಡುವ ಮೂಲಕ ಭಾರತದಲ್ಲಿ ಸ್ಥಳೀಯ ಸ್ವ-ಆಡಳಿತವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಹಣಕಾಸು ಮೌಲ್ಯಮಾಪನ, ಸಂಪನ್ಮೂಲ ಹಂಚಿಕೆ, ಅನುದಾನ ಮತ್ತು ನೆರವು, ವಿಪತ್ತು ನಿರ್ವಹಣೆ, ನೀತಿ ಶಿಫಾರಸು ಇತ್ಯಾದಿಗಳು ಇದರ ಜವಾಬ್ದಾರಿಗಳು.

ಸಂವಿಧಾನದ 243-ಐನೇ ವಿಧಿಯ ಆದೇಶಿಸಿದಂತೆ, ಪ್ರತಿ ಐದು ವರ್ಷಗಳಿಗೊಮ್ಮೆ ರಾಜ್ಯ ಹಣಕಾಸು ಆಯೋಗವನ್ನು ನೇಮಿಸುವ ಜವಾಬ್ದಾರಿಯನ್ನು ಪ್ರತಿ ರಾಜ್ಯದ ರಾಜ್ಯಪಾಲರು ಹೊಂದಿರುತ್ತಾರೆ. ಪ್ರಸ್ತುತದಲ್ಲಿ ಅಧ್ಯಕ್ಷ ಎನ್.ಕೆ.ಸಿಂಗ್ ನೇತೃತ್ವದ 17ನೇ ಹಣಕಾಸು ಆಯೋಗವು 2020 ರಿಂದ 2025 ರವರೆಗಿನ ಅವಧಿಗೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ನಿಧಿಯ ವಿಕೇಂದ್ರೀಕರಣಕ್ಕಾಗಿ ಸೂತ್ರವನ್ನು ಶಿಫಾರಸು ಮಾಡುವ ಕಾರ್ಯವನ್ನು ವಹಿಸಲಾಗಿತ್ತು.

17ನೇ ಹಣಕಾಸು ಆಯೋಗದ ಶಿಫಾರಸುಗಳ ಕೆಲವು ಪ್ರಮುಖ ಅಂಶಗಳು ಹೀಗಿವೆ:

1. **ಲಂಬ ವಿಕೇಂದ್ರೀಕರಣ:** 17ನೇ ಹಣಕಾಸು ಆಯೋಗವು ಕೇಂದ್ರ ತೆರಿಗೆಗಳಲ್ಲಿ 41% ಪಾಲನ್ನು ರಾಜ್ಯಗಳಿಗೆ ವರ್ಗಾಯಿಸಲು ಶಿಫಾರಸು ಮಾಡಿದೆ ಮತ್ತು 14ನೇ ಹಣಕಾಸು ಆಯೋಗ ನಿಗದಿಪಡಿಸಿದ ಪಾಲನ್ನು ಕಾಯ್ದುಕೊಳ್ಳುವ ಮೂಲಕ, ಕೇಂದ್ರ ಸರಕಾರದ ಮೇಲೆ ಅತಿಯಾಗಿ ಅವಲಂಬಿತವಾಗದೆ ರಾಜ್ಯಗಳು ತಮ್ಮ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಬಹುದೆಂದು ತಿಳಿಸಿದೆ.
2. **ಅಡ್ಡ ವಿಕೇಂದ್ರೀಕರಣ:** ರಾಜ್ಯಗಳ ನಡುವೆ 41% ಸಂಪನ್ಮೂಲಗಳನ್ನು ಹೇಗೆ ವಿಂಗಡಿಸಬೇಕು ಎಂಬುದನ್ನು ಸಮತಲ ವಿಕೇಂದ್ರೀಕರಣ ಸೂತ್ರವು ನಿರ್ಧರಿಸುತ್ತದೆ. 17ನೇ ಆಯೋಗವು ಜನಸಂಖ್ಯೆ, ಆದಾಯದ ಅಂತರ ಮತ್ತು ಹಣಕಾಸಿನ ಸಾಮರ್ಥ್ಯದಂತಹ ಮಾನದಂಡಗಳನ್ನು ಆಧರಿಸಿ ಈ ಹೊಸ ಸೂತ್ರವನ್ನು ಶಿಫಾರಸು ಮಾಡಿದೆ.
3. **ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು:** ಆಯೋಗವು ಐದು ವರ್ಷಗಳ ಅವಧಿಯಲ್ಲಿ (2020-2025) ಸ್ಥಳೀಯ ಸಂಸ್ಥೆಗಳಿಗೆ ರೂ. 60,750 ಕೋಟಿಗಳ ಅನುದಾನ ನೀಡಲು ಶಿಫಾರಸು ಮಾಡಿತು. ಈ ನಿಧಿಗಳ ಮೂಲಕ ನಗರ, ಗ್ರಾಮೀಣ ಆಡಳಿತವನ್ನು ಬಲಪಡಿಸಲು ಮತ್ತು ನಾಗರಿಕರಿಗೆ ಮೂಲಭೂತ ಸೇವೆಗಳನ್ನು ಒದಗಿಸಲು ತಿಳಿಸಿದೆ.
4. **ಕೆಲವು ರಾಜ್ಯಗಳಿಗೆ ವಿಶೇಷ ಅನುದಾನಗಳು:** ಕಠಿಣ ಭೌಗೋಳಿಕ ಭೂಪ್ರದೇಶ, ದೊಡ್ಡ ಬುಡಕಟ್ಟು ಜನಸಂಖ್ಯೆ ಮತ್ತು ಕಡಿಮೆ ತಲಾ ಆದಾಯದಂತಹ ಸವಾಲುಗಳನ್ನು ಎದುರಿಸುತ್ತಿರುವ ಕೆಲವು ರಾಜ್ಯಗಳಿಗೆ ವಿಶೇಷ ಅನುದಾನಗಳನ್ನು ಆಯೋಗವು ಶಿಫಾರಸು ಮಾಡಿದೆ.
5. **ಕಾರ್ಯಕ್ಷಮತೆ ಆಧಾರಿತ ಅನುದಾನಗಳು:** ವಿಶೇಷವಾಗಿ ಹಣಕಾಸಿನ ಶಿಸ್ತನ್ನು ಸುಧಾರಿಸಲು, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನುಷ್ಠಾನಗೊಳಿಸಲು ಬದ್ಧವಾಗಿರುವ ರಾಜ್ಯಗಳಿಗೆ ಹಣಕಾಸಿನ ಜವಾಬ್ದಾರಿಯನ್ನು ಉತ್ತೇಜಿಸುವ ಸಲುವಾಗಿ, ಆಯೋಗವು ಕಾರ್ಯಕ್ಷಮತೆ ಆಧಾರಿತ ಅನುದಾನಗಳನ್ನು ಪರಿಚಯಿಸಲು ಶಿಫಾರಸು ಮಾಡಿದೆ.

ಈ ಮೂಲಕ, ಈ ಹಿಂದಿನ ಆಯೋಗಗಳಿಗಿಂತ ಹೆಚ್ಚು ಅಧಿಕಾರ ಮತ್ತು ಹಣಕಾಸು ಅನುದಾನಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಗೆ ನೀಡಲು ಹೇಳುವ ಮೂಲಕ, ಗ್ರಾಮೀಣ ಅಭಿವೃದ್ಧಿ, ಅಧಿಕಾರ ವಿಕೇಂದ್ರೀಕರಣಕ್ಕೆ ಹೆಚ್ಚು ಒತ್ತು ನೀಡಿದೆ ಎನ್ನಬಹುದು.

1. **ಸಮಾನ ವಿತರಣೆ:** 17ನೇ ಹಣಕಾಸು ಆಯೋಗವು, ಆರ್ಥಿಕವಾಗಿ ದುರ್ಬಲವಾಗಿರುವ, ವಿಶಿಷ್ಟ ಸವಾಲುಗಳನ್ನು ಹೊಂದಿರುವ ರಾಜ್ಯಗಳಿಗೆ ಸಂಪನ್ಮೂಲಗಳ ನ್ಯಾಯಯುತ ಮತ್ತು ಸಮಾನ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿತು, ಸೀಮಿತ ಆರ್ಥಿಕ ಸಂಪನ್ಮೂಲಗಳೊಂದಿಗೆ ಹೆಚ್ಚಾಗಿ ಹೋರಾಡುವ ವಿಶೇಷ ರಾಜ್ಯಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳು ಇದರಲ್ಲಿ ಸೇರಿವೆ.
2. **ಹಣಕಾಸಿನ ಜವಾಬ್ದಾರಿಯ ಮೇಲೆ ಗಮನಹರಿಸಿ:** ರಾಜ್ಯಗಳು ಹಣಕಾಸಿನ ಜವಾಬ್ದಾರಿ ಕ್ರಮಗಳಿಗೆ ಬದ್ಧವಾಗಿರುವ ಅಗತ್ಯವನ್ನು ಒತ್ತಿಹೇಳುವ ಮೂಲಕ ಮತ್ತು ಕಾರ್ಯಕ್ಷಮತೆ ಆಧಾರಿತ ಅನುದಾನಗಳನ್ನು ಶಿಫಾರಸು ಮಾಡುವ ಮೂಲಕ, ಆಯೋಗವು ರಾಜ್ಯ ಸರಕಾರಗಳ ಆರ್ಥಿಕ ಆರೋಗ್ಯವನ್ನು ಸುಧಾರಿಸುವ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವ ಗುರಿಯನ್ನು ತಿಳಿಸಿದೆ.
3. **ಸ್ಥಳೀಯ ಸಂಸ್ಥೆಗಳಿಗೆ ಬೆಂಬಲ:** ಸ್ಥಳೀಯ ಸಂಸ್ಥೆಗಳ (ಪಂಚಾಯತ್‌ಗಳು ಮತ್ತು ಪುರಸಭೆಗಳು) ಮೇಲೆ ಆಯೋಗದ ಬೆಂಬಲ ಗಮನಾರ್ಹವಾಗಿದೆ. ವಿಕೇಂದ್ರೀಕೃತ ಸೇವೆಗಳ ವಿತರಣೆ ಮತ್ತು ಸ್ಥಳೀಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಈ ಸಂಸ್ಥೆಗಳಿಗೆ ಅನುದಾನಗಳನ್ನು ಒದಗಿಸುವುದು ಅತ್ಯಗತ್ಯ.
4. **ಹೊಸ ಮಾನದಂಡಗಳ ಸೇರ್ಪಡೆ:** ರಾಜ್ಯಗಳ ನಡುವಿನ ಆರ್ಥಿಕ ಅಸಮಾನತೆಯನ್ನು ಗಣನೆಗೆ ತೆಗೆದುಕೊಳ್ಳುವ ಆದಾಯದ ಅಂತರದಂತಹ ಹೊಸ ನಿಯತಾಂಕಗಳನ್ನು ಅಪವರ್ತನಗೊಳಿಸುವ ಮೂಲಕ ಆಯೋಗವು ಸಮತಲ ವಿಕೇಂದ್ರೀಕರಣದ ಮಾನದಂಡಗಳನ್ನು ವಿಸ್ತರಿಸಿದೆ.
5. **ಸುಸ್ಥಿರತೆಯ ಮೇಲೆ ಗಮನಹರಿಸಿ:** ಹಣಕಾಸಿನ ಜವಾಬ್ದಾರಿ ಮತ್ತು ಪರಿಸರ ಕಾಳಜಿಗಳೆರಡರಲ್ಲೂ ಸುಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವ ಪ್ರಾಮುಖ್ಯತೆಯನ್ನು ಆಯೋಗವು ಒತ್ತಿಹೇಳಿದೆ. ಹವಾಮಾನ ಬದಲಾವಣೆ ಮತ್ತು ಇತರ ದೀರ್ಘಕಾಲೀನ ಸವಾಲುಗಳನ್ನು ಪರಿಹರಿಸುವ ಅಗತ್ಯವನ್ನು ಅದು ಗುರುತಿಸಿದೆ.

ಇಷ್ಟಾಗಿಯೂ ಕೆಲವು ಅಪವಾದಗಳು, ಟೀಕೆಗಳು ಈ ಆಯೋಗದ ಮೇಲೆ ಬಂದಿದ್ದು, ಜನಸಂಖ್ಯಾವಾರು ವಿತರಣೆ ಮೇಲೆ ಹೆಚ್ಚು ಗಮನಹರಿಸಿದ್ದರಿಂದ, ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದ ರಾಜ್ಯಗಳನ್ನು (ಕೇರಳ, ತಮಿಳುನಾಡು, ಇತ್ಯಾದಿ) ದಂಡಿಸುವಂತೆಯೂ ಮತ್ತು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ರಾಜ್ಯಗಳಿಗೆ ಪರವಾಗಿದೆ ಎಂದು ವಿಮರ್ಶಕರು ವಾದಿಸುತ್ತಾರೆ, ಹೆಚ್ಚು ಜನಸಂಖ್ಯೆಗಳಿರುವ ರಾಜ್ಯಗಳಲ್ಲಿ ಹಲವು ಅಭಿವೃದ್ಧಿಯಾಗದೇ ಹೆಚ್ಚಿನ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿವೆ. ಇದು ಜನಸಂಖ್ಯಾ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದ ರಾಜ್ಯಗಳಿಗೆ ಅಸಮಾನ ಪರಿಸ್ಥಿತಿಯನ್ನು ಸೃಷ್ಟಿಸಬಹುದು ಎಂಬುದು ಕೆಲವರ ಅಭಿಪ್ರಾಯ.

ಜೊತೆಗೆ, ಕೆಲವು ರಾಜ್ಯಗಳಿಗೆ ಕಡಿಮೆ ಪಾಲು: ಕೆಲವು ರಾಜ್ಯಗಳು ಆಯೋಗದ ಶಿಫಾರಸುಗಳಿಂದ ಪ್ರಯೋಜನ ಪಡೆಯುವ ನಿರೀಕ್ಷೆಯಿದ್ದರೆ, ಇನ್ನು ಕೆಲವು ರಾಜ್ಯಗಳು ತಮ್ಮ ಪಾಲಿನ ಬಗ್ಗೆ ಅತೃಪ್ತವಾಗಿವೆ. ಉದಾಹರಣೆಗೆ, ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಉತ್ತರ ಮತ್ತು ಬಡ ರಾಜ್ಯಗಳು ತಮ್ಮ ಸಂಪನ್ಮೂಲಗಳ ಪಾಲು ತಮ್ಮ ಅಭಿವೃದ್ಧಿ ಅಗತ್ಯಗಳಿಗೆ ಅನುಗುಣವಾಗಿಲ್ಲ ಎಂದು ದೂರಿವೆ.

ಉದಯೋನ್ಮುಖ ಸಮಸ್ಯೆಗಳ ಮೇಲೆ ಸೀಮಿತ ಗಮನ: 17ನೇ ಹಣಕಾಸು ಆಯೋಗವು ಪರಿಸರ ಸುಸ್ಥಿರತೆಯನ್ನು ಪರಿಗಣಿಸಿದ್ದರೂ, ತ್ವರಿತ ನಗರೀಕರಣ, ನಿರುದ್ಯೋಗ ಮತ್ತು ಡಿಜಿಟಲ್ ಆರ್ಥಿಕತೆಗಳ ಏರಿಕೆಯಂತಹ ಉದಯೋನ್ಮುಖ ಆರ್ಥಿಕ ಮತ್ತು ಸಾಮಾಜಿಕ ಸವಾಲುಗಳನ್ನು ಪರಿಹರಿಸಲು ಅಗತ್ಯ ಪ್ರಯತ್ನಗಳನ್ನು ಮಾಡದಿದ್ದಕ್ಕಾಗಿ ಟೀಕಿಸಲಾಗಿದೆ.

ಕೇಂದ್ರ ಅನುದಾನಗಳ ಮೇಲಿನ ಅವಲಂಬನೆ: ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಗಮನಾರ್ಹ ವರ್ಗಾವಣೆಗಳನ್ನು ಶಿಫಾರಸು ಮಾಡಬೇಕಿತ್ತು ಮತ್ತು ರಾಜ್ಯಗಳು ತಮ್ಮದೇ ಆದ ಆದಾಯದ ಹರಿವುಗಳನ್ನು ಉತ್ಪಾದಿಸಲು ಮತ್ತು ಹೆಚ್ಚು ಸ್ವಾವಲಂಬಿಯಾಗಲು ಆಯೋಗವು, ಪ್ರೋತ್ಸಾಹಿಸುವ ಬದಲು, ಒಕ್ಕೂಟದ ಮೇಲೆ ಆರ್ಥಿಕ ವ್ಯವಸ್ಥೆಯ ಮೇಲೆಯೇ ಅವಲಂಬನೆಯಾಗುವಂತೆ ನಡೆದುಕೊಂಡಿದೆ ಎಂಬಿತ್ಯಾದಿ ಆರೋಪಗಳನ್ನು ಸಹಜವಾಗಿ ಮಾಡಲಾಗಿದೆ. ಇಷ್ಟೆಲ್ಲದರ ನಡುವೆ, 17 ನೇ ಹಣಕಾಸು ಆಯೋಗವು 2020 ರಿಂದ 2025 ರವರೆಗಿನ ಭಾರತದ ಆರ್ಥಿಕ ನೈಜತೆ ಮತ್ತು ಕಾರ್ಯಾತ್ಮಕವನ್ನು ವ್ಯಾಖ್ಯಾನಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದೆ. ಸ್ಥಳೀಯ ಸಂಸ್ಥೆಗಳಿಗೆ ಸಮಾನ ಸಂಪನ್ಮೂಲ ವಿತರಣೆ, ಹಣಕಾಸಿನ ಜವಾಬ್ದಾರಿ ಮತ್ತು ಅನುದಾನಗಳ ಮೇಲಿನ ಆಯೋಗದ ಗಮನವು ಭಾರತದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಅದರ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಆದಾಗ್ಯೂ, ಜನಸಂಖ್ಯಾ ಮಾನದಂಡಗಳ ಮೇಲಿನ ಹೆಚ್ಚಿದ ಒತ್ತು ಮತ್ತು ವಿವಿಧ ರಾಜ್ಯಗಳ ಅಗತ್ಯಗಳನ್ನು ಸಮತೋಲನಗೊಳಿಸುವ ಸಂಕೀರ್ಣತೆಯು ಚರ್ಚೆಗೆ ಕಾರಣವಾಗಿದೆ.

ಆಯೋಗದ ನಿಜವಾದ ಯಶಸ್ಸು ರಾಜ್ಯಗಳು ಹಂಚಿಕೆಯಾದ ಸಂಪನ್ಮೂಲಗಳನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು ಮತ್ತು ಹಣಕಾಸಿನ ಶಿಸ್ತು, ಸಮಾನ ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿಯ ದೀರ್ಘಕಾಲೀನ ಉದ್ದೇಶಗಳನ್ನು ಸಾಧಿಸಲಾಗುತ್ತದೆಯೇ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಇದರಂತೆಯೇ, ಇತರೆ ಪಕ್ಷಗಳು ಅಧಿಕಾರ ಹೊಂದಿರುವ ರಾಜ್ಯ ಸರ್ಕಾರಗಳು ಕೇಂದ್ರದಲ್ಲಿರುವುದು ಅನ್ಯಪಕ್ಷದ ಸರಕಾರವೆಂಬ ಒಂದೇ ಕಾರಣಕ್ಕೆ, ತಪ್ಪು ಮಾಹಿತಿಗಳನ್ನು ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಹೇಗೆಂದರೆ ಹಾಗೆ ಹೇಳಿ ದಾರಿತಪ್ಪಿಸುವುದು, ಸುಳ್ಳು ಜಾಹೀರಾತು ನೀಡುವುದು, ಕಾರ್ಯಾಂಗವನ್ನು ನ್ಯಾಯಾಂಗಕ್ಕೆ ಎಳೆದು ತರುವುದು ಮಾಡುತ್ತ ವೃಥಾ ಬಿಕ್ಕಟ್ಟು ಸೃಷ್ಟಿಸುವ ಬದಲು ಜನಾನುರಾಗಿ ಕೆಲಸಗಳನ್ನು ಮಾಡುತ್ತ ಹೋದಾಗ, ಎಂತಹ ವಿರೋಧಿಗಳನ್ನೂ ಗೆಲ್ಲಬಹುದಲ್ಲವೇ?!

ಅಧಿಕಾರದಲ್ಲಿರುವವರು ಯೋಚಿಸಬೇಕು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 72

ಸಮಾಚಾರ ಸಣ್ಣದಲ್ಲಿ

ಮೆರವಣಿಗೆಗೆ ಕಲ್ಲೆಸೆತ: ಹಜಾರಿಬಾಗ್ ಉದ್ವಿಗ್ನ

ಹಜಾರಿಬಾಗ್: ಜಾರ್ಖಂಡ್‌ನ ಹಜಾರಿಬಾಗ್‌ನಲ್ಲಿ ಶ್ರೀ ರಾಮ ನವಮಿ ಆಚರಣೆಯ ಭಾಗವಾಗಿ ಹಿಂದೂಗಳು ಮೆರವಣಿಗೆ ನಡೆಸಿದ್ದಾಗ ಮಂಗಳವಾರ ರಾತ್ರಿ 11ರಲ್ಲಿ ಜಾಮಾ ಮಸೀದಿ ಚೌಕ್ ಬಳಿ ಕಲ್ಲು ತೂರಾಟವಾಗಿದೆ. ಪರಿಣಾಮ ನಗರದಲ್ಲಿ ಉದ್ವಿಗ್ನತೆ ಉಂಟಾಗಿದೆ. ಎರಡೂ ಕಡೆಯಿಂದ ಕಲ್ಲು ತೂರಾಟ ನಡೆದಿದೆ. ಪರಿಸ್ಥಿತಿ ನಿಯಂತ್ರಣಕ್ಕೆ ತರಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಬೇಕಾಯಿತು ಎಂದು ಹಜಾರಿಬಾಗ್ ಉಪ ವಿಭಾಗೀಯ ಪೊಲೀಸ್ ಅಧಿಕಾರಿ ಪರಮೇಶ್ವರ್ ಕಾಮತಿ ತಿಳಿಸಿದ್ದಾರೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಸ್ಥಳದಲ್ಲಿ ಹೆಚ್ಚಿನ ಪೊಲೀಸ್ ಭದ್ರತೆಗೆ ವ್ಯವಸ್ಥೆ ಮಾಡಲಾಗಿದೆ. ಕಲ್ಲು ತೂರಾಟಕ್ಕೆ ಕಾರಣ ತಿಳಿದು ಬಂದಿಲ್ಲ. ಕಲ್ಲೆಸೆದವರನ್ನು ಗುರುತಿಸಲಾಗುತ್ತಿದ್ದು, ಶೀಘ್ರದಲ್ಲೇ ಬಂಧಿಸಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

ರಾ.ಹೆದ್ದಾರಿ: ಏ.1ಕ್ಕೆ ಹೊಸ ಶುಲ್ಕ ನೀತಿ

ದೆಹಲಿ: ದೇಶಾದ್ಯಂತದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳಿಗಾಗಿ ಏ.1ರಿಂದ ಹೊಸ ಟೋಲ್(ಹೆದ್ದಾರಿ ಶುಲ್ಕ) ನೀತಿಯನ್ನು ಕೇಂದ್ರ ಸರಕಾರ ಜಾರಿಗೊಳಿಸುತ್ತಿದೆ. ಇದರಿಂದ ವಾಹನ ಚಾಲಕರಿಗೆ ರಿಯಾಯಿತಿ ಸಿಗಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದರು. ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಟೋಲ್ ಘಟಕಗಳಲ್ಲಿ ವಾಹನ ಚಾಲಕರಿಗೆ ಸಂಚಾರ ಸರಾಗವಾಗುವಂತೆ ಮಾಡುವುದರ ಜತೆಗೇ ಶುಲ್ಕದಲ್ಲಿಯೂ ರಿಯಾಯಿತಿ ಸಿಗುವಂತೆ ಮಾಡಲು ಹೊಸ ಶುಲ್ಕ ನೀತಿ ಪರಿಚಯಿಸಲಾಗುತ್ತಿದೆ. 2023-24ರಲ್ಲಿ 64,809.86 ಕೋಟಿ ರೂ. ಟೋಲ್ ಸಂಗ್ರಹವಾಗಿದ್ದು, ಶೇ.35ರಷ್ಟು ವೃದ್ಧಿಯಾಗಿದೆ ಎಂದು ತಿಳಿಸಿದರು.

ಗೋಧಿ ದಾಸ್ತಾನು ಘೋಷಣೆ ಕಡ್ಡಾಯ

ದೆಹಲಿ: ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಆಹಾರ ದಾಸ್ತಾನುಗಾರರು, ವರ್ತಕರು ಏ.1ರಿಂದ ಕಡ್ಡಾಯವಾಗಿ ಗೋಧಿ ದಾಸ್ತಾನು ವಿವರ ದಾಖಲಿಸಬೇಕು ಎಂದು ಕೇಂದ್ರ ಆಹಾರ ಇಲಾಖೆ ಸೂಚನೆ ನೀಡಿದೆ. ದೇಶದಲ್ಲಿ ಆಹಾರ ಭದ್ರತೆ ಖಚಿತಪಡಿಸಿಕೊಳ್ಳಲು ಮತ್ತು ಅಪಪ್ರಚಾರ ತಡೆಗಟ್ಟಲೆಂದೇ ಈ ಪಾರದರ್ಶಕ ಕ್ರಮ ಕೈಗೊಳ್ಳಲಾಗಿದೆ.

ಪಂಬನ್ ಸೇತುವೆ ಏ.6ಕ್ಕೆ ಉದ್ಘಾಟನೆ

ಚೆನ್ನೈ: ತಮಿಳುನಾಡು ರಾಜ್ಯದ ರಾಮೇಶ್ವರಂನಲ್ಲಿ ಹೊಸದಾಗಿ ನಿರ್ಮಿಸಿರುವ ಪಂಬನ್ ರೈಲ್ವೆ ಸೇತುವೆಯನ್ನು ಶ್ರೀರಾಮ ನವಮಿಯ ದಿನವಾದ ಏ.16ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಬಳಿಕ ಅವರು ರಾಮೇಶ್ವರಂನ ರಾಮನಾಥ ಸ್ವಾಮಿ ದೇವಾಲಯಕ್ಕೂ ಭೇಟಿ ನೀಡುವ ಸಾಧ್ಯತೆಯಿದೆ. ಸಿಎಂ ಎಂ.ಕೆ. ಸ್ಟಾಲಿನ್, ರಾಜ್ಯಪಾಲ ಆರ್.ಎನ್.ರವಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ದಕ್ಷಿಣ ರೈಲ್ವೆ ಮೂಲಗಳು ಹೇಳಿವೆ.ಹಿರಿಯ ರೈಲ್ವೆ ಅಧಿಕಾರಿಗಳು ಸೇತುವೆಯ ಪರಿಶೀಲನೆ ನಡೆಸಿದರು.

2015 ಭಾರತ ಜಿಡಿಪಿ 2.10 ಲಕ್ಷ ಕೋಟಿ ಡಾಲರ್: ಶೇ.105 ವೃದ್ಧಿ | ಸದ್ಯ ಭಾರತ ಆರ್ಥಿಕತೆ 4.30 ಲಕ್ಷ ಕೋಟಿ ಅಮೆರಿಕನ್ ಡಾಲರ್ | ಪ್ರಗತಿ ಗತಿ ಹೀಗೇ ಇದ್ದರೆ 2027ಕ್ಕೆ ಜರ್ಮನಿ ಹಿಂದಿಕ್ಕಿ 3ನೇ ಸ್ಥಾನ | ಜಪಾನ್ 10 ವರ್ಷದಿಂದಲೂ 4.40 ಲಕ್ಷ ಕೋಟಿ ಡಾಲರ್ ಜಿಡಿಪಿ

ಜಿಡಿಪಿ: 3 ತಿಂಗಳಲ್ಲಿ ಜಪಾನ್ ಹಿಂದಿಕ್ಕಿ ಭಾರತ 4ನೇ ಸ್ಥಾನಕ್ಕೆ

ದೆಹಲಿ: ಮುಂದಿನ 3 ತಿಂಗಳಲ್ಲಿ ಭಾರತ ವಿಶ್ವ ಆರ್ಥಿಕತೆಯ ಪಟ್ಟಿಯಲ್ಲಿ ಜಪಾನ್ ದೇಶವನ್ನು ಹಿಂದಿಕ್ಕಿ ನಾಲ್ಕನೇ ಸ್ಥಾನಕ್ಕೇರಲಿದೆ. ಅಷ್ಟೇ ಅಲ್ಲ, 2027ನೇ ವರ್ಷದಲ್ಲಿ 3ನೇ ಸ್ಥಾನಕ್ಕೇರಿ ಅಮೆರಿಕ, ಚೀನಾ ನಂತರದ ಸ್ಥಾನದಲ್ಲಿರಲಿದೆ ಎಂದು 'ಅಂತಾರಾಷ್ಟ್ರೀಯ ಹಣಕಾಸು ನಿಧಿ'(ಐಎಂಎಫ್) ಸಂಸ್ಥೆಯು ಇತ್ತೀಚಿನ ವರದಿಯಲ್ಲಿ ಹೇಳಿದೆ.

ವಿಶ್ವ ಆರ್ಥಿಕತೆಯ ಪಟ್ಟಿಯಲ್ಲಿ ಸದ್ಯ 4ನೇ ಸ್ಥಾನದಲ್ಲಿರುವ ಜಪಾನ್‌ನ ಜಿಡಿಪಿ ಸದ್ಯ 4.40 ಲಕ್ಷ ಕೋಟಿ ಡಾಲರ್‌ಗಳಷ್ಟಿದೆ. ಆದರೆ, ಈ ಪುಟ್ಟ ದೇಶದ ಜಿಡಿಪಿ ಬೆಳವಣಿಗೆ ಕಳೆದೊಂದು ದಶಕದಿಂದ ಸ್ಥಿರವಾಗಿದೆ. ಆದರೆ, ಭಾರತದ ಆರ್ಥಿಕತೆ ಸತತ ಬೆಳವಣಿಗೆ ಕಾಣುತ್ತಿದೆ. 2015ರಲ್ಲಿ

2.10 ಲಕ್ಷ ಕೋಟಿ ಡಾಲರ್‌ಗಳಷ್ಟಿದ್ದ ಭಾರತದ ಆರ್ಥಿಕತೆ 2025ರಲ್ಲಿ 4.30 ಲಕ್ಷ ಕೋಟಿ ಡಾಲರ್‌ಗೆ ಬೆಳೆದಿದೆ. ಅಂದರೆ ಕಳೆದ 10 ವರ್ಷಗಳಲ್ಲಿ ಶೇ.105ರಷ್ಟು ಪ್ರಮಾಣದಲ್ಲಿ ಸಾಧನೆ ಮಾಡಿದೆ. ಇದೇ ಪ್ರಗತಿ ಗತಿ ಮುಂದುವರಿದರೆ ಭಾರತ ಮುಂದಿನ 3 ತಿಂಗಳಲ್ಲಿ 4ನೇ ಸ್ಥಾನಕ್ಕೇರುವುದು ನಿಶ್ಚಿತ ಎಂದು ಐಎಂಎಫ್ ಹೇಳಿದೆ.

ಸದ್ಯ ಪ್ರಗತಿಗತಿಯಲ್ಲಿ ಸ್ಥಿರವಾಗಿ ಬಿಟ್ಟಿರುವ ಜಪಾನ್ ಆರ್ಥಿಕತೆ ಮುಂದಿನ 3 ತಿಂಗಳ ಬಳಿಕವೂ 4.40 ಲಕ್ಷ ಕೋಟಿ ಡಾಲರ್‌ಗಳಲ್ಲೇ ಇರಲಿದೆ. ಆದರೆ, ಭಾರತದ ಆರ್ಥಿಕತೆ ಶೇ.6.5ರಷ್ಟು ಜಿಡಿಪಿ ವೃದ್ಧಿಯೊಂದಿಗೆ 4.40 ಲಕ್ಷ ಕೋಟಿ ಡಾಲರ್‌ಗಳ ಮಟ್ಟವನ್ನು ದಾಟಿ ಮುನ್ನಡೆಯಲಿದೆ. ಆ ಮೂಲಕ ವಿಶ್ವದ ಆರ್ಥಿಕತೆಯಲ್ಲಿ 4ನೇ ಬಲಿಷ್ಠ ರಾಷ್ಟ್ರ ಎನಿಸಿಕೊಳ್ಳಲಿದೆ. 2025-26ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕ ಕೊನೆಗೊಳ್ಳುವ ವೇಳೆಗೆ, ಅಂದರೆ ಜೂನ್‌ನಲ್ಲಿ ಭಾರತ ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯ ದೇಶಗಳ ಸಾಲಿನಲ್ಲಿ ನಾಲ್ಕನೇ ಸ್ಥಾನದಲ್ಲಿರಲಿದೆ. ಜಪಾನ್ 5ನೇ ಸ್ಥಾನಕ್ಕೆ ಕುಸಿಯಲಿದೆ ಎಂದು ಐಎಂಎಫ್ ವರದಿ ಹೇಳಿದೆ.

2027ಕ್ಕೆ 3ನೇ ರ‍್ಯಾಂಕ್: ಕೈಗಾರಿಕಾ ಕ್ರಾಂತಿ, ನಾವೀನ್ಯತೆ, ಯಂತ್ರೋಪಕರಣ ತಯಾರಿಕೆ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಜರ್ಮನಿ, ಪ್ರಸ್ತುತ ಆರ್ಥಿಕತೆ ವಿಚಾರದಲ್ಲಿ ವಿಶ್ವದ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದೆ. ಜರ್ಮನಿಯ ಸದ್ಯದ ಜಿಡಿಪಿ 4.90 ಲಕ್ಷ ಕೋಟಿ ಅಮೆರಿಕನ್ ಡಾಲರ್‌ಗಳಷ್ಟಿದ್ದು, ಪ್ರಗತಿಯ ದರ ಶೇ.44ರಷ್ಟಿದೆ. ಆದರೆ, ಕಳೆದ 10 ವರ್ಷಗಳಿಂದ ಸತತ ಪ್ರಗತಿ ದಾಖಲಿಸುತ್ತಿರುವ ಭಾರತದ ಆರ್ಥಿಕತೆ, 2027ನೇ ಹಣಕಾಸು ವರ್ಷದಲ್ಲಿ 4.90 ಲಕ್ಷ ಕೋಟಿ ಡಾಲರ್ ಜಿಡಿಪಿ ಮಟ್ಟ ದಾಟಲಿದೆ. ಆ ಮೂಲಕ ಜರ್ಮನಿಯನ್ನು ನಾಲ್ಕನೇ ಸ್ಥಾನಕ್ಕೆ ದೂಡಿ ಭಾರತ 3ನೇ ಸ್ಥಾನಕ್ಕೇರಲಿದೆ ಎಂದು ಐಎಂಎಫ್ ವರದಿಯಲ್ಲಿ ಹೇಳಲಾಗಿದೆ.

ಜಿಡಿಪಿ ಸಾಧನೆಗೆ ಭಾರತೀಯರ ಹರ್ಷ

ಕಳೆದ 10 ವರ್ಷದಲ್ಲಿ ಭಾರತ ಆರ್ಥಿಕತೆ ದುಪ್ಪಟ್ಟಾಗಿದೆ. ಅಂದರೆ, ಭಾರತದ ಒಟ್ಟಾರೆ ಆಂತರಿಕ ಉತ್ಪಾದನೆ(ಜಿಡಿಪಿ) ಪ್ರಮಾಣ ಕಳೆದೊಂದು ದಶಕದಲ್ಲಿ ಶೇ.105ರಷ್ಟು ಏರಿಕೆ ಕಂಡಿದೆ. ಈ ಕುರಿತು 'ಐಎಂಎಫ್' ವರದಿ ಬಿಡುಗಡೆ ಮಾಡಿದ್ದು, ಭಾರತೀಯರ ಹರ್ಷಕ್ಕೆ ಕಾರಣವಾಗಿದೆ. 2015ರಲ್ಲಿ 2.10 ಲಕ್ಷ ಕೋಟಿ ಅಮೆರಿಕನ್ ಡಾಲರ್‌ಗಳಷ್ಟಿದ್ದ ಭಾರತದ ಆರ್ಥಿಕತೆ 2025ರಲ್ಲಿ 4.30 ಲಕ್ಷ ಕೋಟಿಗೆ ಬೆಳವಣಿಗೆ ಕಂಡಿದೆ. ಒಂದೇ ದಶಕದಲ್ಲಿ ದುಪ್ಪಟ್ಟು ಪ್ರಮಾಣದ ವೃದ್ಧಿ ದಾಖಲಿಸಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ 11 ವರ್ಷದಿಂದ ಭಾರತದಲ್ಲಿ ಆಡಳಿತ ನಡೆಸುತ್ತಿದೆ. ಭಾರತ ಸದ್ಯದಲ್ಲೇ ವಿಶ್ವದ 4ನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಹಲವು ಬಾರಿ ಕೇಂದ್ರ ಸರಕಾರ ಬಲು ವಿಶ್ವಾಸದಿಂದ ಹೇಳಿಕೊಂಡಿದೆ. ಮೋದಿ ಸರಕಾರ ಹೇಳಿದಂತೆಯೇ ಗುರಿ ಮುಟ್ಟಲಿದೆ. ವಿಶ್ವದ ಜಿಡಿಪಿ ಪಟ್ಟಿಯಲ್ಲಿ 4ನೇ ಸ್ಥಾನಕ್ಕೇರಲು ತುದಿಗಾಲಲ್ಲಿದೆ.

ನಂ.1-2 ಸ್ಥಾನದಲ್ಲಿ ಅಮೆರಿಕ, ಚೀನಾ

ಪ್ರಸ್ತುತ ವಿಶ್ವ ಜಿಡಿಪಿ ಪಟ್ಟಿಯಲ್ಲಿ ನಂ.1 ಮತ್ತು 2 ಸ್ಥಾನದಲ್ಲಿರುವ ಅಮೆರಿಕ ಮತ್ತು ಚೀನಾ ಸ್ಥಾನ ಅಬಾಧಿತ. ಏಕೆಂದರೆ ಅಮೆರಿಕದ ಜಿಡಿಪಿ 2025ರಲ್ಲಿ 30.30 ಲಕ್ಷ ಕೋಟಿ ಡಾಲರ್‌ಗಳಷ್ಟಿದ್ದರೆ, ಚೀನಾ ಜಿಡಿಪಿ 19.50 ಲಕ್ಷ ಕೋಟಿ ಡಾಲರ್‌ಗಳಷ್ಟಿದೆ. ಅಂದರೆ, 3, 4 ಮತ್ತು 5ನೇ ಸ್ಥಾನದಲ್ಲಿರುವ ಜರ್ಮನಿ, ಜಪಾನ್, ಭಾರತದ ಆರ್ಥಿಕತೆಗೆ ಹೋಲಿಸಿದರೆ ಮೊದಲಿನ ಎರಡೂ ದೇಶಗಳ ಆರ್ಥಿಕತೆಯು ಕನಿಷ್ಠ 4ರಿಂದ ಗರಿಷ್ಠ 7 ಪಟ್ಟು ದೊಡ್ಡದಾಗಿದೆ. ಅಲ್ಲದೇ, ಕಳೆದೊಂದು ದಶಕವನ್ನು ಗಮನಿಸಿದರೆ, ಅಮೆರಿಕ ಶೇ.66 ಮತ್ತು ಚೀನಾ ಶೇ.76 ಪ್ರಮಾಣದಲ್ಲಿ ಆರ್ಥಿಕ ಪ್ರಗತಿ ಸಾಧಿಸುತ್ತಾ ಬಂದಿವೆ. ಹಾಗಾಗಿ ಅಮೆರಿಕ, ಚೀನಾ ಆರ್ಥಿಕತೆಯಲ್ಲಿ ಮೊದಲಿನೆರಡು ಸ್ಥಾನಗಳಲ್ಲಿಯೇ ಮುಂದುವರಿಯಲಿವೆ. ಅವುಗಳ ಸ್ಥಾನ ಅಬಾಧಿತವಾಗಿದೆ ಎಂಬುದನ್ನು ಐಎಂಎಫ್ ಅಂಕಿ ಅಂಶಗಳು ದೃಢಪಡಿಸುತ್ತವೆ.

1 ಲಕ್ಷ ಕೋಟಿ ಡಾಲರ್‌ಗೆ 60 ವರ್ಷ!

1947ರಲ್ಲಿ ಬ್ರಿಟಿಷ್ ಆಡಳಿತದಿಂದ ಮುಕ್ತಿ ಪಡೆದು ಸ್ವಾತಂತ್ರ್ಯ ದೇಶವಾದ ನಂತರದಲ್ಲಿ ಭಾರತ 1 ಲಕ್ಷ ಕೋಟಿ ಡಾಲರ್ ಆರ್ಥಿಕತೆ ಮಟ್ಟ ಮುಟ್ಟಲು 60 ವರ್ಷ ಸಮಯ ತೆಗೆದುಕೊಂಡಿದೆ. ಆರಂಭಿಕ 60 ವರ್ಷಗಳಲ್ಲಿ ಭಾರತ ದುರಾಡಳಿತ, ಬಡತನ, ಸಾಂಕ್ರಾಮಿಕ ರೋಗ, ಮೂಲಸೌ ಲಭ್ಯಗಳ ಕೊರತೆ ಸೇರಿದಂತೆ ಹಲವು ಸವಾಲುಗಳನ್ನು ಎದುರಿಸಬೇಕಾಗಿ ಬಂದಿದ್ದರಿಂದ ಜಿಡಿಪಿ ಪ್ರಗತಿ ಮಂದಗತಿಯಲ್ಲಿತ್ತು. 2007ರಲ್ಲಿ ಭಾರತ 1 ಲಕ್ಷ ಕೋಟಿ ಅಮೆರಿಕನ್ ಡಾಲರ್ ಜಿಡಿಪಿ ತಲುಪಿತು. ನಂತರದ 8 ವರ್ಷಗಳಲ್ಲಿಯೇ ದುಪ್ಪಟ್ಟು ಪ್ರಗತಿ ದಾಖಲಿಸಿ 2.10 ಲಕ್ಷ ಕೋಟಿ ಡಾಲರ್‌ಗೆ ಮುಟ್ಟಿತು. 2021ರಲ್ಲಿ 3 ಲಕ್ಷ ಕೋಟಿ ಡಾಲರ್, ನಂತರ 2025ರಲ್ಲಿ 4.3 ಲಕ್ಷ ಕೋಟಿ ಡಾಲರ್‌ಗೆ ಬೆಳೆದಿದೆ. ಕಳೆದ 10 ವರ್ಷದಲ್ಲಿ 2 ಪಟ್ಟು ಬೆಳವಣಿಗೆ ತೋರಿದೆ. ಇದೇ ವೇಗದಲ್ಲಿ ಸಾಗಿದರೆ 2027ರಲ್ಲಿ 5 ಲಕ್ಷ ಕೋಟಿ ಡಾಲರ್ ಗಡಿ ದಾಟುವ ನಿರೀಕ್ಷೆ ಇದೆ.

10 ವರ್ಷದಲ್ಲಿ ಭಾರತ ಶೇ.105 ಜಿಡಿಪಿ ಪ್ರಗತಿ

(2025ರಲ್ಲಿ ಟ್ರಿಲಿಯನ್(ಲಕ್ಷ ಕೋಟಿ) ಅಮೆರಿಕ ಡಾಲರ್ ಲೆಕ್ಕ)

ದೇಶಗಳು	2015 ಜಿಡಿಪಿ	2025 ಜಿಡಿಪಿ	ಪ್ರಗತಿ (ಶೇ.)
ಭಾರತ	2.10	4.3	105
ಅಮೆರಿಕ	18.30	30.30	66
ಚೀನಾ	11.10	19.50	76
ಜರ್ಮನಿ	3.40	4.90	44
ಜಪಾನ್	4.40	4.40	00
ಬ್ರಿಟನ್	2.90	3.70	28
ಫ್ರಾನ್ಸ್	2.40	3.30	38
ಇಟಲಿ	1.80	2.50	39
ಕೆನಡಾ	1.60	2.30	44
ಬ್ರೆಜಿಲ್	1.80	2.30	28
ರಷ್ಯಾ	1.40	2.20	57
ದ.ಕೊರಿಯ	1.50	1.90	27
ಆಸ್ಟ್ರೇಲಿಯ	1.20	1.90	58
ಸ್ಪೇನ್	1.20	1.80	50

(ಐಎಂಎಫ್ ಅಂಕಿ ಅಂಶ)

ದೇಶಗಳ ಜಿಡಿಪಿ ಪ್ರಗತಿದರ

ಕಳೆದ 10 ವರ್ಷಗಳಲ್ಲಿ ಭಾರತದ ಜಿಡಿಪಿ ಶೇ.105ರಷ್ಟು ಏರಿಕೆಯಾಗಿದೆ. ಆ ಮೂಲಕ ಪ್ರಗತಿಯ ವೇಗದಲ್ಲಿ ಭಾರತ ಮೊದಲಿಗನಾಗಿದೆ. ಕಳೆದ ದಶಕದಲ್ಲಿ ಅಮೆರಿಕ ಜಿಡಿಪಿ ಪ್ರಗತಿ ಶೇ.66, ಚೀನಾ ಶೇ.76ರಷ್ಟಿದೆ. ಉಳಿದಂತೆ ಆಸ್ಟ್ರೇಲಿಯ ಶೇ.58, ಸ್ಪೇನ್ ಶೇ.50, ರಷ್ಯಾ ಶೇ.57, ಜರ್ಮನಿ ಮತ್ತು ಕೆನಡಾ ಶೇ.44ರಷ್ಟು ಆರ್ಥಿಕ ಪ್ರಗತಿ ದರ ಹೊಂದಿವೆ. ಜಪಾನ್ ಪ್ರಗತಿ ದರ ಶೂನ್ಯದಲ್ಲಿದೆ, ಅಂದರೆ 2015ರಲ್ಲಿ 4.4 ಲಕ್ಷ ಕೋಟಿ ಡಾಲರ್‌ಗಳಷ್ಟಿದ್ದ ಜಪಾನ್ ಆರ್ಥಿಕತೆ 2025ರಲ್ಲೂ ಅಷ್ಟೇ ಇದೆ. ಯುನೈಟೆಡ್ ಕಿಂಗ್ಡಂ, ಫ್ರಾನ್ಸ್, ಇಟಲಿ, ಬ್ರೆಜಿಲ್, ದಕ್ಷಿಣ ಕೊರಿಯ ಮೊದಲಾದ ದೇಶಗಳ ಜಿಡಿಪಿ ಪ್ರಗತಿ ದರ ಶೇ.40ಕ್ಕಿಂತ ಕಡಿಮೆ ಇದೆ.

ಬೀಜಿಂಗ್‌ನಲ್ಲಿ ಭಾರತ, ಚೀನಾ ರಚನಾತ್ಮಕ ಚರ್ಚೆ

ದೆಹಲಿ: ಭಾರತ-ಚೀನಾ ನಡುವಿನ ವಾಸ್ತವ ಗಡಿ ರೇಖೆಯಲ್ಲಿ ಪರಿಸ್ಥಿತಿ ನಿರ್ವಹಣೆಯನ್ನು ಯಥಾರೀತಿ ಮುನ್ನಡೆಸಿಕೊಂಡು ಹೋಗುವ ಸಂಬಂಧ ರಾಜತಾಂತ್ರಿಕ ಕಾರ್ಯವಿಧಾನಗಳನ್ನು ಬಲಪಡಿಸಲು ಎರಡೂ ದೇಶಗಳು ನಿರ್ಧರಿಸಿವೆ.

ಎರಡೂ ದೇಶಗಳ ನಡುವೆ ಹರಿಯುವ ನದಿಗಳ ನೀರು ಹಂಚಿಕೆ ಮತ್ತು ಕೈಲಾಸ-ಮಾನಸ ಸರೋವರ ಯಾತ್ರೆಗೆ ಅವಕಾಶ ಸೇರಿದಂತೆ ಗಡಿಯಾಚೆಗಿನ ಚಟುವಟಿಕೆಗಳಲ್ಲಿ ಪರಸ್ಪರ ಸಹಕಾರದ ವಿಧಾನಗಳನ್ನು ಪರಿಶೀಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. 2024ರ ಡಿಸೆಂಬರ್‌ನಲ್ಲಿ ಬೀಜಿಂಗ್‌ನಲ್ಲಿ ನಡೆದ ಭಾರತ-ಚೀನಾ ಗಡಿ ಪ್ರಶ್ನೆ ಕುರಿತು ವಿಶೇಷ ಪ್ರತಿನಿಧಿಗಳ 23ನೇ ಸಭೆಯ ನಿರ್ಧಾರಗಳ ಜಾರಿ ಮತ್ತು ಪರಿಣಾಮಕಾರಿ ಗಡಿ ನಿರ್ವಹಣೆಗೆ ವಿವಿಧ ಕ್ರಮಗಳನ್ನು ಅನ್ವೇಷಿಸಲಾಗಿದೆ ಎಂದೂ ಭಾರತದ ವಿದೇ ಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಗಡಿ ಉದ್ವಿಗ್ನತೆ ಯಿಂದ ಹದಗೆಟ್ಟಿದ್ದ ಸಂಬಂಧವನ್ನು ಸಹಜ ಸ್ಥಿತಿಗೆ ತರಲು ಎರಡೂ ದೇಶಗಳ ಉನ್ನತ ಮಟ್ಟದ ಅಧಿಕಾರಿಗಳ ನಿಯೋಗ ಬೀಜಿಂಗ್‌ನಲ್ಲಿ ಸಭೆ ಸೇರಿದ್ದು, ಸಕಾರಾತ್ಮಕ ಮತ್ತು ರಚನಾತ್ಮಕ ವಾತಾವರಣದಲ್ಲಿ ಚರ್ಚೆ ನಡೆಸಲಾಗಿದೆ. ವರ್ಷಾಂತ್ಯದಲ್ಲಿ ದೆಹಲಿಯಲ್ಲಿ ನಡೆಯಲಿ ರುವ ವಿಶೇಷ ಪ್ರತಿನಿಧಿಗಳ ಸಭೆಗೆ ಸಿದ್ಧತೆ ಮಾಡಿಕೊಳ್ಳುವುದಕ್ಕೆ ಉಭಯತ್ರರೂ ಒಟ್ಟಾಗಿ ಕೆಲಸ ಮಾಡಲು ಒಪ್ಪಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಅಮೆರಿಕ ಎನ್‌ಐಎಚ್‌ಗೆ ಭಟ್ಟಾಚಾರ್ಯ ನೇಮಕ

ವಾಷಿಂಗ್ಟನ್: ಅಮೆರಿಕದ ಉನ್ನತ ಆರೋಗ್ಯ ಸಂಶೋಧನೆ ಮತ್ತು ಧನಸಹಾಯ ಸಂಸ್ಥೆ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್' (ಎನ್‌ಐಎಚ್) ನಿರ್ದೇಶಕರಾಗಿ ಭಾರತ ಮೂಲದ ಅಮೆರಿಕ ವಿಜ್ಞಾನಿ ಜಯ್ ಭಟ್ಟಾಚಾರ್ಯ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರಕಾರದಿಂದ ನೇಮಕಗೊಂಡಿದ್ದಾರೆ.

ಭಟ್ಟಾಚಾರ್ಯ ನೇಮಕವನ್ನು ಅಮೆರಿಕ ಸಂಸತ್ತು 53-47 ಮತಗಳ ಅಂತರದಲ್ಲಿ ದೃಢಪಡಿಸಿದೆ. ಭಟ್ಟಾಚಾರ್ಯ ಸದ್ಯ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಆರೋಗ್ಯ ನೀತಿ ವಿಭಾಗದ ಪ್ರಾಧ್ಯಾಪಕರಾಗಿ ದ್ದಾರೆ. ಭಟ್ಟಾಚಾರ್ಯ ನೇಮಕಕ್ಕೆ ಸ್ಟ್ಯಾನ್‌ಫೋರ್ಡ್ ಮೆಡಿಸಿನ್ ಹರ್ಷ ವ್ಯಕ್ತಪಡಿಸಿದೆ. ಭಟ್ಟಾಚಾರ್ಯ ಅವರಿಗೆ ಅಭಿನಂದನೆ ಸಲ್ಲಿಸಿದೆ. ಕಳೆದ ನವೆಂಬರ್‌ನಲ್ಲಿ ಅಧ್ಯಕ್ಷೀಯ ಚುನಾವಣೆಗೂ ಮುನ್ನವೇ ಡೊನಾಲ್ಡ್ ಟ್ರಂಪ್ ಅವರು ಭಟ್ಟಾಚಾರ್ಯ ಅವರನ್ನು 'ಎನ್‌ಐಎಚ್'ನ 18ನೇ ನಿರ್ದೇಶಕರಾಗಿ ನಾಮನಿರ್ದೇಶನ ಮಾಡಿದ್ದರು. ಡಾ. ಭಟ್ಟಾಚಾರ್ಯ ರಾಬರ್ಟ್ ಎಫ್ ಕೆನಡಿ ಜೂನಿಯರ್ ಅವರ ಜತೆಗೆ ವೈದ್ಯಕೀಯ ಸಂಶೋಧನೆ ನಿರ್ದೇಶಿಸಲು ಮತ್ತು ಆರೋಗ್ಯ ಸುಧಾರಣೆ, ಜೀವಗಳ ರಕ್ಷಣೆಗೆ ಅತ್ಯಗತ್ಯವಾದ ಪ್ರಮುಖ ಆವಿಷ್ಕಾರಗಳನ್ನು ಮಾಡಲು ಶ್ರಮಿಸಲಿದ್ದಾರೆ ಎಂದು ಆಗ ಟ್ರಂಪ್ ಹೇಳಿದ್ದರು.

ಪಿಎಂ ಆರ್ಥಿಕ ಸಲಹಾ ಮಂಡಳಿಗೆ ಮಿಶ್ರಾ ನೇಮಕ

ದೆಹಲಿ: ಜಾರಿ ನಿರ್ದೇಶನಾಲಯದ (ಇ.ಡಿ) ಮಾಜಿ ಮುಖ್ಯಸ್ಥ ಸಂಜಯ್ ಕುಮಾರ್ ಮಿಶ್ರಾ ಅವರನ್ನು ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ(ಇಎಸಿ-ಪಿಎಂ) ಸಲಹೆಗಾರನಾಗಿ ನೇಮಕ ಮಾಡಲಾಗಿದೆ. ಪ್ರಧಾನಿ ಮೋದಿ ಅವರಿಗೆ ನಿಕಟವರ್ತಿಯಾಗಿರುವ

ಮಿಶ್ರಾ ಅವರು ಜಾರಿ ನಿರ್ದೇಶನಾಲಯದ ಮುಖ್ಯಸ್ಥರಾಗಿದ್ದಾಗ ಹಲವು ಬಾರಿ ಸೇವಾ ಅವಧಿ ವಿಸ್ತರಿಸಲಾಗಿತ್ತು. ಈಗ ಕಾರ್ಯದರ್ಶಿ ದರ್ಜೆಯ ಹುದ್ದೆಗೆ ನೇಮಕಗೊಂಡಿದ್ದಾರೆ. ಉತ್ತರ ಪ್ರದೇಶದ ಮೂಲದ ಸಂಜಯ್ ಕುಮಾರ್ ಮಿಶ್ರಾ 1984ರಲ್ಲಿ ಭಾರತೀಯ ಕಂದಾಯ ಸೇವೆ (ಐಆರ್‌ಎಸ್) ಅಧಿಕಾರಿಯಾಗಿ ವೃತ್ತಿಜೀವನ ಪ್ರಾರಂಭಿಸಿ ದೆಹಲಿಯಲ್ಲಿ ಆದಾಯ ತೆರಿಗೆಯ ಮುಖ್ಯ ಆಯುಕ್ತರಾಗಿ ಸೇವೆ ಸಲ್ಲಿಸಿದರು. ಬಳಿಕ ಜಾರಿ ನಿರ್ದೇಶನಾಲ ಯ(ಇ.ಡಿ) ಯಲ್ಲಿ ಅಧಿಕಾರ ವಹಿಸಿಕೊಂಡರು. ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಸ್ವತಂತ್ರ ಸಂಸ್ಥೆಯಾಗಿದ್ದು, ನಿರ್ಣಾಯಕ ಆರ್ಥಿಕ ವಿಷಯಗಳ ಕುರಿತು ಸಲಹೆಗಳನ್ನು ಪ್ರಧಾನ ಮಂತ್ರಿಗೆ ಒದಗಿಸುವ ಜವಾಬ್ದಾರಿ ಹೊಂದಿದೆ. ಪ್ರಧಾನ ಮಂತ್ರಿಯ ಆರ್ಥಿಕ ಸಲಹಾ ಮಂಡಳಿ ಮಾಜಿ ಅಧ್ಯಕ್ಷ ಬಿಬೆಕ್ ಡೆಬ್ರಾಯ್ ಅವರು 2024ರ ನ.1ರಂದು ತಮ್ಮ 69ನೇ ವಯಸ್ಸಿನಲ್ಲಿ ನಿಧನರಾದರು. ಪ್ರಸ್ತುತ ಸುಮನ್ ಬೆರಿ ಆರ್ಥಿಕ ಸಲಹಾ ಮಂಡಳಿ ನೇತೃತ್ವ ವಹಿಸಿದ್ದಾರೆ.

ಛತ್ತೀಸ್‌ಗಢ: ಭೂಪೇಶ್ ಮನೆಗೆ ಸಿಬಿಐ ದಾಳಿ

ರಾಯಪುರ: ಮಹಾದೇವ್ ಬೆಟ್ಟಿಂಗ್ ಆ್ಯಪ್ ಪ್ರಕರಣದಲ್ಲಿ ಛತ್ತೀಸ್‌ಗಢದ ಮಾಜಿ ಸಿಎಂ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭೂಪೇಶ್ ಬಘೇಲ್ ಅವರ ರಾಯಪುರ ಮತ್ತು ಭಿಲಾಯಿಯಲ್ಲಿನ ನಿವಾ ಸಗಳ ಮೇಲೆ ಕೇಂದ್ರೀಯ ತನಿಖಾ ದಳ(ಸಿಬಿಐ)



ಅಧಿಕಾರಿಗಳು ಬುಧವಾರ ಬೆಳಗ್ಗೆ ದಾಳಿ ನಡೆಸಿದ್ದಾರೆ. ಜತೆಗೆ ಹಿರಿಯ ಪೊಲೀಸ್ ಅಧಿಕಾರಿ ಮತ್ತು ಮಾಜಿ ಮುಖ್ಯಮಂತ್ರಿಯ ಆಪ್ತ ಸಹಾಯಕರ ಮನೆಗಳ ಮೇಲೆಯೂ ಸಿಬಿಐ ತಂಡ ದಾಳಿ ನಡೆಸಿದೆ. ಇತ್ತೀಚೆಗೆ ಅಕ್ರಮ ಮದ್ಯ ಹಗರಣ ಸಂಬಂಧ ಜಾರಿ ನಿರ್ದೇಶನಾಲಯ(ಇ.ಡಿ) ಅಧಿಕಾರಿಗಳು ಬಘೇಲ್ ನಿವಾಸಕ್ಕೆ ದಾಳಿ ನಡೆಸಿದ್ದರು. ಮಹದೇವ್ ಬೆಟ್ಟಿಂಗ್ ಆ್ಯಪ್ ಪ್ರವರ್ತಕರು ಭೂಪೇಶ್ ಬಘೇಲ್‌ಗೆ 508 ಕೋಟಿ ರು. ಲಂಚ ನೀಡಿದ್ದಾರೆಂದು ಇ.ಡಿ ಈ ಹಿಂದೆ ಹೇಳಿತ್ತು. ಆಗ ಇ.ಡಿ ದಾಳಿ ನಡೆಸಿದಾಗ 5.39 ಕೋಟಿ ರು. ನಗದು ಮಾಜಿ ಸಿಎಂ ಮನೆಯಲ್ಲಿ ವಶವಾಗಿತ್ತು. ಅಲ್ಲದೇ, 15 ಕೋಟಿ ರು. ಬ್ಯಾಂಕ್ ಖಾತೆಯಲ್ಲಿರುವುದು ಬಹಿರಂಗವಾಗಿತ್ತು.

ಫ್ರಾನ್ಸ್ ವಿಮಾನ ಡಿಕ್ಕಿ,ಮೂವರಿಗೆ ಗಾಯ

ಪ್ಯಾರಿಸ್: ಫ್ರಾನ್ಸ್‌ನಲ್ಲಿನ ಏರ್ ಶೋ ವೇಳೆ ಎರಡು ಜೆಟ್ ವಿಮಾನಗಳು ಆಕಾಶದಲ್ಲೇ ಪರಸ್ಪರ ಡಿಕ್ಕಿಯಾಗಿದ್ದು, ಬೆಂಕಿ ಹೊತ್ತಿಕೊಂಡು ಉರಿಯುತ್ತಿರು ವಂತೆಯೇ ನೆಲಕ್ಕುರುಳಿ ಭಸ್ಮವಾಗಿವೆ. ಸುದೈವ ವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಮಂಗಳವಾರ ಈಶಾನ್ಯ ಫ್ರಾನ್ಸ್‌ನ ವಾಯುನೆಲೆ ಬಳಿ ಫ್ರೆಂಚ್ ವಾಯುಪಡೆಯ ಎರಡು ಜೆಟ್ ವಿಮಾ ನಗಳು ಅವಘಡಕ್ಕೀಡಾಗಿವೆ. ಇಬ್ಬರು ಪೈಲಟ್‌ಗಳು ಮತ್ತು ಒಬ್ಬ ಸಹ ಪೈಲಟ್ ಗಾಯಗೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿ ಕೆಳಗೆ ಬಿದ್ದಿದ್ದಾರೆ. ಮೂವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816-2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.17/2024-25 KW-1, KW-2 & KW-3, (ದ್ವಿ ಲಕೋಟೆ)
ದಿನಾಂಕ: 24.03.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 24.03.2025

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಲೆಕ್ಕ ಶೀರ್ಷಿಕೆ: 4711-01-103-1-00-140-ಪ್ರವಾಹ ನಿಯಂತ್ರಣ ಕಾಮಗಾರಿಗಳು,ಅಟಲ್ ಭೂಜಲ ಯೋಜನೆ, ನಬಾರ್ಡ್ -29, 4702-00-101-5-01-139-ಅಣೆಕಟ್ಟು ಮತ್ತು ಪಿಕಪ್-ಪ್ರಧಾನ ಕಾಮಗಾರಿಗಳು ಮತ್ತು 4702-00-101-1-07-139- ಕೆರೆಗಳ ಆಧುನೀಕರಣ ಪ್ರಧಾನ ಕಾಮಗಾರಿಗಳು ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ ಪೋರ್ಟಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 17/2024-25, ದಿ: 24-03-2025 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 24-03-2025 ರಂದು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 28-03-2025 ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 01-04-2025 ಸಾಯಂಕಾಲ 5.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 02-04-2025 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 03-04-2025 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
DIPR/TUM/734/KSMCA/2024-25

ನ್ಯಾ.ವರ್ಮಾ ಮನೆ ಪರಿಶೀಲಿಸಿದ ಡಿಸಿಪಿ

ದೆಹಲಿ: ಅಧಿಕೃತ ನಿವಾಸದಲ್ಲಿ ಅಪಾರ ಪ್ರಮಾಣದ ನಗದು ಪತ್ತೆಯಾದ ಬಳಿಕ ದೆಹಲಿ ಹೈಕೋರ್ಟ್‌ನಿಂದ ಶಿಕ್ಷೆಯ ರೀತಿಯಲ್ಲಿ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆಗೊಂಡಿರುವ ನ್ಯಾ.ಯಶವಂತ್ ವರ್ಮಾ ರ ದೆಹಲಿ ನಿವಾಸಕ್ಕೆ ಬುಧವಾರ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದಾರೆ.

ದೆಹಲಿಯ ಡಿಸಿಪಿ ದೇವೇಶ್ ಕುಮಾರ್ ಮಹ್ಲಾ ಅವರ ನೇತೃತ್ವದಲ್ಲಿ ಹಲವು ಪೊಲೀಸರ ತಂಡ ನ್ಯಾ. ವರ್ಮಾ ಮನೆಯಲ್ಲಿ ಪರಿಶೀಲನೆ ನಡೆಸಿದೆ. ಮಾ.14ರ ರಾತ್ರಿ 11.35ರಲ್ಲಿ ನ್ಯಾಯಮೂರ್ತಿಗಳ ಅಧಿಕೃತ ನಿವಾಸಗಳ ಸಾಲಿನಲ್ಲಿರುವ ನ್ಯಾ.ವರ್ಮಾ ಮನೆಯಲ್ಲಿ ಬೆಂಕಿ ಅವಘಡವಾಗಿದ್ದು, ಬೆಂಕಿ ನಂದಿಸಲು ಧಾವಿಸಿದ್ದ ಅಗ್ನಿಶಾಮಕ ದಳದ ಸಿಬ್ಬಂದಿಗೆ ಅಪಾರ ಪ್ರಮಾಣದ ನಗದು ಕಂಡುಬಂದಿರುವ ವರದಿ ಆಧರಿಸಿದ ಹಿರಿಯ ಪೊಲೀಸ್ ಅಧಿಕಾರಿಗಳ ತಂಡ ಬುಧವಾರ ಸ್ಥಳ ಪರಿಶೀಲನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಬೆಂಕಿ ಹೇಗೆ ಹೊತ್ತಿ ಕೊಂಡಿತು? ಎಲ್ಲೆಲ್ಲಿಗೆ ಹರಡಿತ್ತು? ಯಾವೆಲ್ಲಾ ವಸ್ತುಗಳು ಸುಟ್ಟು ಹೋಗಿವೆ? ನಗದು ಹಣ ಎಷ್ಟು ಸುಟ್ಟಿದೆ? ಎಂಬ ಪ್ರಶ್ನೆಗಳನ್ನು ಇಟ್ಟುಕೊಂಡು ಮನೆಗೆಲಸದವರನ್ನೆಲ್ಲಾ ಕರೆದು ವಿಚಾರಿಸಿರುವ ಪೊಲೀಸರ ತಂಡ ಮಾಹಿತಿ ಕಲೆಹಾಕಿದೆ ಎನ್ನಲಾಗಿದೆ. ಇನ್ನೊಂದೆಡೆ, ಸುಪ್ರೀಂ ಕೋರ್ಟ್‌ನಿಂದ ರಚನೆ ಆಗಿರುವ ಮೂವರು ಸದಸ್ಯರ ಆಂತರಿಕ ತನಿಖಾ ಸಮಿತಿ ಕೂಡಾ ಮಂಗಳವಾರ ನ್ಯಾ.ವರ್ಮಾ ಮನೆಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿದೆ ಎಂಬುದು ಗಮನಾರ್ಹ.

ಎಫ್‌ಐಆರ್: ತುರ್ತು ವಿಚಾರಣೆಗೆ ನಕಾರ

ಅಧಿಕೃತ ನಿವಾಸದಲ್ಲಿ ಅಪಾರ ಪ್ರಮಾಣದ ನಗದು ಕಂಡುಬಂದಿರುವ ಹಿನ್ನೆಲೆ ನ್ಯಾ.ಯಶವಂತ್ ವರ್ಮಾ ವಿರುದ್ಧ ಎಫ್‌ಐಆರ್ ದಾಖಲಿಸಲು ದೆಹಲಿ ಪೊಲೀಸರಿಗೆ ಆದೇಶ ನೀಡಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ತೆಗೆದುಕೊಳ್ಳಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರ ನೇತೃತ್ವದ ಪೀಠಕ್ಕೆ ಅರ್ಜಿ ಸಲ್ಲಿಸಿದ ವಕೀಲ ಮ್ಯಾಥ್ಯೂಸ್ ಜೆ.ನೆಡುಂಪಾರಾ ಅವರು, ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಹಿನ್ನೆಲೆಯಲ್ಲಿ ತಕ್ಷಣವೇ ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಪೀಠಕ್ಕೆ ಮನವಿ ಮಾಡಿದರು. ಅರ್ಜಿಯನ್ನು ತಕ್ಷಣವೇ ವಿಚಾರಣೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ನಂತರದಲ್ಲಿ ನಿಗದಿತ ಕ್ರಮದಲ್ಲಿ ಅರ್ಜಿ ವಿಚಾರಣೆಗೆ ಬರಲಿ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು.

ಹಿಂದೂ ಸುರಕ್ಷಿತವಾಗಿದ್ದರೆ ಮುಸ್ಲಿಂ ಕೂಡಾ ಸುರಕ್ಷಿತ

ಲಖನೌ: ಉತ್ತರ ಪ್ರದೇಶದಲ್ಲಿ ಹಿಂದೂಗಳು ಸುರಕ್ಷಿತವಾಗಿದ್ದರೆ ಮುಸ್ಲಿಮರೂ ಸುರಕ್ಷಿತವಾಗಿರುತ್ತಾರೆ ಎಂದೇ ಅರ್ಥ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪಾಡ್‌ಕಾಸ್ಟ್ ಸಂದರ್ಶನದಲ್ಲಿ ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ಎಲ್ಲಾ ಧರ್ಮದ ಜನರು ಸುರಕ್ಷಿತವಾಗಿಯೇ ಇದ್ದಾರೆ. ಹಿಂದೂ, ಮುಸ್ಲಿಂ ಸಮುದಾಯದವರಿಬ್ಬರೂ ಸುರಕ್ಷಿತವಾಗಿದ್ದಾರೆ. 100 ಹಿಂದೂ ಕುಟುಂಬಗಳ ನಡುವೆ ಒಂದು ಮುಸ್ಲಿಂ ಕುಟುಂಬ ಸುಭದ್ರವಾಗಿಯೇ ಇರುತ್ತದೆ. ಆದರೆ 100 ಮುಸ್ಲಿಂ ಕುಟುಂಬಗಳ ನಡುವೆ 50 ಹಿಂದೂ ಕುಟುಂಬಗಳಿದ್ದರೂ ಸುರಕ್ಷಿತವಾಗಿರಲು ಸಾಧ್ಯವಿಲ್ಲ. ಇದಕ್ಕೆ ಬಾಂಗ್ಲಾದೇಶದಲ್ಲಿನ ಹಿಂಸಾಚಾರವೇ ಸಾಕ್ಷಿ. ಕಾರಣ, ಇದಕ್ಕೂ ಮುನ್ನ ಪಾಕಿಸ್ತಾನ, ಅಫ್ಘಾನಿಸ್ತಾನದಲ್ಲಿ ಏನೇನಾಗಿದೆ ಎನ್ನುವುದು ಎಲ್ಲರಿಗೂ ಎಂದು ಹೇಳಿದ್ದಾರೆ. ಉತ್ತರ ಪ್ರದೇಶದಲ್ಲಿ 2017ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಒಂದು ಕೋಮುಗಲಭೆಯೂ ನಡೆದಿಲ್ಲ. ರಾಜ್ಯದಲ್ಲಿ ಎಲ್ಲಾ ಧರ್ಮದ ಜನರಿಗೂ ಅವರವರ ಧಾರ್ಮಿಕ ಪದ್ಧತಿಗಳ ಆಚರಣೆಗೆ ಸ್ವಾತಂತ್ರ್ಯವಿದೆ. ಹಿಂದೂ ಆಡಳಿತಗಾರರು ಇತರೆ ಧರ್ಮೀಯರ ಮೇಲೆ ಅಧಿಪತ್ಯ ಸ್ಥಾಪಿಸಿದ ಉದಾಹರಣೆ ಇತಿಹಾಸದಲ್ಲಿಲ್ಲ ಎಂದಿದ್ದಾರೆ. ಸಂಭಾಲ್‌ನಲ್ಲಿ ಅಧಿಕಾರಿಗಳು 54 ದೇಗುಲ ಸ್ಥಳದಲ್ಲಿ ಮಸೀದಿಗಳಿರುವುದನ್ನು ಗುರುತಿಸಿದ್ದಾರೆ. ಉಳಿದವುಗಳನ್ನು ಪತ್ತೆ ಹಚ್ಚಲು ಪ್ರಯತ್ನ ನಡೆಯುತ್ತಿವೆ ಎಂದರು.

ರಾಹುಲ್ ವಿರುದ್ಧ ವಾಗ್ದಾಳಿ

'ಒಂದು ಭಾರತ ಶ್ರೇಷ್ಠ ಭಾರತ' ಆಗಬೇಕಿದೆ. ಆದರೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದಶಕಗಳಿಂದ ಏನು ಮಾಡುತ್ತಿದ್ದರು? ಅವರೇಕೆ ರಾಮ ಮಂದಿರ ನಿರ್ಮಿಸಲಿಲ್ಲ? ರಾಹುಲ್ ಗಾಂಧಿ ತನ್ನ ಅಜ್ಜ, ಅಜ್ಜಿ, ತಂದೆಯನ್ನು ಈ ಬಗ್ಗೆ ಕೇಳಬೇಕಿತ್ತು? ಕಾಂಗ್ರೆಸ್ ನಾಯಕರ 'ಭಾರತ್ ಜೋಡೊ' ಅಭಿಯಾನ ವಾಸ್ತವವಾಗಿ 'ಭಾರತ್ ತೋಡೊ' ಅಭಿಯಾನವಾಗಿದೆ. ಅವರು ಬೇರೆ ದೇಶದಲ್ಲಿ ಕುಳಿತು ಭಾರತವನ್ನು ಟೀಕಿಸುತ್ತಾರೆ ಎಂದು ಸಿಎಂ ವಾಗ್ದಾಳಿ ನಡೆಸಿದ್ದಾರೆ.

ಅಲಹಾಬಾದ್ ಹೈ ತೀರ್ಪಿಗೆ ತಡೆ

ದೆಹಲಿ: ಸ್ತನ ಮುಟ್ಟುವುದು, ಪೈಜಾಮದ ದಾರ ಎಳೆಯುವುದು ಅತ್ಯಾಚಾರ ಯತ್ನವಲ್ಲ ಎಂಬ ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್ ಬುಧವಾರ ತಡೆ ಹಿಡಿದಿದೆ. ಈ ತೀರ್ಪು ಬಹಳ ಅಮಾನವೀಯ, ಸಂವೇದನಾ ರಹಿತ ಎನಿಸುತ್ತಿದೆ ಎಂದು ಅಭಿಪ್ರಾಯ ಪಟ್ಟಿರುವ ನ್ಯಾ.ಬಿ.ಆರ್. ಗವಾಯಿ ಮತ್ತು ನ್ಯಾ.ಅಗಸ್ಟೀನ್ ಜಾರ್ಜ್ ಮಸಿಹ್ ಅವರ ಪೀಠ, ಸ್ವಯಂಪ್ರೇ ರಣೆಯಿಂದ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿದೆ.

ಪೋಕ್ಸೊ ಕಾಯಿದೆ ಮತ್ತು ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ದಾಖಲಾಗಿದ್ದ ಬಾಲಕಿ ಮೇಲಿನ ಅತ್ಯಾಚಾರ ಯತ್ನ ಪ್ರಕರಣದಲ್ಲಿ ರಿವ್ಯು ಪಿಟಿಷನ್ ವಿಚಾರಣೆ ನಡೆಸಿದ್ದ ಅಲಹಾಬಾದ್ ಹೈ ಕೋರ್ಟ್, ಮಾ.17ರಂದು ನೀಡಿದ್ದ ತೀರ್ಪು ದೇಶಾದ್ಯಂತ ಚರ್ಚೆ ಹುಟ್ಟುಹಾಕಿತ್ತು. ಅಲ್ಲದೇ, ನ್ಯಾಯಾಲಯದ ತೀರ್ಪಿನ ಬಗ್ಗೆ ಕೇಂದ್ರ ಸಚಿವೆಯೊಬ್ಬರು ಕಿಡಿಕಾರಿದ್ದರು. ಹೈಕೋರ್ಟ್‌ನ ವಿವಾದಿತ ತೀರ್ಪು ಚರ್ಚೆಗೊಳಗಾಗದ ಬಳಿಕ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, ಸ್ವಯಂಪ್ರೇರಣೆಯಿಂದ ಪ್ರಕರಣ ದಾಖಲಿಸಿ ಕೊಂಡು ವಿಚಾರಣೆ ಆರಂಭಿಸಿದೆ. ಈ ತೀರ್ಪಿನ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಮತ್ತು ಉತ್ತರ ಪ್ರದೇಶ ಸರಕಾರಕ್ಕೆ ಮತ್ತು ಇತರ ಸಂಬಂಧಪಟ್ಟವರಿಗೆ ನೋಟಿಸ್ ನೀಡಿದೆ.ಕೇವಲ ಸ್ತನ ಹಿಡಿದುಕೊಳ್ಳುವುದು, ಬಾಲಕಿಯ ಪೈಜಾಮದ ದಾರ ಎಳೆಯುವುದನ್ನು ಅತ್ಯಾಚಾರ ಅಥವಾ ಅತ್ಯಾಚಾರ ಯತ್ನವೆಂದು ಅಪರಾಧೀಕರಣ ಮಾಡಲಾಗದು. ಅದನ್ನು ತೀವ್ರ ಸ್ವರೂಪದ ಲೈಂಗಿಕ ದೌರ್ಜನ್ಯ ಎಂದಷ್ಟೇ ಪರಿಗಣಿಸಬಹುದು ಎಂದು ಮಾರ್ಚ್ 17 ರಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿತ್ತು.

ಬ್ಯಾಂಕ್ ಶುಲ್ಕ, ಬಡ್ಡಿ ಮೇ 1ರಿಂದ ಬದಲು

ದೆಹಲಿ: ಬ್ಯಾಂಕಿಂಗ್ ಸೇವೆಗಳು, ಬಡ್ಡಿ ಮತ್ತು ಶುಲ್ಕ ವಿಧಿಸುವ ಕ್ರಮದಲ್ಲಿ ಮೇ 1ರಿಂದ ಮಹತ್ವದ ಬದಲಾವಣೆ ತರಲಿರುವ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ), ಬೇರೆ ಬ್ಯಾಂಕ್‌ಗಳ

ಎಟಿಎಂನಿಂದ ನಗದು ತೆಗೆಯುವುದಕ್ಕೆ ಶುಲ್ಕ ಹೆಚ್ಚಳ ಮಾಡಲಿದೆ. ಜತೆಗೆ ಗ್ರಾಹಕರ ಉಳಿತಾಯ ಖಾತೆ(ಎಸ್‌ಬಿ)ಯಲ್ಲಿ ಮೊತ್ತಕ್ಕೆ ನೀಡುತ್ತಿದ್ದ ಏಕರೂಪದ ಬಡ್ಡಿ ನೀತಿಯಲ್ಲಿಯೂ ಬದಲಾವಣೆ ಮಾಡಲಿದೆ. ಉಳಿತಾಯ ಖಾತೆಯಲ್ಲಿ ಹೆಚ್ಚು ಹಣವಿದ್ದರೆ ಹೆಚ್ಚು ಬಡ್ಡಿ ದರ ಸಿಗುವಂತೆ ನಿಯಮಗಳಲ್ಲಿ ಪರಿಷ್ಕರಣೆ ಮಾಡುತ್ತಿದೆ.

ಮೇ 1ರಿಂದ ನಗದು ಹಿಂಪಡೆಯುವಿಕೆಗೆ ಯುಪಿಐ ಇಂಟರ್ಚೇಂಜ್ ಪ್ರಕ್ರಿಯೆ ಮೇಲಿನ ಶುಲ್ಕವನ್ನು 17 ರು.ನಿಂದ 19 ರು.ಗೆ ಹೆಚ್ಚಿಸಲು ರಾಷ್ಟ್ರೀಯ ಪಾವತಿ ನಿಗಮ(ಎನ್‌ಪಿಸಿಐ) ಮತ್ತು ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಅನುಮೋದನೆ ನೀಡಿವೆ.

ಎಲ್ಲಾ ಬ್ಯಾಂಕುಗಳು ಇಂಟರ್ಚೇಂಜ್ ಶುಲ್ಕ ಹೆಚ್ಚಿಸಿವೆ. ಎಟಿಎಂ ಘಟಕಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚು ಬಾರಿ ಹಣ ಪಡೆದರೆ ಶುಲ್ಕ ಖಾತೆಯಿಂದ ಕಡಿತವಾಗುತ್ತದೆ. ಮೇ 1ರಿಂದ ಈ ಶುಲ್ಕ ಪ್ರಮಾಣ 1ರಿಂದ 2 ರು.ಗಳಷ್ಟು ಹೆಚ್ಚಲಿದೆ. ಖಾತೆಯಲ್ಲಿನ ಶಿಲ್ಕು ಪರಿಶೀಲನೆ ಶುಲ್ಕ 6 ರು. ಇದ್ದದ್ದು 7 ರು.ಗೆ ಏರಿಕೆ ಆಗಲಿದೆ. ಎಸ್‌ಬಿಐ, ಪಿಎನ್‌ಬಿ, ಕೆನರಾ ಸೇರಿದಂತೆ ಪ್ರಮುಖ ಬ್ಯಾಂಕುಗಳು ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಮೊತ್ತ ನಿರ್ವಹಿಸಬೇಕಾದ ನಿಯಮದಲ್ಲೂ ಬದಲಾವಣೆ ತರುತ್ತಿವೆ. ಜತೆಗೆ ಉಳಿತಾಯ ಖಾತೆಯಲ್ಲಿ ಹೆಚ್ಚು ಹಣ ಇದ್ದರೆ ಹೆಚ್ಚು ಬಡ್ಡಿದರ, ಕಡಿಮೆ ಹಣ ಇದ್ದರೆ ಕಡಿಮೆ ಬಡ್ಡಿದರ ನಿಗದಿ ಮಾಡಲಾಗುತ್ತಿದೆ ಎಂದು ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ನಾಗರಾಜ ಎನ್ ಎಂ ರವರು ಬುಧವಾರ ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ನಿಗಮದ ಜಂಟಿ ನಿರ್ದೇಶಕರಾದ ಎಂ. ಮುನಿವೀರಪ್ಪ ಪುಷ್ಪಗುಚ್ಛವನ್ನು ನೀಡಿ ಸ್ವಾಗತಿಸಿದರು.

ಹಾಲಿನ ದರ ಏರಿಕೆ; ಇಂದು ಅಂತಿಮ

ಬೆಂಗಳೂರು: ಹಾಲಿನ ದರ ಏರಿಕೆ ಕುರಿತು ಇಂದು ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ. ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದ ಹಾಲು ಒಕ್ಕೂಟಗಳು ದರ ಏರಿಸುವಂತೆ ಮನವಿ ಸಲ್ಲಿಸಿದ್ದರು. ಸಂಪುಟದಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಸಿಎಂ ಹೇಳಿದ್ದರು. ಮೂಲಗಳ ಪ್ರಕಾರ ಮೂರರಿಂದ ನಾಲ್ಕು ರುಪಾಯಿ ದರ ಏರಿಕೆಗೆ ಅನುಮತಿ ನೀಡುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಹಾಸನ ಹೊರ ವರ್ತುಲ ರಸ್ತೆ ಯೋಜನೆ ಅನುಮೋದನೆಗೆ ಮನವಿ

ನವದೆಹಲಿ: ಹಾಸನ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಹಾಸನ ವರ್ತುಲ ರಸ್ತೆ ಯೋಜನೆಗೆ ಒಪ್ಪಿಗೆ ನೀಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಬುಧವಾರ ಮಹತ್ವದ ಮಾತುಕತೆ ನಡೆಸಿದರು.

ಸಂಸತ್ ಭವನ ದಲ್ಲಿರುವ ಸಾರಿಗೆ ಸಚಿವರ ಕಚೇರಿಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಗಡ್ಕರಿ ಅವರನ್ನು ಭೇಟಿಯಾದ ದೇವೇಗೌಡ ಅವರು, ಹಾಸನ ಬಹಳ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಹಾಗೂ ಕರಾವಳಿ ಮತ್ತು ಒಳನಾಡು ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಕೊಂಡಿಯಾಗಿದೆ. ಹೀಗಾಗಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಅಗತ್ಯವಿದ್ದು, ವರ್ತುಲ ರಸ್ತೆ ನಿರ್ಮಾಣದ ಅಗತ್ಯ ಬಹಳಷ್ಟಿದೆ ಎಂದು ಹೇಳಿದರು.

ರಾಜ್ಯದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಎರಡನೇ ಹಂತದ ನಗರವಾದ ಹಾಸನ, ಆರ್ಥಿಕ ಬೆಳವಣಿಗೆ ಮತ್ತು ನಗರ ವಿಸ್ತರಣೆಯಿಂದಾಗಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಹೀಗಾಗಿ ಹೊರ ವರ್ತುಲ ರಸ್ತೆ ಅಗತ್ಯವಾಗಿದೆ. ಈ ಯೋಜನೆಯು ಸಂಚಾರವನ್ನು ವಿಕೇಂದ್ರೀಕರಿಸಿ ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಹಾಗೂ ಪ್ರಮುಖ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಿಗೆ ಸಂಪರ್ಕ ಒದಗಿಸುತ್ತದೆ ಎಂದು ಗಡ್ಕರಿ ಅವರಿಗೆ ಮನವರಿಕೆ ಮಾಡಿಕೊಟ್ಟರು.

ಪ್ರಸ್ತಾವಿತ ಹೊರ ವರ್ತುಲ ರಸ್ತೆಯು ಬೆಂಗಳೂರು -ನೆಲಮಂಗಲ-ಮಂಗಳೂರು ರಸ್ತೆ (NH-75)ಅನ್ನು ಹಾಸನ ವಿಮಾನ ನಿಲ್ದಾಣ, ಹಾಸನ-ಅರಸೀಕೆರೆ ರಸ್ತೆ (SH-71), ಹಾಸನ-ಹಳೇಬೀಡು-ಹಾಸನ ರಸ್ತೆ ಮತ್ತು ಹಾಸನ-ಬೇಲೂರು ರಸ್ತೆ (NH-373) ಗೆ ಸಂಪರ್ಕಿಸುತ್ತದೆ. ಈ ಸಂಪರ್ಕವು ಸುಗಮ ಸಾರಿಗೆಗೆ ಅನುಕೂಲವಾಗುತ್ತದೆ. ಅಲ್ಲದೆ, ಹಾಸನ ಜಿಲ್ಲೆಯಲ್ಲಿರುವ ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳು ಮತ್ತು ರಾಷ್ಟ್ರೀಯ ಪ್ರವಾಸಿ ಸರ್ಕ್ಯೂಟ್‌ನ ಭಾಗವಾಗಿರುವ ಹಾಸನ, ಬೇಲೂರು, ಹಳೇಬೀಡು, ಚಿಕ್ಕಮಗಳೂರು, ಶ್ರವಣಬೆಳಗೊಳ, ಮೈಸೂರು, ಮಡಿಕೇರಿ ಮತ್ತು ಮಂಗಳೂರಿನಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ ಎಂದು ದೇವೇಗೌಡರು ಕೇಂದ್ರ ಸಾರಿಗೆ ಸಚಿವರಿಗೆ ವಿವರಿಸಿದರು.

ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಎಚ್.ಡಿ ದೇವೇಗೌಡ, ಕುಮಾರಸ್ವಾಮಿ ಮಾತುಕತೆ ನಡೆಸಿದ ಸಂದರ್ಭದಲ್ಲಿ ಶಾಸಕ ರೇವಣ್ಣ, ಎ.ಮಂಜು ಜತೆಯಲ್ಲಿದ್ದರು.

ಯೋಜನೆಯ ವಿವರ

ಪ್ರಸ್ತಾವಿತ ವರ್ತುಲ ರಸ್ತೆಯ ಒಟ್ಟು ಉದ್ದ 21.950 ಕಿ. ಮೀ. ದೂರವನ್ನು ಹೊಂದಿದ್ದು, ಯೋಜನೆಗೆ ಸುಮಾರು 120 ಹೆಕ್ಟೇರ್ ಭೂಮಿ ಅಗತ್ಯವಿದೆ. ಜಿಎಸ್ಟಿ, ಭೂಸ್ವಾಧೀನ ಮತ್ತು ಸ್ಥಳಾಂತರ ಸೇರಿದಂತೆ ಯೋಜನೆಯ ಅಂದಾಜು ವೆಚ್ಚ ಸುಮಾರು 750 ಕೋಟಿ ಆಗಲಿದೆ ಎಂದು ಮಾಜಿ ಪ್ರಧಾನಿಗಳು ಸಾರಿಗೆ ಸಚಿವರಿಗೆ ವಿವರಿಸಿದರು. ಯೋಜನೆಯ ಆರ್ಥಿಕ ಪರಿಣಾಮದ ಕುರಿತು ವಿವರಿಸಿದ ದೇವೇಗೌಡರು; ಉತ್ತಮ ರಸ್ತೆ ಮೂಲಸೌಕರ್ಯವು ಈ ಪ್ರದೇಶದಲ್ಲಿ ವೇಗಯುತ ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಈ ವರ್ತುಲ ರಸ್ತೆ ಪ್ರಯಾಣದ ಸಮಯವನ್ನು ಕಡಿಮೆ ಮಾಡುವುದಲ್ಲದೆ; ವ್ಯಾಪಾರ, ಕೃಷಿ ಮತ್ತು ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ. ಹಾಸನದ ಜನರಿಗೆ ಹೊಸ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಅವರು ಹೇಳಿದರು.

ಮಾತನಾಡಲು ಅವಕಾಶ ನೀಡುತ್ತಿಲ್ಲ: ರಾಹುಲ್ ದೂರು

ದೆಹಲಿ: ಲೋಕಸಭೆಯ ಸದನದಲ್ಲಿ ನಮಗೆ ಮಾತನಾಡಲು ಅವಕಾಶವನ್ನೇ ನೀಡುತ್ತಿಲ್ಲ. ಮಾತನಾಡಲು ಅವಕಾಶ ಕೇಳಿದರೆ ಸ್ಪೀಕರ್ ಅವರೇ ಪೀಠದಿಂದ ಓಡಿ ಹೋಗುತ್ತಾರೆ ಎಂದು ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.

ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅಸಮಾಧಾನಗೊಂಡಿರುವ ರಾಹುಲ್, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಕಾಂಗ್ರೆಸ್ ಸಂಸದರ ಧ್ವನಿಯನ್ನು ಹತ್ತಿಕ್ಕಲಾಗುತ್ತಿದೆ ಎಂದು ಆರೋಪಿಸಿದರು. ಹಲವು ದಿನಗಳಿಂದ ಸದನದಲ್ಲಿ ಮಾತನಾಡಲು ನನಗೆ ಅವಕಾಶವನ್ನೇ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸದನದಲ್ಲಿ ಏನು ನಡೆಯುತ್ತಿದೆ? ನನಗೆ ಮಾತನಾಡಲು ಏಕೆ ಅವಕಾಶ ನೀಡುತ್ತಿಲ್ಲ. ಸ್ಪೀಕರ್ ಅವರನ್ನು ವಿನಂತಿಸಿದರೆ ಅವರು ಓಡಿ ಹೋದರು. ಸದನವನ್ನು ನಡೆಸಲು ಇದು ಸರಿಯಾದ ರೀತಿಯಲ್ಲ. ಅಗತ್ಯ ಇಲ್ಲದಿದ್ದರೂ ಸದನವನ್ನು ಮುಂದೂಡಿದರು ಎಂದು ರಾಹುಲ್ ದೂರಿದರು.

ವಿಶ್ವ ರಂಗಭೂಮಿ ದಿನಾಚರಣೆ

ಬೆಂಗಳೂರು: ಪರಂಪರಾ ಕಲ್ಚರಲ್ ಫೌಂಡೇಶನ್ (ರಿ.) ವತಿಯಿಂದ ಮಾ.27 ರಂದು ಎನ್.ಆರ್.ಕಾಲೋನಿಯ ಡಾ.ಸಿ.ಅಶ್ವಥ್ ಕಲಾಭವನದಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ನಿಮಿತ್ತ ಪರಂಪರಾ ರಂಗ ಪುರಸ್ಕಾರ ಪ್ರದಾನ ಸಮಾರಂಭ ನಡೆಯಲಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಪರಂಪರಾ ರಂಗ ಪುರಸ್ಕಾರ, ಹಾಸ್ಯಪ್ರಧಾನ ಕಿರುನಾಟಕಗಳ ಪ್ರದರ್ಶನ ಗೀತಗಾಯನ ಹಾಗೂ ಗಾಜಿನ ಕಲಾ ಪ್ರದರ್ಶನ ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ ಹಿರಿಯ ರಂಗಕರ್ಮಿಗಳಾದ ವಿ.ಎನ್.ಅಶ್ವಥ್ ಮತ್ತು ಎ.ಎಸ್.ಪ್ರಕಾಶ್ ಅವರಿಗೆ ಪರಂಪರಾ ರಂಗಪುರಸ್ಕಾರ ಪ್ರದಾನ ಮಾಡಿ ಗೌರವಿಸಲಾಗುವುದು. ಪರಂಪರಾ ರಂಗಪುರಸ್ಕಾರ ಪ್ರದಾನ ಸಮಾರಂಭಕ್ಕೆ ಮಾಜಿ ಮೇಯರ್ ಬಿ.ಎನ್.ಮಂಜುನಾಥ ರೆಡ್ಡಿ ಚಾಲನೆ ನೀಡುವರು, ನಾಟಕಕಾರ, ಹಾಸ್ಯ ಸಾಹಿತಿ ಬೇಲೂರು ರಾಮಮೂರ್ತಿ ಸಮಾರಂಭದ ಅಧ್ಯಕ್ಷತೆ ವಹಿಸುವರು . ಹಾಸ್ಯ ಸಾಹಿತಿ ಅಣಕು ರಾಮನಾಥ್, ರಂಗನಿರ್ದೇಶಕ ಕೆಎಸ್‌ಡಿಎಲ್ ಚಂದ್ರು ಮತ್ತು ಸಮರ್ಥನಂ ಅಂಗವಿಕಲರ ಸಂಸ್ಥೆಯ ಸಂಸ್ಥಾಪಕ ಮಹಾಂತೇಶ ಘಟಿವಾಳಪ್ಪ ಕಿವಡಸಣ್ಣವರ್ ಮುಖ್ಯಅತಿಥಿಗಳಾಗಿ ಭಾಗವಹಿಸುವರು. ಪರಂಪರಾ ಕಲ್ಚರಲ್ ಫೌಂಡೇಶನ್ ಅಧ್ಯಕ್ಷ ಜಿ.ಪಿ ರಾಮಣ್ಣ ಉಪಸ್ಥಿತರಿರುವರು.

ದೇಶ ತೊರೆಯುತ್ತಿರುವ ಸಿರಿವಂತರು

ದೆಹಲಿ: ವಿದೇಶಗಳಲ್ಲಿನ ಉತ್ತಮ ಜೀವನ ಮಟ್ಟ, ಸರಾಗ ಉದ್ಯಮ ಸ್ಥಾಪನೆ ಸೌಲಭ್ಯಗಳು, ವ್ಯಾಪಾರ ವಹಿವಾಟಿಗೆ ಅನುಕೂಲಕಾರಿ ವಾತಾವರಣ ಮೊದಲಾದ ಅಂಶಗಳಿಂದಾಗಿ ಭಾರತದಲ್ಲಿರುವ ಸೂಪರ್ ರಿಚ್(ಭಾರೀ ಸಿರಿವಂತರ) ಪೈಕಿ ಶೇ.22 ಮಂದಿ ದೇಶ ತೊರೆಯಲು ಬಯಸುತ್ತಾರೆ ಎಂದು ಬುಧವಾರ ಪ್ರಕಟವಾದ ಸಮೀಕ್ಷೆಯೊಂದು ಗಮನ ಸೆಳೆದಿದೆ. ಅತ್ಯಂತ ಶ್ರೀಮಂತ ವರ್ಗದ 150ಕ್ಕೂ ಅಧಿಕ ವ್ಯಕ್ತಿಗಳನ್ನು ಸಂಪರ್ಕಿಸಿ ಸಿದ್ಧಪಡಿಸಿದ ಸಮೀಕ್ಷೆ ಇದಾಗಿದೆ.

ಅಮೆರಿಕದಲ್ಲಿ 2ನೇ ಅವಧಿಗೆ ಅಧಿಕಾರಕ್ಕೇರಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 'ಗೋಲ್ಡನ್ ವೀಸಾ ಯೋಜನೆ' ಪ್ರಕಟಿಸಿದ ಬಳಿಕವಂತೂ ಅಮೆರಿಕಕ್ಕೆ ತೆರಳುವ ಸಿರಿವಂತ ವರ್ಗದವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ ಎಂಬುದರತ್ತ ಸಮೀಕ್ಷೆ ಗಮನ ಸೆಳೆದಿದೆ.

ಅಲ್ಲದೇ, ಯುನೈಟೆಡ್ ಕಿಂಗ್ಡಂ, ಆಸ್ಟ್ರೇಲಿಯ, ಕೆನಡ ಮತ್ತು ಯುಎಇ ಸಿರಿವಂತರು ನೆಲೆ ಕಂಡುಕೊಳ್ಳಲು ಬಯಸುವ ಆದ್ಯತೆಯ ದೇಶಗಳಾಗಿವೆ ಎಂದು ವರದಿ ತಿಳಿಸಿದೆ. ವಿದೇಶಾಂಗ ಸಚಿವಾಲಯದಲ್ಲಿನ ಅಂಕಿ ಅಂಶ ಪ್ರಕಾರವೇ ಪ್ರತಿ ವರ್ಷ 25 ಲಕ್ಷ ಭಾರತೀಯರು ಇತರ ದೇಶಗಳಿಗೆ ವಲಸೆ ಹೋಗುತ್ತಾರೆ.

ವಾರ್ಷಿಕ ದೇಶ ತೊರೆವ 25 ಲಕ್ಷ ಭಾರತೀಯರು!

- ಭಾರೀ ಶ್ರೀಮಂತರಲ್ಲಿ ಶೇ.22ರಷ್ಟು ಮಂದಿಗೆ ದೇಶ ಬಿಡುವ ಆಲೋಚನೆ
- ಉದ್ಯಮ ಸ್ಥಾಪನೆ, ವ್ಯಾಪಾರ ಆರಂಭ, ನೌಕರಿ, ಉನ್ನತ ಶಿಕ್ಷಣ ಕಾರಣ

ದ್ವಿಪೌರತ್ವದ ಆಸೆ

ಸಮೀಕ್ಷೆಗೆ ಪ್ರತಿಕ್ರಿಯಿಸಿದ 150ಕ್ಕೂ ಅಧಿಕ ಜನರಲ್ಲಿ ಪ್ರತಿಐವರಲ್ಲೊಬ್ಬರು ಪ್ರಸ್ತುತ ವಲಸೆ ಹೋಗುವ ಪ್ರಕ್ರಿಯೆಯಲ್ಲೇ ತೊಡಗಿಕೊಂಡಿದ್ದಾರೆ. ಅವರಲ್ಲಿ ಹೆಚ್ಚಿನವರು ಭಾರತೀಯ ಪೌರತ್ವವನ್ನೂ ಉಳಿಸಿಕೊಂಡು ತಮ್ಮ ಆಯ್ಕೆಯ ವಿದೇಶದಲ್ಲಿ ಶಾಶ್ವತವಾಗಿ ವಾಸಿಸಲು ಉದ್ದೇಶಿಸಿದ್ದಾರೆ ಎಂದು ಸಮೀಕ್ಷೆ ವಿವರಿಸಿದೆ. 'ವಲಸೆ ನಿರ್ಧಾರ ಭವಿಷ್ಯದ ಹೂಡಿಕೆ' ಎಂದು ವ್ಯಾಖ್ಯಾನಿಸಿರುವ ಸಮೀಕ್ಷೆಯು, ಕೆಲವು ಶ್ರೀಮಂತರು ಮಾತ್ರ ತಮ್ಮ ಮಕ್ಕಳಿಗೆ ಅತ್ಯುತ್ತಮ ಉನ್ನತ ಶಿಕ್ಷಣ ಕೊಡಿಸುವ ದೃಷ್ಟಿಯಿಂದಲೂ ಪಶ್ಚಿಮದ ದೇಶಗಳನ್ನು ಆಯ್ಕೆ ಮಾಡುತ್ತಿದ್ದಾರೆ ಎಂದು ಗಮನ ಸೆಳೆದಿದೆ.

ಸುಧಾರಿತ ಜೀವನ ಮಟ್ಟ, ಆರೋಗ್ಯ ಸಮಸ್ಯೆಗಳಿಗೆ ಸಿಗುವ ಸುಲಭ ಪರಿಹಾರಗಳು, ಶಿಕ್ಷಣ, ಜೀವನಶೈಲಿ ವಿದೇಶಕ್ಕೆ ವಲಸೆ ಹೋಗುವವರ ಇತರೆ ಆಯ್ಕೆಗಳಾಗಿವೆ ಎಂದು ಸಮೀಕ್ಷೆ ಹೇಳಿದೆ. 3ನೇ ಎರಡರಷ್ಟು ಜನರು ವ್ಯಾಪಾರ ಕಾರ್ಯಾಚರಣೆಗಳನ್ನು ಸುಗಮಗೊಳಿಸುವುದು ಅವರಿಗೆ ದೇಶ ತೊರೆಯುವುದಕ್ಕೆ ಇರುವ ಪ್ರಮುಖ ಅಂಶ ಎಂದಿದೆ.

ವಿವಿಧ ದತ್ತಿ ಪುರಸ್ಕಾರ ಪ್ರದಾನ ಕಾರ್ಯಕ್ರಮ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಮಾ. 28ರ ಸಂಜೆ 5.00 ಗಂಟೆಗೆ ಪರಿಷತ್ತಿನ ಪ್ರಮುಖ ದತ್ತಿ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ.ಚನ್ನಪ್ಪ ಕಟ್ಟಿಯವರು ಉದ್ಘಾಟಿಸಲಿದ್ದು , ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿಯವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮಾಹಿತಿ ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

2024ನೇ ಸಾಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪುರಸ್ಕಾರವನ್ನು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಪರವಾಗಿ ಎಂ.ಜಿ.ಬಾಲಕೃಷ್ಣ ಅವರಿಗೆ, ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿಯನ್ನು ಹಿರಿಯ ಕನ್ನಡಪರ ಹೋರಾಟಗಾರ ಪ್ರವೀಣ ಶೆಟ್ಟಿ, 2025ನೆಯ ಸಾಲಿನ ನಾಗಡಿಕೆರೆ-ಕಟ್ಟಪ್ಪ ರುಕ್ಮಿಣಿ ದತ್ತಿ ಪ್ರಶಸ್ತಿಯನ್ನುಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಅವರಿಗೆ , 2025ನೇ ಸಾಲಿನ ಮಾಹಿತಿ ಹಕ್ಕು ತಜ್ಞ ಜೆ.ಎಂ.ರಾಜಶೇಖರ ಪ್ರಶಸ್ತಿಯನ್ನು ಸಾ.ತಿ.ಸದಾನಂದ ಗೌಡರಿಗೆ, 2023-24ನೆಯ ಸಾಲಿನ ನಿಂಗಮ್ಮ ಹುಚ್ಚೇಗೌಡ ಕೋಡಿಹೊಸಹಳ್ಳಿ ದತ್ತಿ ಪ್ರಶಸ್ತಿಯನ್ನು ಸಾಕಮ್ಮ ಪಡೆಸಲಹಟ್ಟಿ ಮತ್ತು ಬಾನಂದೂರು ಬೋರಮ್ಮ ಅವರಿಗೆ ನೀಡಲಾಗುತ್ತಿದೆ. ದತ್ತಿದಾನಿಗಳ ಪರವಾಗಿ ಎನ್.ಕೆ.ರಮೇಶ್, ಪಿ.ಮಹೇಶ್, ಕೋಡಿಹೊಸಳ್ಳಿ ರಾಮಣ್ಣ ಇರಲಿದ್ದಾರೆ.

ವಿಟಾಕೀಸ್

ಜನವರಿಯಲ್ಲಿ ನೀಲ್ ಡ್ರ್ಯಾಗನ್ ತೆರೆಗೆ

ಸಲಾರ್ ಬಳಿಕ ಪ್ರಶಾಂತ್ ನೀಲ್, ಜೂ.ಎನ್‌ಟಿಆರ್ ಅಭಿನಯದ ಹೈವೋಲ್ಟೇಜ್ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಸೆಟ್ಟೇರುವ ಮೊದಲೇ ಕುತೂಹಲ ಮೂಡಿಸಿದ್ದ ಈ ಸಿನಿಮಾದ ಚಿತ್ರೀಕರಣ ಆರಂಭವಾಗಿದೆ. ಈ ನಡುವೆಯೇ ಚಿತ್ರತಂಡ ಬಿಡುಗಡೆಯ ದಿನಾಂಕವನ್ನು ಘೋಷಿಸಿದೆ. ನೀಲ್, ತಾರಕ್ ಕಾಂಬಿನೇಷನ್‌ನ ಈ ಸಿನಿಮಾ ಜನವರಿ 9 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ. ಇದು ಭಾರತ ಭೂತಾನ್, ಚೀನಾ ಗಡಿಯಲ್ಲಿ ನಡೆಯುವ ಕಥೆಯನ್ನು ಒಂಗೊಂಡಿದ್ದು, ಆ್ಯಕ್ಷನ್, ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬರಲಿದೆ. ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಗಿದ್ದು, ಎರಡನೇ ಹಂತಕ್ಕಾಗಿ ಹೈದರಾಬಾದ್‌ನಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಚಿತ್ರೀಕರಣ ನಡೆಸಲಾಗುತ್ತಿದೆ.

ಜೂ.ಎನ್‌ಟಿಆರ್‌ಗೆ, ಆರ್‌ಆರ್‌ಆರ್ ಭರ್ಜರಿ ಯಶಸ್ಸು ತಂದುಕೊಟ್ಟಿತು, ಆ ಬಳಿಕ ದೇವರ ಸಿನಿಮಾದಲ್ಲಿ ನಟಿಸಿದರು. ಆದರೆ ಆ ಸಿನಿಮಾ ಅಷ್ಟಾಗಿ ಯಶಸ್ಸು ತಂದುಕೊಡಲಿಲ್ಲ. ಬಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿರುವ ಜೂ.ಎನ್‌ಟಿಆರ್, ಹೃತಿಕ್ ರೋಷನ್ ಅಭಿನಯದ ವಾರ್ 2 ಚಿತ್ರದಲ್ಲಿ ಅಭಿನಯಿಸಿದ್ದು, ಭರ್ಜರಿ ಆ್ಯಕ್ಷನ್‌ನಲ್ಲಿ ಮಿಂಚಿದ್ದಾರೆ. ಮತ್ತೊಂದು ಭರ್ಜರಿ ಯಶಸ್ಸಿನ ನಿರೀಕ್ಷೆಯಲ್ಲಿರುವ ತಾರಾಕ್ ಈಗ ಪ್ರಶಾಂತ್ ನೀಲ್ ನಿರ್ದೇಶನದ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಈ ಚಿತ್ರ ಭಾರತೀಯ ಚಿತ್ರರಂಗದಲ್ಲಿ ಹೊಸ ಮೈಲುಗಲ್ಲಾಗುವ ನಿರೀಕ್ಷೆಯೂ ಇದೆ. ಇತ್ತ ತಮಿಳಿನ ಖ್ಯಾತ ನಟ ವಿಜಯ್ ಅಭಿನಯದ ಜನನಾಯಗನ್ ಕೂಡ ಜನವರಿ 9 ರಂದೇ ಬಿಡುಗಡೆಯಾಗಲಿದೆ. ಹಾಗಾಗಿ ಈ ಎರಡು ಚಿತ್ರಗಳ ನಡುವೆ ಸ್ಟಾರ್ ವಾರ್ ನಡೆದರೂ ಅಚ್ಚರಿಯಿಲ್ಲ.

ಸೀಸ್ ಕಡ್ಡಿ ಬಿಡುಗಡೆಗೆ ರೆಡಿ

ನೋಯ್ಡಾದಲ್ಲಿ ನಡೆದ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ ನಮ್ಮ ಚಿತ್ರ ಪ್ರದರ್ಶನ ಕಂಡಿದ್ದು, ಉತ್ತಮ ನಿರ್ದೇಶನ ವಿಭಾಗದಲ್ಲಿ ಪ್ರಶಸ್ತಿ ಬಾಚಿಕೊಂಡಿದೆ. ಮೆಲ್ಬೋರ್ನ್ ಸಿನಿಮಾ ಫೆಸ್ಟಿವಲ್ ನಲ್ಲಿಯೂ ಪ್ರದರ್ಶನ ಕಂಡು ಎಲ್ಲರಿಂದಲೂ ಮೆಚ್ಚುಗೆ ಪಡೆದುಕೊಂಡಿದೆ. ಇದು ಮಕ್ಕಳ ಚಿತ್ರವಾದರೂ ಎಲ್ಲರೂ ನೋಡಲೇಬೇಕಾದ ಸಿನಿಮಾವಾಗಿದೆ.

-ರತನ್ ಗಂಗಾಧರ್ ನಿರ್ದೇಶಕ

ಮಕ್ಕಳ ಚಿತ್ರ, ಸೀಸ್ ಕಡ್ಡಿ ತೆರೆಗೆ ಸಿದ್ಧವಾಗಿದೆ. ಈಗಾಗಲೇ ಹಲವು ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿರುವ ಸೀಸ್ ಕಡ್ಡಿ ಚಿತ್ರವನ್ನು ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕರಾಗಿ, ನಿರ್ಮಾಪಕರಾಗಿ, ಗುರುತಿಸಿ ಕೊಂಡಿರುವ ರತನ್ ಗಂಗಾಧರ್ ನಿರ್ದೇಶನ ಮಾಡಿದ್ದಾರೆ. ಸೀಸ್ ಕಡ್ಡಿ ಎಂಬುದು ಅಕ್ಷರ ಮೂಡಿಸುವ ವಸ್ತು. ಅಂಥಾ ಪೆನ್ಸಿಲ್ ಅನ್ನು ರೂಪಕವಾಗಿಟ್ಟುಕೊಂಡು, ಅದರ ಭಾಗವಾಗಿರುವ ಲೆಡ್, ಶಾರ್ಪ್‌ನರ್, ಇರೇಜರ್ ಮುಂತಾದವುಗಳನ್ನು ಹೋಲುವ



ಪಾತ್ರಗಳ ಮೂಲಕ ಈ ಸಿನಿಮಾದ ಕಥೆಯನ್ನು ತೆರೆಯಲ್ಲಿ ಕಟ್ಟಿಕೊಡಲಾಗಿದೆ.

ಒಂದು ಪೆನ್ಸಿಲ್‌ನ ರೂಪಕದೊಂದಿಗೆ ಬದುಕಿನ ಅಚ್ಚರಿದಾಯಕ ಮಜಲುಗಳನ್ನು ತೆರೆದಿಡುವ ಈ ಸಿನಿಮಾ ಮಕ್ಕಳ ಚಿತ್ರಗಳ ಸಾಲಿನಲ್ಲಿ ಭಿನ್ನವಾಗಿ ನೆಲೆಕಂಡುಕೊಳ್ಳುವ ಸಾಧ್ಯತೆಗಳಿವೆ. ಇದುವರೆಗೂ ಸಿನಿಮೋತ್ಸವಗಳಲ್ಲಿ ಪ್ರದರ್ಶನಗೊಂಡಿದ್ದ ಈ ಚಿತ್ರವನ್ನು ನೋಡಿದವರೆಲ್ಲ ನಾನಾ ದಿಕ್ಕಿನಲ್ಲಿ ವಿಮರ್ಶೆ ಮಾಡಿದ್ದಾರೆ. ಅವೆಲ್ಲವೂ ಸಕಾರಾತ್ಮಕವಾಗಿವೆ ಅನ್ನೋದೇ ಸೀಸ್ ಕಡ್ಡಿಯ ಹೆಗ್ಗಳಿಕೆ.

ಸಾಮಾನ್ಯವಾಗಿ ಮಕ್ಕಳ ಸಿನಿಮಾ ಅಂದಾಕ್ಷಣ ಸಿದ್ಧಸೂತ್ರದ ಕಲ್ಪನೆಗಳು ಮೂಡುತ್ತವೆ. ಆದರೆ ಈ ಚಿತ್ರ ಆ ಕಲ್ಪನೆಗಳನ್ನು ಮೀರಿ ಸಾಗುತ್ತದೆ. ಇಲ್ಲಿ ಐದು ಕಥೆಗಳು ಸಾಗಿದರೂ ಅವೆಲ್ಲವೂ ಒಂದು ಬಿಂದುವಿನಲ್ಲಿ ಸಂಧಿಸುತ್ತವೆ. ಒಬ್ಬ ಕಾದಂಬರಿಕಾರ ಮತ್ತು ಆತನ ಸುತ್ತ ಹಬ್ಬಿಕೊಂಡ ಮಕ್ಕಳ ಪಾತ್ರಗಳು... ಅವುಗಳ ಸುತ್ತ ಥ್ರಿಲ್ಲಿಂಗ್ ಅಂಶಗಳು ಚಿಂತನೆಗೆ ಹಚ್ಚುವಂಥಾ ಧಾಟಿಯಲ್ಲಿ ಈ ಸಿನಿಮಾವನ್ನು ರೂಪಿಸಲಾಗಿದೆ ಎನ್ನುತ್ತಾರೆ ನಿರ್ದೇಶಕರು.

ಸಂಪತ್ ಶಿವಶಂಕರ್, ಕೃತಿ ನಾಣಯ್ಯ, ರತನ್ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಮಹೇಶ್, ಪ್ರತಾಪ್ ವಿ ಭಟ್, ಮಹೇಂದ್ರ ಗೌಡ ಅನುಜಯ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಮೇ ಅಂತ್ಯಕ್ಕೆ ಸೀಸ್ ಕಡ್ಡಿ ತೆರೆಗೆ ಬರಲಿದೆ.

ತಾಯಿ ಕಸ್ತೂರ್ ಗಾಂಧಿ ತೆರೆಗೆ



ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿರುವ ತಾಯಿ ಕಸ್ತೂರ್ ಗಾಂಧಿ ಈ ವಾರ ಒಟಿಟಿಯಲ್ಲಿ ತೆರೆಗೆ ಬರಲಿದೆ. ಬರಗೂರರ ಕಾದಂಬರಿಯನ್ನು ಆಧರಿಸಿ ಈ ಚಿತ್ರವು ನಿರ್ಮಾಣಗೊಂಡಿದೆ. ನಮ್ಮದೇಶದಲ್ಲಿ ಕಸ್ತೂರ್ ಬಾ ಅವರನ್ನೇ ಕೇಂದ್ರವಾಗಿಟ್ಟುಕೊಂಡು ನಿರ್ಮಾಣವಾದ ಮೊದಲ ಚಿತ್ರವೆಂಬ ಹೆಗ್ಗಳಿಕೆಗೂ ಇದು ಪಾತ್ರವಾಗಿದೆ. ಕಸ್ತೂರ್ ಬಾ ಅವರ ಬದುಕಿನ ಕೆಲವು ಪ್ರಮುಖ ಘಟನೆಗಳ ಮೂಲಕ ಆದರ್ಶ ಮತ್ತು ಕಟುವಾಸ್ತವಗಳ ಕಥನವನ್ನು ಈ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಬದುಕಿನ ದ್ವಂದ್ವಗಳನ್ನು ಎದುರಿಸುತ್ತಲೇ ಅದನ್ನು ಮೀರುವ ವ್ಯಕ್ತಿತ್ವಗಳಾಗಿ ಕಸ್ತೂರ್ ಬಾ ಮತ್ತು ಗಾಂಧಿಜಿಯವರನ್ನು ಚಿತ್ರಿಸಲಾಗಿದೆ. ಕಸ್ತೂರ್ ಬಾ ಅವರು ತಾಯಿ, ಪತ್ನಿ ಮತ್ತು ಹೋರಾಟಗಾರ್ತಿಯಾಗಿ ಬದುಕನ್ನು ನಿಭಾಯಿಸಿದ ಚರಿತೆಯನ್ನು ಈ ಚಿತ್ರವು ಅನಾವರಣಗೊಳಿಸುತ್ತದೆ. ಇದು ಏಕಕಾಲಕ್ಕೆ ಕಸ್ತೂರ್ ಬಾ ಮತ್ತು ಗಾಂಧಿಜಿ - ಇಬ್ಬರ ವ್ಯಕ್ತಿತ್ವವನ್ನು ಒಳಗೊಂಡ ಚಿತ್ರವಾಗಿದೆ.

ತಾಯಿ ಕಸ್ತೂರ್ ಗಾಂಧಿ ಚಿತ್ರವು ಕೆಲವು ವಿದೇಶಿ ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೆ ಆಯ್ಕೆಯಾಗಿದ್ದು ಲಾಸ್ ಏಂಜಲೀಸ್ ಚಿತ್ರೋತ್ಸವದಲ್ಲಿ ಉತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಸುರೇಶ್ ಅರಸು ಅವರಿಗೆ ಉತ್ತಮ ಸಂಕಲನಕಾರ ಪ್ರಶಸ್ತಿಯೂ ಬಂದಿದೆ.

ಕಸ್ತೂರ್ ಬಾ ಮತ್ತು ಗಾಂಧಿಜಿಯವರ ಬಾಲ್ಯ, ಯೌವನ ಮತ್ತು ಮುಪ್ಪಿನ ಹಂತಗಳು ಈ ಚಿತ್ರದಲ್ಲಿವೆ. ಕಸ್ತೂರ್ ಬಾ ಪಾತ್ರದಲ್ಲಿ ಹರಿಪ್ರಿಯ ಮತ್ತು ಗಾಂಧಿಯಾಗಿ ಕಿಶೋರ್ ಅಭಿನಯಿಸಿದ್ದಾರೆ. ಶ್ರೀನಾಥ್ ಅವರು ಡಾ.ಬಿ ಆರ್. ಅಂಬೇಡ್ಕರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮಾಸ್ಟರ್ ಆಕಾಂಕ್ಷ್ ಬರಗೂರು, ಸುಂದರರಾಜು, ಪ್ರಮೀಳಾ ಜೋಷಾಯ್, ರಾಘವ್, ಸುಂದರರಾಜ ಅರಸು, ರೇಖಾ, ವೆಂಕಟರಾಜು, ವತ್ಸಲಾ ಮೋಹನ್, ಕುಮಾರಿ ಸ್ಪಂದನಾ ಮುಂತಾದವರು ತಾರಾಗಣದಲ್ಲಿದ್ದಾರೆ.

ಮಲೆನಾಡಲಿ ಮೂಡಿದ ಗಾನ

ಮಲೆನಾಡಿನ ಸೊಬಗಲಿ ಪದವೆ.. ಆದರ್ಶ್ ಅಯ್ಯಂಗಾರ್ ನಿರ್ಮಾಣದ ತಿಮ್ಮನ ಮೊಟ್ಟೆಗಳು ತೆರೆಗೆ ಸಿದ್ಧವಾಗಿದೆ, ಈಗಾಗಲೇ ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿರುವ ತಿಮ್ಮನ ಮೊಟ್ಟೆಗಳು ಪ್ರಶಸ್ತಿ ಗೆಲ್ಲುವ ಜತೆಗೆ ಪ್ರೇಕ್ಷಕರ ಮೆಚ್ಚುಗೆಗೂ ಪಾತ್ರವಾಗಿದೆ. ಈ ನಡುವೆಯೇ ಆದರ್ಶ್ ಅಯ್ಯಂಗಾರ್ ಪದವೇ... ಎಂಬ ವಿಡಿಯೊ ಹಾಡನ್ನು ಸಿದ್ಧಪಡಿಸಿದ್ದು, ಬಿಡುಗಡೆ ಮಾಡಿದ್ದಾರೆ. ಇಷ್ಟಕಾಮ್ಯ ಕೇಶವ ಪ್ರೊಡಕ್ಷನ್ಸ್ ಮತ್ತು ಸಿನಿಮ್ಯಾಟಿಕ್ಸ್ ಬ್ಯಾನರಿನಲ್ಲಿ ಆದರ್ಶ್ ಅಯ್ಯಂಗಾರ್ ಈ ಹಾಡನ್ನು ನಿರ್ಮಿಸಿದ್ದು, ಈ ಬ್ಯಾನರ್‌ನಲ್ಲಿ ನಿರ್ಮಾಣವಾದ ಏಳನೇ ಹಾಡು ಇದಾಗಿದೆ.

ಬರಹಗಾರನೊಬ್ಬ ತನ್ನ ಕಥೆ ಹುಡುಕಾಟದಲ್ಲಿ ಎರಡು ಪಾತ್ರಗಳೊಡನೆ ಮಲೆನಾಡಿನ ಪರಿಸರದಲ್ಲಿ ಸಂಚರಿಸುವುದರ ಸುತ್ತಾ ಹಾಡು ಸಾಗುತ್ತದೆ. ಮಲೆನಾಡಿನ ಸುಂದರ ತಾಣದಲ್ಲಿ ಚಿತ್ರೀಕರಿಸಿರುವ ಹಾಡು ಇದಾಗಿದ್ದು, ರಕ್ಷಿತ್ ತೀರ್ಥಹಳ್ಳಿ ಸಾಹಿತ್ಯ ಬರೆಯುವ ಜತೆಗೆ ನಿರ್ದೇಶನ ಮಾಡಿದ್ದಾರೆ. ಹೇಮಂತ್ ಜೋಯಿಸ್ ಸಂಗೀತ ಸಂಯೋಜಿಸಿದ್ದಾರೆ. ಕಿರಿಕ್ ಪಾರ್ಟಿ ಚಿತ್ರದಲ್ಲಿ ನಟಿಸಿದ್ದ ಶಂಕರಮೂರ್ತಿ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ.

ಆದರ್ಶ್ ಅಯ್ಯಂಗಾರ್, ಸಂದೀಪ್ ಕುಂದಾದ್ರಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸಮೀರ್ ನಗರದ್, ನೇಹಾ ಶಾಂತವೇರಿ, ಅರ್ಚನಾ ಎಸ್ ಎಚ್, ಅನಂತ್ ಭಟ್ ಹೊದಲ ಮುಂತಾದವರು ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಪ್ರಶಾಂತ್ ಮಲೆನಾಡಿನ ಸುಂದರ ಸೊಬಗನ್ನು ಕ್ಯಾಮೆರಾದಲ್ಲಿ ಸರೆಹಿಡಿದಿದ್ದಾರೆ. ಸುಧೀರ್ ಸಂಕಲನ ಈ ಹಾಡಿಗಿದೆ.

ವಿಶ್ವವಾಣಿ
@vishwavaninews
ಬೆಂಗಳೂರು
27-03-2025
ಗುರುವಾರ

ಆರಾಮ

ಚಿತ್ತವಿಹಾರ

ಅಭ್ಯಾಸಗಳ ಬದಲಾವಣೆ

• ಮಾಯಾ ಬಾಲಚಂದ್ರ

ಒಂದೆರಡು ತಲೆಮಾರುಗಳಿಗೆ ಸಂಸ್ಕಾರಯುತ ಮಾರ್ಗದರ್ಶನ ದೊರೆಯದೆ ಹೋದರೆ, ಇಡೀ ಜನಾಂಗ ಹಾದಿ ತಪ್ಪಿ, ಆ ಭೌಗೋಳಿಕ ಪರಿಸರವೇ ಅಶಿಸ್ತಿನ ಬೀಡಾಗಿ ಕುಖ್ಯಾತಿ ಪಡೆದೀತು! ಇದಕ್ಕೆ ಕೆನಡಾದ ಅಲಾಸ್ಕ ಶಾಂತಸಾಗರದಲ್ಲಿನ ಒಂದು ದ್ವೀಪ ನಿದರ್ಶನ. ವ್ಯಾಪಾರಿ ಹಡಗೊಂದು ಆ ದ್ವೀಪದಲ್ಲಿ ಲಂಗರು ಹಾಕಿದಾಗ ಅದರಲ್ಲಿದ್ದ ಯುವ ವ್ಯಾಪಾರಿ ಡಂಕನ್, ಅಲ್ಲಿ ಛಿದ್ರವಾಗಿ ಬಿದ್ದಿದ್ದ ಹತ್ತಾರು ಹೆಣಗಳನ್ನು, ಹೊಡೆದಾಡುತ್ತಿದ್ದ ಗುಂಪುಗಳನ್ನು ನೋಡಿ ವಿಹ್ವಲನಾದ. ಸಮಶೀನ್ ಎಂಬ ಈ ಜನಾಂಗ ಪರಸ್ಪರ ಹೊಡೆದಾಡುತ್ತಲೇ ಜೀವನ ನಡೆಸಿ, ಹಾಗೆಯೇ ಅಂತ್ಯ ಕಾಣುತ್ತದೆ. ಕೊಲೆ ಎಂದರೆ ಅವರಿಗೆ ಬಹಳ ಸಾಮಾನ್ಯ. ನರಭಕ್ಷಕರು, ಮದ್ಯವ್ಯಸನಿಗಳಾದ ಅವರಿಗೆ ಮಾನವೀಯತೆಯ ಸ್ಪರ್ಶವೇ ಇಲ್ಲ ಎಂಬೆಲ್ಲ ಸಂಗತಿಗಳು ಹಡಗಿನ ಅಧಿಕಾರಿ ಒಬ್ಬರಿಂದ ಡಂಕನ್‌ಗೆ ತಿಳಿಯಿತು.

ಇವರಿಗೊಬ್ಬ ಮಾರ್ಗದರ್ಶಕ ಬೇಕು, ಅದು ನಾನೇ ಆಗುವೆ ಎಂದು ಡಂಕನ್ ಆ ಕ್ಷಣವೇ ನಿರ್ಧರಿಸಿದ. ಅವರ ಮಧ್ಯೆ ಉಳಿದು ಅವರಿಗೆ ನಿರಂತರವಾಗಿ ಸ್ವಚ್ಛತೆ, ಕಾರ್ಯನಿಷ್ಠೆ, ಪ್ರೀತಿ, ಪ್ರೇಮ, ಸಹಬಾಳ್ವೆಯ ಬಗ್ಗೆ ಬೋಧಿಸುತ್ತಾ, ಅವರ ಪರಿವರ್ತನೆಯೇ ತನ್ನ ಧ್ಯೇಯ ಎಂಬ ತಪಸ್ಸಿಗೆ ಇಳಿದುಬಿಟ್ಟ. ತರುಣರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿ, ಅವರದೇ ಒಂದು ಸದೃಢ ತಂಡವನ್ನು ಕಟ್ಟಿದ. ಪ್ರಾರ್ಥನಾ ಸ್ಥಳಗಳನ್ನು ನಿರ್ಮಿಸಿ ಎಲ್ಲರಲ್ಲೂ ಧಾರ್ಮಿಕ ಭಾವನೆ ಬಿತ್ತಿ, ದುಶ್ಚಟಗಳಿಂದ ಅವರನ್ನೆಲ್ಲ ದೂರ ಮಾಡಲು ಶ್ರಮಿಸಿದ. ಅದೇ ಜನಾಂಗದ ಮುಖಂಡರಿಂದ, ಅವರನ್ನು ಶೋಷಿಸಿ ಲಾಭ ಗಳಿಸುತ್ತಿದ್ದ ವ್ಯಾಪಾರಿಗಳಿಂದ, ಧರ್ಮಾಧಿಕಾರಿಗಳಿಂದ ಹೀಗೆ ಹಲವೆಡೆಗಳಿಂದ ತೀವ್ರ ವಿರೋಧ ಎದುರಾದರೂ ತನ್ನ ಏಕಾಂಗಿ ಹೋರಾಟವನ್ನು ಮುಂದುವರೆಸಿ, 60 ವರ್ಷಗಳ ನಂತರ ಯಶ ಕಂಡ ಡಂಕನ್ ಆ ಜನಾಂಗದ ನೆಚ್ಚಿನ ಧ್ರುವತಾರೆಯಾದ. ಇಂದು ಮದ್ಯವ್ಯಸನವನ್ನು ಸಂಪೂರ್ಣ ದೂರವಿಟ್ಟ ಇಡೀ ಸಮಶೀನ್ ಜನಾಂಗ ಶಾಂತಿಪ್ರಿಯ, ಸುಸಂಸ್ಕೃತ ಎಂಬ ಹೆಸರು ಪಡೆದಿದೆ.ಪರಂಪರಾಗತವಾಗಿಯೋ, ಸಹವಾಸದಿಂದ ಲೋ ದೀರ್ಘಕಾಲದಿಂದಲೂ ರೂಢಿಸಿಕೊಂಡ ಅಭ್ಯಾಸವನ್ನು, ಹೊಸ ಅಭ್ಯಾಸದಿಂದ ಬದಲಾಯಿಸಲು ಸಾಧ್ಯ ಎನ್ನುವುದನ್ನು ಈ ಸಂಗತಿ ಪ್ರಚುರಪಡಿಸುತ್ತದೆ. ಇದು ಒಂದು ಜನಾಂಗಕ್ಕೆ ಅನ್ವಯವಾಗುವಂತೆ ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯವಾಗುತ್ತದೆ.

ಪುರಾತನ ಸಾಧನ

• ಹೊಸ್ಮನೆ ಮುತ್ತು

ಇದು ಸುಮಾರು 70-80 ವರ್ಷಗಳ ಹಿಂದೆ ಬಳಕೆಯಲ್ಲಿದ್ದ ಚಕ್ಕುಲಿ ಮಾಡುವ ಸಾಧನ. ಹಿತ್ತಾಳೆಯಿಂದ ತಯಾರಾದ ಇದು 960 ಗ್ರಾಂ ತೂಕವಿದ್ದು ಉದ್ದದ ಹ್ಯಾಂಡಲ್ ಹೊಂದಿದೆ. ಹ್ಯಾಂಡಲ್ ತಿರುಗಿಸಿದಂತೆ ಒಳಗಿನ

ಚಲಿಸುವ ಭಾಗವು (ಶಾಫ್ಟ್) ತಿರುಗುವ ಮೂಲಕ ಒಳಗೆ ಹಾಕಿದ ಹಿಟ್ಟಿನ ಮುದ್ದೆಯನ್ನು ಹೊರ ತಳ್ಳುತ್ತದೆ. ಹಿಟ್ಟು ಸಾಧನದ ಮುಂದಿನ ಭಾಗದಲ್ಲಿನ ಬಿಲ್ಲೆಯ(ಅಚ್ಚು) ಮೂಲಕ ಚಕ್ಕುಲಿಯ ಆಕಾರ ಪಡೆದು ಹೊರಬರುತ್ತದೆ. ಹ್ಯಾಂಡಲ್ ತಿರುಗಿಸುವಾಗ ಉಪಕರಣ ಅತ್ತಿತ್ತ ಚಲಿಸದಂತೆ ಭದ್ರವಾಗಿ ಹಿಡಿದಿಡಲು ಇದರ ಕೆಳಭಾಗದಲ್ಲಿ ಒಂದು ಕ್ಲಾಂಪ್ ಇದೆ. ಇತ್ತೀಚಿನ ದಿನಗಳಲ್ಲಿ ನವೀನ ಸಾಧನಗಳು ಚಕ್ಕುಲಿ ತಯಾರಿಸುವ ಪ್ರಕ್ರಿಯೆಯನ್ನು ಸುಲಭಗೊಳಿಸಿವೆ. ಇಂತಹ ಹಳೆಯ ಸಾಧನ ಪರಂಪರೆಯ ನೆನಪಿನ ಭಾಗವಾಗಿ ಉಳಿದುಕೊಂಡಿದೆ.

ಮಕ್ಕಳ ರಂಗಭೂಮಿ ಮರೆಯಾಗುತ್ತಿದೆ!

• ಗೊರೂರು ಶಿವೇಶ್

ಹಿಂದೆ ಶಾಲಾ ವಾರ್ಷಿಕೋತ್ಸವದಲ್ಲಿ ನಾಟಕಗಳನ್ನು ಆಡುವ ಪದ್ಧತಿ ಇತ್ತು; ಇದರಿಂದ ಮಕ್ಕಳಿಗೆ ರಂಗಭೂಮಿಯ ಪರಿಚಯವಾಗುತ್ತಿತ್ತು. ಇಂದು ಅಂತಹ ಸಮಾರಂಭಗಳಲ್ಲಿ ಧ್ವನಿಮುದ್ರಿತ ಸಂಗೀತಕ್ಕೆ ಕುಣಿಯುವ ನೃತ್ಯಗಳೇ ಜಾಸ್ತಿಯಾಗಿವೆ. ಇದರಿಂದ, ಬಾಲ್ಯದಲ್ಲೇ ಮಕ್ಕಳಿಗೆ ರಂಗಭೂಮಿಯ ಪರಿಚಯವಾಗುವ ಅವಕಾಶ ಕಡಿಮೆಯಾಗಿದೆ!

ಥಿಯೇಟರ್ ಅಥವಾ ರಂಗಶಾಲೆ ಪರಿಕಲ್ಪನೆ ಗ್ರೀಕ್ ಮೂಲದ್ದು; ವಿಶ್ವಕ್ಕೆ ರಂಗಭೂಮಿಯ ಕಲ್ಪನೆ ಮತ್ತು ನಿಯಮಗಳನ್ನು ಸಾಕಾರಗೊಳಿಸಿದ್ದು ಗ್ರೀಕ್ ರಂಗಭೂಮಿಯ ದುರಂತ ನಾಟಕಗಳು. ಅದನ್ನು ಜನರ ಬಳಿಗೆ ಕೊಂಡೊಯ್ದದ್ದು ಇಂಗ್ಲಿಷ್ ನಾಟಕಗಳು; ಅದರಲ್ಲೂ ಷೇಕ್ಸ್‌ಪಿಯರ್ ನಾಟಕಗಳು ಎಂದೇ ಹೇಳಬಹುದು. ಆ ಕಾಲದಲ್ಲಿ ವಿಕ್ಟೋರಿಯ ರಾಣಿಗೆ ನಾಟಕಗಳ ಬಗ್ಗೆ ಇದ್ದ ಆಸಕ್ತಿ ಮತ್ತು ಆಕೆಯ ಪ್ರೋತ್ಸಾಹ ಜನಸಾಮಾನ್ಯರಿಗೆ ಸೀಮಿತವಾಗಿದ್ದ ನಾಟಕಗಳು ಸಮಾಜದ ಮೇಲ್ವರ್ಗದವರನ್ನು ಆಕರ್ಷಿಸಲು ಸಹಾಯಕವಾಯಿತು.

ಬ್ರಿಟಿಷ್ ಕಲಾವಿದರ ಮೂಲಕ ಭಾರತಕ್ಕೆ ಕಾಲಿರಿಸಿದ ನಾಟಕಗಳಿಂದ ಪ್ರೇರಿತಗೊಂಡ ಪಾರ್ಸಿ ನಾಟಕ ತಂಡಗಳು, ಅವರಿಂದ ಉತ್ತೇಜಿತರಾದ ಮರಾಠಿ ರಂಗತಂಡಗಳು, ಅಲ್ಲಿಂದ ಅದು ಕರ್ನಾಟಕಕ್ಕೂ ಹರಡಿ ಉತ್ತರಕರ್ನಾಟಕದ 'ವೀರನಾರಾಯಣ ಪ್ರಸಾದಿತ ನಾಟಕ ಮಂಡಳಿ'ಯ ಉಗಮಕ್ಕೆ (1872)ಕಾರಣವಾಯಿತು. ವೃತ್ತಿರಂಗಭೂಮಿಯ ಕಲಾವಿದರಿಗೆ ನಾಟಕ ಹೊಟ್ಟೆ ಪಾಡಾದರೆ ಹವ್ಯಾಸಿ ರಂಗಭೂಮಿ ಕಲಾವಿದರಿಗೆ ತಮ್ಮ ಪ್ರತಿಭಾ ಪ್ರದರ್ಶನದ ವೇದಿಕೆ. ಈ ರಂಗಭೂಮಿಯನ್ನು ಚಿಮ್ಮು ಹಲಗೆಯನ್ನಾಗಿ ಮಾಡಿಕೊಂಡು ನೂರಾರು ನಟರು ಸಿನಿಮಾ ಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ರಾಜಕುಮಾರ್, ಉದಯಕುಮಾರ್, ನರಸಿಂಹರಾಜು, ಬಾಲಕೃಷ್ಣ , ಪಂಡರಿಬಾಯಿ,ಲೀಲಾವತಿ ...ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಅಂತೆಯೇ ಹವ್ಯಾಸಿ ರಂಗಭೂಮಿಯಿಂದ ಶಂಕರ್ ನಾಗ್, ಗಿರೀಶ್ ಕಾರ್ನಾಡ್, ಅನಂತನಾಗ್, ಸುಂದರರಾಜ್, ನಾಗಾಭರಣ ಮೊದಲಾದವರು ಹೊಸ ಅಲೆಯ ಸಿನಿಮಾಗಳಿಗೆ ಕೊಡುಗೆ ನೀಡಿದ್ದಾರೆ.

ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ರಂಗನಾಯಕಿ' ಸಿನಿಮಾವು, ವೃತ್ತಿರಂಗಭೂಮಿಯ ನೋವು-ನಲಿವುಗಳನ್ನು ಚರ್ಚಿಸುತ್ತದೆ. ಬದುಕು, ಕಲೆಯನ್ನು ನಂಬಿದವರ ಸಂಕಷ್ಟಗಳು, ಕಲೆಯ ಸೆಳೆತ, ನಾಟಕವನ್ನು ಆಸ್ವಾದಿಸುವ ಜನರ ಮನೋಭಾವ, ಉದಾರ ರಸಿಕ ಜನ, ಸುಂದರ ನಟಿಯರ ಬೆನ್ನು ಬೀಳುವ ಊರಿನ ಗಣ್ಯರು, ರಾತ್ರೋರಾತ್ರಿ ಪರಾರಿಯಾಗುವ ಕಲಾವಿದರು, ಜನಪ್ರಿಯ ನಟ-ನಟಿಯರ ಹಿಂದೆ ಬೀಳುವ ಏಜೆಂಟರುಗಳು, ನಟರಿಗೆ ಆಗುವ ಅವಮಾನ, ಕಲಾವಿದರನ್ನು ನಿಕೃಷ್ಟವಾಗಿ ತಿರಸ್ಕಾರದಿಂದ ಕಾಣುವ ಜನ... ಹೀಗೆ ರಂಗಭೂಮಿಯ ಸುತ್ತ ಸುತ್ತುವ ಹಲವು ವಿದ್ಯಮಾನಗಳನ್ನು ಪ್ರೇಕ್ಷಕರ ಎದುರು ಪುಟ್ಟಣ್ಣ ತೆರೆದಿಟ್ಟಿದ್ದಾರೆ.

ಶಾಲೆಯಲ್ಲಿ ರಂಗಭೂಮಿ

ನಮ್ಮೆಲ್ಲರ ಬಾಲ್ಯಕಾಲಕ್ಕೆ ವಿಶೇಷವಾದ ಆಕರ್ಷಣೆ ನಾಟಕಗಳು (ಮತ್ತು ಸಿನಿಮಾ). ನಾನು 7ನೇ ತರಗತಿಯಲ್ಲಿದ್ದಾಗ 'ದಾನಶೂರ ಕರ್ಣ' ನಾಟಕವನ್ನು ಕಲಿಸಿದ್ದರು. ಪಿಯುಸಿ ಮತ್ತು ಡಿಗ್ರಿಯಲ್ಲಿ ನಮ್ಮನ್ನು ನಾಟಕಗಳನ್ನು ಕಲಿಯಲು ಪ್ರೇರೇಪಿಸುತ್ತಿದ್ದದ್ದು ನಾಟಕ ನೋಡಲು ಬರುತ್ತಿದ್ದ ಜನಸಮೂಹ. ನಮ್ಮೂರಿನ ಹೇಮಾವತಿ ಹವ್ಯಾಸಿ ಕಲಾ ಸಂಘದವರು ಪ್ರತಿವರ್ಷ ಹೊಸ ನಾಟಕಗಳನ್ನು ಆಡಿ ಜನಪ್ರಿಯತೆಯನ್ನು ಗಳಿಸಿದರು. ಅವರ ಜೊತೆಗೆ ನಾವು ನಾಟಕವನ್ನು ಕಲಿಯಲು ಹೋಗಿ ಆ ಕಾಲಕ್ಕೆ ಪ್ರಖ್ಯಾತವಾಗಿದ್ದ ಗಾಂಪರೊಡೆಯರು ಮತ್ತು ಅವರ ಶಿಷ್ಯರ ಕುರಿತಾದ ಗುರು-ಶಿಷ್ಯರು ನಾಟಕದಲ್ಲಿ ಸಣ್ಣ ಪಾತ್ರವನ್ನು ಕೊಟ್ಟರೂ ಅದರಲ್ಲಿದ್ದದ್ದು ಕೆಲವೇ ಡೈಲಾಗ್‌ಗಳು ಮಾತ್ರ. ಮುಂದೆ 1990ರ ತನಕವೂ, ನಮ್ಮ ಚಿಕ್ಕಪ್ಪ ಗೋರೂರು ಸೋಮಶೇಖರ್ ರಚಿಸಿದ ತಿರುಗುಬಾಣ, ಬೇಲೂರು ಕೃಷ್ಣಮೂರ್ತಿ ಅವರ ಲಚ್ಚಿ ನಾಟಕದಲ್ಲಿ ಅಭಿನಯಿಸಿದೆನಾದರೂ ರಂಗ ಶಿಸ್ತು ಒಲಿಯದ ಕಾರಣದಿಂದಾಗಿ ಅಭಿನಯದಿಂದ ದೂರವಾದೆ; ಈಗಲೂ ನಾಟಕಗಳನ್ನು ಆಸ್ವಾದಿಸುವ ಮನೋಭಾವವನ್ನು ಉಳಿಸಿಕೊಂಡಿದ್ದೇನೆ. ಶಾಲಾ ದಿನಗಳಲ್ಲಿ ನಾಟಕವಾಡುವ ಅವಕಾಶ ದೊರೆತ ಮಕ್ಕಳಿಗೆ, ರಂಗಭೂಮಿಯ ಪ್ರಾಥಮಿಕ ಪರಿಚಯವಾಗುತ್ತದೆ.

ಧ್ವನಿಮುದ್ರಿತ ಅಬ್ಬರದ ಸಂಗೀತ!

ಆದರೆ, ಈಗ ಶಾಲೆಗಳಲ್ಲಿ ನಾಟಕಗಳನ್ನು ಕಲಿಸುವ ಶಿಸ್ತು, ಬದ್ಧತೆ ಕಡಿಮೆಯಾಗಿದೆ. ಹದಿನೈದು-ಇಪ್ಪತ್ತು ವರ್ಷಗಳಿಂದೀಚೆಗೆ ಶಾಲೆಗಳಲ್ಲಿ ನಾಟಕಗಳನ್ನು ಕಲಿಯುವ ಆಸಕ್ತಿ ಕಡಿಮೆಯಾಗುತ್ತ ಬಂದು ಈಗ ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಆಗಿದೆ. ಶಾಲಾ-ಕಾಲೇಜುಗಳ ವಾರ್ಷಿಕೋತ್ಸವ ಸಂಪೂರ್ಣವಾಗಿ ರೆಕಾರ್ಡ್ ಮಾಡಿದ ಹಾಡುಗಳಿಗೆ ಕುಣಿಯುವ ಡಾನ್ಸ್‌ಗಳು ತುಂಬಿಹೋಗಿರುತ್ತದೆ. ಏಕ ವ್ಯಕ್ತಿಯ ನೃತ್ಯ, ಸಾಮೂಹಿಕ ನೃತ್ಯ .. ಎಲ್ಲವೂ ಫಿಲಂ ಹಿಟ್ಸ್‌ಗಳು. ಕಿರುತೆರೆಯಲ್ಲಿ ಹಾಗೂ ಯೂಟ್ಯೂಬ್‌ನಲ್ಲಿ ಹಾಡುಗಳ ನೃತ್ಯ ಕಲಿತು ಎಲ್ಲರೂನೃತ್ಯ ಪ್ರದರ್ಶಿಸುವವರೇ ಆಗಿದ್ದಾರೆ. ಕೆಲವು ತಂಡಗಳು ಐದಾರು ಹಾಡುಗಳನ್ನು ಮಿಕ್ಸ್ ಮಾಡಿ ಕೆಲವು ಹಾಡುಗಳ ಚರಣಗಳು, ಮತ್ತೆ ಕೆಲವು ಹಾಡುಗಳ ಪಲ್ಲವಿ, ಮತ್ತಾವುದೋ ಗೀತೆಯ ಸಿಂಗಲ್ ಲೈನ್ ಹೀಗೆ ತಮ್ಮ ನೃತ್ಯಕ್ಕೆ ಅನುಕೂಲವಾಗುವಂತೆ ಜೋಡಿಸಿ ಹತ್ತರಿಂದ ಹದಿನೈದು ನಿಮಿಷಗಳ ಕಾಲ ನಾನ್ ಸ್ಟಾಪ್ ನೃತ್ಯ ಪ್ರದರ್ಶನ ಇದಕ್ಕೆ ರಂಗುರಂಗಿನ ಡ್ರೆಸ್ ಬೇರೆ. ಕಿರುತೆರೆಯಲ್ಲಿ ಈಗ ಅದರ ಆರ್ಭಟ ಜೋರಾದ ನಂತರ ಡ್ಯಾನ್ಸ್ ಗಳನ್ನು ಹೇಳಿಕೊಡುವ ಶಾಲೆಗಳು ಕೂಡ ಆರಂಭವಾಗಿವೆ. ನಾಟಕಗಳು ಅದರಲ್ಲೂ ಸಾಮಾಜಿಕ ನಾಟಕಗಳು ಆಕರ್ಷಣೆ ಕಳೆದುಕೊಳ್ಳುತ್ತಿವೆ.

ಜತೆಗೆ, ಪ್ರಾಥಮಿಕ ಶಾಲೆಯಿಂದಲೇ ರಂಗಭೂಮಿಯ ಪರಿಕಲ್ಪನೆಯನ್ನು ಮಕ್ಕಳಿಗೆ ಪರಿಚಯಿಸುವ ಅವಕಾಶವೂ ಕಡಿಮೆಯಾಗುತ್ತಿದೆ. ಇದರಿಂದ ಕಲೆಗೆ ನಷ್ಟವೂ ಆಗುತ್ತಿದೆ! ಮಾರ್ಚ್ 27 ವಿಶ್ವ ರಂಗಭೂಮಿ ದಿನ.

ರಂಗಭೂಮಿಯ ಪ್ರಾಮುಖ್ಯತೆಯನ್ನು ಅರಿಯುವ ದಿನ. ಕಥೆ ಕಾದಂಬರಿಗಳನ್ನು ನಾಟಕರೂಪಕ್ಕೆ ಪರಿವರ್ತಿಸಿ, ರಂಗಾಸಕ್ತರಲ್ಲಿ ಆಸಕ್ತಿ ಮೂಡಿಸುವುದರ ಜೊತೆಗೆ ಜನಸಾಮಾನ್ಯರನ್ನು ರಂಗಭೂಮಿಯ ಕಡೆಗೆ ಕರೆತಂದರೆ ಈ ದಿನದ ಆಚರಣೆ ಸಾರ್ಥಕ ಎನಿಸುತ್ತದೆ.

ರಂಗಭೂಮಿಯ ಸಂದೇಶ!

• ಸಿಹಿಜೀವಿ ವೆಂಕಟೇಶ್ವರ



ನಾಟಕಗಳು ಅನಾದಿ ಕಾಲದಿಂದಲೂ ಮನರಂಜನೆ ನೀಡುತ್ತಾ ಬಂದಿವೆ. ಪ್ರದರ್ಶನ ಕಲೆಗಳನ್ನು ಆಚರಿಸಲು ಮತ್ತು ಸಮಾಜದಲ್ಲಿ ಅದರ ಪ್ರಾಮುಖ್ಯತೆಯ ಬಗ್ಗೆ ಗಮನ ಸೆಳೆಯಲು ಅಂತರರಾಷ್ಟ್ರೀಯ ರಂಗಭೂಮಿ ಸಂಸ್ಥೆ 1962ರಿಂದ ವಿಶ್ವ ರಂಗಭೂಮಿ ದಿನವನ್ನು ಮಾರ್ಚ್ 27ರಂದು ಆಚರಿಸಿಕೊಂಡು ಬರುತ್ತಿದೆ. ಈ ಮೂಲಕ, ಜನರು ರಂಗಭೂಮಿ ಪ್ರದರ್ಶನಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಲು ಪ್ರೇರೇಪಿಸಲಾಗುತ್ತದೆ.

ಪ್ರತಿ ವರ್ಷ, ರಂಗಭೂಮಿಯ ದಿನದಂದು ಜಗತ್ತಿನ ಪ್ರಸಿದ್ಧ ವ್ಯಕ್ತಿಯನ್ನು ಈ ದಿನಕ್ಕೆ ವಿಶೇಷ ಸಂದೇಶವನ್ನು ಬರೆಯಲು ಆಯ್ಕೆ ಮಾಡಲಾಗುತ್ತದೆ. ಕನ್ನಡಕ್ಕೂ ಒಮ್ಮೆ ಈ ಗೌರವ ಸಂದಿತ್ತು. ನಾಟಕಕಾರ ಗಿರೀಶ್ ಕಾರ್ನಾಡ್ ಅವರನ್ನು ವಿಶ್ವರಂಗಭೂಮಿ ದಿನದ ಸಂದೇಶ ನೀಡುವಂತೆ 2002ರಲ್ಲಿ ಕೇಳಿಕೊಳ್ಳಲಾಗಿತ್ತು. ಕಾರ್ನಾಡರು ಆಗ ಅಂತರರಾಷ್ಟ್ರೀಯ ರಂಗಭೂಮಿ ಸಂಸ್ಥೆಯ ರಾಯಭಾರಿಯೂ ಆಗಿದ್ದರು.

2023ರ ವರ್ಷದ ರಂಗಭೂಮಿ ದಿನಕ್ಕೆ ನಾಟಕ ರಚನಕಾರ ನೊಬೆಲ್ ಪ್ರಶಸ್ತಿ ವಿಜೇತ ದರಿಯ ಫೋ ಅವರು ಸಂದೇಶ ನೀಡಿದ್ದರು. 'ಹೆಚ್ಚು ಹೆಚ್ಚು ಯುವಜನತೆ ರಂಗ ಚಟುವಟಿಕೆಗಳಲ್ಲಿ ಪಾಲ್ಗೊಂಡು ಹೊಸ ಚಿಂತನೆಗಳ ಮೂಲಕ ಉತ್ತಮ ಸಮಾಜವನ್ನು ನಿರ್ಮಿಸುವುದಕ್ಕೆ ಪೂರಕರಾಗಬೇಕಾಗಿದೆ' ಎಂದು ಕರೆ ನೀಡಿದ್ದರು.

2024 ರಲ್ಲಿ 'ಕಲೆಯೇ ಶಾಂತಿ' ಎಂಬ ಶೀರ್ಷಿಕೆಯ ಸಂದೇಶವನ್ನು ನಾರ್ವೇಜಿಯನ್ ಬರಹಗಾರ ಮತ್ತು ನಾಟಕಕಾರ ಜಾನ್ ಫೋಸ್ಸೆ ನೀಡಿದ್ದರು. ಈ ವರ್ಷ ಗ್ರೀಸ್‌ನ ಲೇಖಕ, ನಾಟಕಕಾರ, ನಿರ್ದೇಶಕ ಥಿಯೋಡೋರೋಸ್ ಟೆರ್ಜೊಪೌಲೋಸ್ ವಿಶ್ವ ರಂಗಭೂಮಿ ದಿನದ ಸಂದೇಶ ನೀಡಿದ್ದಾರೆ. 'ನೆನಪುಗಳನ್ನು ಬೆಳೆಸುವ, ನೈತಿಕ ರಾಜಕೀಯ ಜವಾಬ್ದಾರಿ ಬಿತ್ತುವ ಹೊಸ ನರೇಟಿವ್ ಮಾರ್ಗಗಳನ್ನು ಹುಡುಕುವುದು ಇಂದಿನ ಅಗತ್ಯವಾಗಿದೆ' ಎಂದು ಅವರು ಹೇಳಿದ್ದಾರೆ.

ಘನತತ್ವವೇ ಗುರಿ!

ಘನತತ್ವವೊಂದಕ್ಕೆ ದಿನರಾತ್ರಿ ಮನಸೋತು,
ನೆನೆಯದಿನ್ನೊಂದನೆಲ್ಲವ ನೀಡುತದರಾ॥
ಅನುಸಂಧಿಯಲಿ ಜೀವಭಾರವನು ಮರೆಯುವುದು
ಹನುಮಂತನುಪದೇಶ ಮಂಕುತಿಮ್ಮ॥

ಮಹೋನ್ನತವಾಗಿರುವಂತಹ, ಜಗತ್ತಿಗೆ ಒಳಿತಾಗುವಂತಹ ಕಾರ್ಯಗಳೇ ಘನತತ್ವವಾಗುತ್ತದೆ. ಇಂಥಹ ಘನ ತತ್ವಕ್ಕೆ ಮನಸ್ಸನ್ನು ತೊಡಗಿಸಿಕೊಂಡಾಗ ತಲುಪುವ ಗುರಿಯ ಅರಿವು ಇರಬೇಕು ಹಾಗೆಯೇ ತಲುಪಲೇ ಬೇಕು ಎನ್ನುವ ಛಲವೂ ಇರಬೇಕು. ಆ ಗುರಿ ತಲುಪುವ ಛಲದ ನೆರಳಲ್ಲಿ ಗುರಿ ಸಾಧನೆಗಾಗಿ ಹಗಲು ರಾತ್ರಿ ಎನ್ನದೆ, ನೀರು, ಊಟ ತಿಂಡಿ, ನಿದ್ರೆ, ಐಚ್ಛಿಕ ಭೋಗಗಳನ್ನು ಲೆಕ್ಕಿಸದೆ, ಹಗಲಿರುಳು ಅದರಲ್ಲಿಯೇ ಮಗ್ನನಾಗಿ, ಅದರಲ್ಲಿಯೇ ತೊಡಗಿಸಿಕೊಂಡು ಜೀವನದ ಭಾರವನ್ನು ಮರೆಯುವುದು 'ಹನುಮನ ಉಪದೇಶ' ಎಂದು ಈ ಕಗ್ಗದಲ್ಲಿ ಹೇಳಿದ್ದಾರೆ.

ಯಾವುದೇ ಒಂದು ಮಹೋನ್ನತವಾದ ಗುರಿಯನ್ನು ಮನದಲ್ಲಿಟ್ಟುಕೊಂಡು ಆ ಗುರಿ ಸಾಧನೆಗಾಗಿ ಮನಸ್ಸನ್ನು ಸಜ್ಜುಗೊಳಿಸಿ, ಆ ಅಗಮ್ಯವಾದ ಗುರಿಯನ್ನು ತಲುಪುವ ಛಲದಿಂದ ಮನಸ್ಸನ್ನು ಏಕಾಗ್ರತೆಯಿಂದ ಆತ್ಮಾನುಸಂಧಾನ ಮಾಡಿಕೊಂಡಾಗ ಲಭ್ಯವಾಗುವ ಮೇರು ಸ್ಥಿತಿಯಲ್ಲಿ ಭೌತಿಕವಾದ ಈ ಐಚ್ಛಿಕ ಸುಖಭೋಗಗಳಾದ ಊಟ, ತಿಂಡಿ, ನಿದ್ರೆ, ನೀರಡಿಕೆ, ದೇಹ ವಾಂಚಲ್ಯ, ಸುಖಭೋಗಗಳನ್ನು ಲೆಕ್ಕವಿರಸದೆ ಆ ಘನತತ್ವದ ಸಾಧನೆಗಾಗಿ ಹಗಲಿ ರುಳು ಶ್ರಮಿಸುತ್ತಾ,

ಶುಭೋದಯಕ್ಕೊಂದು ಕಗ್ಗ

• ರವೀಶ್ ಸಿ.ಆರ್.

ಘನತತ್ವವನ್ನು ತಲುಪುವುದೇ ನಮ್ಮ ಜೀವನದ ಛಲವಾಗಬೇಕು. ಈ ಛಲದ ನೆರಳಲ್ಲಿ ಆತ್ಮಾನುಸಂಧಾನವೇರ್ಪಡಬೇ ಕು. ಇದು ಹನುಮಂತನ ಉಪದೇಶ. ಈ ಘನತತ್ವಕ್ಕೂ ಹನುಮನಿಗೂ ಏನು ಸಂಬಂಧ? ಹನುಮನು ರಾಮನ ಭಂಟ. ಹನುಮಂತನಿಗೆ ರಾಮನ ಮೇಲಿನ ಸ್ವಾಮಿ ಭಕ್ತಿಯನ್ನು ಹೊರತು ಪಡಿಸಿದರೆ ಆತನಿಗೆ ಈ ಜಗತ್ತಿನಲ್ಲಿ ಮತ್ತೇನೂ ತಿಳಿಯಲಿಲ್ಲ. ಕುಳಿತಾಗಲೂ ರಾಮ ನಾಮ, ನಿಂತಾಗಲೂ ರಾಮನಾಮ, ಉಸಿರಿನಲ್ಲೂ ರಾಮನಾಮ, ನಿದ್ರೆಯಲ್ಲೂ ರಾಮನಾಮ, ಆತನ ಪ್ರತಿ ಕಣಕಣದಲ್ಲೂ ರಾಮನಾಮವನ್ನೊಂದನ್ನು ಬಿಟ್ಟು ಬೇರೇನೂ ಇರಲೇ ಇಲ್ಲ. ಹನುಮಂತನ ಘನ ತತ್ವ ಎಂದರೆ ಅದು ಸ್ವಾಮಿ ಭಕ್ತಿ. ಸ್ವಾಮಿಭಕ್ತಿಯ ಘನತತ್ವದಲ್ಲಿ ಆತ ಜಗತ್ತಿನ ಇಹಪರಗಳನ್ನು ಮರೆತಿದ್ದವನಾಗಿದ್ದನು. ಹಾಗಾಗಿಯೇ ಹನುಮಂತನು ತನ್ನ ಸ್ವಾಮಿಗಿಂತ ಮೇಲೇರಿದವನಾದ.

ಪ್ರತಿ ರಾಮನ ಗುಡಿಯಲ್ಲಿ ಹನುಮಂತನಿರುತ್ತಾನೆ. ಆದರೆ ಪ್ರತಿ ಹಳ್ಳಿಗಳಲ್ಲೂ ಹನುಮನ ಗುಡಿ ಇದ್ದರೂ ಅಲ್ಲಿ ರಾಮನಿರುವುದಿಲ್ಲ. ಅಂದರೆ ಸ್ವಾಮಿಭಕ್ತಿಯ ಘನತತ್ವದಡಿಯಲ್ಲಿ ಆತ ತನ್ನ ಭಕ್ತಿಯ ಪರಾಕಾಷ್ಟತೆಯಲ್ಲಿ ತನ್ನ ಸ್ವಾಮಿಗಿಂತಲೂ ಹನುಮನು ಮೇಲೆ ಮೇಲೆ ಅತಿ ಎತ್ತರಕ್ಕೆ ಬೆಳೆದವನಾಗಿದ್ದು ಆತನ ಸ್ವಾಮಿನಿಷ್ಠೆಯ ಬದುಕೇ ನಮ್ಮಯ ಬದುಕಿಗೆ ಉಪದೇಶವಾದಂತಿದೆ ಎಂಬುದು ತಿಳಿಯುತ್ತದೆ.

ಥಾಮಸ್ ಆಲ್ವಾ ಎಡಿಸನ್ ಬಲ್ಬ್ ಕಂಡು ಹಿಡಿದವನು. ಬಲ್ಬ್ ಕಂಡುಹಿಡಿದು ಅದರಿಂದ ಈ ಜಗತ್ತಿನ ಕತ್ತಲೆಯನ್ನು ಓಡಿಸಬೇಕೆಂಬುದು ಆತನ ಮನಸ್ಸಿನಲ್ಲಿದ್ದಂತಹ ಆತನ ಘನತತ್ವ. ಆ ಕಾರ್ಯಸಿದ್ಧಿಗಾಗಿ ಆತ ತನ್ನ ಪ್ರಯೋಗದಲ್ಲಿ ಅದೆಷ್ಟು ಬಾರಿ ಸೋತ! ಸುಮಾರು 2500 ಬಾರಿ ಪ್ರಯೋಗದಲ್ಲಿ ಆತ ಸೋತರೂ ಆತ ಛಲ ಬಿಡದೆ ಬಲ್ಬ್ ಕಂಡು ಹಿಡಿದು, ಇಂದಿಗೂ ಆತನು ತನ್ನ ಹೆಸರನ್ನು ಈ ವ್ಯವಸ್ಥೆಯಲ್ಲಿ ಅಜರಾಮರ ಗೊಳಿಸಿಕೊಂಡಿದ್ದಾನೆ. ನಾವು ವಾಹನದಲ್ಲಿ ಓಡಾಡುವಾಗ ಯಾವತ್ತಾದರೂ ಚಾರ್ಲ್ಸ್ ಗುಡ್ ಯಿಯರ್‌ನನ್ನು ನೆನಸುತ್ತೇವೆಯೇ? ನಾವು ನೆನಸಲೇಬೇಕು. ಕಾರಣ ಇಂದು ನಾವು ಓಡಾಡುತ್ತಿರುವ ವಾಹನದ ಟೈರ್‌ಗಳನ್ನು ಕಂಡು ಹಿಡಿದ ವ್ಯಕ್ತಿ ಆತ. ಟೈರ್ ಕಂಡು ಹಿಡಿಯಲೇ ಬೇಕು ಎನ್ನುವ ಘನತತ್ವ ಆತನಿಗಿದ್ದುದರಿಂದ ಆತ ರಬ್ಬರ್ ಕೊಳ್ಳಲೆಂದು ಆತ ತನ್ನ ಆಸ್ತಿಪಾಸ್ತಿಗಳನ್ನು ಮಾರಿಕೊಂಡ, ಸುಟ್ಟ ರಬ್ಬರ್‌ನ ಗಾಳಿ ಸೇವಿಸಿ ಶ್ವಾಸಕೋಶದ ಕ್ಯಾನ್ಸರ್‌ಗೆ ಒಳಗಾದ; ಈತ ಒಬ್ಬ ಹುಚ್ಚನೆಂದು ತಿಳಿದ ಹೆಂಡತಿ, ಮಕ್ಕಳು ದೂರವಾದರು, ಆತ ತನ್ನದೆನುದನೆಲ್ಲವನ್ನೂ ಕಳೆದುಕೊಂಡರೂ ಸಹ ತನ್ನ ಮನದಲ್ಲಿದ್ದ ಘನತತ್ವವನ್ನು ಬಿಡದೆ, ಟೈರ್ ಕಂಡುಹಿಡಿದ. ಹೀಗೆ ಮಹೋನ್ನತವಾದ ಸೇವೆಗಳ ಘನತತ್ವ ಮನದಲ್ಲಿರಬೇಕು.

ಈ ಒಂದು ಕಗ್ಗವು ಪ್ರತಿಯೊಬ್ಬರ ಜೀವನವನ್ನೂ ಸಹ ಔನ್ನತ್ಯಗೊಳಿಸುವ ಕಗ್ಗವೆಂದರೆ ತಪ್ಪಾಗಲಾರದು. ಕಾರಣ ಸಾಧನೆ ಮಾಡಿರುವಂತಹ ಎಲ್ಲಾ ಮಹಾಪುರುಷರ ಜೀವನದಲ್ಲೂ ಅವರವರ ಇಚ್ಛೆಯಂತೆ ಅವರವರಿಗೆ ಘನತತ್ವ ಇದ್ದುದರಿಂದಲೇ ಅವರು ಸಾಧಕರಾಗಿದ್ದು. ವಿದ್ಯಾರ್ಥಿಗಳಿಗೆ ಜ್ಞಾನ ಸಂಪಾದಿಸಿ ಜ್ಞಾನವಂತರಾಗಬೇಕು ಎನ್ನುವುದೇ ಘನತತ್ವವಾಗಬೇಕು, ಪೋಷಕರಿಗೆ ತಮ್ಮ ಮಕ್ಕಳನ್ನೇ ಈ ಸಮಾಜಕ್ಕೆ ಆಸ್ತಿ ಮಾಡುವಂತಹ ಗುರಿಯೇ ಘನತತ್ವ ವಾಗಬೇಕು. ಸಮಾಜಸೇವೆ ಮಾಡುವವರಿಗೆ ಸಮಾಜಸೇವೆಯೇ ಅವರ ಘನತತ್ವವಾಗಬೇಕು. ಅಧಿಕಾರಿಗಳು ಅಶಕ್ತರಿಗೆ, ಬಡವರಿಗೆ, ದೀನ ದಲಿತರಿಗೆ, ತುಳಿತಕ್ಕೊಳಗಾದವರಿಗೆ, ಈ ಸಮಾಜಕ್ಕೆ ಸಹಾಯ ಮಾಡುವುದೇ ಅವರ ಘನತತ್ವವಾಗಬೇಕು. ಹೀಗೆ ಸಮಾ ಜದ ಎಲ್ಲಸ್ತರದ ಎಲ್ಲಾ ಮನಸ್ಸುಗಳಲ್ಲೂ ಸಮಾಜೋದ್ಧಾರವೇ ಘನತತ್ವವಾಗಿ, ಆ ಘನತತ್ವದ ಗುರಿಸಾಧನೆಗಾಗಿ ಹಗಲು ರಾತ್ರಿ ಎನ್ನದೆ, ಹಗಲಿರುಳು ಎಲ್ಲಾ ಭೋಗಗ ಳನ್ನು ತೊರೆದು ಸಾಧನೆ ಮಾಡುವುದೇ ಆತ್ಮಾನುಸಂಧಾನವಾಗುವುದು ಈ ಕಗ್ಗದ ಹೂರಣ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಅಶುಭವಾದ ಲಕ್ಷಣ (5)
6. ತಿರುಗಿ ಬಂದಿರುವ ತಾವರೆ (3)
7. ಕಾಪಾಡುವವನು (3)
8. ಗೆದ್ದವನಲ್ಲ, ಇವನು ಸೋತವನು (4)
10. ದುಂಬಿಯು ಹೂವಿಂದ ಹೂವಿಗೆ ಹಾರಿ ಸಂಗ್ರಹಿಸುವ ರಸ (4)
11. ಕಬ್ಬಿಣವನ್ನು ಬಂಗಾರ ಮಾಡುವ ಸ್ಪರ್ಶ ಮಣಿ (3)
12. ಅವನು ವ್ಯಕ್ತಪಡಿಸಿದ ಸಂಶಯ (4)
14. ಅನ್ಯರ ಮೇಲೆ ತೋರಬೇಕಾದ ದಯೆ (4)
18. ಹತ್ತನೆಯ ಎಂದರ್ಥ (3)
19. ನೂರರ ಗುಂಪು (3)
20. ಕುದುರೆಯ ಮುಖವೆಂದರ್ಥ ಬರುವ ನಾಟಕ (5)

ಮೇಲಿನಿಂದ ಕೆಳಕ್ಕೆ

1. ಅಸ್ಸಾಂ ರಾಜ್ಯಕ್ಕೆ ಹಿಂದಿನ ಹೆಸರು (4)
2. ಪುಟಕ್ಕಿಟ್ಟ ಬಂಗಾರವಿದು (4)
3. ಮತ್ತೊಂದು ಬಾಣದಿಂದ ತೊಡಗಿದ ಸಮುದ್ರ, (3)
4. ಮಾನವರ ಜಗತ್ತು (4)
5. ತಿರುಗಿ ಬಂದಿರುವ ಸಹಿ (4)
9. ಹೊಳೆಯುವಿಕೆ ಅಥವಾ ಸೂರ್ಯ (3)
10. ನೊಣ ಅಥವಾ ಸೊಳ್ಳೆ (3)
12. ಅಭಿವೃದ್ಧಿಗೆ ಮತ್ತೊಂದು ಹೆಸರು (4)
13. ತಾಯಿಯ ತಂದೆಯಿವರು (4)
15. ಉಪವಾಸ, ನಿರಾಹಾರ (4)
16. ಯುದ್ಧರಂಗದ ಶೂರ (4)
17. ಘನತೆ, ಮನ್ನಣೆ (3)

ಸರಿಯುತ್ತರಗಳು

ಹೇಗೆ ಬದುಕುತ್ತೇವೆ ಎನ್ನುವುದು ಮುಖ್ಯ!

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಊರ ಹೊರಗಿನ ಮರದ ಕೆಳಗೆ ಸದಾ ಧ್ಯಾನಸ್ಥರಾಗಿ ಕುಳಿತಿರುವ ಒಬ್ಬ ಋಷಿಯ ಬಳಿಗೆ, ಒಬ್ಬ ರಾಜ ಹೋಗಿ, ಗುರುಗಳೇ, ಅಮರತ್ವವನ್ನು ನೀಡುವ ಯಾವುದಾದರೂ ಔಷಧಿ, ಅಥವಾ ಗಿಡಮೂಲಿ ಕೆಗಳಿದ್ದರೆ ದಯವಿಟ್ಟು ನನಗೆ ತಿಳಿಸಿ, ಎಂದು ಕೇಳಿದ. ಆಗ ಋಷಿಗಳು, ರಾಜ ಇಲ್ಲಿರುವ ಎರಡು ಮಹಾ ಪರ್ವತಗಳನ್ನು ದಾಟಿದ ನಂತರ, ಅಲ್ಲಿ ಒಂದು ಸರೋವರವಿದೆ,ಅದರ ನೀರನ್ನು ಕುಡಿದಾಗ, ನೀನು ಅಮರನಾಗುವೆ, ಎಂದು ಹೇಳಿದರು.

ಋಷಿಗಳು ಹೇಳಿದಂತೆ ಎರಡು ಪರ್ವತಗಳನ್ನು ದಾಟಿದ ನಂತರ ರಾಜ, ಒಂದು ಸರೋವರವನ್ನು ಕಂಡ. ಇನ್ನೇನು ಅದರಲ್ಲಿನ ನೀರು ಬಾಚಿ ಕುಡಿಯಬೇಕೆಂದು ಕೊಂಡಾಗ, ಯಾರೋ ಜೋರಾಗಿ ನರಳುತ್ತಿರುವಂತ ಶಬ್ದ ಕೇಳಿಸಿತು. ಶಬ್ದ ಬಂದ ಕಡೆಗೆ ಹೋಗಿ ನೋಡಿದರೆ, ಅಲ್ಲೊಬ್ಬ ಅತ್ಯಂತ ದುರ್ಬಲ ವ್ಯಕ್ತಿಯನ್ನು ಕಂಡನು. ಆ ವ್ಯಕ್ತಿ ನರಳುತ್ತಿರುವ ಕಾರಣವನ್ನು ರಾಜ ಕೇಳಿದಾಗ, ಆತ 'ನಾನು ಈ ಸರೋವರದ ನೀರನ್ನು ಕುಡಿದು ಅಮರನಾದೆ, ನನಗೆ ನೂರು ವರ್ಷ ತುಂಬಿದ ನಂತರ ನನ್ನ ಮಗ ನನ್ನನ್ನು ಮನೆಯಿಂದ ಆಚೆ ಓಡಿಸಿದ, ಕಳೆದ ಐವತ್ತು ವರ್ಷಗಳಿಂದ ನಾನು ಹೀಗೇ ಇಲ್ಲೇ, ನರಳುತ್ತಾ ಮಲಗಿದ್ದೇನೆ, ನನ್ನನ್ನು ನೋಡಿಕೊಳ್ಳಲು ಯಾರೂ ಇಲ್ಲ, ನನ್ನ ಮಗ ಈಗ ತೀರಿಕೊಂಡಿದ್ದಾನೆ, ನನ್ನ ಮೊಮ್ಮಕ್ಕಳೂ ಈಗ ವೃದ್ಧರಾಗಿದ್ದಾರೆ, ಸಾಯಬೇಕೆಂದುಕೊಂಡು ನಾನು, ಅನ್ನ, ನೀರು ಸೇವಿಸುವುದನ್ನು ಬಿಟ್ಟು ಬಿಟ್ಟಿದ್ದೇನೆ, ಆದರೂ ಕೂಡ ನಾನಿನ್ನು ಬದುಕಿದ್ದೇನೆ' ಎಂದು ದುಃಖಿಸುತ್ತಾ ಹೇಳಿದ. ರಾಜನಿಗೆ ಅವನನ್ನು ನೋಡಿ ಬರೀ ಅಮರತ್ವದಿಂದ ಏನೂ ಪ್ರಯೋಜನವಿಲ್ಲ, ಅದರ ಜೊತೆಗೆ ಯೌವ್ವನವನ್ನು ಪಡೆದುಕೊಂಡರೆ ಆಗ ಸರಿ ಹೋಗಬಹುದು ಎಂದು ಮತ್ತೆ ಋಷಿಯ ಮೊರೆ ಹೋದ. ಆಗ ಋಷಿಗಳು, 'ನಿನಗೆ ಇದೇ ಸರೋವರನ್ನು ದಾಟಿದ ನಂತರ, ಮತ್ತೊಂದು ಮಹಾ ಪರ್ವತ ಕಾಣುತ್ತದೆ, ಅದನ್ನು ದಾಟಿದರೆ, ಹಳದಿ ಹಣ್ಣುಗಳಿಂದ ತುಂಬಿದ ಮರವೊಂದು ಕಾಣುತ್ತದೆ, ಅವುಗಳಲ್ಲಿ ಒಂದು ಹಣ್ಣನ್ನು ತಿಂದರೆ, ನೀನು ಅಮರತ್ವ ಮತ್ತು ಯವ್ವನ ಎರಡನ್ನೂ ಪಡೆಯುತ್ತೀಯ' ಎಂದು ಹೇಳಿದರು.

ಆಗ ರಾಜ ಋಷಿಗಳು ಹೇಳಿದಂತೆ, ಪರ್ವತವನ್ನು ದಾಟಿ, ಹಳದಿ ಹಣ್ಣಿನಿಂದ ತುಂಬಿದ ಮರದತ್ತ ಹೋದ. ಆತ ಒಂದು ಹಣ್ಣನ್ನು ಕಿತ್ತು ತಿನ್ನಲು ಹೋದಾಗ ಮೂರ್ನಾಲ್ಕು ಜನ ಜೋರಾಗಿ ಕಿರುಚಾಡುತ್ತಾ ಜಗಳವಾಡುತ್ತಿರುವ ಹಾಗೆ ಭಾಸವಾಯಿತು. ಶಬ್ದ ಬಂದ ಕಡೆ ಹೋಗಿ ನೋಡಿದಾಗ, ನಾಲ್ವರು ಯುವಕರು ಜೋರಾಗಿ ವಾದ ಮಾಡುತ್ತಾ ಜಗಳವಾಡುತ್ತಿದ್ದರು.

ಒಬ್ಬ ಹೇಳಿದ, ನನಗೀಗ ಇನ್ನೂರೈವತ್ತು ವರ್ಷವಾಗಿದೆ. ಆತ ನನ್ನ ತಂದೆ, ಅವನಿಗೆ ಮುನ್ನೂರು ವರ್ಷವಾಗಿದೆ, ಅವರು ಇನ್ನೂ ನನ್ನ ಪಾಲಿನ ಆಸ್ತಿಯನ್ನು ನನಗೆ ನೀಡುತ್ತಿಲ್ಲ, ಎಂದು ದೂರಿದ. ರಾಜ ಬಲಭಾಗದಲ್ಲಿರುವ ವ್ಯಕ್ತಿಯನ್ನು ಏಕೆಂದು ಕೇಳಿದಾಗ ಆತ ಮುನ್ನೂರೈವತ್ತು ವರ್ಷ ವಯಸ್ಸಿನ ನನ್ನ ತಂದೆ ಇನ್ನೂ ಬದುಕಿದ್ದಾರೆ, ಆತ ನನ್ನ ಪಾಲನ್ನು ನನಗೇ ನೀಡಿಲ್ಲ, ಇನ್ನು ನಾನು ನನ್ನ ಮಗನಿಗೆ ಹೇಗೆ ಕೊಡಲಿ ಎಂದ. ಮುನ್ನೂರೈವತ್ತರ ಯುವಕ, ನಾನೂರು ವರ್ಷ ವಯಸ್ಸಿನ ತನ್ನ ತಂದೆಯನ್ನು ತೋರಿಸಿ, ಅದೇ ದೂರನ್ನು ಹೇಳಿದನು. ಹೀಗೆ ಆಸ್ತಿಗಾಗಿ, ನಮ್ಮ ಅಂತ್ಯವಿಲ್ಲದ ಹೋರಾಟವನ್ನು ನೋಡಿ ಗ್ರಾಮಸ್ಥರು, ನಮ್ಮನ್ನು ಹಳ್ಳಿಯಿಂದ ಹೊರಗೆ ಹಾಕಿದ್ದಾರೆ, ಎಂದು ಅವರೆಲ್ಲರೂ ರಾಜನಿಗೆ ತಿಳಿದರು. ಇದನ್ನು ಕೇಳಿದ ರಾಜ ಆಘಾತಕ್ಕೊಳಗಾಗಿ, 'ಸದ್ಯ! ನಾನಿನ್ನೂ ಹಣ್ಣನ್ನು ತಿನ್ನಲಿಲ್ಲವಲ್ಲಾ!' ಎಂದುಕೊಂಡು ಋಷಿಯ ಬಳಿಗೆ ಧಾವಿಸಿ ಬಂದು ನನಗೆ ಸಾವಿನ ಮಹತ್ವವನ್ನು ತಿಳಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು, ಗುರುಗಳೇ ಎಂದು ಅವರ ಪಾದಗಳಿಗೆ ಎರಗಿದನು.

ಋಷಿಗಳು ನಗುತ್ತಾ 'ಸಾವು ಅಸ್ತಿತ್ವದಲ್ಲಿರುವುದರಿಂದ, ಜಗತ್ತಿನಲ್ಲಿ ಇನ್ನೂ ಪ್ರೀತಿ ವಿಶ್ವಾಸವಿದೆ. ಅಮರತ್ವವನ್ನು ಪಡೆಯಲು ಪ್ರಯತ್ನಿಸುವ ಬದಲು ಬದುಕಿರುವಷ್ಟು ದಿನವೂ ಪ್ರತಿಕ್ಷಣವನ್ನೂ ಸಂತೋಷದಿಂದ ಜೀವಿಸುವುದನ್ನು ಕಲಿಯಿರಿ ಮತ್ತು ಅಗತ್ಯವಿರುವವರಿಗೆ ನೆರವು ನೀಡಿ' ಎಂದು ನುಡಿದರು. ಈ ಮಾತು ನಮ್ಮ ನಿಮ್ಮೆಲ್ಲರಿಗೂ ಅನ್ವಯಿಸುತ್ತದೆ ಅಲ್ಲವೇ?

ದ್ವೇಷವನ್ನು ತ್ಯಜಿಸು ಕರ್ಮವನ್ನಲ್ಲ

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಅಜ್ಞಾನದಿಂದಾಗಿ ಮನುಷ್ಯನು ಭೌತಿಕ ಸಂಪತ್ತನ್ನು ದೋಚುವ ಪ್ರವೃತ್ತಿ ಹೊಂದಿದ್ದಾನೆ. ಇದರಿಂದ ಕೂಡಿ ಹಾಕುವ ಕರ್ಮ ಬಂಧನಕ್ಕೆ ಒಳಗಾಗುತ್ತಾನೆ. ಜಾಗೃತಿ ಎಂಬ ಮೊದಲ ಕಿರಣ ಬಿದ್ದಾಗ ಅರ್ಜುನ ಮಾಡಿದಂತೆ ತ್ಯಾಗದ ವಿಚಾರ ಮಾಡಲು ಪ್ರಾರಂಭಿಸುತ್ತಾನೆ. ಯಾವುದನ್ನು ತ್ಯಾಗ ಮಾಡಬೇಕೆಂಬುದರ ಬಗ್ಗೆ ಗೊಂದಲವಿದೆ. ಸಾಮಾನ್ಯ ಪ್ರವೃತ್ತಿ ಎಂದರೆ ಎಲ್ಲಾ ಕರ್ಮಗಳನ್ನು ತ್ಯಾಗ ಮಾಡುವುದು. ಯಾಕೆಂದರೆ ನಾವು ಅವುಗಳನ್ನು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ಪಟ್ಟಿ ಮಾಡಿರುತ್ತೇವೆ ಹಾಗೂ ಈ ಕ್ರಿಯೆಯಲ್ಲಿ ಅನಪೇಕ್ಷಿತ ಕರ್ಮ ಗಳನ್ನು ಬಿಟ್ಟುಬಿಡಲು ಬಯಸುತ್ತೇವೆ.

ಒಂದೆಡೆ ಕೃಷ್ಣನು ತ್ಯಾಗದ ಬಗ್ಗೆ ಸಂಪೂರ್ಣ ಮಾದರಿ ಬದಲಾವಣೆಯನ್ನು ಪ್ರಸ್ತುತಪಡಿಸುತ್ತಾನೆ ಮತ್ತು ನಾವು ನಿತ್ಯ ಸನ್ಯಾಸಿಗಳಾಬೇಕೆಂದು ಹೇಳುತ್ತಾನೆ. ಏನನ್ನೂ ಬಯಸದ ಹಾಗೂ ದ್ವೇಷಿಸದ ವ್ಯಕ್ತಿ ದ್ವಂದ್ವಾತೀತನಾಗಿರುತ್ತಾನೆ ಮತ್ತು ಎಲ್ಲಾ ರೀತಿಯ ಸಂಕೋಲೆಗಳಿಂದ ಮುಕ್ತನಾಗಿರುತ್ತಾನೆ. (5.3) ನಾವು ಮೊದಲು ಮಾಡುವ ಕೆಲಸವೆಂದರೆ ದ್ವೇಷವನ್ನು ತ್ಯಜಿಸುವುದು. ಇದು ನಮ್ಮ ವಿರುದ್ಧ ಹೋಗುವ ಧಾರ್ಮಿಕ ನಂಬಿಕೆ, ಜಾತಿ ಅಥವಾ ರಾಷ್ಟ್ರೀಯತೆ ಬಗ್ಗೆ ಇರಬಹುದು. ದ್ವೇಷವು ನಮ್ಮ ವೃತ್ತಿಯ ಬಗ್ಗೆ, ಜನರ ಬಗ್ಗೆ ಅಥವಾ ನಮ್ಮ ಸುತ್ತ ಇರುವ ವಸ್ತುಗಳ ಬಗ್ಗೆ ಇರಬಹುದು. ತೋರಿಕೆಯ ವೈರುಧ್ಯಗಳಲ್ಲಿ ಏಕತೆಯನ್ನು ಕಾಣುವುದು ಮುಖ್ಯ. ನಿತ್ಯ ಸನ್ಯಾಸಿಯು ದ್ವೇಷದ ಜೊತೆಗೆ ಆಸೆಯನ್ನು ತ್ಯಾಗ ಮಾಡುತ್ತಾನೆ.

ನಾವು ದ್ವೇಷ ಹಾಗೂ ಆಸೆ ಎಂಬ ಗುಣಗಳನ್ನು ಬಿಟ್ಟು ಬಿಡಬೇ ಕೆಂಬುದು ಕೃಷ್ಣನ ಉಪದೇಶ. ನಿಜವಾಗಿ ನಾವು ನಮ್ಮ ಗುಣಗಳ ಪ್ರಭಾವದಿಂದಾಗಿ ಒಂದನ್ನು ಬಿಟ್ಟರೆ ಮತ್ತೊಂದನ್ನು ಹಿಡಿದುಕೊಳ್ಳುವು ದರಿಂದ ನಿಜವಾದ ತ್ಯಾಗ ಎಂಬುದು ಇರುವುದಿಲ್ಲ. ನಮ್ಮ ಬಾಹ್ಯ ಕರ್ಮಗಳನ್ನು ಬಿಡುವದಕ್ಕಿಂತ ಹೆಚ್ಚಾಗಿ ನಾವು ನಮ್ಮಲ್ಲಿರುವ ಹಣೆಪಟ್ಟಿ ನೀಡುವ ಗುಣವನ್ನು ಬಿಡಬೇಕು. ಮುಂದುವರಿದು ಕೃಷ್ಣ ಹೇಳುತ್ತಾನೆ, ಸಾಂಖ್ಯದಿಂದ ತಲುಪುವ ಸ್ಥಿತಿಯನ್ನು ಯೋಗಿಯು ತಲುಪಿರುತ್ತಾನೆ. ಸಾಂಖ್ಯಾ ಮತ್ತು ಯೋಗ ಎರಡನ್ನೂ ಒಂದೇ ಎಂದು ನೋಡುವ ವ್ಯಕ್ತಿಯಲ್ಲಿ ಸತ್ಯ ಇರುತ್ತದೆ. (5.5) ಆದರೆ ಕರ್ಮವಿಲ್ಲದೆ ತ್ಯಾಗ ಮಾಡುವುದು ತುಂಬಾ ಕಷ್ಟ. ಯೋಗದಲ್ಲಿ ಪರಿಣಿತನಾದ ಸಂತನು ಕೂಡಲೇ ಬ್ರಹ್ಮನ್ ಸ್ಥಿತಿಯನ್ನು ಪಡೆಯುತ್ತಾನೆ. ಕರ್ಮಗಳು ನಮ್ಮಲ್ಲಿ ಇರುವ ದ್ವೇಷ ಹಾಗೂ ಆಸೆಗಳನ್ನು ಅಳೆಯುವ ಮಾಪಕಗಳಾಗಿವೆ. ಆದ್ದರಿಂದ ನಾವು ಕರ್ಮ ತ್ಯಾಗ ಮಾಡುವುದಕ್ಕಿಂತ ಕರ್ಮ ಮಾಡಬೇಕೆಂದು ಕೃಷ್ಣ ಪ್ರೋತ್ಸಾಹಿಸುತ್ತಾನೆ.

ಕಾಲುವೆಗೆ ನೀರು ಹರಿಸಿ, ರೈತರ ಬೆಳೆ ಉಳಿಸಿ

ಎರಡು ಬೇರೆ ಐಸಿಸಿ ಸಭೆ , ಆದೇಶ ಪರಿಷ್ಕರಣೆ | ಕನಿಷ್ಠ ಏ.10 ರವರೆಗೆ ಕಾಲುವೆಗೆ ನೀರು ಬೇಕು | ನೀರು ಹರಿಸದಿದ್ದರೆ ಬೆಳೆಗಳು ಒಣಗುವ ಭೀತಿ | ರೈತರ ಹಿತ ಬಿಟ್ಟು ತೆಲಂಗಾಣಕ್ಕೆ ನೀರು ಬಿಟ್ಟಿದೇಕೆ? | ಈ ಭಾಗದ ಜನಪ್ರತಿನಿಧಿಗಳ ಧ್ವನಿಗೆ ಸಿಗಲಿಲ್ಲ ಸ್ಪಂದನೆ

ಜಿಲ್ಲಾ ನೋಟ

ವೀರೇಶ ಎಸ್. ಕೆಂಭಾವಿ, ಯಾದಗಿರಿ

'ನಮ್ಗ ಇನ್ನೊಂದು 15 ದಿನ ಆದ್ರೂ ನೀರ್ ಕೊಡ್ರಿ. ಇಲ್ಲಾಂದ್ರ ಲಕ್ಷಗಟ್ಟಲೆ ಖರ್ಚು ಮಾಡಿ ಬೆಳೆದ ಬೆಳಿಗಳು ಒಣಗಿ ಹೋಗ್ತಾವ್. ಆಮ್ಯಾಲ್ ನಾವು ಉರ್ಲು ಹಾಕೋಬೇಕಾಗುತ್ತದ್ ಯಪ್ಪಾ, ನಮಗೆ ಗ್ಯಾರಂಟಿ ಯೋಜನೆ ಕೊಡ್ತೀರಿ ಹೌದು, ಮೊದ್ಲ ನೀರು ಕೊಡ್ರೀ, ಸಾಹೇಬ್ರೇ..!'

ನಾರಾಯಣಪುರ ಎಡದಂಡೆ ಕಾಲುವೆಗೆ ನೀರು ಸ್ಥಗಿತ ಮಾಡಿದ್ದರಿಂದ ಬೆಳದ ಬೆಳೆಗಳು ಒಣಗುವ ಭೀತಿಯಿಂದ ರೈತನೊಬ್ಬ ಸರಕಾರಕ್ಕೆ ಬೇಡಿಕೊಂಡ ಪರಿಯಿದು.

ಜಿಲ್ಲೆಯ ಜೀವನಾಡಿ ನಾರಾಯಣಪುರ ಜಲಾಶಯದಿಂದ ಎಡದಂಡೆ ಕಾಲುವೆಗಳಿಗೆ ಏ.10ರವರೆಗೆ ನಿರಂತರ ನೀರು ಹರಿಸಿ ಇಲ್ಲವಾದರೆ ಆತ್ಮಹತ್ಯೆ ಒಂದೇ ದಾರಿಯಾಗಲಿದೆ ಎನ್ನುವ ದುಗುಡ ತೋಡಿಕೊಂಡಿದ್ದಾನೆ.

ಕೈಗೆ ಬಂದ ತುತ್ತು

ಸದ್ಯ, ಕಾಲುವೆಗೆ ನೀರು ಸ್ಥಗಿತ ಮಾಡಿದ್ದರಿಂದ ಸರಕಾರದ ವಿರುದ್ಧ ಈಗಾಗಲೇ ಬೀದಿಗಿಳಿದು ಹೋರಾಟ ನಡೆಯುತ್ತಿದ್ದು, ರೈತರ ಪ್ರತಿ ಎಕರೆಗೆ ಸುಮಾರು 40ರಿಂದ 45 ಸಾವಿರ ರು. ಖರ್ಚು ಮಾಡಿದ ಶೇಂಗಾ, ಸಜ್ಜೆ, ಭತ್ತ, ಮೆಣಸಿನಕಾಯಿ ಮತ್ತಿತರೆ ಬೆಳೆ ಬೆಳೆಯಲಾಗಿದೆ. ಇನ್ನು ಎರಡು ವಾರದಲ್ಲಿ ಬೆಳೆ ಕೈಗೆ ಬರುತ್ತದೆ. ಆದರೆ, ಇಂತಹ ಸಂದಿಗ್ಧತೆಯಲ್ಲಿ ನೀರು ಬಂದ್ ಮಾಡಿದರೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತೆ ಆಗುತ್ತದೆ.

ಜಮೀನು ಒಂದರಲ್ಲಿ ಬೆಳೆಯಲಾದ ಬೆಳೆ

ನೀರು ಬಿಟ್ಟರೆ ಏನಾಗಬಹುದು?

ಜಲಾಶಯದಲ್ಲಿ 22 ಟಿಎಂಸಿ ನೀರು ಸಂಗ್ರಹವಿದ್ದು, ಇದರಲ್ಲಿ 8 ಟಿಎಂಸಿ ಕುಡಿವ ನೀರು, ಕೈಗಾರಿಕೆಗಳಿಗೆ ಬಳಸಬಹುದು. 14 ಟಿಎಂಸಿ ಡೆಡ್ ಸ್ಟೋರೇಜ್ ನಲ್ಲಿದೆ. ಪ್ರಸ್ತುತ ಲಭ್ಯವಿರುವ ಟಿಎಂಸಿ ನೀರನ್ನು ಜೂ.30ರವರಗೆ ಕುಡಿಯುವ ನೀರು, ಕೆರೆಗಳಿಗೆ ಭರ್ತಿ ಮಾಡುವ ಉದ್ದೇಶಗಳಿಗೆ ಮೀಸಲಿಟ್ಟು 24.24 ಟಿಎಂಸಿ ನೀರು ಕಾದಿರಿಸಲಾಗುತ್ತಿದೆ. ಇದರ ನಡುವೆಯೂ ಬೆಳೆಗೆ ಬಿಟ್ಟರೆ ಕುಡಿವ ನೀರಿಗೆ ಸಮಸ್ಯೆ ತಲೆದೋರಬಹುದು. ಅಥವಾ ಕೊಯ್ನಾ ಜಲಾಶಯದಿಂದಲೂ ನೀರು ಹರಿಸಿ ಕಾಲುವೆಗೆ ಬಿಡಬಹುದು ಎನ್ನುತ್ತಾರೆ ರೈತ ಪರ ಹೋರಾಟಗಾರೊಬ್ಬರು.

ರೈತರ ಪರವಾಗಿ ಏ.10ತನಕ ಕಾಲುವೆಗೆ ನೀರು ಹರಿಸಲು ಮನವಿ ಮಾಡಿದ್ದೆ.ನನ್ನ ಮನವಿಗೆ ಸ್ಪಂದಿಸಿ ಬೆಂಗಳೂರಿನಲ್ಲಿ ರೈತರ ಹಿತ ಕಾಪಾಡುವ ದೃಷ್ಟಿಯಿಂದ ಮಾ.15 ರಿಂದ 22 ಮತ್ತು ಏ.1ರಿಂದ ಏ.6ವರೆಗೆ ನೀರು ಹರಿಸುವ ನಿರ್ಣಯ ಕೈಗೊಳ್ಳಲಾಯಿತು.ನಂತರ ಕೊನೆ ಭಾಗದ ರೈತರ ಜಮೀನಿಗೆ ಮಾ.22ರಿಂದ 25ರವರೆಗೆ ನಿರಂತರ ಎಡದಂಡೆ ಮುಖ್ಯ ಕಾಲುವೆಗೆ ನೀರು ಹರಿಸಲಾಯಿತು.ಕೆಲವರು ಆರೋಪಿಸುವಂತೆ ತೆಲಂಗಾಣಕ್ಕೆ 10 ಟಿಎಂಸಿ ನೀರು ಹರಿಸಲಾಗಿದೆ ಎಂಬ ಹೇಳಿಕೆ ಶುದ್ಧ ಸುಳ್ಳು.

-ರಾಜಾ ವೇಣುಗೋಪಾಲ ನಾಯಕ
ಶಾಸಕರು, ಸುರಪುರ

ಈ ಮೊದಲು ಐಸಿಸಿ ನಿರ್ಣಯದಂತೆ ಏ.6ರವರೆಗೆ ಬಸವಸಾಗರ ಜಲಾಶಯದಿಂದ ಕಾಲುವೆಗೆ ನೀರು ಹರಿಸುವುದಾಗಿ ಹೇಳಿ ಇದೀಗ ಮಾ. 25ಕ್ಕೆ ಕಾಲುವೆಗೆ ನೀರು ಸ್ಥಗಿತ ಮಾಡಿದ್ದಾರೆ. ರಾತ್ರೋರಾತ್ರಿ ತೆಲಂಗಾಣಕ್ಕೆ ನೀರು ಹರಿಬಿಟ್ಟು ರೈತರಿಗೆ ಮೋಸ ಮಾಡಿದ್ದಾರೆ. ಏ.15 ರವರೆಗೆ ನೀರು ಕೊಟ್ಟು ಅನ್ನದಾತನ ಹಿತ ಕಾಪಾಡಬೇಕು.

-ರಾಜೂಗೌಡ ಮಾಜಿ ಸಚಿವ

ಬೆಳೆದು ನಿಂತಿದೆ. ಮಾ. 25ರಿಂದಲೇ ನಾಲೆಗೆ ನೀರು ಹರಿಸುವುದು ಬಂದ್ ಮಾಡಿದ್ದರಿಂದ ಸುಮಾರು ಶೇ.80ರಷ್ಟು ನಷ್ಟ ಅನುಭವಿಸುವ ಸಾಧ್ಯತೆಯಿದೆ.

ನಂಬಿ ಮೋಸ ಹೋದರು

ಕಳೆದ ನವೆಂಬರ್ ತಿಂಗಳಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಹಿಂಗಾರು ಬೆಳೆಗೆ ನೀರು ಹರಿಸುತ್ತೇವೆ. ರೈತರು ನಾಟಿ ಮಾಡಿಕೊಳ್ಳಬಹುದು ಎಂದು ಈ ಭಾಗದ ಶಾಸಕರು, ಅಧಿಕಾರಿಗಳು ತಿಳಿಸಿದ್ದರು. ಈ ಮಾತು ನಂಬಿ ಡಿಸೆಂಬರ್ ಕೊನೆವರೆಗೆ ನಾಟಿ ಮಾಡಿದರು. ಆದರೆ, ಮಾ.20ರಂದು ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನೀರು ಸ್ಥಗಿತಗೊಳಿಸುವ ಬಗ್ಗೆ ನಿರ್ಣಯಿಸಿ ಆದೇಶ ಹೊರಡಿಸಿರುವುದು ರೈತರಿಗೆ ಬರ ಸಿಡಿಲು ಬಡಿದಂತಾಗಿದೆ.

ತೆಲಂಗಾಣಕ್ಕೆಷ್ಟು ನೀರು

ಮಾನವೀಯತೆ ದೃಷ್ಟಿಯಿಂದ ನಾರಾಯಣಪುರ ಜಲಾಶಯದ ಮೂಲಕ ನೆರೆಯ ತೆಲಂಗಾಣ ರಾಜ್ಯಕ್ಕೆ 1.27 ಟಿಎಂಸಿ ನೀರು ಕುಡಿಯುವ ಉದ್ದೇಶಕ್ಕೆ ಹರಿಸಿರುವುದಾಗಿ ರಾಜ್ಯ ಸರಕಾರ ಸಮರ್ಥಿಸಿಕೊಂಡಿದೆ.ಆದರೆ, ಇದಕ್ಕೆ ವಿಪಕ್ಷ ಸೇರಿ ರೈತ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ್ದು, 1 ಟಿಎಂಸಿ ಅಲ್ಲ 10 ಟಿಎಂಸಿಗೂ ಅಧಿಕ ನೀರು ಹರಿಬಿಡಲಾಗಿದೆ ಎಂದು ಆರೋಪಿಸಿದ್ದಾರೆ. ಹಿಂಗಾರು ಬೆಳೆಗೆ ಮೀಸಲಿಟ್ಟಿರುವ 65.10 ಟಿಎಂಸಿ ಪೈಕಿ ಇಲ್ಲಿದುವರೆಗೆ 58.50 ಟಿಎಂಸಿ ಬಳಸಲಾಗಿದೆ. ಇನ್ನುಳಿದ 6.60ಟಿಎಂಸಿ ನೀರನ್ನು ಹಿಂಗಾರು ಬೆಳೆಗಾಗಿ ರಿಸರ್ವ್ ಮಾಡಿರುತ್ತಾರೆ. ಅದರ ಲೆಕ್ಕ ಕೊಡಿ ಎನ್ನುತ್ತಿದ್ದಾರೆ ರೈತರು.

ನಾರಾಯಣಪುರ ಜಲಾಶಯ

89 ಸಾವಿರ ಹೆಕ್ಟೇರ್ ಬೆಳೆ

ನಾರಾಯಣಪುರ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ವ್ಯಾಪ್ತಿಯಲ್ಲಿನ 89 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ

ಕಾಲುವೆ ಯೋಜನೆ ಎಲ್ಲಿಂದ ಎಲ್ಲಿಗೋ 'ಲಿಂಕ್' ಅಕ್ಕ ಪಕ್ಕದ ಎರಡು ಜಿಲ್ಲೆಗಳ ನಡುವೆ ಶೀತಲ ಸಮರ

ಶಾಂತಿ ಕದಡಿದಳೇ ಹೇಮಾವತಿ?

ಜಿಲ್ಲಾ ನೋಟ

ರಂಗನಾಥ ಕೆ.ಹೊನ್ನಮರಡಿ, ತುಮಕೂರು

ರಾಮನಗರ ಹಾಗೂ ತುಮಕೂರು ಜಿಲ್ಲೆಗಳ ನಡುವೆ ಜಟಾಪಟಿಗೆ ಕಾರಣವಾಗಿರುವ ಹೇಮಾವತಿ ಲಿಂಕ್ ಕೆನಾಲ್ ಯೋಜನೆ ದಿನಕ್ಕೊಂದು ಸ್ವರೂಪ ಪಡೆಯುತ್ತಿದೆ. ರಾಜಕೀಯದ ಕೆಸರು ಎರಚಾಟದ ನಡುವೆ ಜಿಲ್ಲೆಗೆ ನ್ಯಾಯ ಸಿಗುವುದೇ ಎಂಬ ಯಕ್ಷಪ್ರಶ್ನೆ ಎದುರಾಗಿದೆ.

ಅಕ್ಕಪಕ್ಕದ ಜಿಲ್ಲೆಗಳಾದ ರಾಮನಗರ ಮತ್ತು ತುಮಕೂರು ಮಧ್ಯೆ ಶೀತಲ ಸಮರ ಶುರುವಾಗಿದೆ. ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿಗೆ ಹೇಮಾವತಿ ನೀರು ಹರಿಸುವ ಎಕ್ಸ್ ಪ್ರೆಸ್ ಲಿಂಕ್ ಕೆನಾಲ್ ಯೋಜನೆ ಈ ಸಮರಕ್ಕೆ ಕಾರಣವಾಗಿದೆ. ಈಗ ಎರಡೂ ಕಡೆಗಳಲ್ಲಿಹೋರಾಟದ ಕಿಚ್ಚು ಹೊತ್ತಿಕೊಂಡಿದೆ.

ಹಠಕ್ಕೆ ಬಿದ್ದ ಡಿಸಿಎಂ

ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿಗೆ ಲಿಂಕ್ ಕೆನಾಲ್ ಮೂಲಕ ನೀರು ಸಾಗಿಸಲೇಬೇಕು ಎಂದು ಹಠಕ್ಕೆ ಬಿದ್ದಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅದಕ್ಕಾಗಿ ಇಲ್ಲದ ಕಸರತ್ತು ನಡೆಸುತ್ತಿದ್ದಾರೆ. ಆದರೆ ಯಾವುದೇ ಕಾರಣಕ್ಕೂ ಮಾಗಡಿಗೆ ನೀರು ಬಿಡುವುದಿಲ್ಲ ಎಂದು ಕಲ್ಪತರು ನಾಡಿನ ಕಲಿಗಳು ಹೋರಾಟಕ್ಕಿಳಿದಿದ್ದಾರೆ.

ಟೊಂಕ ಕಟ್ಟಿ ಹೋರಾಟ

ಮಾಜಿ ಸಚಿವ ಸೊಗಡು ಶಿವಣ್ಣ ಮುಂದಾಳತ್ವದಲ್ಲಿ ಶಾಸಕರಾದ ಸುರೇಶ್ ಗೌಡ, ಕೃಷ್ಣಪ್ಪ, ಸುರೇಶ್ ಬಾಬು, ಜ್ಯೋತಿ ಗಣೇಶ್, ಮಾಜಿ ಶಾಸಕ ಮಸಾಲೆ ಜಯರಾಮ್ ನೇತೃತ್ವದಲ್ಲಿ ಜಿಲ್ಲೆಯ ಹಲವು ಸಂಘ ಸಂಸ್ಥೆಗಳು, ರೈತರು, ಮಠಾಧೀಶರು, ರಾಜಕೀಯ ನಾಯಕರು ಪಕ್ಷ ಭೇದ ಮರೆತು ಲಿಂಕ್ ಕೆನಾಲ್ ಕಾಮಗಾರಿ ತಡೆಗೆ ಟೊಂಕ ಕಟ್ಟಿ ನಿಂತಿದ್ದಾರೆ.

ಏನಿದು ಯೋಜನೆ?

ಕಾವೇರಿ ನ್ಯಾಯಾಧೀಕರಣದ ಆದೇಶದಂತೆ ಹೇಮಾವತಿ ನಾಲಾ ವಲಯ ಮತ್ತು ತುಮಕೂರಿಗೆ ಒಟ್ಟು 25,31 ಟಿಎಂಸಿ ಅಡಿ ನೀರು ನಿಗದಿಯಾಗಿದೆ. ಅದರಂತೆ ನಾಲಾ ವಲಯದ ಹಾಸನ, ಮಂಡ್ಯ, ತುಮಕೂರು ಹಾಗೂ ರಾಮನಗರ ಜಿಲ್ಲೆಗಳ 14 ತಾಲೂಕುಗಳಿಗೆ ನೀರು ಹಂಚಿಕೆಯಾಗಿದೆ. ಹಂಚಿಕೆಯಾಗಿರುವ ನೀರು ಪೂರ್ಣ ಪ್ರಮಾಣದಲ್ಲಿ ತಲುಪುತ್ತಿಲ್ಲ. ಹೀಗಿರುವಾಗ ಎಕ್ಸ್ ಪ್ರೆಸ್ ಲಿಂಕ್ ಕೆನಾಲ್ ಮೂಲಕ ನಮ್ಮ ಪಾಲಿನ ನೀರನ್ನು ಮಾಗಡಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ ಎನ್ನುವುದು ರಾಮನಗರ ಜಿಲ್ಲೆಯವರ ವಾದ.

ರಾಜಕೀಯ ಅವಾಂತರ

ಈ ಯೋಜನೆಯ ಪರ-ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ರಾಜಕೀಯ ಅವಾಂತರಗಳಿಗೆ ಸಿಲುಕಿದೆ. ಪಕ್ಷ ರಾಜಕಾರಣವೂ ಶುರುವಾಗಿದೆ. ಎರಡೂ ಜಿಲ್ಲೆಯ ಜನರಿಗೆ ಯೋಜನೆ ಭಾವನಾತ್ಮಕ ವಿಷಯ. ಎರಡೂ ಜಿಲ್ಲೆಗಳ ಜನಪ್ರತಿನಿಧಿಗಳು ತಮ್ಮ ತಮ್ಮ ಜಿಲ್ಲೆ ಜನರ ಪರ ನಿಂತಿದ್ದಾರೆ. ದಿನದಿಂದ ದಿನಕ್ಕೆ ಹೋರಾಟದ ಕಾವು ಏರತೊಡಗಿದೆ. ಎರಡೂ ಕಡೆಯ ಹೋರಾಟಗಾರರನ್ನು ಕರೆದು ಸರಕಾರ ಹಾಗೂ ಜಲ ಸಂಪನ್ಮೂಲ ಖಾತೆ ಸಚಿವರು ಈ ಸಮಸ್ಯೆಯನ್ನು ಬಗೆಹರಿಸಿ ಸಂಧಾನ ಸೂತ್ರವೊಂದನ್ನು ಸಿದ್ಧಪಡಿಸಬೇಕಿದೆ.

ಎಲ್ಲೆಲ್ಲಿ ಕಾಮಗಾರಿ?

ಹೇಮಾವತಿ ಎಕ್ಸಪ್ರೆಸ್ ಕೆನಾಲ್ ಕಾಮಗಾರಿಗೆ ತುಮಕೂರು ಜಿಲ್ಲೆಯ ರೈತರ ತೀವ್ರ ವಿರೋಧ ಇದ್ದರೂ ಸೊಪ್ಪು ಹಾಕದೆ ಕಾವೇರಿ ನೀರಾವರಿ ನಿಗಮದಿಂದ ಗುಬ್ಬಿ ತಾಲೂಕಿನ ವಿ.ಕೋಡಿಹಳ್ಳಿ, ಬ್ಯಾಡಗೆರೆ, ಡಿ. ರಾಂಪುರ, ಗೋರ್ಜಿಹಳ್ಳಿ, ಜನಕದೇವನಹಳ್ಳಿ, ಕಡಬ, ಅಮಾನಿಕೆರೆ, ಹಿಂಡಿಸ್ಕೆರೆ ಭಾಗಗಳಲ್ಲಿ ಕಾಮಗಾರಿ ಆರಂಭವಾಗಿದೆ.

ಲಾಠಿಗೆ ಹೆದರಲ್ಲ

ರಾಮನಗರ ಎಕ್ಸ್ ಪ್ರೆಸ್ ಲಿಂಕ್ ಕೆನಾಲ್ ಮಾಡಲು ಸರಕಾರ ಹಠಕ್ಕೆ ಬಿದ್ದಿದ್ದು, ಪೊಲೀಸರನ್ನು ಬಳಸಿ ಕಾಮಗಾರಿ ನಡೆಸೋದು ಜನ ವಿರೋಧಿ ನಡೆ. ನಾವು ಯಾರ ಲಾಠಿಗೆ ಹೆದರುವುದಿಲ್ಲ. ಇಡೀ ಜಿಲ್ಲೆ ವಿರೋಧ ಮಾಡುವಾಗ ಕಾಮಗಾರಿ ಮುಂದುವರಿಸೋದು ಆಡಳಿತ ವೈಫಲ್ಯ ಎಂದು ಹೇಮಾವತಿ ಹೋರಾಟಗಾರರು ತಿಳಿಸಿದ್ದಾರೆ.

ಸಭೆ ಕೇವಲ ಕಣ್ಣೊರೆಸುವ ತಂತ್ರವೇ..?

ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ತುಮಕೂರು, ರಾಮನಗರ ಜಿಲ್ಲೆಯ ಜನಪ್ರತಿನಿಧಿಗಳು ಸಭೆ ನಡೆಸಿದ್ದು ವ್ಯರ್ಥವಾಗಿದೆ. ತಾಂತ್ರಿಕ ಸಮಿತಿ ರಚಿಸಿ ವರದಿ ಪಡೆದು ಕಾಮಗಾರಿ ಬಗ್ಗೆ ತೀರ್ಮಾನಿಸುವ ಹೇಳಿಕೆ ಕೇವಲ ಸಭೆ ಪ್ರಚಾರಕ್ಕಷ್ಟೇ ಮೀಸಲಾಗಿದೆ. ಜಿಲ್ಲೆಯ ಜನಪ್ರತಿನಿಧಿಗಳ ಪ್ರಭಾವಕ್ಕಿಂತ ಕಾಮಗಾರಿ ಹಠವೇ ಹೆಚ್ಚಾಯಿತೇ ಅಥವಾ ಸಭೆ ಮಾಡಿ ಕಣ್ಣೊರೆಸುವ ತಂತ್ರವೇ ಎಂದು ತುಮಕೂರು ಜನ ಪ್ರಶ್ನಿಸುತ್ತಿದ್ದಾರೆ.

ಟ್ರ್ಯಾಕ್ ಬದಲಿಸದಿರಲಿ ಹೇಮಾವತಿ

ಹನಿ ಟ್ರ್ಯಾಪ್ ವಿಚಾರದ ನಂತರ ಹೇಮಾವತಿ ನೀರು ಹಂಚಿಕೆ ರಾಜಕೀಯ ತಿರುವು ಪಡೆದುಕೊಂಡಿದ್ದು ಕಾಂಗ್ರೆಸ್ ಪಾಳಯದಲ್ಲಿ ಆಂತರಿಕ ತಿಕ್ಕಾಟ ಆರಂಭವಾಗಿದೆ. ವಿಪ ಸದಸ್ಯ ರಾಜೇಂದ್ರ ಹಾಗೂ ಕುಣಿಗಲ್ ಶಾಸಕ ರಂಗನಾಥ್ ನಡುವೆ ವಾಕ್ಸಮರ ಉಂಟಾಗಿದೆ.

ನಾನು ಸಾಮಾನ್ಯ ವ್ಯಕ್ತಿಯ ಮಗ. ಮಂತ್ರಿಯ ಮಗನಿಗೆ ಬೆದರಿಕೆ ಹಾಕಲು ಸಾಧ್ಯವೇ ? ಕಾನೂನಾತ್ಮಕವಾಗಿ ನೀರು ಕೇಳುತ್ತಿದ್ದೇವೆ ಎಂದು ಶಾಸಕ ರಂಗನಾಥ್ ಸ್ಪಷ್ಟನೆ ನೀಡಿದ್ದಾರೆ. ಈ ತಿಕ್ಕಾಟದ ನಡುವೆ ನೀರಿನ ಟ್ರ್ಯಾಕ್ ಬದಲಿಸದಿರಲಿ ಎಂದು ಜಿಲ್ಲೆಯ ರೈತರು ಆಗ್ರಹಿಸಿದ್ದಾರೆ.

ರಾಜ್ಯ ರಾಜಕೀಯದಲ್ಲಿ ತಲ್ಲಣ ಸೃಷ್ಟಿಸಿರುವ 'ಹನಿಟ್ರ್ಯಾಪ್ ಯತ್ನ' ವಿಚಾರ ದಿನದಿಂದ ದಿನಕ್ಕೆ ಭಾರೀ ಸದ್ದು ಮಾಡುತ್ತಿದೆ. ಈ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಲೇಬೇಕೆಂದು ಸ್ವತಃ ಆಡಳಿತ ಪಕ್ಷದ ಸದಸ್ಯರೇ ಸಿಎಂ ಸಿದ್ದರಾಮಯ್ಯ ಅವರಿಗೆ ಒತ್ತಾಯಿಸುತ್ತಿದ್ದಾರೆ. ಪ್ರತಿಪಕ್ಷ ಬಿಜೆಪಿಯೂ ಇದನ್ನೇ ಒಂದು ಅಸ್ತ್ರವಾಗಿಸಿಕೊಂಡಿದೆ. ಹನಿಟ್ರ್ಯಾಪ್ ಅಥವಾ ಸಿ.ಡಿ ರಾಜಕಾರಣ ರಾಜ್ಯ ರಾಜಕಾರಣಕ್ಕೆ ಅಂಟಿಕೊಂಡ ರೋಗವೇ ಎಂದು ಭಾವಿಸಲಾಗಿದೆ. ತಮ್ಮ ವಿರೋಧಿಗಳನ್ನು ಹನಿಯಲು ಹಲವು ಸಂದರ್ಭಗಳಲ್ಲಿ ಹನಿಟ್ರ್ಯಾಪ್ ಬಳಕೆಯಾಗಿದೆ. ಕೆಲವರು ಈ ಖೆಡ್ಡಾಗೆ ಬಿದ್ದು ತಮ್ಮ ರಾಜಕೀಯ ಜೀವನವನ್ನೇ ನಾಶ ಮಾಡಿಕೊಂಡಿದ್ದಾರೆ. ಕೆಲವರದ್ದು ಸ್ವಯಂಕೃತ ಅಪರಾಧವಾದರೆ ಮತ್ತೆ ಕೆಲವರು ತಮ್ಮ ದೌರ್ಬಲ್ಯಗಳಿಂದ ಖೆಡ್ಡಾಗೆ ಬಿದ್ದಿದ್ದಾರೆ. ಈ ರೀತಿ ಹನಿ ಖೆಡ್ಡಾಗೆ ಬಿದ್ದ ರಾಜಕಾರಣಿಗಳು ರಾಜಕೀಯವಾಗಿ ಏಳಿಗೆಯನ್ನು ಕಂಡಿಲ್ಲ. ರಾಜ್ಯ ರಾಜಕಾರಣದಲ್ಲಿ ಹನಿಟ್ರ್ಯಾಪ್ ಸದ್ದು ಮಾಡಿದ್ದು ಇದೇ ಮೊದಲಲ್ಲ. ಈ ಹಿಂದೆಯೂ ಘಟಾನುಘಟಿ ನಾಯಕರು ಈ ಹನಿಟ್ರ್ಯಾಪ್‌ಗೆ ಬಲೆಗೆ ಬಿದ್ದಿದ್ದಾರೆ. ಹಾಗಾದರೆ ಅವರೆಲ್ಲಾ ಯಾರು? ಸದ್ಯ ಅವರ ರಾಜಕೀಯ ಜೀವನ ಹೇಗಿದೆ? ಆ ಕುರಿತು ಒಂದು ಸಮಗ್ರ ನೋಟ ನೋಡೋಣ.

ಪುರಾತನವಾದರೂ ನಿತ್ಯನೂತನ

ಎದುರಾಳಿಗಳನ್ನು ಹಣಿಯುವ ಹನಿತಂತ್ರ

ಎಚ್.ವೈ.ಮೇಟಿ

ಸಿದ್ದರಾಮಯ್ಯ ಅವರು ಮೊದಲ ಬಾರಿ ಸಿಎಂ ಆಗಿದ್ದಾಗ ಅಬಕಾರಿ ಮಂತ್ರಿಯಾಗಿದ್ದ ಹಿರಿಯ ನಾಯಕ ಎಚ್.ವೈ.ಮೇಟಿ ವಿರುದ್ಧ ಲೈಂಗಿಕ ದೌರ್ಜನ್ಯದ ಸಿಡಿ ಬಿಡುಗಡೆಯಾಗಿತ್ತು. 2016ರ ಡಿಸೆಂಬರ್ 7ರಂದು ಮೇಟಿ ಅವರು ಲೈಂಗಿಕ ಚಟುವಟಿಕೆಯಲ್ಲಿ ತೊಡಗಿದ್ದ ವಿಡಿಯೊ ವೈರಲ್ ಆಗಿತ್ತು. 'ಕೆಲಸ ಕೊಡಿಸುವುದಾಗಿ ಮೇಟಿ ನನ್ನನ್ನು ನಂಬಿಸಿ ದುರ್ಬಳಕೆ ಮಾಡಿಕೊಂಡಿದ್ದಾರೆ' ಎಂದು ಮಹಿಳೆ ದೂರು ನೀಡಿದ್ದರು. ಪರಿಣಾಮ ಅವರು ಅಂದೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ಒಂದು ಪ್ರಕರಣ ಅವರ ರಾಜಕೀಯ ಜೀವನದ ಮೇಲೆ ದೊಡ್ಡ ಮಟ್ಟದಲ್ಲಿ ಹಿನ್ನಡೆ ಮಾಡಿತು. ಈ ಪ್ರಕರಣದ ತನಿಖೆಯ ಹೊಣೆಯನ್ನು ಸಿಐಡಿಗೆ ವಹಿಸಲಾಗಿತ್ತು. ಆದರೆ ನಂತರದಲ್ಲಿ ಸಿಐಡಿ ಕ್ಲೀನ್ ಚಿಟ್ ಕೊಟ್ಟಿತ್ತು. ಇದು ಅವರ ರಾಜಕೀಯ ಜೀವನದ ಮೇಲೂ ಭಾರೀ ಪ್ರಭಾವ ಬಿದ್ದಿತ್ತು. ರಾಜಕೀಯವಾಗಿಯೂ ಅವರು ತೆರೆಮರೆಗೆ ಸರಿಯಲು ಇದು ಕಾರಣವಾಗಿತು.

ಪ್ರಪಂಚದ ಕೆಲವು ಪ್ರಸಿದ್ಧ ಹನಿಟ್ರ್ಯಾಪ್‌ಗಳು

1 ಪಾಕಿಸ್ತಾನದ ಗುಪ್ತಚರ ಸಂಸ್ಥೆಯು 2019ರಲ್ಲಿ ಭಾರತದ ವಾಯುಪಡೆಯ ಅಧಿಕಾರಿಯನ್ನು ಹನಿಟ್ರ್ಯಾಪ್ ಮಾಡಿ ರಹಸ್ಯ ಮಾಹಿತಿಗಳನ್ನು ಪಡೆದಿತ್ತು.

2 ಸಿಡ್ನಿ ರೇಲಿ ಎಂಬ ಬ್ರಿಟಿಷ್ ಗೂಢಚಾರಿ ರಷ್ಯನ್ ಅಧಿಕಾರಿಗಳಿಂದ ರಹಸ್ಯ ಮಾಹಿತಿ ಪಡೆಯಲು ಮಹಿಳೆಯನ್ನು ಬಳಸಿದ್ದ. ಆತನ ಬಗ್ಗೆ ಸಾಕಷ್ಟು ಕಾದಂಬರಿಗಳು, ಚಲನಚಿತ್ರಗಳು ಬಂದಿವೆ. 'ರೆಲಿ, ಎಸ್ ಆಫ್ ಸ್ಪೈಸ್' ಚಲನಚಿತ್ರ ನೋಡಿದ್ದರೆ, ಅದು ಆತನ ಕಥೆಯೇ ಆಗಿದೆ.

3 ಮಾತಾ ಹರಿ ಎಂಬ ಜರ್ಮನ್ ಗೂಢಚಾರಿಯಾಗಿದ್ದ ಡಚ್ ಮಹಿಳೆಯು ಮೊದಲನೇ ಮಹಾಯುದ್ಧದ ಸಮಯದಲ್ಲಿ ಫ್ರಾನ್ಸ್ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿದ್ದಳು. ಕೊನೆಗೆ ಸೆರೆ ಸಿಕ್ಕ ಇವಳನ್ನು ಫ್ರಾನ್ಸ್ ಸರಕಾರ ಗಲ್ಲಿಗೇರಿಸಿತ್ತು.

4 ಬ್ರಿಟನ್‌ನ ಪ್ರಸಿದ್ಧ ನೃತ್ಯಗಾರ್ತಿ ಹಾಗೂ ರೂಪದರ್ಶಿಯಾದ ಕ್ರಿಸ್ಟಿನ್ ಕೀಲರ್ 1960ರ ದಶಕದಲ್ಲಿ ಬ್ರಿಟಿಷ್ ಹಾಗೂ ಸೋವಿಯತ್ ಒಕ್ಕೂಟದ ಸಂಬಂಧವನ್ನು ಹಾಳು ಮಾಡಿದ ಹಗರಣದಲ್ಲಿ ಸಿಲುಕಿದ್ದಳು.

5 ಮಾಲ್ದೀವ್ಸ್‌ನ ಇಬ್ಬರು ಮಹಿಳೆಯರು ಇಸ್ರೊ ವಿಜ್ಞಾನಿ ನಂಬಿ ನಾರಾಯಣ್ ಅವರನ್ನು ಹನಿಟ್ರ್ಯಾಪ್ ಬಲೆಗೆ ಬೀಳಿಸಿ, ಕ್ರಯೋಜನಿಕ್ ತಂತ್ರಜ್ಞಾನದ ರಹಸ್ಯ ಮಾಹಿತಿಯನ್ನು ಪಡೆದಿದ್ದಾರೆಂದು ದೂರಿ ಕೇರಳ ಪೊಲೀಸರು 1994ರಲ್ಲಿ ದೂರು ದಾಖಲಿಸಿದ್ದರು. ಕೊನೆಗೂ ಇದು ಸುಳ್ಳು ಪ್ರಕರಣ ಎಂದು ಸಾಬೀತಾಗಿ ನಂಬಿ ನಾರಾಯಣ್ ಅವರ ಮಾನಹಾನಿಗಾಗಿ ಸುಪ್ರೀಂಕೋರ್ಟ್ ಕೇರಳ ಪೊಲೀಸರ ಮೇಲೆ ದೊಡ್ಡ ಮೊತ್ತದ ದಂಡ ವಿಧಿಸಿತ್ತು. ಈ ಬಗ್ಗೆ ಬಾಲಿವುಡ್ ಸಿನಿಮಾವೂ ಬಂದಿದೆ.

6 2023ರಲ್ಲಿ ರಾಜಸ್ಥಾನದಲ್ಲಿ ಭಾರತೀಯ ಸೇನೆಯ ಯೋಧರನ್ನು ಪಾಕಿಸ್ತಾನಿ ಗುಪ್ತಚರ ಮಹಿಳೆಯರು ಹನಿಟ್ರ್ಯಾಪ್ ಮಾಡಿ ರಹಸ್ಯ ಮಾಹಿತಿ ಪಡೆಯುತ್ತಿದ್ದಾರೆಂದು ದೊಡ್ಡ ಸುದ್ದಿಯಾಗಿತ್ತು.

ಹನಿಟ್ರ್ಯಾಪ್ ಇತಿಹಾಸ

ಹೆಣ್ಣುಮಕ್ಕಳನ್ನು ಮುಂದಿಟ್ಟುಕೊಂಡು ತಮ್ಮ ಎದುರಾಳಿಗಳನ್ನು ಹಣಿಯಲು ತಂತ್ರ ರೂಪಿಸುವ 'ಹನಿಟ್ರ್ಯಾಪ್'ಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮೊದಲ ಮತ್ತು ಎರಡನೇ ಮಹಾಯುದ್ಧದಲ್ಲೂ ಈ ತಂತ್ರ ಬಳಸಲಾಗಿತ್ತು. ಈ ಹಿಂದೆ ಎದುರಾಳಿಯ ರಹಸ್ಯ ಮಾಹಿತಿ ಪಡೆಯುವುದು ಇಲ್ಲವೇ ಎದುರಾಳಿಗೆ ವಿಷವುಣಿಸಿ ಸಾಯಿಸುವುದು ಇದರ ಉದ್ದೇಶವಾಗಿತ್ತು. ಈಗ ವ್ಯಕ್ತಿಯ ಚಾರಿತ್ರ್ಯ ಹರಣ, ಸುಲಿಗೆ ಬ್ಲ್ಯಾಕ್‌ಮೇಲ್ ಇದರ ಪ್ರದಾನ ಉದ್ದೇಶ. ಇಲ್ಲಿ ಹೆಣ್ಣಿನ ಪಾತ್ರ ಮಹತ್ವದ್ದಾದರೂ ಆಕೆಯನ್ನು ಇನ್ನೊಂದು ಗುಂಪು ದಾಳವಾಗಿ ಬಳಸುತ್ತದೆ. ದೇಶದ ಹಿತಕ್ಕಾಗಿ ಶತ್ರು ದೇಶದ ರಹಸ್ಯ ಮಾಹಿತಿ ಪಡೆಯಲು ಈಗಲೂ ಗೂಢಚಾರಿಣಿಯರಾಗಿ ಕೆಲಸ ಮಾಡುವವರಿದ್ದಾರೆ. ಕಾರ್ಪೋರೇಟ್ ಜಗತ್ತಿನಲ್ಲಿ ಪ್ರತಿಸ್ಪರ್ಧಿ ಕಂಪನಿಗಳ ವ್ಯಾಪಾರ ವಹಿವಾಟುಗಳ ಮಾಹಿತಿ ಸಂಗ್ರಹಿಸಲು ಅಥವಾ ಹಣಕಾಸಿನ ಲಾಭ ಪಡೆಯಲು ಹನಿಟ್ರ್ಯಾಪ್ ಮಾಡಿರುವ ಘಟನೆಗಳು ಸಾಕಷ್ಟಿವೆ. ಶೀತಲ ಸಮರದ ಸಮಯದಲ್ಲಿ ಸೋವಿಯತ್ ಯುನಿಯನ್ ಹಾಗೂ ಅಮೆರಿಕ ಈ ತಂತ್ರವನ್ನು ವ್ಯಾಪಕವಾಗಿ ಬಳಸಿದ್ದವು.

ರಮೇಶ್ ಜಾರಕಿಹೊಳಿ

ಕಾಂಗ್ರೆಸ್‌ನಲ್ಲಿಯೇ ಹಲವಾರು ವರ್ಷ ಇದ್ದು ಆನಂತರ ಡಿ.ಕೆ.ಶಿವಕುಮಾರ್ ಹಾಗೂ ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ತಿರುಗಿಬಿದ್ದು ಬಿಜೆಪಿ ಸೇರಿದ್ದಲ್ಲದೆ, ಅಂದಿನ ಸಮ್ಮಿಶ್ರ ಸರಕಾರ ಪತನಕ್ಕೂ ಕಾರಣವಾಗಿದ್ದ ರಮೇಶ್ ಜಾರಕಿಹೊಳಿ ವಿರುದ್ಧ ಲೈಂಗಿಕ ದುರುಪಯೋಗ ಆರೋಪ 2021ರ ಮಾರ್ಚ್‌ನ ಮೊದಲ ವಾರ ಕೇಳಿ ಬಂದಿತ್ತು. ಸಿಡಿ ಕೂಡ ಬಿಡುಗಡೆಯಾಗಿ ತೀವ್ರ ಮುಜುಗರಕ್ಕೆ ಒಳಗಾಗಿ ರಮೇಶ್ ಜಾರಕಿಹೊಳಿ ಜಲಸಂಪನ್ಮೂಲ ಸಚಿವ ಸ್ಥಾನವನ್ನು ಆರೋಪ ಕೇಳಿ ಬಂದ ಮರು ದಿನವೇ ತೊರೆದಿದ್ದರು. ಅವರನ್ನು ಈ ಪ್ರಕರಣದಲ್ಲಿ ವ್ಯವಸ್ಥಿತವಾಗಿ ಖೆಡ್ಡಾಗೆ ಕೆಡವಲಾಗಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್ .ಯಡಿಯೂರಪ್ಪ ಅವರ ಸೂಚನೆ ಮೇರೆಗೆ ಗೃಹ ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ ಅವರು ಹಿರಿಯ ಐಪಿಎಸ್ ಅಧಿಕಾರಿ ಸೌಮೇಂದು ಮುಖರ್ಜಿ ನೇತೃತ್ವದಲ್ಲಿ ಎಸ್‌ಐಟಿ ರಚಿಸಿದ್ದರು. ಆರು ತಿಂಗಳ ಒಳಗೆ ಎಸ್‌ಐಟಿ ಬಿ ರಿಪೋರ್ಟ್ ಸಲ್ಲಿಸಿತ್ತು. 150 ಪುಟಗಳ ತನಿಖಾ ವರದಿಯಲ್ಲಿ, 'ಪರಸ್ಪರ ಸಮ್ಮತಿ ಮೇರೆಗೆ ಲೈಂಗಿಕ ಸಂಪರ್ಕ ನಡೆದಿದೆ. ಯಾರ ಒತ್ತಾಯಕ್ಕೂ ಲೈಂಗಿಕ ದೌರ್ಜನ್ಯ ನಡೆದಿಲ್ಲ. ಈ ಪ್ರಕರಣದಲ್ಲಿ ಅತ್ಯಾಚಾರ ಎನ್ನುವ ಅಂಶವೇ ಬೆಳಕಿಗೆ ಬಂದಿಲ್ಲ' ಎಂದು ಸಾಕ್ಷ್ಯಾಧಾರ ಆಧರಿಸಿ ಬಿ ವರದಿ ನೀಡಲಾಗಿತ್ತು. ಇದೆಲ್ಲವೂ ಆದ ನಂತರ ಮತ್ತೊಮ್ಮೆ ನಡೆದ ಚುನಾವಣೆಯಲ್ಲಿ ರಮೇಶ್ ಜಾರಕಿಹೊಳಿ ಗೋಕಾಕ ಕ್ಷೇತ್ರದಿಂದ ಗೆದ್ದು ಬಂದಿದ್ದಾರೆ. ಈ ಪ್ರಕರಣದಲ್ಲಿ ಆರೋಪಿಗಳನ್ನು ಬಂಧನ ಮಾಡಲಾಗಿತ್ತಾದರೂ, ಈ ಹನಿಟ್ರ್ಯಾಪ್ ಹಿಂದೆ ಪ್ರಭಾವಿ ರಾಜಕಾರಣಿಯೊಬ್ಬರ ಕೈವಾಡ ಇದೆ ಎಂದು ರಮೇಶ್ ಜಾರಕಿಹೊಳಿಯವರು ನಿರಂತರವಾಗಿ ಆರೋಪ ಮಾಡುತ್ತಲೇ ಇದ್ದಾರೆ.

ರಘುಪತಿ ಭಟ್

ಉಡುಪಿ ಶಾಸಕರಾಗಿದ್ದ ರಘುಪತಿ ಭಟ್ ಅವರ ರಾಜಕೀಯ ಭವಿಷ್ಯದ ಮೇಲೂ ಸಿ.ಡಿ ಪ್ರಕರಣವೊಂದು ಕಪ್ಪುಚುಕ್ಕೆಯಾಗಿ ಪರಿಣಮಿಸಿತ್ತು. 2018ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಕೊಡುವಾಗಲೂ ಈ ವಿಚಾರ ಚರ್ಚೆಯ ಮುನ್ನಲೆಗೆ ಬಂದಿತ್ತು. ಆದರೆ ಕೊನೆಯ ಗಳಿಗೆಯಲ್ಲಿ ಟಿಕೆಟ್ ಪಡೆದು ಗೆಲವು ಸಾಧಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ 2023ರ ವಿಧಾನಸಭೆ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ಕೈತಪ್ಪಿತು.

ಎಂ.ಪಿ.ರೇಣುಕಾಚಾರ್ಯ

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರು ನರ್ಸ್ ಜಯಲಕ್ಷ್ಮಿ ಜತೆಗಿದ್ದ ಫೋಟೋ ರಾಜ್ಯಾದ್ಯಂತ ಸದ್ದು ಮಾಡಿತ್ತು. ಸ್ವತ: ಜಯಲಕ್ಷ್ಮೀ ಅವರೇ ಇಬ್ಬರೂ ಜತೆಗಿರುವ ಹಲವು ಚಿತ್ರಗಳನ್ನು ಬಿಡುಗಡೆ ಮಾಡಿದ್ದರು. ಬಳಿಕ 2007ರಲ್ಲಿ ರೇಣುಕಾಚಾರ್ಯ ವಿರುದ್ಧ ಜೀವ ಬೆದರಿಕೆ ದೂರು ದಾಖಲಿಸಿದ್ದರು. ಇದರಿಂದ ಎಂಪಿ ರೇಣುಕಾಚಾರ್ಯ ಅವರ ರಾಜಕೀಯ ಜೀವನದ ಮೇಲೂ ಪರಿಣಾಮ ಬೀರಿತ್ತು. ಬಳಿಕ ಸಂಧಾನದ ಮೂಲಕ ಪ್ರಕರಣ ಸುಖಾಂತ್ಯ ಕಂಡಿತ್ತು.

ಹರತಾಳು ಹಾಲಪ್ಪ

ಮಾಜಿ ಶಾಸಕ ಹರತಾಳು ಹಾಲಪ್ಪ ಅವರ ಅಶ್ಲೀಲ ವಿಡಿಯೋ ಹಾಗೂ ಸಂಬಂಧಿಸಿದ ಸುದ್ದಿ ಅವರ ರಾಜಕೀಯ ಜೀವನದ ಮೇಲೆ ದೊಡ್ಡ ಹೊಡೆತ ಕೊಟ್ಟಿತ್ತು. 2009ರ ನವೆಂಬರ್ 26 ರಂದು ಮಹಿಳೆಯೊಬ್ಬರು ಅಂದು ಸಚಿವರಾಗಿದ್ದ ಹರತಾಳು ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಇದರಿಂದ ಹಾಲಪ್ಪ ರಾಜೀನಾಮೆ ನೀಡಿದ್ದರು. ಬಳಿಕ ಹಾಲಪ್ಪ ವಿರುದ್ಧ ಪ್ರಕರಣ ದಾಖಲಾದರೂ 'ಸಹಮತದ ಲೈಂಗಿಕ ಪ್ರಕರಣ' ಎಂದು ಸಿಐಡಿ ಅಧಿಕಾರಿಗಳು ಆರೋಪಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣದಿಂದ ರಾಜಕೀಯವಾಗಿ ಹಿನ್ನೆಲೆಗೆ ಸರಿದ ಹಾಲಪ್ಪ ಅವರನ್ನೂ ಇಂದಿಗೂ ಈ ಪ್ರಕರಣ ಕಡುತ್ತಿದೆ.

ರಾಮದಾಸ್

ಮೈಸೂರಿನ ಕೃಷ್ಣರಾಜನಗರ ಕ್ಷೇತ್ರದಿಂದ ಗೆದ್ದು ಶಾಸಕರಾಗಿ, ಬಿ.ಎಸ್ .ಯಡಿಯೂರಪ್ಪ ಕ್ಯಾಬಿನೆಟ್‌ನಲ್ಲಿ ಸಚಿರಾಗಿದ್ದ ರಾಮದಾಸ್ ಅವರ ವಿರುದ್ಧ ಮೈಸೂರು ತಾಲೂಕು ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಪ್ರೇಮ ಕುಮಾರಿ ಎಂಬ ಮಹಿಳೆ 2014ರಲ್ಲಿ ಗಂಭೀರ ಆರೋಪಗಳನ್ನು ಮಾಡಿದ್ದರು. ' ರಾಮದಾಸ್ ತಮ್ಮನ್ನು ವಿವಾಹವಾಗಿ, ಬಳಿಕ ದೂರ ಮಾಡಿದ್ದಾರೆಂದು ಮಹಿಳೆ ದೂರಿದ್ದರು. ಈ ಪ್ರಕರಣ ಬಯಲಾದಾಗ ರಾಮದಾಸ್ ಆತ್ಮಹತ್ಯೆಗೆ ಯತ್ನಿಸಿದ್ದಾರೆಂದು ಹೇಳಲಾಗಿತ್ತು. ಆದರೆ ಪ್ರಕರಣದ ವಿಚಾರಣೆ ನಡೆಸಿದ ಸಿಐಡಿ, 'ಬಿ' ರಿಪೋರ್ಟ್ ಸಲ್ಲಿಸಿತ್ತು. ನಂತರ ಪ್ರೇಮಾಕುಮಾರಿ ಹಾಗೂ ಅವರ ಕುಟುಂಬ ಸದಸ್ಯರು ರಾಮದಾಸ್ ಅವರನ್ನು ಬ್ಲ್ಯಾಕ್ ಮೇಲ್ ಮಾಡಿ 1.10 ಕೋಟಿ ರು. ಹಣ ಪಡೆದಿದ್ದಾರೆಂದು ದೂರು ದಾಖಲಾಗಿತ್ತು. ಈ ಪ್ರಕರಣ ಸುಪ್ರಿಂಕೋರ್ಟ್‌ವರೆಗೂ ತಲುಪಿತ್ತು. ಬಿಜೆಪಿಯಲ್ಲಿ ಮುಂಚೂಣಿ ನಾಯಕನಾಗಿ ಗುರುತಿಸಿಕೊಂಡಿದ್ದ ರಾಮದಾಸ್ ಅವರ ರಾಜಕೀಯ ಭವಿಷ್ಯದ ಮೇಲೆ ಈ ಪ್ರಕರಣ ಕರಿಛಾಯೆ ಬೀರಿತ್ತು.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಹೈದರಾಬಾದ್	01	01	00	02
ಬೆಂಗಳೂರು	01	01	00	02
ಪಂಜಾಬ್	01	01	00	02
ಚೆನ್ನೈ	01	01	00	02
ಡೆಲ್ಲಿ	01	01	00	02
ಕೋಲ್ಕತ್ತಾ	02	01	01	02
ಲಖನೌ	01	00	01	00
ಮುಂಬೈ	01	00	01	00
ಗುಜರಾತ್	01	00	01	00
ರಾಜಸ್ಥಾನ್	02	00	02	00

ಸ್ಕೋರ್ ಬೋರ್ಡ್

151/9 (20 ಓವರ್)

ರಾಜಸ್ಥಾನ್ ರಾಯಲ್ಸ್		ರನ್	ಎಸೆತ
ಜೈಸ್ವಾಲ್	ಬೌಲರ್ ›› ಮೊಹಿನ್, ಕ್ಯಾಚ್ ›› ರಾಣಾ	29	24
ಸಂಜು ಸ್ಯಾಮ್ಸನ್	ಬೌಲರ್ ›› ಅರೋರಾ	13	11
ಆರ್.ಪರಾಗ್	ಬೌಲರ್ ›› ಚಕ್ರವರ್ತಿ ಕ್ಯಾಚ್ ›› ಕಾಕ್	25	15
ರಾಣಾ	ಬೌಲರ್ ›› ಅಲಿ	08	09
ಹಸರಂಗ	ಬೌಲರ್ ›› ಚಕ್ರವರ್ತಿಕ್ಯಾಚ್ ›› ರಹಾನೆ	04	04
ಜುರೆಲ್	ಬೌಲರ್ ›› ರಾಣಾ	33	28
ದುಬೆ	ಬೌಲರ್ ›› ಅರೋರಾ ಕ್ಯಾಚ್ ›› ರಸೆಲ್	09	12
ಹೆಟ್ಮೆಯರ್	ಬೌಲರ್ ›› ರಾಣಾ ಕ್ಯಾಚ್ ›› ರಘುವಂಶಿ	07	08
ಆರ್ಚರ್	ಬೌಲರ್ ›› ಜಾನ್ಸನ್	16	07
ತೀಕ್ಷಣ	ನಾಟೌಟ್*	01	01
ದೇಶಪಾಂಡೆ	ನಾಟೌಟ್*	02	01

ಕೋಲ್ಕತ್ತಾ ನೈಟ್ ರೈಡರ್ಸ್	ಓವರ್	ರನ್	ವಿಕೆಟ್
ಜಾನ್ಸನ್	4	42	1
ಅರೋರಾ	4	33	2
ರಾಣಾ	4	36	2
ಮೊಯಿನ್	4	23	2
ಚಕ್ರವರ್ತಿ	4	17	2

ರಾಜಸ್ಥಾನ ರಾಯಲ್ಸ್	ಓವರ್	ರನ್	ವಿಕೆಟ್
ಆರ್ಚರ್	2.3	33	0
ತೀಕ್ಷಣ	4	32	0
ಪರಾಗ್	4	25	0
ಶರ್ಮಾ	2	11	0
ಹಸರಂಗ	3	34	1
ರಾಣಾ	1	9	0
ದೇಶಪಾಂಡೆ	1	7	0

153/2 (20 ಓವರ್)

ಕೋಲ್ಕತ್ತಾ ನೈಟ್ ರೈಡರ್ಸ್		ರನ್	ಎಸೆತ
ಮೊಯಿನ್	ರನೌಟ್ ›› ಪರಾಗ್	05	12
ಡಿ ಕಾಕ್	ನಾಟೌಟ್*	97	61
ರಹಾನೆ	ಬೌಲರ್ ›› ಹಸರಂಗ, ಕ್ಯಾಚ್ ›› ದೇಶಪಾಂಡೆ	18	15
ರಘುವಂಶಿ	ನಾಟೌಟ್*	22	17

ನರೇನ್‌ಗೆ ವಿಶ್ರಾಂತಿ

ಗುವಾಹಟಿ: ಕೋಲ್ಕತಾ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳು ಬುಧವಾರದ ಪಂದ್ಯಕ್ಕೆ ಆಟಗಾರರ ಹನ್ನೊಂದರ ಬಳಗದಲ್ಲಿ ಒಂದೊಂದು ಬದಲಾವಣೆಗಳನ್ನು ಮಾಡಿಕೊಂಡು ಕಣಕ್ಕೆ ಇಳಿದವು. ಕೆಕೆಆರ್ ಪರ ಸುನೀಲ್ ನರೇನ್ ಬದಲು ಮೊಯೀನ್ ಆಲಿ ಕಣಕ್ಕೆ ಇಳಿದರೆ, ರಾಜಸ್ಥಾನ್ ರಾಯಲ್ಸ್‌ನಲ್ಲಿ ಫಾರೂಕಿ ಬದಲು ವಾನಿಂದು ಹಸರಂಗ ತಂಡದಲ್ಲಿ ಸ್ಥಾನ ಪಡೆದರು. ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಮಿಂಚಿದ್ದ ಸುನೀಲ್ ನರೇನ್, ಆರ್‌ಆರ್ ವಿರುದ್ಧ ಏಕೆ ಆಡಲಿಲ್ಲ ಎಂಬ ಪ್ರಶ್ನೆ ಪಂದ್ಯದ ಆರಂಭದಲ್ಲಿ ಎಲ್ಲರನ್ನೂ ಕಾಡಿತು. ನರೇನ್ ಸಂಪೂರ್ಣ ಫಿಟ್ ಇಲ್ಲದ ಕಾರಣ ವಿಶ್ರಾಂತಿ ಪಡೆಯಲಿದ್ದಾರೆ ಎಂಬ ಮಾಹಿತಿ ಪಂದ್ಯ ಆರಂಭವಾದ ಸ್ವಲ್ಪ ಹೊತ್ತಿನ ಬಳಿಕವಷ್ಟೇ ವೀಕ್ಷಕ ವಿವರಣೆಯ ಮೂಲಕ ಪ್ರೇಕ್ಷಕರಿಗೆ ತಿಳಿಯಿತು.

ಆರ್‌ಸಿಬಿ ಹನ್ನೊಂದರ ಬಳಗದಲ್ಲಿ ಭುವಿ

ಚೆನ್ನೈ: ಕೋಲ್ಕತಾ ನೈಟ್ ರೈಡರ್ಸ್ ವಿರುದ್ಧ ಏಳು ವಿಕೆಟ್‌ಗಳ ಗೆಲುವು ಪಡೆದಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ (ಆರ್‌ಸಿಬಿ), ಮಾರ್ಚ್ 28ರಂದು ಶುಕ್ರವಾರ ನಡೆಯುವ ಟೂರ್ನಿಯ ತನ್ನ ಎರಡನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ವಿರುದ್ಧ ಕಾದಾಟ ನಡೆಸಲಿವೆ. ಪಂದ್ಯಕ್ಕೆ ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣ

ಸಿದ್ಧವಾಗಿದೆ. ಋತುರಾಜ್ ಗಾಯಕ್ವಾಡ್ ನಾಯಕತ್ವದ ಸಿಎಸ್‌ಕೆ ವಿರುದ್ಧದ ಪಂದ್ಯಕ್ಕೆ ಆರ್‌ಸಿಬಿ ತಂಡದ ಪ್ಲೇಯಿಂಗ್ ಹನ್ನೊಂದರ ಬಳಗದಲ್ಲಿ ಒಂದು ಬದಲಾವಣೆಯನ್ನು ತರುವ ಸಾಧ್ಯತೆ ನಿಚ್ಚಳವಾಗಿದೆ. ಕೆಕೆಆರ್ ಎದುರು ಆರ್‌ಸಿಬಿ ತಂಡಕ್ಕೆ ಅಲಭ್ಯರಾಗಿದ್ದ ಹಿರಿಯ ವೇಗಿ ಭುವನೇಶ್ವರ್ ಕುಮಾರ್ ಸಿಎಸ್‌ಕೆ ಪಂದ್ಯದಲ್ಲಿ ಆಡಲಿದ್ದಾರೆ. ಸಣ್ಣ ಗಾಯದಿಂದ ವಿಶ್ರಾಂತಿ ಪಡೆದಿದ್ದ ಭುವನೇಶ್ವರ್ ಕುಮಾರ್ ಸಿಎಸ್‌ಕೆ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವುದರಿಂದ ಯುವ ವೇಗಿ ರಾಸಿಖ್‌ದಾರ್ ಸಲಾಮ್ ತಮ್ಮ ಸ್ಥಾನವನ್ನು ಬಿಟ್ಟು ಕೊಡಬಹುದು, ಇನ್ನುಳಿದಂತೆ ಎಲ್ಲಾ ಆಟಗಾರರೂ ಶುಕ್ರವಾರದ ಪಂದ್ಯದಲ್ಲಿ ಆರ್‌ಸಿಬಿ ತಂಡದಲ್ಲಿ ಮುಂದುವರಿಯಲಿದ್ದಾರೆ.

ಸ್ವಸ್ತಿಕ್ ಚಿಕಾರ ಕೀಟಲೆ

ಚೆನ್ನೈ: ಇದೀಗ ಆರ್‌ಸಿಬಿ ತನ್ನ ಮುಂದಿನ ಪಂದ್ಯವನ್ನು ಸಿಎಸ್‌ಕೆ ವಿರುದ್ಧ ಆಡಲಿದೆ. ಈ ಪಂದ್ಯಕ್ಕೆ ಸಾಕಷ್ಟು ಇನ್ನೂ ಎರಡು ದಿನ ಇರುವ ಕಾರಣ ಆಟಗಾರರು ಮೋಜು ಮಸ್ತಿಯಲ್ಲಿ ತೊಡಗಿದ್ದಾರೆ. ಇದೇ ವೇಳೆ

ಆರ್‌ಸಿಬಿ 30 ಲಕ್ಷ ರೂ. ಮೂಲ ಬೆಲೆಗೆ ಖರೀದಿಸಿದ ಸ್ವಸ್ತಿಕ್ ಚಿಕಾರ, ಯಾರೂ ಮಾಡಲು ಧೈರ್ಯ ಮಾಡದ ಕೆಲಸವನ್ನು ಮಾಡಿದ್ದಾರೆ. 19 ವರ್ಷದ ಸ್ವಸ್ತಿಕ್, ತಮಾಷೆಯಾಗಿ ಕೊಹ್ಲಿಯ ಅನುಮತಿ ಪಡೆಯದೆ ಅವರ ಸುಗಂಧ ದ್ರವ್ಯವನ್ನು ಬ್ಯಾಗ್‌ನಿಂದ ತೆಗೆದು ಬಳಸಿದ್ದಾನೆ. ಇದನ್ನು ನೋಡಿದ ಯಶ್ ದಯಾಳ್ ಹೀಗೆಂದಿದ್ದಾರೆ. 'ಕೋಲ್ಕತ್ತಾದಲ್ಲಿ ನಡೆದ ಪಂದ್ಯದ ನಂತರ ನಾವು ಡ್ರೆಸ್ಸಿಂಗ್ ಕೋಣೆಯಲ್ಲಿ ಕುಳಿತಿದ್ದೆವು. ನಂತರ ಸ್ವಸ್ತಿಕ್ ವಿರಾಟ್ ಭಾಯ್ ಅವರ ಬ್ಯಾಗಿನಿಂದ ಸುಗಂಧ ದ್ರವ್ಯವನ್ನು ಹೊರತೆಗೆದು ಕೇಳದೆಯೇ ತನ್ನ ಮೇಲೆ ಸಿಂಪಡಿಸಿಕೊಂಡನು. ಎಲ್ಲರೂ ನಗಲು ಪ್ರಾರಂಭಿಸಿದರು. ವಿರಾಟ್ ಭಾಯ್ ಅಲ್ಲಿ ಕುಳಿತಿದ್ದರು, ಆದರೆ ಅವರು ಏನನ್ನೂ ಹೇಳಲಿಲ್ಲ. ಸ್ವಸ್ತಿಕ್ ಚಿಕಾರ ಅವರ ಈ ಕೃತ್ಯವನ್ನು ನೋಡಿದ ರಜತ್ ಪಾಟಿದಾರ್ ಕೂಡ ಆಶ್ಚರ್ಯಚಕಿತರಾಗಿದಲ್ಲದೆ, ಈ ಹುಡುಗ ಏನು ಮಾಡುತ್ತಿದ್ದಾನೆಂದು ನಾನು ಯೋಚಿಸುತ್ತಿದ್ದೆವು. ವಿರಾಟ್ ಬಾಯ್ ಮುಂದೆಯೇ ಸ್ವಸ್ತಿಕ್ ಯಾವುದೇ ಹಿಂಜರಿಕೆಯಿಲ್ಲದೆ ಅವರ ಸುಗಂಧ ದ್ರವ್ಯವನ್ನು ಬಳಸಿದರು' ಎಂದಿದ್ದಾರೆ.

ವಿರಾಟ್ ನಮ್ಮ ಅಣ್ಣ- ಸ್ವಸ್ತಿಕ್: ತಾನು ಏಕೆ ಹಾಗೆ ಮಾಡಿದೆ ಎಂಬುದನ್ನು ವಿವರಿಸಿರುವ ಸ್ವಸ್ತಿಕ್, 'ವಿರಾಟ್ ಬಾಯ್ ನಮ್ಮ ಅಣ್ಣ, ಅವರು ಯಾವುದಾದರೂ ಕೆಟ್ಟ ಸುಗಂಧ ದ್ರವ್ಯವನ್ನು ಬಳಸುತ್ತಿದ್ದಾರೆಯೇ ಎಂದು ನಾನು ಪರಿಶೀಲಿಸುತ್ತಿದ್ದೆ. ಹಾಗಾಗಿ ನಾನು ಅದನ್ನು ಪರೀಕ್ಷಿಸಿ ನೋಡಿದೆ, ಅದು ಚೆನ್ನಾಗಿತ್ತು' ಎಂದಿದ್ದಾರೆ.

ಇಂದಿನ ಪಂದ್ಯ

7.30 PM

ಸನ್ ರೈಸರ್ಸ್ ಹೈದರಾಬಾದ್ vs ಲಖನೌ ಸೂಪರ್ ಜೈಂಟ್ಸ್

ರಾಜೀವ್ ಗಾಂಧಿ ಸ್ಟೇಡಿಯಂ ಹೈದರಾಬಾದ್

ಡೆಲ್ಲಿಗೆ ಇನ್ನು ರಾಹುಲ್ ಬಲ

ದೆಹಲಿ: ಆಡಿದ ಮೊದಲ ಪಂದ್ಯದಲ್ಲೇ ಬಲಿಷ್ಠ ಲಖನೌ ಸೂಪರ್‌ಜೈಂಟ್ಸ್ ತಂಡವನ್ನು ಮಣಿಸಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಸದ್ಯ ಗೆಲುವಿನ ಅಲೆಯಲ್ಲಿ ತೇಲುತ್ತಿದೆ. ಈ ನಡುವೆ ತಂಡಕ್ಕೆ ಮತ್ತೊಂದು ಸಂತಸದ ಸುದ್ದಿ ಸಿಕ್ಕಿದ್ದು, ತಂಡದ ಅನುಭವಿ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್, ಕನ್ನಡಿಗ ಕೆಎಲ್ ರಾಹುಲ್ ಮುಂದಿನ ಭಾನುವಾರ ನಡೆಯಲಿರುವ ಡೆಲ್ಲಿಯ ಮುಂದಿನ ಪಂದ್ಯದಲ್ಲಿ ಆಡಲಿದ್ದಾರೆ ಎಂಬುದಾಗಿದೆ.

ರಾಹುಲ್ ಅವರ ಪತ್ನಿ ಅಥಿಯಾ ಶೆಟ್ಟಿ ಕಳೆದ ಭಾನುವಾರ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಹೀಗಾಗಿ ರಾಹುಲ್ ಮಡದಿಯೊಂದಿಗಿರುವ ಸಲುವಾಗಿ ತಂಡವನ್ನು ತೊರೆದು ಮನೆಗೆ ವಾಪಸ್ ಆಗಿದ್ದ ಕಾರಣ ಲಖನೌ ವಿರುದ್ಧದ ಪಂದ್ಯದಲ್ಲಿ ಆಡಿರಲಿಲ್ಲ, ಆದರೆ ಈ ಶುಕ್ರವಾರ ತಂಡ ಕೂಡಿಕೊಳ್ಳಲಿದ್ದಾರೆ.

ಬೌಲಿಂಗ್-ಬ್ಯಾಟಿಂಗ್‌ನಲ್ಲಿ ಮುಗ್ಗರಿಸಿದ ರಾಜಸ್ಥಾನ | ಡಿ ಕಾಕ್ ಭರ್ಜರಿ ಬ್ಯಾಟಿಂಗ್ | ಬೌಲರ್‌ಗಳ ಸಂಘಟಿತ ದಾಳಿ

ಗೆಲುವಿನ ಹಳಿ ಏರಿದ ಕೆಕೆಆರ್

ಗುವಾಹಟಿ: ಬೌಲಿಂಗ್ ಹಾಗೂ ಬ್ಯಾಟಿಂಗ್ ಎರಡೂ ವಿಭಾಗಗಲ್ಲಿ ಸಂಘಟಿತ ಪ್ರದರ್ಶನ ತೋರಿದ ಕೋಲ್ಕತಾ ನೈಟ್ ರೈಡರ್ಸ್ (ಕೆಕೆಆರ್) ತಂಡವು ಐಪಿಎಲ್ ಟೂರ್ನಿಯ ಆರನೇ ಪಂದ್ಯದಲ್ಲಿ ಬುಧವಾರದಂದು ರಾಜಸ್ಥಾನ ರಾಯಲ್ಸ್ ವಿರುದ್ಧ 8 ವಿಕೆಟ್‌ಗಳ ಗೆಲುವು ಪಡೆಯುವ ಮೂಲಕ ಅಂಕಪಟ್ಟಿಯಲ್ಲಿ ಖಾತೆ ತೆರೆಯಿತು. ತನ್ನ ಮೊದಲನೇ ಪಂದ್ಯವನ್ನು ಸೋತಿದ್ದ ಆರ್‌ಆರ್, ಇದೀಗ ಮತ್ತೊಂದು ಸೋಲನ್ನು ಈ ಮೂಲಕ ಅನುಭವಿಸಿತು.

ಇಲ್ಲಿನ ಬರ್ಸಪರ ಕ್ರಿಕೆಟ್ ಕ್ರೀಡಾಂಗಣದಲ್ಲಿ ರಾಜಸ್ಥಾನ ರಾಯಲ್ಸ್ ತಂಡ ನೀಡಿದ್ದ 152 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಅನಾಯಾಸವಾಗಿ ಗೆಲುವನ್ನು ಪಡೆದುಕೊಂಡಿತು. ಕ್ವಿಂಟನ್ ಡಿ ಕಾಕ್ ಅರ್ಧಶತಕದ ಬಲದಿಂದ ಕೆಕೆಆರ್ 17.3 ಓವರ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡು 153 ರನ್ ಗಳಿಸಿ ಪ್ರಸಕ್ತ ಆವೃತ್ತಿಯಲ್ಲಿ ಮೊದಲ ಗೆಲುವಿನ ರುಚಿ ಅನುಭವಿಸಿದೆ.

ಡಿ ಕಾಕ್ ಭರ್ಜರಿ ಬ್ಯಾಟಿಂಗ್: ಗುರಿ ಹಿಂಬಾಲಿಸಿದ ಕೆಕೆಆರ್ ತಂಡದ ಪರ ಮೊಯಿನ್ ಅಲಿ 5 ರನ್ ಗಳಿಸಿ ರನ್‌ಔಟ್ ಆದರು, ಬಳಿಕ ನಾಯಕ ಅಜಿಂಕ್ಯ ರಹಾನೆ 18 ರನ್‌ಗಳಿಸಿ ಔಟ್ ಆದರು. ಆದರೆ ಒಂದು ತುದಿಯಲ್ಲಿ ಕೊನೆಯವರೆಗೂ ಬ್ಯಾಟಿಂಗ್ ಮಾಡಿದ ಆರಂಭಿಕ ಡಿ ಕಾಕ್, ಆರ್‌ಆರ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದರು. ಅವರು 61 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ 8 ಬೌಂಡರಿಗಳೊಂದಿಗೆ ಅಜೇಯ 97 ರನ್‌ಗಳನ್ನು ಗಳಿಸಿದರು, ಆ ಮೂಲಕ 15 ಎಸೆತಗಳು ಬಾಕಿ ಇರುವಾಗಲೇ ಕೆಕೆಆರ್ ತಂಡವನ್ನು ಗೆಲ್ಲಿಸಿ, ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

151 ರನ್ ಗಳಿಸಿದ ಕೆಕೆಆರ್: ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ ರಾಯಲ್ಸ್ ತಂಡದ ಪರ ಯಾವೊಬ್ಬ ಬ್ಯಾಟ್ಸ್‌ಮನ್ ದೊಡ್ಡ ಇನಿಂಗ್ಸ್ ಆಡಲಿಲ್ಲ. ಕೆಕೆಆರ್‌ನ ಮಾರಕ ಬೌಲಿಂಗ್ ದಾಳಿಗೆ ನಲುಗಿದ ರಿಯಾನ್ ಪರಾಗ್ ನಾಯಕತ್ವದ ರಾಜಸ್ಥಾನ ರಾಯಲ್ಸ್, 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 151 ರನ್‌ಗಳಿಗೆ ಸೀಮಿತವಾಯಿತು.

ಇನ್ನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ ಹಾಗೂ ಸಂಜು ಸ್ಯಾಮ್ಸನ್ ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ನಿರೀಕ್ಷಿತ ಆರಂಭ ತಂದುಕೊಡುವಲ್ಲಿ ವಿಫಲರಾದರು. ಈ ಪಂದ್ಯದಲ್ಲಿಯೂ ಕೇವಲ ಬ್ಯಾಟ್ಸ್‌ಮನ್ ಆಗಿ ಆಡಿದ ಸಂಜು ಸ್ಯಾಮ್ಸನ್ 11 ಎಸೆತಗಳಲ್ಲಿ 13 ರನ್ ಗಳಿಸಿ ವೈಭವ್ ಅರೋರ ಯಾರ್ಕರ್ ಎಸೆತಕ್ಕೆ ಕ್ಲೀನ್ ಬೌಲ್ಡ್ ಆದರು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ನಾಯಕ ರಿಯಾನ್ ಪರಾಗ್ 15 ಎಸೆತಗಳಲ್ಲಿ 25 ರನ್ ಬಾರಿಸಿ ದೊಡ್ಡ ಇನ್ನಿಂಗ್ಸ್ ಕಟ್ಟುವ ಮುನ್ಸೂಚನೆಯನ್ನು ನೀಡಿದರು, ಆದರೆ ವರುಣ್ ಚಕ್ರವರ್ತಿ ಎಸೆತದಲ್ಲಿ ದೊಡ್ಡ ಹೊಡೆತವೊಂದಕ್ಕೆ ಕೈ ಹಾಕಿ ಕ್ಯಾಚ್ ಕೊಟ್ಟರು. 24 ಎಸೆತಗಳಲ್ಲಿ 29 ರನ್ ಗಳಿಸಿದ್ದ ಮತ್ತೊಬ್ಬ ಆರಂಭಿಕ ಯಶಸ್ವಿ ಜೈಸ್ವಾಲ್ ಕೂಡ ಮೊಯಿನ್ ಅಲಿ ಎಸೆತದಲ್ಲಿ ಹರ್ಷಿತ್ ರಾಣಾಗೆ ಕ್ಯಾಚ್ ಕೊಟ್ಟು ಪೆವಿಲಿಯನ್ ಕಡೆ ತೆರಳಿದರು.

ವಾನಿಂದು ಹಸರಂಗ ಹಾಗೂ ನಿತೀಶ್ ರಾಣಾ ಅವರು ಕೂಡ ಮಧ್ಯಮ ಕ್ರಮಾಂಕದಲ್ಲಿ ನಿರಾಶೆ ಮೂಡಿಸಿದರು. ಶುಭಂ ದುಬೆ ಹಾಗೂ ಶಿಮ್ರಾನ್ ಹೆಟ್ಮಾಯರ್ ಅವರು ಕೂಡ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಕಳೆದ ಪಂದ್ಯದಂತೆ ಈ ಪಂದ್ಯದಲ್ಲಿಯೂ ಸ್ವಲ್ಪ ಹೊತ್ತು ಕ್ರೀಸ್‌ನಲ್ಲಿ ನಿಂತು ಬ್ಯಾಟ್ ಮಾಡಿದ ಧ್ರುವ್ ಜುರೆಲ್ 33 ರನ್ ಗಳಿಸಿ ರಾಜಸ್ಥಾನ ರಾಯಲ್ಸ್ ತಂಡದ ಪರ ವೈಯಕ್ತಿಕ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಕೊನೆಯಲ್ಲಿ ಜೋಫ್ರಾ ಆರ್ಚರ್ 7 ಎಸೆತಗಳಲ್ಲಿ 16 ರನ್‌ಗಳ ಕೊಡುಗೆಯನ್ನು ನೀಡಿ ಔಟ್ ಆದರು.

ಕೆಕೆಆರ್ ತಂಡದ ಪರ ಪರಿಣಾಮಕಾರಿಯಾಗಿ ಬೌಲ್ ಮಾಡಿದ ವೈಭವ್ ಅರೋರಾ, ಮೊಯೀನ್ ಅಲಿ, ಹರ್ಷಿತ್ ರಾಣಾ ಹಾಗೂ ವರುಣ್ ಚಕ್ರವರ್ತಿ ತಲಾ ಎರಡೆರಡು ವಿಕೆಟ್‌ಗಳನ್ನು ಕಬಳಿಸಿದರು.

ಪಾಕಿಸ್ತಾನ್ ತಂಡದಲ್ಲೊಬ್ಬ ಡಕ್ ಮ್ಯಾನ್

ಲಾಹೋರ್: ಪಾಕಿಸ್ತಾನ್ ತಂಡದ ಯುವ ದಾಂಡಿಗ ಹಸನ್ ನವಾಝ್ ಕ್ರಿಕೆಟ್‌ನಲ್ಲಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಆದರೆ ಇದು ಅತ್ಯಂತ ಕೆಟ್ಟ ದಾಖಲೆ ಎಂಬುದಷ್ಟೇ ವ್ಯತ್ಯಾಸ. ಅಂದರೆ ನ್ಯೂಝಿಲೆಂಡ್ ವಿರುದ್ಧದ 5 ಪಂದ್ಯಗಳ ಟಿ20 ಸರಣಿಯ ಮೂಲಕ ಪಾದಾರ್ಪಣೆ ಮಾಡಿದ ಹಸನ್ ನವಾಝ್ ಈವರೆಗೆ 3 ಬಾರಿ ಶೂನ್ಯಕ್ಕೆ ಔಟಾಗಿದ್ದಾರೆ.

ಮೊದಲ ಟಿ20 ಪಂದ್ಯದಲ್ಲಿ 2 ಎಸೆತಗಳನ್ನು ಎದುಸಿ ಶೂನ್ಯಕ್ಕೆ ಔಟಾಗಿದ್ದ ಹಸನ್ ನವಾಝ್, ದ್ವಿತೀಯ ಪಂದ್ಯದಲ್ಲಿ 3 ಎಸೆತಗಳನ್ನು ಎದುರಿಸಿ ಮತ್ತೆ ಸೊನ್ನೆ ಸುತ್ತಿದ್ದರು. ಇದಾಗ್ಯೂ ಮೂರನೇ ಟಿ20 ಪಂದ್ಯದಲ್ಲಿ 44 ಎಸೆತಗಳಲ್ಲಿ ಸ್ಫೋಟಕ ಸೆಂಚುರಿ ಸಿಡಿಸಿ ಅಬ್ಬರಿಸಿದ್ದರು

ಆದರೆ ನಾಲ್ಕನೇ ಟಿ20 ಪಂದ್ಯದಲ್ಲಿ ಕೇವಲ 1 ರನ್ ಗಳಿಸಿ ಔಟಾಗಿದ್ದಾರೆ. ಇದೀಗ 5ನೇ ಟಿ20 ಪಂದ್ಯದಲ್ಲಿ 3 ಎಸೆತಗಳನ್ನು ಎದುರಿಸಿ ಮತ್ತೊಮ್ಮೆ ಸೊನ್ನೆ ಸುತ್ತಿದ್ದಾರೆ. ಈ ಮೂಲಕ ಒಂದೇ ಸರಣಿಯಲ್ಲಿ ಮೂರು ಬಾರಿ ಶೂನ್ಯಕ್ಕೆ ಔಟಾಗಿ ಅನಗತ್ಯ ದಾಖಲೆಗೆ ಕಾರಣರಾಗಿದ್ದಾರೆ.

ಟಿ20 ಕ್ರಿಕೆಟ್‌ನಲ್ಲಿ ಪಾಕಿಸ್ತಾನ್ ಪರ ಒಂದೇ ಸರಣಿಯಲ್ಲಿ ಮೂರು ಬಾರಿ ಶೂನ್ಯಕ್ಕೆ ಔಟಾದ ಮೊದಲ ಆರಂಭಿಕ ಬ್ಯಾಟರ್ ಎನಿಸಿಕೊಂಡಿದ್ದಾರೆ. ಅಲ್ಲದೆ ಟಿ20 ಸರಣಿಯಯೊಂದರಲ್ಲಿ ಮೂರು ಬಾರಿ ಡಕ್ ಔಟ್ ಆದ ಐಸಿಸಿ ಪೂರ್ಣ ಸದಸ್ಯ ರಾಷ್ಟ್ರದ ಮೊದಲ ಬ್ಯಾಟರ್ ಎಂಬ ಹೀನಾಯ ವಿಶ್ವ ದಾಖಲೆಯನ್ನು ನವಾಝ್ ತಮ್ಮದಾಗಿಸಿಕೊಂಡಿದ್ದಾರೆ.

ಇದಕ್ಕೂ ಮುನ್ನ ಪಾಕಿಸ್ತಾನ್ ಪರ ಮೂವರು ಆರಂಭಿಕರು ಮಾತ್ತ ಒಂದೇ ಸರಣಿಯಲ್ಲಿ ಮೂರು ಬಾರಿ ಶೂನ್ಯಕ್ಕೆ ಔಟಾಗಿದ್ದರು. ಅವರೆಂದರೆ ಮೊಹಮ್ಮದ್ ರಿಝ್ವಾನ್, ಮೊಹಮ್ಮದ್ ಹಫೀಝ್ ಹಾಗೂ ಶಹಜೈಬ್ ಹಸನ್. ಈ ಮೂವರು ಟಿ20 ಸರಣಿವೊಂದರಲ್ಲಿ ತಲಾ 2 ಬಾರಿ ಸೊನ್ನೆ ಸುತ್ತಿದ್ದರು. ಇದೀಗ 3 ಬಾರಿ ಸೊನ್ನೆ ಸುತ್ತುವ ಮೂಲಕ ಹಸನ್ ನವಾಝ್ ಟಿ20 ಕ್ರಿಕೆಟ್‌ನ ಹೊಸ ಡಕ್‌ಮ್ಯಾನ್ ಎನಿಸಿಕೊಂಡಿದ್ದಾರೆ.

8 ತಂಡಗಳು ಭಾಗವಹಿಸಲಿರುವ ಪಂದ್ಯಾವಳಿ | 5 ವಿಭಿನ್ನ ನಗರಗಳಲ್ಲಿ ಆಯೋಜನೆ

ಸೆಪ್ಟೆಂಬರ್ 29ರಿಂದ ಮಹಿಳಾ ವಿಶ್ವಕಪ್ ಟೂರ್ನಿ

ದೆಹಲಿ: ಮಹಿಳಾ ಏಕದಿನ ವಿಶ್ವಕಪ್ ಈ ವರ್ಷ ಭಾರತದಲ್ಲಿ ನಡೆಯಲಿದ್ದು, ಫೈನಲ್ ಪಂದ್ಯವು ಚಂಡೀಗಢದ ಹೊರವಲಯದಲ್ಲಿರುವ ಮುಲ್ಲನ್‌ಪುರದಲ್ಲಿರುವ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಕ್ರೀಡಾಂಗಣಕ್ಕೆ ಈಗಾಗಲೇ 230 ಕೋಟಿ ರು. ಗಳಿಗೂ ಹೆಚ್ಚು ಖರ್ಚು ಮಾಡಲಾಗಿದೆ. ಈ ಕ್ರೀಡಾಂಗಣವು 38000 ಪ್ರೇಕ್ಷಕರಿಗೆ ಅವಕಾಶ ಕಲ್ಪಿಸುತ್ತದೆ.

ಮಹಿಳಾ ವಿಶ್ವಕಪ್ ಪಂದ್ಯಾವಳಿ ಸೆಪ್ಟೆಂಬರ್ 29ರಿಂದ ಅಕ್ಟೋಬರ್ 26ರ ವರೆಗೆ ನಡೆಯಲಿದೆ. ಈ ಪಂದ್ಯಾವಳಿಯಲ್ಲಿ 8 ತಂಡಗಳು ಭಾಗವಹಿಸಲಿದ್ದು, ಪಂದ್ಯಗಳು ಐದು ವಿಭಿನ್ನ ನಗರಗಳಾದ ವಿಶಾಖಪಟ್ಟಣಂ, ತಿರುವನಂತಪುರಂ, ರಾಯ್‌ಪುರ, ಇಂದೋರ್ ಹಾಗೂ ಮುಲ್ಲನ್‌ಪುರ (ಚಂಡೀಗಢ) ದಲ್ಲಿಯೂ ನಡೆಯಲಿವೆ.

ಮೊದಲ ಬಾರಿಗೆ ಆತಿಥ್ಯ: ಮುಲ್ಲನ್‌ಪುರ, ತಿರುವನಂತಪುರಂ ಮತ್ತು ರಾಯ್‌ಪುರಗಳು ಇದುವರೆಗೆ ಯಾವುದೇ ಮಹಿಳಾ ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಯೋಜಿಸಿಲ್ಲ. 1997ರ ವಿಶ್ವಕಪ್‌ನ ಒಂದು ಪಂದ್ಯವನ್ನು

ಇಂದೋರ್‌ನ ನೆಹರು ಕ್ರೀಡಾಂಗಣದಲ್ಲಿ ನಡೆಸಲಾಯಿತು, ಆದರೆ ಈ ಬಾರಿ ಪಂದ್ಯಗಳು ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆಯಲಿವೆ. ವಿಶಾಖಪಟ್ಟಣಂನಲ್ಲಿರುವ ಎಸಿಎ-ವಿಡಿಸಿಎ ಕ್ರೀಡಾಂಗಣವು ಇದುವರೆಗೆ 6 ಮಹಿಳಾ ಟಿ20 ಮತ್ತು 5 ಮಹಿಳಾ ಏಕದಿನ ಪಂದ್ಯಗಳನ್ನು ಆಯೋಜಿಸಿದೆ.

ವಿಶ್ವಕಪ್‌ನಲ್ಲಿ ಆಡಲಿರುವ ಯಾವ ತಂಡಗಳು: ಇದುವರೆಗೆ 6 ತಂಡಗಳು ಮಹಿಳಾ ಏಕದಿನ ವಿಶ್ವಕಪ್‌ಗೆ ಅರ್ಹತೆ ಪಡೆದಿವೆ. ಆಸ್ಟ್ರೇಲಿಯಾ ಹಾಲಿ ಚಾಂಪಿಯನ್ ಆಗಿದ್ದು, ಇಂಗ್ಲೆಂಡ್, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ ಮತ್ತು ಭಾರತ ಈ ಪಂದ್ಯಾವಳಿಗೆ ಅರ್ಹತೆ ಪಡೆದಿವೆ. ಏಪ್ರಿಲ್ 9ರಿಂದ ಲಾಹೋರ್‌ನಲ್ಲಿ ನಡೆಯಲಿರುವ ಅರ್ಹತಾ ಪಂದ್ಯಾವಳಿಯ ನಂತರ, ಉಳಿದ 2 ತಂಡಗಳನ್ನು ನಿರ್ಧರಿಸಲಾಗುತ್ತದೆ. ಪಾಕಿಸ್ತಾನ ಅರ್ಹತೆ ಪಡೆದರೆ, ಅದರ ಪಂದ್ಯಗಳನ್ನು ಹೈಬ್ರಿಡ್ ಮಾದರಿಯಲ್ಲಿ (ಯುಎಇ ಅಥವಾ ಶ್ರೀಲಂಕಾ) ಆಡಬಹುದು, ಏಕೆಂದರೆ ಬಿಸಿಸಿಐ ಮತ್ತು ಪಿಸಿಬಿ ಈಗಾಗಲೇ ಈ ಬಗ್ಗೆ ಒಪ್ಪಂದ ಮಾಡಿಕೊಂಡಿವೆ.

ಭಾರತ ತಂಡಕ್ಕೆ ಏಕೆ ವಿಶೇಷ?

ಮಿಥಾಲಿ ರಾಜ್ ಮತ್ತು ಜೂಲನ್ ಗೋಸ್ವಾಮಿ ನಿವೃತ್ತಿಯ ನಂತರ ಭಾರತ ಆಡುತ್ತಿರುವ ಮೊದಲ ಏಕದಿನ ವಿಶ್ವಕಪ್ ಇದಾಗಿದೆ. ಪಂದ್ಯಾವಳಿಯ ಸ್ವರೂಪದ ಬಗ್ಗೆ ಹೇಳುವುದಾದರೆ, 8 ತಂಡಗಳು ಇದರಲ್ಲಿ ಭಾಗವಹಿಸಲಿದ್ದು, ಒಟ್ಟು 31 ಪಂದ್ಯಗಳನ್ನು ಆಡಲಾಗುವುದು. 2025ರ ವಿಶ್ವಕಪ್‌ನ ಸ್ವರೂಪವು 2022ರ ಆವೃತ್ತಿಯಂತೆಯೇ ಇರುತ್ತದೆ. ರೌಂಡ್-ರಾಬಿನ್ ಲೀಗ್ (ಪ್ರತಿ ತಂಡವು 7 ಪಂದ್ಯಗಳನ್ನು ಆಡುತ್ತದೆ). ಅಗ್ರ-4 ತಂಡಗಳು ಸೆಮಿಫೈನಲ್ ಆಡಲಿದ್ದು, ಅಲ್ಲಿ ಗೆದ್ದ ಎರಡು ತಂಡಗಳು ಫೈನಲ್ ಪಂದ್ಯ ಆಡಲಿವೆ.

ತ್ರಿಕೋನ ಸರಣಿ: ವೇಳಾಪಟ್ಟಿ ಬದಲು

ಕೊಲಂಬೊ: ಭಾರತ ಮತ್ತು ಶ್ರೀಲಂಕಾ ತಂಡಗಳನ್ನು ಒಳಗೊಂಡಂತೆ ಮಹಿಳಾ ಏಕದಿನ ಕ್ರಿಕೆಟ್ ತ್ರಿಕೋನ ಸರಣಿಯ ವೇಳಾಪಟ್ಟಿಯಲ್ಲಿ ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ಮಂಗಳವಾರ ಬದಲಾವಣೆಗಳನ್ನು ಮಾಡಿದೆ. ಸ್ಥಳೀಯ ಚುನಾವಣೆಗಳ ಕಾರಣ

ವೇಳಾಪಟ್ಟಿ ಪರಿಷ್ಕರಿಸಲಾಗಿದೆ.

ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ತಮ್ಮ ಎರಡನೇ ಏಕದಿನ ಪಂದ್ಯವನ್ನು ಮೇ 7ರಂದು ಆಡಲಿದ್ದು, 6ರಂದು ಕೊಲಂಬೊದಲ್ಲಿ ಚುನಾವಣೆಯಿರುವ ಕಾರಣ ಪಂದ್ಯವನ್ನು ಒಂದು ದಿನ ಮುಂದೂಡಲಾಗಿದೆ.

ಎಲ್ಲ ಪಂದ್ಯಗಳು ಹಗಲು ಹೊತ್ತಿನಲ್ಲಿ ನಡೆಯಲಿದ್ದು, ರಣಸಿಂಘೆ ಪ್ರೇಮದಾಸ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಿಗದಿಯಾಗಿವೆ. ಫೈನಲ್ ಪಂದ್ಯ ಮೇ 11ರಂದು ನಡೆಯಲಿದೆ.

ಪರಿಷ್ಕೃತ ವೇಳಾಪಟ್ಟಿ: ಏ 27: ಶ್ರೀಲಂಕಾ ಭಾರತ; ಏ. 29: ಭಾರತ-ದಕ್ಷಿಣ ಆಫ್ರಿಕಾ: ಮೇ 2: ಶ್ರೀಲಂಕಾ-ದಕ್ಷಿಣ ಆಫ್ರಿಕಾ: ಮೇ 4: ಶ್ರೀಲಂಕಾ ಭಾರತ: ಮೇ 7: ಭಾರತ ದಕ್ಷಿಣ ಆಫ್ರಿಕಾ: ಮೇ 9: ಶ್ರೀಲಂಕಾ-ದಕ್ಷಿಣ ಆಫ್ರಿಕಾ, ಮೇ 11: ಫೈನಲ್.

ಎಸ್‌ಆರ್‌ಎಚ್ ತಂಡಕ್ಕೆ ಮತ್ತೆ ಗೆಲ್ಲುವ ನಿರೀಕ್ಷೆ | ಜೈಂಟ್ಸ್‌ಗೆ ಜಯದ ಅನಿವಾರ್ಯತೆ

ಇಂದು ಹೈದರಾಬಾದ್-ಲಖನೌ ಸೆಣಸಾಟ

ಹೈದರಾಬಾದ್: ಇಲ್ಲಿನ ರಾಜೀವ್ ಗಾಂಧಿ ಸ್ಟೇಡಿಯನಲ್ಲಿ ಗುರುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳು ಪರಸ್ಪರ ಸೆಣಸಾಡಲಿವೆ. ತಾನಾಡಿದ ಮೊದಲ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಸೋಲು ಕಂಡಿರುವ ಲಖನೌ ಸೂಪರ್ ಜೈಂಟ್ಸ್ ತಂಡವು ಬೌಲಿಂಗ್ ವಿಭಾಗದಲ್ಲಿ ಸ್ವಲ್ಪ ಹಿನ್ನಡೆಯನ್ನು ಅನುಭವಿಸುತ್ತಿರುವುದಂತೂ ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಮೊದಲ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ ವಿರುದ್ಧ 209 ರನ್ ಕಲೆ ಹಾಕಿದರೂ, ಪಂದ್ಯ ಗೆಲ್ಲುವಲ್ಲಿ ಲಖನೌ ತಂಡ ವಿಫಲವಾಗಿತ್ತು. ಹೈದರಾಬಾದ್ ವಿರುದ್ಧ ಎರಡನೇ ಪಂದ್ಯಕ್ಕಾಗಿ ಈಗ ಲಖನೌ ತಂಡ ಸೂಕ್ತ ತಯಾರಿ ನಡೆಸಿದೆ.

ಲಖನೌ ತಂಡದ ಸ್ಟಾರ್ ವೇಗಿ ಆವೇಶ್ ಖಾನ್ ಮೊದಲ ಪಂದ್ಯದ ವೇಳೆ ಗಾಯಕ್ಕೆ ತುತ್ತಾಗಿದ್ದರು. ಅವರೀಗ ಚೇತರಿಕೆಯನ್ನು ಕಾಣುತ್ತಿದ್ದು, ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ತಂಡವನ್ನು ಅವರು ಸೇರಿಕೊಳ್ಳಬಹುದು ಎಂಬ ಮಾತು ಕೇಳಿ ಬರುತ್ತಿವೆ. ಕಳೆದ ನವೆಂಬರ್‌ನಲ್ಲಿ ಟೀಮ್



ಇಂಡಿಯಾದ ಪರ ಅವರು ತಮ್ಮ ಕೊನೆಯ ಪಂದ್ಯವನ್ನು ಆಡಿದ್ದರು, ಬಳಿಕ ಗಾಯದ ಕಾರಣ ದಿಂದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕೊನೆ ಯ ಪಂದ್ಯವನ್ನೂ ಸಹ ಆಡಲು ಅವರಿಂದ ಸಾಧ್ಯ ವಾಗಿ ರಲಿಲ್ಲ. ಆವೇಶ್ ಖಾನ್ ಐಪಿಎಲ್‌ನಲ್ಲಿ ಈ ವರೆಗೆ ಒಟ್ಟು 63 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಲಖನೌ ತಂಡದ ನಾಯಕ ರಿಷಭ್ ಪಂತ್ ಡೆಲ್ಲಿ ವಿರುದ್ಧದ ಮೊದಲ ಪಂದ್ಯದಲ್ಲಿ ರನ್ ಕಲೆ ಹಾಕುವಲ್ಲಿ ವಿಫಲರಾಗಿದ್ದರು. ಗುರು ವಾರ ಹೈದರಾಬಾದ್ ವಿರುದ್ಧ ನಡೆಯುವ ಪಂದ್ಯದಲ್ಲಿ ಅವರು ಸ್ಥಿರ ಪ್ರದರ್ಶನ ನೀಡುವ ಅನಿವಾರ್ಯತೆ ಇದೆ. ಮೊದಲ ಪಂದ್ಯದಲ್ಲಿ ಲಖನೌ ಪರ ಮಿಚೆಲ್ ಮಾರ್ಷ್ ಹಾಗೂ ನಿಕೋಲಸ್ ಪೂರನ್ ಸೊಗಸಾದ ಬ್ಯಾಟಿಂಗ್ ನಡೆಸಿ ತಂಡಕ್ಕೆ ನೆರವಾಗಿದ್ದರು. ಆದರೆ ಬೌಲಿಂಗ್‌ನಲ್ಲಿ ರವಿ ಬಿಷ್ಣೋಯ್, ಪ್ರಿನ್ಸ್ ಯಾದವ್, ಶಹಬಾಜ್ ಅಹ್ಮದ್ ರನ್‌ಗಳಿಗೆ ಕಡಿವಾಣ ಹಾಕುವಲ್ಲಿ ವಿಫಲರಾಗಿದ್ದರು, ಹಾಗಾಗಿ ಡೆಲ್ಲಿ ವಿರುದ್ಧ ಲಖನೌ ತಂಡವು ಸೋಲನ್ನು ಎದುರಿಸಬೇಕಾ ಯಿತು. ಹಾಗಾಗಿ ಈಗ ಎರಡನೇ ಪಂದ್ಯದಲ್ಲಿ ಗೆಲುವಿನ ಖಾತೆ ಓಪನ್ ಮಾಡಲು ರಿಷಭ್ ಪಂತ್ ಪಡೆಗೆ ಅನಿವಾರ್ಯತೆ ಎದುರಾಗಿದೆ.

ಈಗಾಗಲೇ ರಾಜಸ್ಥಾನ್ ರಾಯಲ್ಸ್ ವಿರುದ್ಧದ ಮೊದಲ ಪಂದ್ಯದಲ್ಲಿ 44 ರನ್‌ಗಳಿಂದ ಗೆಲುವಿನ ರುಚಿಯನ್ನು ಕಂಡಿರುವ ಹೈದರಾಬಾದ್ ತಂಡವು ಬ್ಯಾಟಿಂಗ್‌ನಲ್ಲಿ ತನ್ನ ಶಕ್ತಿ ಏನೆಂದು ಸಾಬೀತುಪಡಿಸಿದೆ. ಮೊದಲ ಪಂದ್ಯದಲ್ಲಿ ಕೇವಲ 47 ಎಸೆತಗಳಿಂದ 106 ರನ್ ಗಳಿಸಿರುವ ಇಶಾಂತ್ ಕಿಶನ್ ಹಾಗೂ 31 ಬಾಲ್‌ಗಳಲ್ಲಿ 67 ರನ್ ಗಳಿಸಿರುವ ಟ್ರಾವಿಸ್ ಹೆಡ್ ಐಪಿಎಲ್ ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡುವ ಆತ್ಮವಿಶ್ವಾಸದಲ್ಲಿದ್ದಾರೆ. ಆದರೆ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್, ಅಭಿನವ್ ಮೋಹನ್ ಮುಂತಾದವರು ತಮ್ಮ ಬ್ಯಾಟಿಂಗ್ ಸಾಮರ್ಥ್ಯವನ್ನು ಇನ್ನಷ್ಟೇ ತೋರಿಸಬೇಕಾಗಿದೆ. ಹಾಗೆಯೇ ಆಲ್‌ರೌಂಡರ್‌ಗಳಾದ ಅಭಿಷೇಕ್ ಶರ್ಮಾ, ನಿತೀಶ್ ರೆಡ್ಡಿ ಮುಂತಾದವರು ಲಖನೌ ವಿರುದ್ಧದ ಪಂದ್ಯದಲ್ಲಿ ಮಿಂಚಬಹುದೆನ್ನುವ ನಿರೀಕ್ಷೆಯಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಎಸ್‌ಆರ್‌ಎಚ್ ಪರ ಹರ್ಷಲ್ ಪಟೇಲ್ ಮತ್ತು ಸಮರ್ಜೀತ್ ಸಿಂಗ್ ತಲಾ ಎರಡು ವಿಕೆಟ್ ಪಡೆದಿದ್ದರು. ಲಖನೌ ವಿರುದ್ಧದ ಪಂದ್ಯದಲ್ಲಿ ತಂಡದ ಬೌಲರ್‌ಗಳಾದ ಆ್ಯಡಂ ಝಂಪಾ ಮತ್ತು ರಾಹುಲ್ ಚಾಹರ್ ಸ್ಥಿರ ಪ್ರದರ್ಶನವನ್ನು ನೀಡಬೇಕಾಗಿರುವುದು ಅನಿವಾರ್ಯ. ಒಟ್ಟಿನಲ್ಲಿ ಗುರುವಾರದ ಪಂದ್ಯವು ಎರಡೂ ತಂಡಗಳಿಗೂ ಪ್ರತಿಷ್ಠೆ ಆಗಿರುವುದಂತೂ ಸುಳ್ಳಲ್ಲ.

ಸನ್ ರೈಸರ್ಸ್ ಹೈದರಾಬಾದ್ ತಂಡ: ಪ್ಯಾಟ್ ಕಮ್ಮಿನ್ಸ್ (ನಾಯಕ), ಅಭಿಷೇಕ್ ಶರ್ಮಾ, ನಿತೀಶ್ ರೆಡ್ಡಿ, ಹೆನ್ರಿಕ್ ಕ್ಲಾಸೆನ್, ಟ್ರಾವಿಸ್ ಹೆಡ್, ಮೊಹಮ್ಮದ್ ಶಮಿ, ಹರ್ಷಲ್ ಪಟೇಲ್, ಇಶಾನ್ ಕಿಶನ್, ರಾಹುಲ್ ಚಹರ್, ಆ್ಯಡಂ ಝಂಪಾ, ಅಭಿನವ್ ಮನೋಹರ್.

ಲಖನೌ ಸೂಪರ್ ಜೈಂಟ್ಸ್: ರಿಷಭ್ ಪಂತ್ (ನಾಯಕ), ಮಿಚೆಲ್ ಮಾರ್ಷ್, ಆರ್ಯನ್ ಜುಯಾಲ್, ನಿಕೋಲಸ್ ಪೂರನ್, ಆಯುಷ್ ಬಡೋನಿ, ಡೇವಿಡ್ ಮಿಲ್ಲರ್, ಶಹಬಾಜ್ ಅಹ್ಮದ್, ಶಾರ್ದೂಲ್ ಠಾಕೂರ್, ರವಿ ಬಿಷ್ಣೋಯ್, ಆಕಾಶ್ ಸಿಂಗ್, ಶಮರ್ ಜೋಸೆಫ್.

ಸದ್ಯಕ್ಕೆ ಮಹಿಳಾ ತಂಡಗಳ ಹೆಚ್ಚಳ ಇಲ್ಲ

ದೆಹಲಿ: ಕಳೆದ ಮೂರು ವರ್ಷಗಳಲ್ಲಿ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ನಿರೀಕ್ಷೆಗೂ ಮೀರಿ ಜನಪ್ರಿಯತೆ ಗಳಿಸಿದೆ. ಆದರೆ ಅಸ್ತಿತ್ವದಲ್ಲಿರುವ ಐದು ತಂಡಗಳ ಸಂಖ್ಯೆಯ

ಬದಲು ಇನ್ನಷ್ಟು ಹೆಚ್ಚಿಸುವ ಯಾವುದೇ ತಕ್ಷಣದ ಯೋಜನೆಗಳಿಲ್ಲ ಎಂದು ಡಬ್ಲ್ಯುಪಿಎಲ್ ಸಮಿತಿಯ ಸದಸ್ಯರೂ ಆಗಿರುವ ಐಪಿಎಲ್ ಅಧ್ಯಕ್ಷ ಅರುಣ್ ಧುಮಾಲ್ ಹೇಳಿದ್ದಾರೆ.

ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ನೇತೃತ್ವದ ಡಬ್ಲ್ಯುಪಿಎಲ್ ಸಮಿತಿಯು ಮೂರು ಋತುಗಳ ನಂತರ ತಂಡಗಳ ಸಂಖ್ಯೆಯನ್ನು ಹೆಚ್ಚಿಸುವ ಯೋಜನೆಯನ್ನು ಹೊಂದಿತ್ತು. ಆದರೆ ಈಗ ಪಂದ್ಯಾವಳಿಯ ಬೆಳವಣಿಯತ್ತ ಗಮನ ಕೇಂದ್ರೀಕರಿಸಿದ್ದೇವೆ ಎಂದು ಅವರು ಹೇಳಿದ್ದಾರೆ. ಸದ್ಯಕ್ಕೆ ಯಾವುದೇ ತಂಡವನ್ನು ಸೇರಿಸುವ ಬಗ್ಗೆ ನಾವು ನಿರ್ಧಾರ ತೆಗೆದುಕೊಳ್ಳುವ ಮೊದಲು ಈ ಪಂದ್ಯಾವಳಿಯನ್ನು ಮತ್ತಷ್ಟು ಬಲಪಡಿಸಲು ಬಯಸುತ್ತೇವೆ ಎಂದು ಧುಮಾಲ್ ತಿಳಿಸಿದ್ದಾರೆ.

'ಡಬ್ಲ್ಯುಪಿಎಲ್ ಮತ್ತಷ್ಟು ಬೆಳೆಯುತ್ತಲೇ ಇರುತ್ತದೆ ಎಂದು ನಾವು ಭಾವಿಸುತ್ತೇವೆ, ಇದರಿಂದ ಪಂದ್ಯಾವಳಿಗೆ ಮಾತ್ರವಲ್ಲದೆ, ಒಟ್ಟಾರೆಯಾಗಿ ಮಹಿಳಾ ಕ್ರಿಕೆಟ್‌ಗೆ ತುಂಬಾ ಒಳ್ಳೆಯದಾಗುತ್ತದೆ' ಎಂದೂ ಅವರು ಹೇಳಿದ್ದಾರೆ.

ಈ ಬಾರಿ ಮುಂಬೈ ಇಂಡಿಯನ್ಸ್ ತಂಡ ಎರಡನೇ ಬಾರಿಗೆ ಡಬ್ಲ್ಯುಪಿಎಲ್ ಟ್ರೋಫಿ ಗೆದ್ದಿದ್ದು, ಐದು ತಂಡಗಳ ಮಾರಾಟದಿಂದ ಬಿಸಿಸಿಐ ರು. 4670 ಕೋಟಿ ಆದಾಯ ಗಳಿಸಿದೆ.

ನಾವು ತಪ್ಪು ಮಾಡಿದ್ದೇವೆ, ನಮ್ಮನ್ನು ಕ್ಷಮಿಸಿ

ಆರ್‌ಸಿಬಿ ಫ್ಯಾನ್ಸ್ ಕ್ಷಮಾಪಣೆ

ಅಹಮದಾಬಾದ್: ಗುಜರಾತ್ ಟೈಟನ್ಸ್ ವಿರುದ್ಧ ಐಪಿಎಲ್ ಟೂರ್ನಿಯಲ್ಲಿ ಮಂಗಳವಾರ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕನ್ನಡಿಗ ವೈಶಾಖ್ ವಿಜಯ್‌ಕುಮಾರ್ ಪಂಜಾಬ್ ಕಿಂಗ್ಸ್ ಪರ ಮಿಂಚಿದ್ದು, ಅದಕ್ಕಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳು ಅವರ ಬಳಿ ಸಾಮಾಜಿಕ ಜಾಲತಾಣದಲ್ಲಿ ಕ್ಷಮೆ ಕೋರಿದ್ದಾರೆ

ಕನ್ನಡಿಗ ವೈಶಾಖ್ ವಿಜಯ್‌ಕುಮಾರ್ ಅವರನ್ನು ಆರ್‌ಸಿಬಿ ಬೇರೆ ಯಾವ ತಂಡಕ್ಕೂ ಬಿಟ್ಟುಕೊಡಬಾರದಾಗಿತ್ತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಮಂಗಳವಾರದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಪರ ಇಂಪ್ಯಾಕ್ಟ್ ಪ್ಲೇಯರ್ ಆಗಿ ಬೌಲ್ ಮಾಡಿದ್ದ ವೈಶಾಖ್, ಗುಜರಾತ್ ಟೈಟನ್ಸ್ ಬ್ಯಾಟ್ಸ್‌ಮನ್‌ಗಳಿಗೆ ತನ್ನ ಬೌಲಿಂಗ್‌ನಲ್ಲಿ ಕಡಿವಾಣ ಹಾಕುವ ಮೂಲಕ ಪಂಜಾಬ್ ತಂಡದ 11 ರನ್‌ಗಳ ಗೆಲುವಿಗೆ ನೆರವು ನೀಡಿದ್ದರು.

ವೈಶಾಖ್ ವಿಜಯ್‌ಕುಮಾರ್ ಅವರ ಉತ್ತಮ ಬೌಲಿಂಗ್ ಪ್ರದರ್ಶನವನ್ನು ನೋಡಿದ ಬಳಿಕ ಆರ್‌ಸಿಬಿ ಅಭಿಮಾನಿಗಳು, 'ನಾವು ತಪ್ಪು ಮಾಡಿದ್ದೇವೆ, ನಮ್ಮನ್ನು ಕ್ಷಮಿಸಿ ಎಂದು ನಾವೂ ಕೇಳಿಕೊಳ್ಳುತ್ತಿದ್ದೇವೆ. ವಿಜಯ್‌ಕುಮಾರ್ ನಿಜಕ್ಕೂ ಪ್ರತಿಭಾನ್ವಿತರು, ಅವರು ಬೆಂಗಳೂರು

ತಂಡದಲ್ಲಿರಬೇಕೆಂಬ ಆಶಯ ನಮ್ಮದು. ಆದರೆ ಇಂತಹ ಗಂಭೀರ ವಿಷಯ ಆರ್‌ಸಿಬಿ ಮ್ಯಾನೇಜ್‌ಮೆಂಟ್‌ಗೆ ಇನ್ನಾದರೂ ಅರ್ಥವಾದರೆ ಸಾಕು' ಎಂದು ಮತ್ತೋರ್ವ ಅಭಿಮಾನಿ ಟ್ವೀಟ್ ಮಾಡಿದ್ದಾರೆ.

ಒತ್ತಡದ ಸನ್ನಿವೇಶದಲ್ಲಿ ವೈಶಾಖ್ ವಿಜಯ್ ಕುಮಾರ್ ಅವರು ಉತ್ತಮ ಬೌಲಿಂಗ್ ಪ್ರದರ್ಶನವನ್ನು ತೋರುವ ಚಾಕಚಕ್ಯತೆ ಇರುವ ಕಾರಣ ಆರ್‌ಸಿಬಿ ತಂಡವು ವೈಶಾಖ್ ವಿಜಯ್‌ಕುಮಾರ್ ಅವರನ್ನು ಉಳಿಸಿಕೊಳ್ಳಬೇಕಾಗಿತ್ತು ಎಂದು ಇನ್ನೊಬ್ಬ ಅಭಿಮಾನಿ ಎಕ್ಸ್ ಖಾತೆಯಲ್ಲಿ ತಿಳಿಸಿದ್ದಾರೆ.

ಪಾಕ್‌ಗೆ ಹೀನಾಯ ಸರಣಿ ಸೋಲು

ವೆಲ್ಲಿಂಗ್ಟನ್: ಪಾಕಿಸ್ತಾನ್ ವಿರುದ್ಧದ 5 ಪಂದ್ಯಗಳ ಟಿ20 ಸರಣಿಯನ್ನು ನ್ಯೂಜಿಲೆಂಡ್ 4-1 ಅಂತರದಿಂದ ಗೆದ್ದುಕೊಂಡಿದೆ. ಇಲ್ಲಿನ ಸ್ಕೈ ಸ್ಟೇಡಿಯಂನಲ್ಲಿ ನಡೆದ ಸರಣಿಯ 5ನೇ ಪಂದ್ಯದಲ್ಲಿ ಬುಧವಾರ ಟಾಸ್ ಗೆದ್ದ ನ್ಯೂಜಿಲೆಂಡ್ ತಂಡದ ನಾಯಕ ಮೈಕಲ್ ಬ್ರೇಸ್‌ವೆಲ್ ಬೌಲಿಂಗ್ ಆಯ್ದುಕೊಂಡರು. ಅದರಂತೆ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ ತಂಡವು ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ತಂಡದ ಮೊತ್ತ 23 ಆಗುವಷ್ಟರಲ್ಲಿ ಆರಂಭಿಕರಾದ ಮೊಹಮ್ಮದ್ ಹ್ಯಾರಿಸ್ (11) ಹಾಗೂ ಹಸನ್ ನವಾಝ್ (0) ಪೆವಿಲಿಯನ್ ಸೇರಿದ್ದರು. ಆ ಬಳಿಕ ಬಂದ ಒಮೈರ್ ಯೂಸುಫ್ 7 ರನ್ ಗಳಿಸಿ ಔಟಾದರು.

ಈ ಹಂತದಲ್ಲಿ ಕಣಕ್ಕಿಳಿದ ನಾಯಕ ಸಲ್ಮಾನ್ ಅಲಿ ಅಘಾ 39 ಎಸೆತಗಳಲ್ಲಿ 1 ಸಿಕ್ಸ್ ಹಾಗೂ 6 ಬೌಂಡರಿಗಳೊಂದಿಗೆ 51 ರನ್ ಬಾರಿಸಿದರು. ಈ ಅರ್ಧಶತಕದ ನೆರವಿನೊಂದಿಗೆ ಪಾಕ್ ತಂಡ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 128 ರನ್ ಕಲೆಹಾಕಿತು.

129 ರನ್‌ಗಳ ಸುಲಭ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ತಂಡಕ್ಕೆ ಟಿಮ್ ಸೈಫರ್ಟ್ ಹಾಗೂ ಫಿನ್ ಅಲೆನ್ ಸ್ಫೋಟಕ ಆರಂಭ ಒದಗಿಸಿದರು, ಮೊದಲ 6 ಓವರ್‌ಗಳಲ್ಲಿ 92 ರನ್ ದೊರೆಯಿತು. ಪವರ್‌ಪ್ಲೇ ಮುಕ್ತಾಯದ ಬೆನ್ನಲ್ಲೇ ಬಿರುಸಿನ ಹೊಡೆತಕ್ಕೆ ಮುಂದಾಗಿ ಫಿನ್ ಅಲೆನ್ (27) ಔಟಾದರು. ಆದರೆ ಮತ್ತೊಂದೆಡೆ ಆರ್ಭಟ ಮುಂದುವರೆಸಿದ ಟಿಮ್ ಸೈಫರ್ಟ್ ಪಾಕ್ ಬೌಲರ್‌ಗಳ ಬೆಂಡೆತ್ತಿ, ಕೇವಲ 23 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು.

ಸೈಫರ್ಟ್ ಸಿಡಿಲಬ್ಬರ

ಅರ್ಧಶತಕದ ಬಳಿಕ ಸಿಡಿಲಬ್ಬರ ಮುಂದುವರೆಸಿದ ಟಿಮ್ ಸೈಫರ್ಟ್ ಸಿಕ್ಸರ್-ಬೌಂಡರಿಗಳ ಸುರಿಮಳೆಗೈದರು. ಸೈಫರ್ಟ್ ಬ್ಯಾಟ್‌ನಿಂದ 10 ಭರ್ಜರಿ ಸಿಕ್ಸ್ ಹಾಗೂ 6 ಬೌಂಡರಿಗಳು ಸಿಡಿಯಿತು. ಕೇವಲ 38 ಎಸೆತಗಳಲ್ಲಿ ಅಜೇಯ 97 ರನ್ ಬಾರಿಸಿದರು. ಈ ಸ್ಫೋಟಕ ಇನಿಂಗ್ಸ್ ನೆರವಿನೊಂದಿಗೆ ನ್ಯೂಜಿಲೆಂಡ್ ತಂಡವು 10 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 131 ರನ್ ಬಾರಿಸಿ 8 ವಿಕೆಟ್‌ಗಳ ಭರ್ಜರಿ ಸಾಧಿಸಿದೆ, ಈ ಗೆಲುವಿನೊಂದಿಗೆ ಕಿವೀಸ್ ಪಡೆ 4-1 ಅಂತರದಿಂದ ಸರಣಿ ಗೆದ್ದುಕೊಂಡಿದೆ.